ಕರ್ನಾಟಕ ಸರ್ಕಾರ

# ಸಿರಿ ಕನ್ನಡ

## ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ

**(ಪರಿಷ್ಕೃತ – 2022)**

# ೯

## ಒಂಬತ್ತನೆಯ ತರಗತಿ

©KTBS
Not to be republished

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**
ನಂ. ೪, ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ,
ಬೆಂಗಳೂರು–೫೬೦೦೮೫

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು**

**ಡಾ. ಸಿ.ಎಸ್. ರಾಮಚಂದ್ರ,** ಪ್ರಾಧ್ಯಾಪಕ ಮತ್ತು ಮುಖ್ಯಸ್ಥ, ಕನ್ನಡ ಭಾಷಾವಿಜ್ಞಾನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೦೬

**ಸದಸ್ಯರು**

**ಡಾ. ಎಸ್. ಪ್ರಸಾದಸ್ವಾಮಿ,** ಮುಖ್ಯಸ್ಥ ಮತ್ತು ಸಹಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮದರ್ಜೆಕಾಲೇಜು, ಯಲಹಂಕ, ಬೆಂಗಳೂರು–೬೪

**ಡಾ. ಮುಳುಕುಂಟೆ ರಮೇಶ್,** ಸಹಅಧ್ಯಾಪಕ, ರಾಗಿಗುಡ್ಡ ಪ್ರೌಢಶಾಲೆ, ೯ನೆಯ ಬ್ಲಾಕ್ ಜಯನಗರ, ಬೆಂಗಳೂರು–೬೯.

**ಶ್ರೀ ಬಿ. ಬಾಲಕೃಷ್ಣಯ್ಯ,** ಸಹಅಧ್ಯಾಪಕ, ಸರ್ಕಾರಿ ಪ್ರೌಢಶಾಲೆ, ಬೋಗಾದಿ, ಮೈಸೂರು ತಾಲೂಕು.

**ಶ್ರೀ ಸಿ. ಎಸ್. ಬನಶಂಕರಯ್ಯ,** ನಿವೃತ್ತ ಅಧ್ಯಾಪಕ, ಅಶೋಕನಗರ, ಬನಶಂಕರಿ ೧ನೆಯ ಹಂತ, ಬೆಂಗಳೂರು–೫೦.

**ಶ್ರೀಮತಿ ಆರ್.ಪಿ. ಚೇತನಾ,** ಮುಖ್ಯಶಿಕ್ಷಕಿ, ಸರ್ಕಾರಿ ಪ್ರೌಢಶಾಲೆ, ಮಾಗುಂಡಿ ಎನ್.ಆರ್.ಪುರ ತಾಲೂಕು.

**ಪರಿಶೀಲಕರು**

**ಡಾ. ಶ್ರೀಪಾದ ಭಟ್,** ಸಹಾಯಕ ಪ್ರಾಧ್ಯಾಪಕ, ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಸಂಪಾದಕ ಮಂಡಳಿ ಸದಸ್ಯರು**

**ಪ್ರೊ. ಚಂದ್ರಶೇಖರ ಪಾಟೀಲ್,** ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ. ನಗರ, ಬೆಂಗಳೂರು–೭೮

**ಡಾ. ಕೆ. ಮರುಳಸಿದ್ದಪ್ಪ,** ಸಾಹಿತಿಗಳು, ನಂ ೧೫೭, ೧೨ನೆಯ ಕ್ರಾಸ್, ಜೆ.ಪಿ. ನಗರ, ಬೆಂಗಳೂರು–೭೮

**ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, ರಾಗಿಣಿ, ಹಂಪಿನಗರ, ಬೆಂಗಳೂರು.

**ಪ್ರೊ. ಅ.ರಾ.ಮಿತ್ರ,** ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

**ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಾಪುರ.

**ಮುಖ್ಯ ಸಂಯೋಜಕರು**

**ಪ್ರೊ. ಜಿ.ಎಸ್.ಮುಡಂಬಡಿತ್ತಾಯ,** ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫

**ಸಲಹೆ ಮತ್ತು ಮಾರ್ಗದರ್ಶನ**

**ಶ್ರೀ ನಾಗೇಂದ್ರ ಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೫೬೦ ೦೮೫

**ಕಾರ್ಯಕ್ರಮ ಸಂಯೋಜಕರು**

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫

©KTBS Not to be republished

# ಮುನ್ನುಡಿ

೨೦೦೫ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೆಯ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೆಯ ತರಗತಿಯವರೆಗೆ ಪರಿಸರ ಅಧ್ಯಯನ, ಗಣಿತ ಮತ್ತು ೬ ರಿಂದ ೧೦ ನೆಯ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

**೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.**

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನವನ್ನು ಸಂಯೋಜಿಸುವುದು.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾ ಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲಗಳ ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ.

ಸಿರಿ ಕನ್ನಡ-೯ ಪಠ್ಯಪುಸ್ತಕದ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ಕರ್ನಾಟಕ ಪಠ್ಯಪುಸ್ತಕ ಸಂಘವು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯವಸ್ತು ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು.

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು.

©KTBS Not to be republished

## ಪಠ್ಯ ಓದು ಹಾಗೂ ಬೋಧನೆಗೆ ಮುನ್ನ ಬೋಧಕರೊಂದಿಗೆ ಸಮಾಲೋಚನೆ.......

ಸ್ಪರ್ಧಾತ್ಮಕ ನಾಗರಿಕ, ಶೈಕ್ಷಣಿಕ ಹಾಗೂ ಜಾಗತಿಕ ಹೊತ್ತಿದು. ಪ್ರತಿಯೊಂದು ಭೌತಿಕ ಹಾಗೂ ಬೌದ್ಧಿಕ ಆಯಾಮದಲ್ಲೂ ನವನವೀನ ಶೈಕ್ಷಣಿಕ ಸಂಶೋಧನೆ, ಚಿಂತನಾ ಆವಿಷ್ಕಾರ, ಕಲಿಕಾ ಕೌಶಲ, ತಂತ್ರಗಾರಿಕೆ ಮತ್ತು ವೈಜ್ಞಾನಿಕ ಮನೋಭಾವವನ್ನು ಸ್ಥಿರೀಕರಿಸುವ ವಾಸ್ತವಿಕ ಪ್ರಯತ್ನ ನಾಡಿನಾದ್ಯಂತ ನಡೆದಿದ್ದು, ನಡೆಯುತ್ತಲೂ ಇದೆ. ಈಗಿನ ಸಂದರ್ಭ, ಸ್ಥಿತಿಗತಿಯನ್ನು ಮನಗಂಡ ಶಿಕ್ಷಣತಜ್ಞರು, ಭಾಷಾವಿಜ್ಞಾನಿಗಳು, ಮನೋವಿಜ್ಞಾನಿಗಳು, ಸಾಹಿತ್ಯ ವಿದ್ವಾಂಸರು ಹಾಗೂ ಸುಶಿಕ್ಷಿತರು ಕೂಡಿ ಆಯೋಜಿಸಿದ ನಿರ್ದಿಷ್ಟ ನಿಯೋಜನಾ ಫಲವೇ ಹೊಸ ಪಠ್ಯ ತಯಾರಿ ಹಾಗೂ ಅನುಷ್ಠಾನತೆ.

ಶೈಕ್ಷಣಿಕ ಜೀವನದಲ್ಲಿ ಕಲಿಕಾರ್ಥಿಗಳ ತಾಯ್ನುಡಿಯ ಕಲಿಕೆ ಹಾಗೂ ಬಳಕೆ ಮಹತ್ವದ್ದು. ಅದಕ್ಕೆ ಪೂರಕವಾಗಿ ಶಿಕ್ಷಣ ಇಲಾಖೆ ನಿಗದಿಪಡಿಸುವ ಬೋಧನಾ ಪಠ್ಯ ಅತ್ಯಗತ್ಯ ಹಾಗೂ ಅನಿವಾರ್ಯ. ಸಾಮಾನ್ಯವಾಗಿ ಮಕ್ಕಳ ಪರಿಸರದ ಮಾತು ನಿತ್ಯದ ಪರಸ್ಪರ ಸಂವಹನ ಸಂಪರ್ಕಕ್ಕಷ್ಟೇ ಸೀಮಿತವಾಗಿರದೇ ಜ್ಞಾನಾರ್ಜನೆಯ ಉದ್ದೇಶವೂ ಅದರ ಗುರಿ. ಮಕ್ಕಳು ತಮ್ಮ ನುಡಿಯಲ್ಲೇ ಶಾಲಾಮಟ್ಟದ ಸಂವಹನ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾ ಶೈಕ್ಷಣಿಕ ಸಾರ್ಥಕತೆಗೆ ತಮ್ಮನ್ನು ತೆರೆದುಕೊಳ್ಳುವ ಆಶಯದಿಂದ ಔಪಚಾರಿಕ ನೆಲೆಯಲ್ಲಿ ಸಿದ್ಧಪಡಿಸಿ ನಿಯೋಜಿಸಿರುವ ಕಲಿಕಾ ಹಾಗೂ ಬೋಧನಾ ಪಠ್ಯವಿದು. ಕಲಿಕೆಯ ಮೂಲಭೂತ ಕೌಶಲಗಳ ವೈಜ್ಞಾನಿಕ ದೃಢತ್ವವೇ ಅವುಗಳ ಆಂತರ್ಯದ ದನಿ.

ಕಲಿಕೆ ಹಾಗೂ ಕಲಿಸುವಿಕೆಯ ನಿರ್ಧಾರಿತ ವಿಧಾನ ಮತ್ತು ಮೌಲ್ಯವನ್ನು ಸಾರ್ವತ್ರಿಕ ಶೈಕ್ಷಣಿಕ ನೆಲೆಯಲ್ಲಿ ಮೌಲೀಕರಿಸುವ ಉದ್ದೇಶದಿಂದ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಗೆ ಬದ್ಧವಾಗಿ, ೨೦೦೧ – ೨೦೦೨ರ ಶೈಕ್ಷಣಿಕ ಆಧುನಿಕತೆಗೆ ಪೂರಕವಾಗಿ ಪಠ್ಯಪುಸ್ತಕಗಳ ಕಟ್ಟುವಿಕೆ ಶೋಧ ಹೊಸರೂಪ ಪಡೆಯಿತು. ಮಕ್ಕಳ ಮಾನಸಿಕ ವಲಯಕ್ಕೆ ಸರಿಹೊಂದುವಂತೆ ಪರಿಷ್ಕಾರಗೊಂಡು ಕಾಲಧರ್ಮಕ್ಕನುಗುಣ ಶೈಕ್ಷಣಿಕತೆಗೆ ಸಮರ್ಪಕವಾದವು. ಹಾಗಾಗಿಯೂ ಇಂದಿನ ಶೈಕ್ಷಣಿಕ ಆಶೋತ್ತರ, ೨೦೦೫ – ಎನ್.ಸಿ.ಎಫ್. ನೆಲೆಯಾಧಾರಿತ ಆನ್ವಯಿಕ ಶೋಧನಾ ಚಿಂತನೆಗಳನ್ನು ಗುರುತರವಾಗಿ ಗಮನಿಸುವುದು ಹಿತಕರ. ಇದು ಸುಶಿಕ್ಷಿತ ವ್ಯಕ್ತಿತ್ವ ವಿಕಸನಕ್ಕೆ ನಾಂದಿ ಅಲ್ಲದೇ ದಾರಿದೀಪ.

ಕಲಿಕೆ ಮತ್ತು ಬೋಧನಾಂಶಗಳನ್ನು ಪಠ್ಯಪುಸ್ತಕದಲ್ಲಿ ಸಮತೋಲನವಾಗಿ ಪರಿಗಣಿಸಿ ಯುಕ್ತ ಹಾಗೂ ಸಹಜ ಕಲಿಕಾ ಪ್ರಾಯೋಗಿಕತೆಯ ಮೂಲಕ ಸಮನ್ವಯಗೊಳಿಸಿ, ಭಾಷಾ ಕಲಿಕೆ ಮತ್ತು ಜ್ಞಾನ ಸಂವರ್ಧನೆಗೆ ಅವಕಾಶ ಕಲ್ಪಿಸಿಕೊಡಬೇಕು. ಆ ನಿಟ್ಟಿನಲ್ಲಿ ಸಿರಿ ಕನ್ನಡ – ೯ ಪಠ್ಯಪುಸ್ತಕ ಸಮರ್ಥನೀಯ. ಇತ್ತೀಚಿನ ಕಲಿಕೆಯ ಎಲ್ಲಾ ಸಾಧಕ–ಬಾಧಕಗಳನ್ನು ತಾರ್ಕಿಕವಾಗಿ ಗಮನಿಸಿ ಅಳವಡಿಸಲಾಗಿದೆ. ಪ್ರಮುಖವಾಗಿ ತರಗತಿವಾರು ಕಲಿಕೆಯ ಮೂಲವಿಷಯ ಮತ್ತು ನಿರ್ಧರಿಸಿದ ಮಾನವೀಯ ಮೌಲ್ಯಗಳಿಗೆ ಒತ್ತುನೀಡಿದೆ. ಕ್ಷೇತ್ರಗಳಿಗನುಗುಣವಾಗಿ ಭಾಷಾ ಸಾಮರ್ಥ್ಯಗಳನ್ನು ಅನ್ವಯಿಸಿ ಸಮರ್ಥ ಕಲಿಕೆಗೆ ಅನುವಾಗುವಂತೆ ಪಠ್ಯದ ನಿಶ್ಚಿತ ಗದ್ಯ–ಪದ್ಯ ಪಾಠಗಳಲ್ಲಿ ಅಳವಡಿಸಲಾಗಿದೆ. ಸಾಮಾಜಿಕ, ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಲಿಂಗ ಸಮಾನತೆಯನ್ನು ಕಾಯ್ದುಕೊಂಡಿದೆ. ನಿಯೋಜಿತ ಪಾಠಗಳೆಲ್ಲವೂ ಸ್ವಕಲಿಕೆ ಹಾಗೂ ಬೋಧನಾ ಕೌಶಲಕ್ಕೆ ಸೂಕ್ತ ಹಾಗೂ ಪೂರಕವಾಗಿವೆ. ಕಲಿಕಾರ್ಥಿಗಳ ಆಸಕ್ತಿ ಮತ್ತು ಉಲ್ಲಾಸವನ್ನು ಉದ್ದೀಪನಗೊಳಿಸುವ ಉದ್ದೇಶದಿಂದ ರಚಿಸಿರುವ ಪಾಠಗಳಲ್ಲಿ ವೈವಿಧ್ಯತೆಯನ್ನೂ ಕಾಪಾಡಿಕೊಳ್ಳುವಲ್ಲಿ ಪಠ್ಯ ಸಫಲಗೊಂಡಿದೆ.

©KTBS Not to be republished

ಬೋಧನಾ ವಿಶೇಷತೆಯೊಂದಿಗೆ ಆಯ್ದು ನಿಗದಿಪಡಿಸಿದ ಸಾಹಿತ್ಯಪ್ರಕಾರದ ಭಾಗಗಳನ್ನು ಅರ್ಥೈಸಿಕೊಳ್ಳಲು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಕ್ರಿಯಾತ್ಮಕ ಭಾಷಿಕ ಕ್ರಮಗಳನ್ನು ವ್ಯವಸ್ಥಿತವಾಗಿ ಅನ್ವಯಿಸಿದೆ. ಭಾಷಾಶುದ್ಧತೆ, ವಾಸ್ತವಿಕತೆ ಮತ್ತು ತರ್ಕಬದ್ಧತೆಯನ್ನೂ ಜತನದಿಂದ ಸ್ಥಿರೀಕರಿಸಿದೆ. ಕಲಿಕಾ ಮೂಲತತ್ವವನ್ನು ಸಮರ್ಪಕವಾಗಿ ಅನುಸರಿಸಿದೆ.

ಮುಖ್ಯವಾಗಿ ಮಕ್ಕಳ ಕಲಿಕಾ ಪ್ರಾಯೋಗಿಕತೆಯನ್ನು ಸಮರ್ಥ ರೀತಿಯಲ್ಲಿ ಮೌಲೀಕರಿಸುವ ಉದ್ದೇಶದಿಂದ ಮುನ್ತಯಾರಿ ಮೂಲಕ ಪಠ್ಯದಲ್ಲಿನ ನಿಗದಿತ ಕಲಿಕಾ ಗದ್ಯಪಾಠ ಮತ್ತು ಪದ್ಯಪಾಠಗಳ ಸ್ಪಷ್ಟ ಅರ್ಥೈಸುವಿಕೆಯ ನೆಲೆಯನ್ನು ವಿವರಿಸುತ್ತಾ ಗದ್ಯ ಪದ್ಯಕ್ಕೆ ಸಂಬಂಧಿಸಿದಂತೆ ಪ್ರಾಯೋಗಿಕ ಓದು ಗ್ರಹಿಕಾ ಅಭ್ಯಾಸ, ಸಂಪನ್ಮೂಲತಾ ವಿವರ, ಅಭ್ಯಾಸದ ವಸ್ತುನಿಷ್ಠ/ನಿಖರ ನಿರ್ಣಯ ಬಹುವಿಧದ ಪ್ರಶ್ನೆಗಳನ್ನು ಅಭ್ಯಾಸಕ್ಕೆ ನೀಡಿದೆ. ಅಲ್ಲದೇ ಕಲಿತ ಪಾಠದ ಸಾರನಿರ್ಣಾಯಕತೆಯನ್ನು ಬಹುವಿಧದಿಂದ ಪರೀಕ್ಷಿಸಿ ಕಲಿಕಾರ್ಥಿಯ ಜ್ಞಾನ ಸಂವರ್ಧನೆಗೆ ಅವಕಾಶ ಮಾಡಿಕೊಡುವುದೇ ಇದರ ಮುಖ್ಯ ಆಶಯ. ಸ್ವಸಾಮರ್ಥ್ಯ, ಸ್ವಪ್ರಯೋಗಶೀಲತೆ, ಸ್ವಸೃಜನಶೀಲತೆ, ಸ್ವಸಂವಹನಶೀಲ ಗುಣಗಳು ಸಹಜವಾಗಿ ಹೆಚ್ಚುತ್ತವೆ.

ನಿಗದಿತ ಮೂಲಪಾಠವನ್ನು ಅರ್ಥೈಸುವ ಅನುಕ್ರಮಣಿಕೆ ಇಂತಿದೆ. ಅರ್ಥೈಸಿ – ಓದಿ, ಕರ್ತೃ – ಭಾವ – ಆಕರ, ಪದ – ಅರ್ಥ, ಪಠ್ಯಾಧಾರ ಟಿಪ್ಪಣಿ, ಪಠ್ಯಾಧಾರ ಪೂರಕ ವಿಶೇಷಾಂಶ ಕಲಿತಪಠ್ಯದ ಪ್ರೇರಣಾ ಅಭ್ಯಾಸ, ಭಾಷಾಭ್ಯಾಸ, ಪ್ರಾಯೋಗಿಕ ಅಭ್ಯಾಸ ಇತ್ಯಾದಿ ಪಠ್ಯದ ಕ್ರಿಯಾತ್ಮಕ ಒಳತೋಟಗಳು. ಅಭ್ಯಾಸ ಪ್ರಾಯೋಗಿಕತೆಯ ವಿವರಗಳ ಮತ್ತು ಪಠ್ಯದ ಗದ್ಯಪಾಠ/ಪದ್ಯಪಾಠಗಳ ಜೋಡಣಾ ಅನುಕ್ರಮಣಿಕೆ ಕಲಿಕಾ ವೈಜ್ಞಾನಿಕತೆಯ ಹಿನ್ನೆಲೆಯಿಂದ ಜೋಡಿಸಿದೆ. ಸರಳತೆಯಿಂದ ಕ್ಲಿಷ್ಟತೆ – ಕ್ಲಿಷ್ಟತೆಯಿಂದ ಸರಳತೆ ಸೂತ್ರತೆಯ ಹಿಮ್ಮುಕತೆಯಿಂದ ಗದ್ಯ–ಪದ್ಯಪಾಠಗಳ ಜೋಡಣಾ ಅನುಕ್ರಮ ಇಲ್ಲಿನದು. ಪಠ್ಯಸಾರವನ್ನು ಕಲಿಕಾರ್ಥಿಗಳು ಸುಲಭವಾಗಿ ಅರ್ಥೈಸಿಕೊಳ್ಳುವ ದೃಷ್ಟಿಯಿಂದ ನಿಗದಿತ ಪಾಠದ ಬೋಧನಾ ವಿನ್ಯಾಸವನ್ನು ಹೊಸ ಬೋಧನಾ ವಿಧಾನ ಮತ್ತು ವಿಶ್ಲೇಷಣಾ ವಿಧಾನದ ಅಡಿಯಲ್ಲಿ ಪ್ರಸ್ತಾಪಿಸಿದೆ. ಕಲಿಕೆಯ ಮುನ್ನ ಅರ್ಥೈಸಿ – ಓದಿ ಶೀರ್ಷಿಕೆಯಲ್ಲಿ ಗದ್ಯ/ಪದ್ಯದ ಕೆಲವು ವಿಶೇಷ ಪರಿಕಲ್ಪನಾ ಪದಗಳನ್ನು ಓದುವ ಸಲುವಾಗಿ ನೀಡಿದೆ. ಮುಖ್ಯವಾಗಿ ಓದುವಿಕೆಯನ್ನು ಖಚಿತಪಡಿಸುವ ಉದ್ದೇಶ ಇದರದು. ಕಲಿತ ಪಾಠದ ಅಭ್ಯಾಸ ಭಾಗದಲ್ಲಿರುವ ಪ್ರಶ್ನೆಗಳು ಕಲಿಕಾರ್ಥಿಗಳು ಕಲಿಕೆಯಲ್ಲಿ ಸಾಮರ್ಥ್ಯ ಗಳಿಸುವುದಕ್ಕಾಗಿಯೇ ಹೊರತು ಪರೀಕ್ಷೆಯ ಪ್ರಶ್ನಪತ್ರಿಕೆಯ ತಯಾರಿಕೆಗಾಗಿ ಅಲ್ಲ. ಇದೇ ಪ್ರಶ್ನೆಗಳನ್ನು ಪರೀಕ್ಷೆಯಲ್ಲಿ ಮೌಲ್ಯಮಾಪನಕ್ಕಾಗಿ ಕೇಳಲೇಬೇಕೆಂಬ ನಿರ್ಬಂಧವಿಲ್ಲ. ಇಲ್ಲಿ ಒಂದು/ಎರಡು/ ಮೂರು/ನಾಲ್ಕು/ಐದು– ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ಕೇಳಲಾಗಿದೆ. ಅವುಗಳ ಜೋಡಣೆಯಲ್ಲೂ ಸರಳ–ಕ್ಲಿಷ್ಟ ಪರಿಭಾವನೆಯನ್ನು ಅನುಸರಿಸಿದೆ. ಇದು ವಿಷಯ ಗ್ರಹಣದ ಸಲುವಾಗಿಯೇ ಹೊರತು ಪರೀಕ್ಷಾ ಮೌಲ್ಯಮಾಪನದ ಮಾದರಿಗಾಗಿ ಅಲ್ಲ. ಅಂತೆಯೇ ವಸ್ತುನಿಷ್ಠ ನಿರ್ಣಾಯಕ ಪ್ರಶ್ನೆಗಳು ಕಲಿಕಾರ್ಥಿಯ ನಿರ್ದಿಷ್ಟ ಸಾಮರ್ಥ್ಯಕ್ಕೆ ಸಂಬಂಧಿಸಿದ್ದಾಗಿದೆ. ಒಟ್ಟಿನಲ್ಲಿ ಶೈಕ್ಷಣಿಕ ಸಾರೋದ್ದೇಶದ ಪ್ರಣಾಳಿಕೆ ಇದು.

©KTBS Not to be republished

ಪೋಷಕ ಅಧ್ಯಯನ ವಿಭಾಗದಲ್ಲಿ ಐದು ಪಾಠಗಳಿವೆ. ಮಕ್ಕಳಲ್ಲಿ ಗ್ರಹಿಕಾ ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಈ ಪಾಠಗಳನ್ನು ಸೇರಿಸಲಾಗಿದೆ. ಈ ಐದು ಪಾಠಗಳಿಂದ ಹತ್ತು ಅಂಕಗಳ ಪ್ರಶ್ನೆಗಳನ್ನು ಕೇಳಬೇಕು. ಪ್ರತಿಪಾಠದಿಂದ ತಲಾ ಎರಡು ಅಂಕಗಳ ಪ್ರಶ್ನೆಗಳನ್ನು ಕೇಳಬಹುದು. ಹೀಗೆ ಕೇಳುವಾಗ ಒಂದು ಅಂಕದ ಪ್ರಶ್ನೆಗಳನ್ನು ಅಥವಾ ಎರಡು ಅಂಕಗಳ ಪ್ರಶ್ನೆಗಳನ್ನು ಕೇಳಬಹುದು.

ಪ್ರಸ್ತುತ ಕೈಂಕರ್ಯಕ್ಕೆ ಸಹಕರಿಸಿದ ಪಠ್ಯಪುಸ್ತಕ ರಚನಾಸಮಿತಿಯ ಗೌರವಾನ್ವಿತ ಸದಸ್ಯರೆಲ್ಲರ ಸಮರ್ಪಕ ಸಲಹೆ, ಬೆಂಬಲ, ನೆರವು, ವಿಶ್ವಾಸ ಮತ್ತು ಆದರತೆ ಮನನೀಯ. ಅಲ್ಲದೆ ಸಿರಿ ಕನ್ನಡ-೧೦ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ ರಚನಾ ಸಮಿತಿಯ ಆದರಣೀಯ ಸದಸ್ಯರೆಲ್ಲರ ಹಾಗೂ ಪರಿಶೀಲಕರ ಸಹಕಾರ, ಸಹಾಯ ಮತ್ತು ಶೈಕ್ಷಣಿಕ ಬೆಂಬಲ ಸಮಯೋಚಿತ ಅಂತೆಯೇ ಮೌಲಿಕ. ಇಲಾಖೆಯ ವ್ಯವಸ್ಥಾಪಕ ನಿರ್ದೇಶಕ ಶ್ರೀ. ವೈ.ಟಿ. ಗುರುಮೂರ್ತಿ, ವ್ಯವಸ್ಥಾಪಕ ಸಂಯೋಜಕ ಪ್ರೊ. ಮುಡಂಬಡಿತ್ತಾಯ ಅವರ ಸಮಯೋಚಿತ ಸಲಹೆ, ಮಾರ್ಗದರ್ಶನ ಮಹತ್ವದ್ದು. ಸಂಯೋಜಕ ಶ್ರೀ ಪಾಂಡುರಂಗ ಅವರ ಒತ್ತಾಸೆ, ಜವಾಬ್ದಾರಿಯುತ ಕಾಳಜಿ ಮತ್ತು ವಿಶ್ವಾಸ ಪೂರ್ವಕ ಅಭಿಮಾನ ವಿಶೇಷ. ಇವರೆಲ್ಲರಿಗೂ ಸಮಿತಿಯ ಪರವಾಗಿ ಆತ್ಮ ಪೂರ್ವಕ ಧನ್ಯವಾದಗಳು.

ಸಿರಿ ಕನ್ನಡ – ೯ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದ ರಚನಾಸಮಿತಿಯ ಪರಿಶೀಲಕರಾದ ಗೌರವಾನ್ವಿತ ಡಾ. ಶ್ರೀಪಾದ ಭಟ್, ಅವರ ಹಾಗೂ ಸಂಪಾದಕಮಂಡಳಿಯ ಮಾನ್ಯ ಸದಸ್ಯರುಗಳಾದ ಹಿರಿಯರೂ ಗೌವಾನ್ವಿತರೂ ಆದ ಪ್ರೊ ಸಾ.ಶಿ. ಮರುಳಯ್ಯ, ಪ್ರೊ.ಅ.ರಾ.ಮಿತ್ರ, ಪ್ರೊ. ಕೆ. ಮರುಳಸಿದ್ದಪ್ಪ, ಪ್ರೊ. ಚಂದ್ರಶೇಖರಪಾಟೀಲ್ ಮತ್ತು ಡಾ. ವಿಷ್ಣು ಎಂ.ಶಿಂದೆ ಅವರ ಸೂಕ್ತ ಮಾರ್ಗದರ್ಶಿ ಪರಿಶೀಲನಾ ಸಲಹೆ, ಸೂಚನೆಗಳು ಪುಸ್ತಕದ ಮೌಲಿಕತೆಗೆ ಪೋಷಕವಾಗಿವೆ. ಗಂಭೀರ ಚಿಂತನಾಯುಕ್ತ ಮಾತುಗಳು ಸೂಕ್ತ ಹಾಗೂ ಮೌಲಿಕ. ಅಂತೆಯೇ ಶಿಕ್ಷಕ ಮಹಾವಿದ್ಯಾಲಯಗಳಿಂದ ಬಂದಿರುವ ಹಿಮ್ಮಾಹಿತಿ ಸೂಕ್ತ ಹಾಗೂ ಸಮಂಜಸ. ಯುಕ್ತಾಯುಕ್ತತೆಯ ಹಿನ್ನೆಲೆಯಲ್ಲಿ ಅವನ್ನು ಗಮನಿಸಿದೆ. ಅದಕ್ಕಾಗಿ ಪಠ್ಯಪುಸ್ತಕ ರಚನಾ ಸಮಿತಿಯ ಪರವಾಗಿ ಅವರಿಗೆ ಗೌರವಪೂರ್ವಕ ಧನ್ಯವಾದಗಳು. ಈ ಪಠ್ಯಪುಸ್ತಕದ ರಚನೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕ–ರಿಸಿದ ಕರ್ನಾಟಕ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳಿಗೂ ಸಂಯೋಜಕರಿಗೂ ಮತ್ತು ಕಲಾವಿದರಿಗೂ ಆದರಪೂರ್ವಕ ವಂದನೆಗಳು.

**ಡಾ. ಸಿ. ಎಸ್. ರಾಮಚಂದ್ರ**
ಅಧ್ಯಕ್ಷ,
ಸಿರಿ ಕನ್ನಡ–೯
ಪಠ್ಯಪುಸ್ತಕ ರಚನಾ ಸಮಿತಿ

©KTBS Not to be republished

## ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ,** ರಾಜ್ಯಪಠ್ಯಪುಸ್ತಕ ಪರಿಷ್ಕರಣಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ(ರಿ) ಬೆಂಗಳೂರು–೮೫

## ಪರಿಷ್ಕರಣ ಸಮಿತಿ

**ಅಧ್ಯಕ್ಷರು**

**ಡಾ. ರಾಜಪ್ಪ ದಳವಾಯಿ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕೋಲಾರ, ಬೆಂಗಳೂರು ವಿಶ್ವವಿದ್ಯಾಲಯ.

**ಸದಸ್ಯರು**

**ಡಾ. ಜಗನ್ನಾಥ್ ಹೆಬ್ಬಾಳೆ,** ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ, ವಾಣಿಜ್ಯ ಪ್ರಥಮದರ್ಜೆ ಕಾಲೇಜು, ಬೀದರ್

**ಶ್ರೀ. ಅಲ್ಲಮಪ್ರಭು ಬೆಟ್ಟದೂರು,** ನಿವೃತ್ತ ಪ್ರಾಂಶುಪಾಲರು, ಅಮರ ಚೇತನ, ತವಳಗೇರಿ ಕಾಲೋನಿ, ಕಲ್ಯಾಣನಗರ, ಕೊಪ್ಪಳ

**ಶ್ರೀ. ವಿ.ರಂಗಪ್ಪಯ್ಯಹೊಳ್ಳ,** ನಿವೃತ್ತ ಕನ್ನಡ ಭಾಷಾ ಶಿಕ್ಷಕರು, ಶ್ರೀನಿವಾಸ ಚಿತ್ರಪಾಡಿ, ಸಾಲಿಗ್ರಾಮ, ಉಡುಪಿ ತಾ.

**ಶ್ರೀ. ಬಿ. ರವೀಶ್‌ಕುಮಾರ್,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲ್ಲೂಕು.

**ಶ್ರೀ. ಚಿಕ್ಕದೇವೇಗೌಡ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಉತ್ತರಹಳ್ಳಿ, ಬೆಂಗಳೂರು–೬೧

**ಶ್ರೀ. ತಮ್ಮಣ್ಣಗೌಡ ಹೆಚ್.ಸಿ.,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಹನುಮಂತಪುರ, ಹಾಸನ ತಾಲ್ಲೂಕು

**ಶ್ರೀಮತಿ. ಸುಶೀಲ,** ಕನ್ನಡ ಅಧ್ಯಾಪಕಿ, (ಪ್ರೌಢಶಾಲಾ ವಿಭಾಗ), ಸರ್ಕಾರಿ ಪದವಿಪೂರ್ವ ಕಾಲೇಜು, ಮದ್ದೂರು ತಾಲ್ಲೂಕು

**ಶ್ರೀ. ಬಸವರಾಜಪ್ಪ, ಎಂ,** ಕನ್ನಡ ಅಧ್ಯಾಪಕರು (ಪ್ರೌಢಶಾಲಾ ವಿಭಾಗ), ಸರ್ಕಾರಿಪದವಿಪೂರ್ವಕಾಲೇಜು, ಹೊಸನಗರ ತಾ.

**ಶ್ರೀ. ಎನ್.ಬಿ.ವೀರನಗೌಡ,** ಬಿ.ಅರ್.ಪಿ, ಕ್ಷೇತ್ರಸಮನ್ವಯಾಧಿಕಾರಿಗಳ ಕಛೇರಿ, ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ.

**ಕಲಾವಿದರು:**

**ಶ್ರೀ. ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು,

©KTBS Not to be republished

## ಉನ್ನತ ಪರಿಶೀಲನ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್,** ನಿವೃತ್ತ ಪ್ರಾಧ್ಯಾಪಕರು, ನಂ.೭, ೧೫ನೇ ಕ್ರಾಸ್, ಜೆ.ಪಿ.ನಗರ,ಬೆಂಗಳೂರು–೭೮

**ಡಾ. ಜಿ.ಆರ್.ತಿಪ್ಪೇಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನಸಂಸ್ಥೆ, ಮಾನಸ ಗಂಗೋತ್ರಿ , ಮೈಸೂರು–೬

**ಡಾ. ಸೈಯದ್ ಜಮೀರ್‌ಉಲ್ಲಾಷರೀಫ್,** ನಿವೃತ್ತ ಪ್ರಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ

**ಡಾ. ಯಲ್ಲಪ್ಪ ಹಿಮ್ಮಡಿ,** ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಬಾಗ, ಬೆಳಗಾವಿ ಜಿಲ್ಲೆ

**ಡಾ. ಕಲಾವತಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ

**ಡಾ. ಪ್ರಶಾಂತ್ ನಾಯಕ್,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾವಸಂತ,** ಸಹಪ್ರಾಧ್ಯಾಪಕರು ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

**ಡಾ. ಸತ್ಯನಾರಾಯಣ, ಎಚ್.ಎಸ್.,** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

ಶ್ರೀ **ಎಂ.ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫

ಶ್ರೀ **ಕೆ.ಜಿ. ರಂಗಯ್ಯ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫

**ಕಾರ್ಯಕ್ರಮ ಸಂಯೋಜಕರು :**

ಶ್ರೀಮತಿ. **ಎಂ.ಡಿ. ಉಷಾ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

©KTBS Not to be republished

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ನೀಡಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ

ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ, ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

©KTBS
Not to be republished

**ಶ್ರೀ ಎಂ.ಪಿ. ಮಾದೇಗೌಡ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೮೫

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೮೫

# ಪುನರ್ ಪರಿಶೀಲನೆಯ ಕುರಿತು

೨೦೧೪ರ ಶೈಕ್ಷಣಿಕ ವರ್ಷದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳು ರಾಜಕೀಯ ಕಾರಣಗಳಿಗಾಗಿ ಅದೇ ವರ್ಷ ಪರಿಷ್ಕರಣೆಗೆ ಒಳಗಾದವು. ಪರಿಷ್ಕೃತ ಪಠ್ಯಪುಸ್ತಕಗಳು ೨೦೧೭–೧೮ರ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಕೈ ತಲಪಿದವು. ಪರಿಷ್ಕೃತ ಪಠ್ಯಗಳಲ್ಲಾದ ಬದಲಾವಣೆಗಳ ಬಗ್ಗೆ ವ್ಯಾಪಕ ಟೀಕೆ, ವಿಮರ್ಶೆಗಳು ಬಂದವು. ಶಿಕ್ಷಣದ ಮೂಲ ಆಶಯಗಳನ್ನು ಬದಿಗಿಟ್ಟು ಸ್ವಹಿತಾಸಕ್ತಿಯ ಸಿದ್ಧಾಂತಗಳ ಪ್ರಚಾರಕ್ಕೆ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಯಿತೆಂಬ ಆಕ್ಷೇಪ ಎಲ್ಲೆಡೆಯಿಂದ ಕೇಳಿಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು ೨೦೨೧ರಲ್ಲಿ ಈ ಪಠ್ಯಗಳ ಮರುಪರಿಶೀಲನೆ ನಡೆಸುವಂತೆ ಆದೇಶಿಸಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಆಪಾದನೆ ಕೇಳಿಬಂದ ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಮೂಲಾಗ್ರ ಪರಿಶೀಲಿಸಿ ಬದಲಾವಣೆಗಳನ್ನು ಸೂಚಿಸಿದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಮಾತಿದೆ. ಶಾಲೆಗಳಲ್ಲಿ ಓದುವ ಇಂದಿನ ಮಕ್ಕಳಿಗೆ ನಾವು ಎಂಥ ಪಠ್ಯಗಳನ್ನು ಬೋಧಿಸುತ್ತೇವೆಂಬುದರ ಮೇಲೆ ಸಮಾಜದ ಭವಿಷ್ಯ ನಿಂತಿದೆ. ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ–ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ಪರಿಷ್ಕರಣೆ ಮಾಡಬೇಕಾಯಿತು.

© KTBS Not to be republished

೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾಗಿದ್ದ ಭಾಷಾ ಪಠ್ಯಗಳಲ್ಲಿ ನಮಗೆ ಅನೇಕ ಸಮಸ್ಯೆಗಳು ಕಂಡುಬಂದವು. ಅವುಗಳನ್ನು ಸರಿಪಡಿಸಲು ಪಠ್ಯಪುಸ್ತಕಗಳ ಪರಿಶೀಲನೆ, ಪರಿಷ್ಕರಣೆಗಳಲ್ಲಿ ನಾವು ನಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡೆವು. ಭಾಷಾಪಠ್ಯವು ಇರುವುದು ವಿದ್ಯಾರ್ಥಿಯಲ್ಲಿ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಉತ್ತಮಪಡಿಸುವುದಕ್ಕೆ. ಭಾಷಾಪಠ್ಯಗಳನ್ನು ಅಧ್ಯಯನ ಮಾಡಿದ ವಿದ್ಯಾರ್ಥಿಯಲ್ಲಿ ಭಾಷೆಯ ಬಗ್ಗೆ ಅಭಿಮಾನ ಮೂಡಬೇಕು; ಆತನ ಭಾಷಾಪ್ರೌಢಿಮೆ ಗಣನಾತ್ಮಕವಾಗಿ ಹೆಚ್ಚಬೇಕು. ಓದುವ, ಆಲಿಸುವ, ಮಾತಾಡುವ ಮತ್ತು ಬರೆಯುವ ಸಾಮರ್ಥ್ಯಗಳು ಸುಧಾರಿಸಬೇಕು. ಸ್ವತಂತ್ರವಾಗಿ ವಿದ್ಯಾರ್ಥಿಯು ತನ್ನ ಅಭಿಪ್ರಾಯ, ಅನಿಸಿಕೆಗಳನ್ನು ಅತ್ಯಂತ ಶಕ್ತಿಶಾಲಿಯಾಗಿ ಹೇಳುವುದಕ್ಕೆ ಸಾಧ್ಯವಾಗಬೇಕು. ೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾದ ಪಠ್ಯಪುಸ್ತಕಗಳಲ್ಲಿ ಭಾಷೆಯ ಈ ಬಗೆಯ ಕಲಿಕೆಗೆ ಹಿನ್ನಡೆಯಾಗಿ ಕೇವಲ ಸಿದ್ಧಾಂತಪ್ರಚಾರವೇ ಮುನ್ನೆಲೆಗೆ ಬಂದಿದ್ದುದನ್ನು ಗಮನಿಸಿದೆವು. ಆ ಪಠ್ಯಗಳ ಮರುಪರಿಷ್ಕರಣೆಯ ಹೊತ್ತಿನಲ್ಲಿ ಈ ನಿಯಮಗಳನ್ನು ಹೇರಿಕೊಂಡೆವು: (೧) ಭಾಷಾಪಠ್ಯವಿರುವುದು ಅತ್ಯುತ್ತಮವಾದ ಪ್ರಾತಿನಿಧಿಕ ಪಠ್ಯವನ್ನು ಕೊಡುವುದಕ್ಕಾಗಿಯೇ ಹೊರತು ಸಾಮಾಜಿಕನ್ಯಾಯ, ಲಿಂಗಸಮಾನತೆ ಇತ್ಯಾದಿ ಅಂಶಗಳನ್ನು ತುರುಕುವುದಕ್ಕಲ್ಲ. ಹಾಗಾಗಿ ಭಾಷೆಯ ವೈವಿಧ್ಯ ಹಾಗೂ ವಿಶೇಷಗಳನ್ನು ಹೆಚ್ಚು ಕಾಣಿಸುವ ಗದ್ಯ/ಪದ್ಯ ಭಾಗಗಳನ್ನು ಆರಿಸಿಕೊಳ್ಳಬೇಕು. (೨) ಭಾಷೆಯ ಪಠ್ಯದ ಹೆಸರಿನಲ್ಲಿ ಸಿದ್ಧಾಂತಪ್ರಚಾರಕ್ಕೆ ಅವಕಾಶವಾಗಬಾರದು. (೩) ಗ್ರಾಂಥಿಕ ಭಾಷೆಯಲ್ಲದೆ ಮೌಖಿಕ ಪರಂಪರೆಯ ಹಾಗೂ ಹಲವು ಪ್ರಕಾರದ ಸಾಹಿತ್ಯಗಳಿಗೆ ಅವಕಾಶ ಕೊಡಬೇಕು. (೪) ಬಳಸಿದ ಭಾಷೆ, ಭಾಷಾಸೊಗಡು, ಪ್ರತಿಪಾದಿಸಿರುವ ವಿಚಾರ, ಹೊಸ ಚಿಂತನೆಗಳನ್ನು ಹುಟ್ಟಿಸುವ ಸಾಧ್ಯತೆ, ಸಾಹಿತ್ಯ

ಪ್ರಕಾರದ ವೈಶಿಷ್ಟ್ಯ ಇತ್ಯಾದಿ ಎಲ್ಲ ಬಗೆಯಲ್ಲೂ ಪಾಠಗಳ ಗುಣಮಟ್ಟ ಅತ್ಯುತ್ತಮವಾಗಿರಬೇಕು. (೫) ಕವಿ/ಲೇಖಕರ ಪುನರಾವರ್ತನೆಯನ್ನು ಕಡಿಮೆ ಮಾಡಿ ಹೊಸ ಕವಿ/ಲೇಖಕರ ಬರೆಹಗಳಿಗೆ ಅವಕಾಶ ಮಾಡಿಕೊಡಬೇಕು. (೬) ಭಾಷೆಯ ಸೊಬಗನ್ನು ಪರಿಚಯಿಸುವ ಭಾಗಗಳನ್ನು ಪ್ರತಿ ಅಧ್ಯಾಯದ ಜೊತೆ ಸೇರಿಸಬೇಕು.

ಅತ್ಯುತ್ತಮ ಪಠ್ಯಪುಸ್ತಕ ಎಂಬುದು ಒಂದು ಆದರ್ಶಸ್ಥಿತಿ. ಅದರತ್ತ ನಡೆಯುವುದು ನಮ್ಮ ಆಶಯವೇ ಹೊರತು ನೂರಕ್ಕೆ ನೂರು ಅತ್ಯುತ್ತಮವಾದ ಪಠ್ಯಪುಸ್ತಕವನ್ನು ರಚಿಸುವುದು ಸಾಧ್ಯವಿಲ್ಲ. ಆ ವಿನಯದಿಂದಲೇ ನಾವು ಈ ಪುನರ್ ಪರಿಶೀಲನೆಯ ಕಾರ್ಯವನ್ನು ಮುಗಿಸಿ ಪಠ್ಯಗಳನ್ನು ನಿಮ್ಮ ಕೈಗಿಡುತ್ತಿದ್ದೇವೆ. ಇದು ಕೇವಲ ಮರುಪರಿಷ್ಕರಣೆಯೇ ಹೊರತು ಸಮಗ್ರ ಪುನಾರಚನೆಯಲ್ಲ. ಈಗಾಗಲೇ (೨೦೧೪ರಲ್ಲಿ) ರಚಿತವಾಗಿದ್ದ ಪಠ್ಯಪುಸ್ತಕದ ಆಶಯ ಮತ್ತು ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಅದನ್ನನುಸರಿಸಿ ಬಂದ ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮುಂದಿಟ್ಟುಕೊಂಡೇ ಇಡಿಯ ಮರುಪರಿಷ್ಕರಣೆಯ ಕಾರ್ಯ ನಡೆದಿದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲಾಗಿದೆ. ಪರಿಷ್ಕರಣೆಯ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಪರಿಶೀಲನಾ ಸಮಿತಿಯ ನನ್ನ ಎಲ್ಲ ಸಹೋದ್ಯೋಗಿಗಳಿಗೆ ನಾನು ಕೃತಜ್ಞ. ಅಂತೆಯೇ ಸಮಿತಿಯ ಕೆಲಸ ಸುಗಮವಾಗಿ ನಡೆಯಲು ಸಹಕರಿಸಿದ ಪಠ್ಯಪುಸ್ತಕ ಸಂಘದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಆಭಾರಿ. ಈ ಪರಿಷ್ಕರಣೆಯು ಈಗಷ್ಟೇ ಬಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಹೆಚ್ಚು ಪ್ರತಿಫಲಿಸುತ್ತ, ಮುಂದೆ ಬರಲಿರುವ ಸಮಗ್ರ ಪುನಾರಚಿತ ಪಠ್ಯಗಳಿಗೆ ಪ್ರವೇಶಿಕೆಯಾಗಲಿದೆ ಎಂಬ ಭರವಸೆ ನಮ್ಮದು.


**ಶ್ರೀ ಎಂ.ಪಿ. ಮಾದೇಗೌಡ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೮೫

**ರೋಹಿತ್ ಚಕ್ರತೀರ್ಥ**
ಅಧ್ಯಕ್ಷರು
ಕರ್ನಾಟಕ ಪಠ್ಯಪುಸ್ತಕಗಳ
ಪರಿಶೀಲನಾ ಸಮಿತಿ


©KTBS Not to be republished

### ಪುನರ್ ಪರಿಷ್ಕರಣಾ ಸಮಿತಿ

**ಶ್ರೀ ರೋಹಿತ್ ಚಕ್ರತೀರ್ಥ,** ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು

**ಸದಸ್ಯರು :**

**ಡಾ. ರೋಹಿಣಾಕ್ಷ,** ಸಹಾಯಕ ಪ್ರಾಧ್ಯಾಪಕರು, ಜಾನಪದಶಾಸ್ತ್ರ ಮತ್ತು ಬುಡಕಟ್ಟು ಅಧ್ಯಯನ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಆಳಂದ ರಸ್ತೆ, ಕಲಬುರಗಿ.

**ಶ್ರೀ ಚಿಕ್ಕದೇವೇಗೌಡ,** ಕನ್ನಡ ಭಾಷಾ ಶಿಕ್ಷಕರು, ಕರ್ನಾಟಕ ಪಬ್ಲಿಕ್ ಶಾಲೆ, ಉತ್ತರಹಳ್ಳಿ, ಬೆಂಗಳೂರು, ದಕ್ಷಿಣ ವಲಯ-೧

**ಕಲಾವಿದರು : ಶ್ರೀ ರಘುಪತಿ ಶೃಂಗೇರಿ**

**ಸಲಹೆಗಾರರು**

**ಶ್ರೀ ಎಂ.ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು-೮೫

**ಶ್ರೀ ಕೆ.ಜಿ.ರಂಗಯ್ಯ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು-೮೫

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ. ಎಂ.ಡಿ. ಉಷಾ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು-೮೫

J8M4T2

# ಪರಿವಿಡಿ


| ಕ್ರ.ಸಂ. | ಗದ್ಯ ಭಾಗ | ಕೃತಿಕಾರರ ಹೆಸರು | ಪುಟ ಸಂಖ್ಯೆ |
|---|---|---|---|
| ೧ | ರಾಮರಾಜ್ಯ | ಮಹಾಮಹೋಪಾಧ್ಯಾಯ ವಿದ್ವಾನ್ ಡಾ. ಎನ್. ರಂಗನಾಥ ಶರ್ಮಾ | ೦೧ |
| ೨ | ಬೆಡಗಿನ ತಾಣ ಜಯಪುರ | ಶಿವರಾಮ ಕಾರಂತ | ೧೨ |
| ೩ | ನಾನು ಕಂಡಂತೆ ಡಾ॥ ಬಿ.ಜಿ.ಎಲ್.ಸ್ವಾಮಿ | ಡಾ. ಎಸ್. ಎಲ್. ಭೈರಪ್ಪ | ೨೪ |
| ೪ | ಆದರ್ಶಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ | ಸಮಿತಿ ರಚನೆ | ೩೫ |
| ೫ | ಪ್ರಜಾನಿಷ್ಠೆ | ಸಾ. ಶಿ. ಮರುಳಯ್ಯ | ೪೫ |
| ೬ | ಜನಪದ ಕಲೆಗಳ ವೈಭವ | ಸಮಿತಿ ರಚನೆ | ೫೬ |
| ೭ | ಚೆನ್ನಭೈರಾದೇವಿ | ಡಾ. ಗಜಾನನ ಶರ್ಮ | ೭೦ |
| ೮ | ಹರಲೀಲೆ | ಹರಿಹರ | ೮೯ |
| | **ಪದ್ಯ ಭಾಗ** | | |
| ೯ | ಹೊಸಹಾಡು | ಕಯ್ಯಾರ ಕಿಞ್ಞಣ್ಣ ರೈ | ೧೦೪ |
| ೧೦ | ಪಾರಿವಾಳ | ಸು. ರಂ. ಎಕ್ಕುಂಡಿ | ೧೧೦ |
| ೧೧ | ಸಿರಿಯನಿನ್ನೇನ ಬಣ್ಣಿಪೆನು | ರತ್ನಾಕರವರ್ಣಿ | ೧೧೫ |
| ೧೨ | ಬಲಿಯನಿತ್ತೊಡೆ ಮುನಿವೆಂ | ಜನ್ನ | ೧೨೨ |
| ೧೩ | ಹೇಮಂತ | ಡಾ. ಎಸ್. ವಿ. ಪರಮೇಶ್ವರ ಭಟ್ಟ | ೧೩೪ |
| ೧೪ | ತತ್ತ್ವಪದಗಳು | ಕಡಕೋಳ ಮಡಿವಾಳಪ್ಪ, ಶಿಶುನಾಳ ಷರೀಫ್ | ೧೪೦ |
| ೧೫ | ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು | ರಾಘವಾಂಕ | ೧೪೭ |
| ೧೬ | ಕನ್ನಡ ನಾಡು ನುಡಿ | ಶ್ರೀ ವಿಜಯ, ನಯಸೇನ, ನೇಮಿಚಂದ್ರ, ಮಹಾಲಿಂಗರಂಗ, ಆಂಡಯ್ಯ | ೧೫೭ |
| | **ಪಠ್ಯ ಪೂರಕ ಅಧ್ಯಯನ** | | |
| ೧ | ಗುಣಸಾಗರಿ ಪಂಢರೀಬಾಯಿ | ಜಯಮಾಲಾ | ೧೬೫ |
| ೨ | ಹೊಳೆಬಾಗಿಲು | ಸುಶ್ರುತ ದೊಡ್ಡೇರಿ | ೧೬೯ |
| ೩ | ನನ್ನಾಸೆ | ಇಂದುಮತಿ ಲಮಾಣಿ | ೧೭೩ |
| ೪ | ಉರಿದ ಬದುಕು | ಶಾಂತರಸ | ೧೭೫ |
| ೫ | ಪುಟ್ಟಹಕ್ಕಿ | ಜಂಬಣ್ಣ ಅಮರಚಿಂತ | ೧೭೯ |


©KTBS Not to be republished

ಗದ್ಯ ಭಾಗ

# ೧. ರಾಮರಾಜ್ಯ

D9J2B6

**ಮಹಾಮಹೋಪಾಧ್ಯಾಯ ವಿದ್ವಾನ್**
**ಡಾ. ಎನ್. ರಂಗನಾಥ ಶರ್ಮಾ**

**ಪಾಠ ಪ್ರವೇಶ :** ಈ ಪಾಠಭಾಗವನ್ನು ಶ್ರೀಮದ್ವಾಲ್ಮೀಕಿರಾಮಾಯಣದ ಅಯೋಧ್ಯಾಕಾಂಡದ ನೂರನೆಯ ಸರ್ಗದಿಂದ ಆಯ್ದುಕೊಳ್ಳಲಾಗಿದೆ. ಪಿತೃವಾಕ್ಯಪರಿಪಾಲನೆಗೆ ಬದ್ಧನಾಗಿ ವನವಾಸಕ್ಕೆ ಹೋದ ರಾಮನನ್ನು ಮರಳಿ ಕರೆತರುತ್ತೇನೆ ಎಂದು ಹಠ ತೊಟ್ಟ ಭರತನು ರಾಮನ ಭೇಟಿಗಾಗಿ ಚಿತ್ರಕೂಟಕ್ಕೆ ಬರುತ್ತಾನೆ. ಭರತನೂ ಅಣ್ಣನಂತೆಯೇ ಜಟಾಧಾರಿಯಾಗಿ ನಾರುಬಟ್ಟೆಯನ್ನುಟ್ಟು ಬಂದಿರುತ್ತಾನೆ. ಭರತನನ್ನು ಆಲಂಗಿಸಿದ ರಾಮನು ಕುಶಲಪ್ರಶ್ನೆಗಳನ್ನು ಕೇಳತೊಡಗುತ್ತಾನೆ. ಭರತನನ್ನು ವಾತ್ಸಲ್ಯದಿಂದ ವಿಚಾರಿಸುವ ರಾಮನ ಮಾತುಗಳಲ್ಲಿ ವಾಲ್ಮೀಕಿ ಮಹರ್ಷಿಗಳು ಆದರ್ಶ ರಾಜ್ಯಭಾರದ ಒಂದು ಪೂರ್ಣಚಿತ್ರವನ್ನು ಎಪ್ಪತ್ತಾರು ಶ್ಲೋಕಗಳಲ್ಲಿ ಕಟ್ಟಿಕೊಡುತ್ತಾರೆ. ರಾಮ–ಭರತರ ಈ ಸಂವಾದವು ಮಿತ್ರಸಂಮಿತ ಶೈಲಿಯಲ್ಲಿ ಬಂದಿದೆ. ರಾಮನ ಮಾತು, ಅವನ ವ್ಯಕ್ತಿತ್ವದಂತೆಯೇ ಮೃದು. ಭರತನು ದೇಶದ ಆಡಳಿತದಲ್ಲಿ ವಹಿಸಬೇಕಾದ ಎಚ್ಚರಗಳೇನೇನು ಎಂಬ ರಾಜನೀತಿ ದಂಡನೀತಿ ವ್ಯವಹಾರ ನೀತಿಗಳ ಉಲ್ಲೇಖವನ್ನು ಮಾಡುತ್ತಲೇ "ನೀನು ಹೀಗೆ ಮಾಡು" ಎಂದು ಆಗ್ರಹಿಸದೇ, "ನೀನು ಹೀಗೆ ಮಾಡುತ್ತಿದ್ದೀಯಷ್ಟೇ?" ಎನ್ನುವ ಅನುನಯದಲ್ಲಿ ಉಪದೇಶಿಸುತ್ತಾನೆ. ಸತ್ಯವನ್ನು ಪ್ರಿಯವಾಗಿ ಹೇಗೆ ಹೇಳಬೇಕೆಂಬುದಕ್ಕೆ ಇದು ಅತ್ಯುತ್ತಮವಾದ ನಿದರ್ಶನ. ಆದರ್ಶವಾದ ರಾಜ್ಯದ ನಿರ್ವಹಣೆ ಹೇಗೆಂಬುದರ ಸಮಗ್ರವಾದ ಮಾಹಿತಿಯನ್ನು ವಾಲ್ಮೀಕಿ ಮಹರ್ಷಿಗಳು ರಾಮನ ಮಾತಿನಲ್ಲಿ ಅಡಕಿಸಿದ್ದಾರೆ. ಪ್ರಜಾಪರಿಪಾಲನೆಯ ಭಾರತೀಯ ಚಿಂತನೆಗೆ ಇಲ್ಲಿಯ ರಾಮೋಕ್ತಿಗಳು ಸಾರ್ವಕಾಲಿಕವಾದ ನಿದರ್ಶನವಾಗಿವೆ. ಒಂದೊಂದು ವಾಕ್ಯವೂ, ಚಿಂತನದೃಷ್ಟಿಯೂ ಎಂದೆಂದಿಗೂ ಸತ್ಯವೂ ಶಾಶ್ವತವೂ ಆದ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. "ರಾಮರಾಜ್ಯ"ವೆಂಬುದು ಹೇಗಿರಬೇಕೆಂಬುದಕ್ಕೆ ಭರತನೊಡನೆ ರಾಮನಾಡುವ ಮಾತುಗಳಲ್ಲೇ ಸ್ಪಷ್ಟವಾದ ಉತ್ತರವಿದೆ.

©KTBS
Not to be republished

ಜಟಾಧಾರಿಯಾಗಿ ನಾರುಮಡಿಯನ್ನುಟ್ಟು ಕೈಜೋಡಿಸಿಕೊಂಡು ನೆಲದ ಮೇಲೆ ಬಿದ್ದ ಭರತನನ್ನು ಶ್ರೀರಾಮನು ನೋಡಿದನು. ತೇಜಸ್ವಿಯಾದ ಆ ಭರತನು ಪ್ರಳಯಕಾಲದಲ್ಲಿ ಕೆಳಗೆ ಬಿದ್ದ ಸೂರ್ಯನಂತೆ ಕಾಣಿಸಿದನು. ಭರತನ ಮುಖವು ಬಾಡಿ ಬಣ್ಣಗೆಟ್ಟಿತ್ತು. ದೇಹವು ಸೊರಗಿ ಕೃಶವಾಗಿತ್ತು. ಅವನು ತನ್ನ ತಮ್ಮನಾದ ಭರತನೇ ಎಂಬುದು ಶ್ರೀರಾಮನಿಗೆ ಥಟ್ಟನೆ ತಿಳಿಯಲಿಲ್ಲ. ಆಮೇಲೆ ಗುರುತು ಹಿಡಿದು ಕೂಡಲೆ ಎದ್ದುಬಂದು ಕೈಹಿಡಿದು ಎತ್ತಿದನು. ಆತನನ್ನು ಪ್ರೀತಿಯಿಂದ ಮಾತಾಡಿಸಿ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಸಾವಧಾನವಾಗಿ ಕುಶಲಪ್ರಶ್ನೆಗಳನ್ನು ಕೇಳಿದನು.

ಪ್ರಾರಂಭದ ಮಾತುಕತೆಗಳೆಲ್ಲ ಮುಗಿದ ಬಳಿಕ, ಅಯೋಧ್ಯೆಯಲ್ಲಿ ಭರತನ ಆಡಳಿತವು ಹೇಗೆ ನಡೆಯುತ್ತಿದೆಯೆಂಬುದನ್ನು ತಿಳಿಯಲು ಶ್ರೀರಾಮನು ಹಲವು ಪ್ರಶ್ನೆಗಳನ್ನು ಈ ಮುಂದಿನಂತೆ ಹಾಕಿದನು:

ಭರತ, ರಾಜ್ಯವನ್ನು ಆಳತಕ್ಕವರಿಗೆ ಮಂತ್ರಾಲೋಚನೆಯೇ ಜಯಕ್ಕೆ ಮೂಲಕಾರಣವಾದದ್ದು. ರಾಜ್ಯಶಾಸ್ತ್ರ ನಿಪುಣರಾದ ಅಮಾತ್ಯರು ಆ ಮಂತ್ರಾಲೋಚನೆಯನ್ನು ಗೋಪ್ಯವಾಗಿಟ್ಟಿರಬೇಕು. ನೀನು ನಿದ್ರಾವಶನಾಗದೆ ಯುಕ್ತಕಾಲದಲ್ಲಿ ಎಚ್ಚರಗೊಳ್ಳುತ್ತಿರುವೆಯಾ? ರಾತ್ರಿಯ ಕಡೆಯ ಜಾವದಲ್ಲೆದ್ದು ರಾಜನೀತಿಯ ಕರ್ತವ್ಯವನ್ನು ಪರ್ಯಾಲೋಚಿಸುತ್ತಿದ್ದೀಯಾ? ನೀನೊಬ್ಬನೇ ಮಂತ್ರಾಲೋಚನೆ ಮಾಡಿ ನಿರ್ಣಯಕ್ಕೆ ಬರುವುದಿಲ್ಲವಷ್ಟೆ? ಅಥವಾ ಅಗತ್ಯಕ್ಕಿಂತ ಹೆಚ್ಚಿನ ಮಂದಿಯನ್ನು ವೃಥಾ ಸೇರಿಸಿ ಚರ್ಚಿಸುವುದಿಲ್ಲವಷ್ಟೆ? ನಿನ್ನ ಮಂತ್ರಾಲೋಚನೆಯು ಕಾರ್ಯರೂಪಕ್ಕೆ ಬರುವುದರೊಳಗೇ ರಾಷ್ಟ್ರದಲ್ಲಿ ಬಹಿರಂಗವಾಗುವುದಿಲ್ಲವಷ್ಟೆ? ಅಲ್ಪ ಪ್ರಯತ್ನದಿಂದ ಬಹುಫಲವನ್ನು ಕೊಡತಕ್ಕ ಕಾರ್ಯವನ್ನು ಕೂಡಲೆ ಆಚರಣೆಗೆ ತರುತ್ತಿರುವೆಯಷ್ಟೆ? ಅದನ್ನು ಆಚರಣೆಗೆ ತರಲು ತಡಮಾಡುವುದಿಲ್ಲ ತಾನೆ? ನೀನು ಆಚರಣೆಗೆ ತರಬೇಕೆಂದಿರುವ ಮಂತ್ರಾಲೋಚನೆಯು ಮೊದಲೇ ಸಾಮಂತರಾಜರಿಗೆ ತಿಳಿದಿರುವುದಿಲ್ಲ ತಾನೆ? ಅದು ಸಾಮಂತರಿಗೆ ಗೊತ್ತಾಗುವಷ್ಟರಲ್ಲಿ ಪೂರ್ಣವಾಗಿ ನಡೆದುಹೋಗಿರಬೇಕು, ಇಲ್ಲವೇ ಅರ್ಧದಷ್ಟಾದರೂ ಆಚರಣೆಯಲ್ಲಿ ಬಂದಿರಬೇಕು. ನೀನಾಗಲೀ ನಿನ್ನ ಮಂತ್ರಿಗಳಾಗಲೀ ನಡೆಸಿದ ಮಂತ್ರಾಲೋಚನೆಯು ಊಹೆಯಿಂದಲೂ ಯುಕ್ತಿಯಿಂದಲೂ ಜನರಿಗೆ ತಿಳಿದು ಬಹಿರಂಗವಾಗದಂತೆ ಎಚ್ಚರಿಕೆಯಲ್ಲಿರುವೆಯಾ?

ಸಾವಿರ ಮೂರ್ಖರಿಗಿಂತಲೂ ಒಬ್ಬ ಪಂಡಿತನೇ ಲೇಸೆಂದು ತಿಳಿದು ಅವನನ್ನು ಆದರಿಸುವೆಯಾ? ಏಕೆಂದರೆ ಕಷ್ಟಕಾಲದಲ್ಲಿ ಪಂಡಿತನೊಬ್ಬನೇ ಸರಿಯಾದ ಉಪಾಯವನ್ನು ಬೋಧಿಸಿ ಕಾರ್ಯವನ್ನು ನಿರ್ವಹಿಸಬಲ್ಲ. ಮೂರ್ಖರ ಸಂಖ್ಯೆ ಸಾವಿರವಿರಲಿ, ಹತ್ತು ಸಾವಿರವೇ ಇರಲಿ, ರಾಜನಿಗೆ ಅದರಿಂದ ಯಾವ ಸಹಾಯವೂ ಆಗುವುದಿಲ್ಲ. ಮೇಧಾವಿಯೂ ಶೂರನೂ ಕಾರ್ಯದಕ್ಷನೂ ರಾಜ್ಯಶಾಸ್ತ್ರವಿಶಾರದನೂ ಆದ ಸಚಿವನು ಒಬ್ಬನೇ ಆದರೂ ರಾಜನಿಗಾಗಲೀ ರಾಜ್ಯದ ಆಡಳಿತವನ್ನು ನಿರ್ವಹಿಸುವವನಿಗಾಗಲೀ ಮಹತ್ತರವಾದ ಶ್ರೇಯಸ್ಸನ್ನು ತಂದುಕೊಡಬಲ್ಲನು.

©KTBS Not to be republished

ಭರತ, ಉತ್ತಮರಾದ ಅಧಿಕಾರಿಗಳನ್ನು ಮೇಲ್ಮಟ್ಟದ ಕಾರ್ಯದಲ್ಲಿಯೂ, ಮಧ್ಯಮರನ್ನು ಸಾಮಾನ್ಯ ಕಾರ್ಯದಲ್ಲಿಯೂ, ಅಷ್ಟೇನೂ ಕಾರ್ಯಕುಶಲಿಗಳಲ್ಲದ ವ್ಯಕ್ತಿಗಳನ್ನು ಕೆಳಮಟ್ಟದ ಕೆಲಸದಲ್ಲಿಯೂ ನೇಮಿಸುತ್ತಿರುವೆಯಷ್ಟೆ? ಅತ್ಯುಚ್ಚವಾದ ಅಧಿಕಾರದಲ್ಲಿ ಶ್ರೇಷ್ಠರಾದ ಅಮಾತ್ಯರನ್ನು ಪರೀಕ್ಷಿಸಿ ನಿಯೋಜಿಸುತ್ತಿರುವೆಯಾ? ಅವರು ಲಂಚವನ್ನು ತೆಗೆದುಕೊಳ್ಳದವರೂ ಪ್ರಾಮಾಣ್ಯದ ವಿಷಯದಲ್ಲಿ ಸಂದೇಹಾತೀತರೂ ಆಗಿರಬೇಕು. ನೀನು ಒಂದು ವೇಳೆ ಪ್ರಜೆಗಳಿಗೆ ಉಗ್ರದಂಡನೆಯನ್ನು ವಿಧಿಸಿ ರಾಷ್ಟ್ರವನ್ನು ಉದ್ವೇಗಗೊಳಿಸಲು ತೊಡಗಿದರೆ, ನಿನ್ನ ಮಂತ್ರಿಗಳು ಅದನ್ನು ಒಪ್ಪದೆ ನಿನ್ನನ್ನು ತಡೆದು ನಿಲ್ಲಿಸಲು ಮುಂದೆ ಬರುವರಷ್ಟೆ? ಬಲಾತ್ಕಾರದಿಂದ ಕೆಲಸ ಮಾಡಿಸಿಕೊಂಡು ಶೋಷಿಸುವ ಯಜಮಾನರನ್ನು ದ್ವೇಷಿಸುವ ಆಳುಗಳಂತೆ ಜನ ನಿನ್ನನ್ನು ದ್ವೇಷಿಸುವ ಅಥವಾ ತಿರಸ್ಕರಿಸುವ ಮನಸ್ಸು ಮಾಡಿಲ್ಲ ತಾನೆ?

ಪ್ರಿಯ ಅನುಜ! ಉಪಾಯದಿಂದ ಹಣ ಕೀಳುವ ವೈದ್ಯನನ್ನೂ ಒಡೆಯನನ್ನೇ ದೂಷಿಸುವ ಸೇವಕನನ್ನೂ ಖಜಾನೆಯ ಐಶ್ವರ್ಯದ ಮೇಲೆ ಕಣ್ಣಿಟ್ಟಿರುವ ಸೈನಿಕನನ್ನೂ ರಾಜನು ತ್ಯಜಿಸಬೇಕು. ಅವರಿಗೆ ಉಗ್ರ ಶಿಕ್ಷೆ ಕೊಡಬೇಕು. ಇಲ್ಲದಿದ್ದರೆ ಆತ ಈ ವ್ಯಕ್ತಿಗಳ ಕುತಂತ್ರದಿಂದಲೇ ವಿಪತ್ತಿನಲ್ಲಿ ಸಿಕ್ಕಿಕೊಳ್ಳಬಹುದು. ಭರತ, ನಿನ್ನ ಸತ್ಕಾರದಿಂದ ಸಂತೃಪ್ತನೂ ಶೂರನೂ ಸೇನೆಯನ್ನು ವ್ಯವಸ್ಥೆಗೊಳಿಸುವುದರಲ್ಲಿ ಸಮರ್ಥನೂ ಆದವನನ್ನು ಸೇನಾಪತಿಯನ್ನಾಗಿ ನೇಮಿಸಿರುವೆಯಾ? ಅವನು ಧೀರನಾಗಿರಬೇಕು; ಲಂಚ ಮೊದಲಾದವಕ್ಕೆ ಆಸೆಪಡದ ಮನಃಶುದ್ಧಿಯುಳ್ಳವನಾಗಿರಬೇಕು. ಸೇನಾಪತಿಯು ರಾಜಭಕ್ತಿಯವನಾಗಿರಬೇಕು; ಕಾರ್ಯದಕ್ಷನಾಗಿರಬೇಕು.

ಬಲಶಾಲಿಗಳೂ ಯುದ್ಧವಿಶಾರದರೂ ಹಿಂದೆ ಅನೇಕ ಯುದ್ಧಗಳನ್ನು ಮಾಡಿ ಪ್ರಸಿದ್ಧರಾದವರೂ ವೀರರೂ ಆದ ಸೇನಾನಾಯಕರಿಗೆ ಸೂಕ್ತ ಬಹುಮಾನ-ಪಾರಿತೋಷಕಗಳನ್ನು ಕೊಟ್ಟು ಸನ್ಮಾನಿಸುತ್ತಿರುವೆಯಾ? ಸೈನಿಕರಿಗೆ ಕೊಡಬೇಕಾದ ಆಹಾರ ಸಾಮಗ್ರಿಯನ್ನೂ ವೇತನವನ್ನೂ ಕಾಲಕಾಲಕ್ಕೆ ಯಥೋಚಿತವಾಗಿ ಸಲ್ಲಿಸುತ್ತಿರುವೆಯಾ? ಈ ವಿಷಯದಲ್ಲಿ ವಿಳಂಬಿಸಬಾರದು. ಸೇವಕರಿಗೆ ಕೊಡಬೇಕಾದ ಸಾಮಗ್ರಿಯನ್ನೂ ವೇತನವನ್ನೂ ಸರಿಯಾದ ಕಾಲದಲ್ಲಿ ಕೊಟ್ಟುಬಿಡಬೇಕು. ಹಾಗೆ ಮಾಡಿಲ್ಲವೆಂದರೆ ಸೇವಕರು ಸ್ವಾಮಿಯ ಮೇಲೆ ಕೋಪಿಸಿಕೊಳ್ಳುತ್ತಾರೆ; ದುರ್ಮಾರ್ಗಕ್ಕೂ ಇಳಿಯಬಹುದು. ಅದು ಮುಂದೆ ದೊಡ್ಡಮಟ್ಟದ ಅನರ್ಥಕ್ಕೆ ಕಾರಣವಾಗುತ್ತದೆ. ಮುಖ್ಯವಾಗಿ, ನಮ್ಮ ಜ್ಞಾತಿಗಳೆಲ್ಲರೂ ನಿನ್ನ ವಿಷಯದಲ್ಲಿ ಪ್ರೀತಿಯಿಂದಿರುವರೆ? ಸಮಯ ಬಂದಾಗ ಅವರೆಲ್ಲರೂ ಒಮ್ಮನಸ್ಸಿನಿಂದ ನಿನಗೋಸ್ಕರ ಪ್ರಾಣವನ್ನಾದರೂ ಒಪ್ಪಿಸಿಯಾರೆ?

ನಮ್ಮ ದೇಶದಲ್ಲಿಯೇ ಹುಟ್ಟಿಬೆಳೆದ ವಿದ್ವಾಂಸನನ್ನು ದೂತನಾಗಿ ನೇಮಿಸಿಕೊಂಡಿದ್ದೀಯಾ? ದೂತನು ಕಾರ್ಯಸಮರ್ಥನೂ ಪ್ರತಿಭಾಶಾಲಿಯೂ ಆಗಿರಬೇಕು. ಹೇಳಿಕಳಿಸಿದ ಸಂದೇಶವನ್ನಷ್ಟೇ ತಿಳಿಸುವ ಸತ್ಯವಂತನಾಗಿರಬೇಕು. ವ್ಯಕ್ತಿ, ವಸ್ತುಗಳ ಮೌಲ್ಯವನ್ನೂ ಯೋಗ್ಯತೆಯನ್ನೂ ಸರಿಯಾಗಿ ಗುರುತಿಸಬಲ್ಲ ನಿಷ್ಣಾತನಾಗಿರಬೇಕು. ಶತ್ರುಪಕ್ಷದಲ್ಲಿ ಮಂತ್ರಿಯೇ ಮೊದಲಾದ ಹದಿನೆಂಟು ಇಲಾಖೆಗಳು ಹೇಗೆ ನಡೆದುಕೊಳ್ಳುತ್ತಿವೆಯೆಂದು ಪರೀಕ್ಷಿಸಲು ಒಬ್ಬೊಬ್ಬರ ಮೇಲೆ ಮೂವರು ಗೂಢಚಾರರಂತೆ ನಿಯಮಿಸಬೇಕು. ಆ ಗೂಢಚಾರರಿಗೂ ಅನ್ಯೋನ್ಯ ಪರಿಚಯವಿರಬಾರದು. ಹಾಗೆಯೇ ಸ್ವಪಕ್ಷದಲ್ಲಿ ಸೇನಾಪತಿಯೇ ಮೊದಲಾದ ಹದಿನೈದು ಇಲಾಖೆಗಳನ್ನು ಗೂಢಚಾರರಿಂದ ಪರೀಕ್ಷಿಸುತ್ತಿರಬೇಕು. ಇದಕ್ಕೆ ಏರ್ಪಾಡು ಮಾಡಿರುವೆಯಾ?

ನೀನು ದೇಶದಿಂದ ಹೊರಗೆ ಓಡಿಸಿದ ಶತ್ರುಗಳು ಕಾಲಾಂತರದಲ್ಲಿ ಪುನಃ ದೇಶದೊಳಗೆ ಬಂದು ಸೇರಿಕೊಂಡರೆ, ಅವರು ಕೈಲಾಗದ ದುರ್ಬಲರು ಎಂಬುದಾಗಿ ಎಂದಿಗೂ ಉಪೇಕ್ಷೆ ಮಾಡಬೇಡ. ದೇಶಭ್ರಷ್ಟಗೊಳಿಸಿದ ಶತ್ರುಗಳು ಮರಳಿ ದೇಶದೊಳಕ್ಕೆ ಸೇರಿಕೊಂಡರೆಂದರೆ ಅವರು ಮುಂದೊಂದು ದಿನ ದೇಶಕ್ಕೇ ದೊಡ್ಡ ಗಂಡಾಂತರವನ್ನು ತರುವ ಸಾಧ್ಯತೆ ನಿಚ್ಚಳವಾಗಿದೆ. ಭರತ, ನೀನು ಪ್ರತಿದಿನವೂ ಪ್ರಾತಃಕಾಲದಲ್ಲೆದ್ದು ನಿನ್ನನ್ನು ಜನ ಮೆಚ್ಚುವ ರೀತಿಯಲ್ಲಿ ಸಿದ್ಧಗೊಳಿಸಿಕೊಂಡು ಸಭಾಮಂಟಪದಲ್ಲಿ ಪ್ರಜೆಗಳಿಗೆ ದರ್ಶನವನ್ನು ಕೊಡುತ್ತಿರುವೆಯಷ್ಟೆ? ನಿನ್ನ ಸೇವಕರೆಲ್ಲರೂ ನಿರ್ಭಯವಾಗಿ ಬಂದು ನಿನ್ನೆದುರಿಗೆ ನಿಲ್ಲುವಷ್ಟು ಸಲಿಗೆಯನ್ನು ಕೊಟ್ಟಿಲ್ಲ ತಾನೆ? ಅಥವಾ ಹತ್ತಿರವೇ ಸುಳಿಯದೆ ದೂರಕ್ಕೆ ಸರಿಯುವಂತೆ ಅಂಜಿಸಿಲ್ಲ ತಾನೆ? ಅವರ ವಿಷಯದಲ್ಲಿ ಹೆಚ್ಚು ಸಲಿಗೆಯೂ ಸಲ್ಲದು; ಹೆಚ್ಚು ಅಂಜಿಸುವುದೂ ಸಲ್ಲದು. ಅವೆರಡರ ನಡುದಾರಿಯನ್ನು ನೀನು ಕಾಯ್ದುಕೊಳ್ಳಬೇಕು.

ತಮ್ಮನೇ, ರಘು ವಂಶೋತ್ತಮನಾದ ನೀನು ವೃದ್ಧರಿಗೂ ತರುಣರಿಗೂ ಸ್ನೇಹಪರನಾಗಿದ್ದೀಯಾ? ನಿನ್ನ ದುರ್ಗಗಳಲ್ಲಿ ಧನಧಾನ್ಯ ಜಲಗಳು ಸಮೃದ್ಧಿಯಾಗಿವೆಯೆ? ಅವು ಯಂತ್ರ – ಯಂತ್ರಜ್ಞರಿಂದಲೂ ಶಿಲ್ಪಿಗಳು, ಆಯುಧಗಳು ಹಾಗೂ ಧನುರ್ಧಾರಿಗಳಾದ ಸೈನಿಕರಿಂದಲೂ ಪೂರ್ಣವಾಗಿವೆಯೆ? ನಿನ್ನ ಆದಾಯವು ವ್ಯಯಕ್ಕಿಂತ ಹೆಚ್ಚಿದೆ ತಾನೆ? ರಾಜ್ಯದ ಬೊಕ್ಕಸದಲ್ಲಿ ನೀನು ಸಂಗ್ರಹಿಸುವ ಸಂಪತ್ತೆಲ್ಲವೂ ರಾಜ್ಯದ ಅಭಿವೃದ್ಧಿಯ ಕೆಲಸಕಾರ್ಯಗಳಿಗೇ ವಿನಿಯೋಗವಾಗುತ್ತಿದೆಯಷ್ಟೆ? ಖಜಾನೆಯನ್ನು ಬರಿದುಗೊಳಿಸಬೇಡ. ಹಾಗೆಂದು ಅದನ್ನು ತುಳುಕುವಷ್ಟು ತುಂಬಿಸಿಕೊಳ್ಳಲು ಅನರ್ಥ, ಅನ್ಯಾಯಗಳ ಮಾರ್ಗವನ್ನೂ ಹಿಡಿಯಬೇಡ.

©KTBS Not to be republished

ರಾಜನಲ್ಲಿ ಸಂಭವಿಸಬಹುದಾದ ದೋಷಗಳು ಹದಿನಾಲ್ಕು. ಅವು: ನಾಸ್ತಿಕಬುದ್ಧಿ, ಸುಳ್ಳು, ಸಿಟ್ಟು, ಅನವಧಾನ, ಚಟುವಟಿಕೆಯಿಲ್ಲದೆ ಕೆಲಸವನ್ನು ತಡಮಾಡುವುದು, ಪ್ರಾಜ್ಞರಾದ ಸಜ್ಜನರೊಡನೆ ಸೇರದಿರುವುದು, ಸೋಮಾರಿತನ, ಪಂಚೇಂದ್ರಿಯಗಳಿಗೆ ಅಧೀನನಾಗಿ ಇಂದ್ರಿಯ ಚಾಪಲ್ಯದಲ್ಲಿ ಮುಳುಗುವುದು, ಮಂತ್ರಿಗಳೊಡನೆ ಸಮಾಲೋಚಿಸದೆ ರಾಜ್ಯಕಾರ್ಯಗಳಲ್ಲಿ ತಾನೊಬ್ಬನೇ ನಿರ್ಧಾರವನ್ನು ತೆಗೆದುಕೊಳ್ಳುವುದು, ಅನುಭವವಿಲ್ಲದ ಅವಿವೇಕಿಗಳೊಡನೆ ಸಮಾಲೋಚಿಸುವುದು, ನಿಶ್ಚಯಿಸಿದ ಕಾರ್ಯಗಳನ್ನು ಆರಂಭಿಸದಿರುವುದು, ಮಂತ್ರಾಲೋಚನೆಯನ್ನು ರಹಸ್ಯವಾಗಿಡದೆ ಬಹಿರಂಗಪಡಿಸುವುದು, ಮಂಗಳಕರವಾದ ಶುಭಕಾರ್ಯವನ್ನು ಮಾಡದಿರುವುದು ಹಾಗೂ ಎಲ್ಲ ಶತ್ರುಗಳ ಮೇಲೂ ಏಕಕಾಲದಲ್ಲಿ ಯುದ್ಧಾರಂಭ – ಈ ಹದಿನಾಲ್ಕು ರಾಜದೋಷಗಳಿಗೆ ಅವಕಾಶವನ್ನು ಕೊಡಬೇಡ. ಯಾವುದೇ ಪ್ರಮುಖ ನಿರ್ಣಯಕ್ಕೆ ಮೊದಲು ನಾಲ್ವರು ಪ್ರಾಜ್ಞ ಮಂತ್ರಿಗಳೊಡನೆ ರಾಜನಾದವನು ಒಟ್ಟಿಗೆ ಸಮಾಲೋಚಿಸಬೇಕು. ಅನಂತರ ಒಬ್ಬೊಬ್ಬರನ್ನಾಗಿ ಕರೆಸಿ ಪ್ರತ್ಯೇಕವಾಗಿ ಅವರ ಅಭಿಪ್ರಾಯವನ್ನು ಅರಿತುಕೊಳ್ಳಬೇಕು. ನೀನು ಹೀಗೆ ಮಾಡುತ್ತಿರುವೆಯಾ? ಪೂರ್ವಿಕರ ವ್ಯಕ್ತಿತ್ವದ ಅತ್ಯುತ್ತಮ ಅಂಶಗಳನ್ನು ರಾಜನು ಅಳವಡಿಸಿಕೊಳ್ಳಬೇಕು. ಬುದ್ಧಿಶಾಲಿಯಾದ ರಾಜನು ದಂಡಾಧಿಕಾರಿಯಾಗಿ ಧರ್ಮದಿಂದ ಪ್ರಜೆಗಳನ್ನು ಪಾಲಿಸಬೇಕು. ಅಂಥ ಬಲಿಷ್ಠ ಮತ್ತು ಸಾಧಕನಿಗಷ್ಟೇ ಸಮಸ್ತ ರಾಷ್ಟ್ರಗಳೂ ವಶವಾಗುತ್ತವೆ.

## ಕೃತಿಕಾರರ ಪರಿಚಯ



ಮಹಾಮಹೋಪಾಧ್ಯಾಯ ವಿದ್ವಾನ್ **ಡಾ. ಎನ್. ರಂಗನಾಥ ಶರ್ಮಾ** ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಾಂಡ ವಿದ್ವತ್ತೆ ಇದ್ದ ಓರ್ವ ಹಿರಿಯ ಸಾಹಿತಿ. ಇವರು **ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ನಡಹಳ್ಳಿ ಗ್ರಾಮದಲ್ಲಿ ೧೯೧೬ರ ಜನವರಿ ೭ರಂದು** ಜನಿಸಿದರು. ತಂದೆ ಹಾಗೂ ಚಿಕ್ಕಪ್ಪ ಇಬ್ಬರೂ ಸಂಸ್ಕೃತ ವಿದ್ವಾಂಸರಾಗಿದ್ದುದರಿಂದ ಆ ವಿದ್ವತ್ತೆಯ ಪರಿಸರ ಶರ್ಮಾರ ಮೇಲೆ ಅಗಾಧ ಪ್ರಭಾವವನ್ನು ಬೀರಿತು. ಕೆಳದಿ ಸಂಸ್ಕೃತ ಪಾಠಶಾಲೆಯಲ್ಲಿ ಕಾವ್ಯಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನಂತರ ಬೆಂಗಳೂರಿನ ಜಯಚಾಮರಾಜೇಂದ್ರ ಕಾಲೇಜಿನಲ್ಲಿ ಸಂಸ್ಕೃತ ವ್ಯಾಕರಣ, ಅಲಂಕಾರಶಾಸ್ತ್ರಗಳಲ್ಲಿ ಅಧ್ಯಯನ ನಡೆಸಿ ಪಾಂಡಿತ್ಯ ಗಳಿಸಿದರು. ಬೇಲೂರಿನ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕರಾಗಿ, ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯದಲ್ಲಿ ವ್ಯಾಕರಣ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು.

ರಂಗನಾಥ ಶರ್ಮಾರದು ಅಪರೂಪದ ಭಾಷಾಪಾಂಡಿತ್ಯ. ಕನ್ನಡ–ಸಂಸ್ಕೃತಗಳೆರಡರಲ್ಲೂ ಸರಿಸಮವೆನಿಸುವಂಥ ವಿದ್ವತ್ತು. **ಏಕಚಕ್ರಂ, ಬಾಹುಬಲಿ ವಿಜಯಂ, ಗುರುಪಾರಮಿತ್ರಚರಿತಂ, ಗೊಮ್ಮಟೇಶ ಪಂಚಕಂ** ಮೊದಲಾದ ಕೃತಿಗಳನ್ನು ಅವರು ಸಂಸ್ಕೃತದಲ್ಲಿ ಬರೆದು ಪ್ರಕಟಿಸಿದ್ದಾರೆ. ಭಾಷಾಂತರ ಪಥ, ಲೌಕಿಕ ನ್ಯಾಯಗಳು, ಸೂಕ್ತಿವ್ಯಾಪ್ತಿ, ಉಪನಿಷತ್ತಿನ ಕಥೆಗಳು, ವಾಲ್ಮೀಕಿ ಮುನಿಗಳ ಹಾಸ್ಯಪ್ರವೃತ್ತಿ ಮೊದಲಾದ ಕೃತಿಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಸಂಸ್ಕೃತದ ಹತ್ತುಹಲವು ಕೃತಿಗಳನ್ನು ಶರ್ಮಾರು ಮೂಲದ ಸೊಗಸಿಗೆ ಕಿಂಚಿದೂನವೂ ಇಲ್ಲದಂತೆ ಕನ್ನಡಕ್ಕೆ ಅನುವಾದಿಸಿದ್ದಾರೆ. **ವಾಲ್ಮೀಕಿ ರಾಮಾಯಣ, ಅಮರಕೋಶ, ವಿದುರನೀತಿ, ಶ್ರೀಮದ್ಭಾಗವತದ ದಶಮಸ್ಕಂದ, ವಾಕ್ಯಪದೀಯದ ಬ್ರಹ್ಮಕಾಂಡ, ವಿದ್ಯಾರಣ್ಯರ ಪಂಚದಶಿ** ಮೊದಲಾದವು ಅವರ ಅನುವಾದಿತ ಕೃತಿಗಳು. ಡಿವಿಜಿಯವರ ಮುನ್ನುಡಿಯೊಂದಿಗೆ

©KTBS Not to be republished

ಪ್ರಕಟಗೊಂಡ **ರಂಗನಾಥ ಶರ್ಮರ ವಾಲ್ಮೀಕಿ ರಾಮಾಯಣ** ಎಂಬ, ಮೂಲ ರಾಮಾಯಣದ ಅನುವಾದ ಕೃತಿ ಅತ್ಯಂತ ಪ್ರಸಿದ್ಧವಾದುದು. ಡಿವಿಜಿಯವರ ನಿಧನಾನಂತರ, **ಮಂಕುತಿಮ್ಮನ ಕಗ್ಗ**ದ ಮುಂದುವರಿದ ಭಾಗವಾಗಿ **"ಮರುಳ ಮುನಿಯನ ಕಗ್ಗ"**ವನ್ನು ಸಂಪಾದಿಸಿ ಪ್ರಕಟಿಸಿದುದು ಶರ್ಮರ ಸಂಪಾದನ ಸಾಮರ್ಥ್ಯಕ್ಕೊಂದು ಸಾಕ್ಷಿಯಾಗಿದೆ.

ಇವರಿಗೆ ಸಂಸ್ಕೃತ ಅಧ್ಯಾಪನಕ್ಕಾಗಿ ರಾಷ್ಟ್ರಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ತಿರುಪತಿಯ ಸಂಸ್ಕೃತ ವಿಶ್ವವಿದ್ಯಾಲಯದ **"ಮಹಾಮಹೋಪಾಧ್ಯಾಯ"** ಎಂಬ ಗೌರವ, ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಗೌರವ ಡಾಕ್ಟರೇಟ್,** ಆದಿಚುಂಚನಗಿರಿ ಮಹಾಸಂಸ್ಥಾನವು ಕೊಡಮಾಡುವ ಚುಂಚಶ್ರೀ ಪ್ರಶಸ್ತಿ, ರಾಷ್ಟ್ರಪತಿಗಳ ಗೌರವಪ್ರಶಸ್ತಿಪತ್ರ ಮುಂತಾದ ಹಲವು ಪ್ರಶಸ್ತಿ-ಪುರಸ್ಕಾರಗಳು ಸಂದಿವೆ. ಇವರು ತುಂಬುಜೀವನವನ್ನು ನಡೆಸಿ ೨೦೧೪ರ ಜನವರಿ ೨೫ರಂದು, ತನ್ನ ೯೮ನೆಯ ವಯಸ್ಸಿನಲ್ಲಿ ನಿಧನರಾದರು. ಪ್ರಸ್ತುತ ಪಠ್ಯಭಾಗವನ್ನು **ಶರ್ಮರ ಶ್ರೀಮದ್ವಾಲ್ಮೀಕಿರಾಮಾಯಣಮ್** ಕೃತಿಯ ಅಯೋಧ್ಯಾಕಾಂಡ ಸಂಪುಟದಿಂದ ಆರಿಸಿಕೊಳ್ಳಲಾಗಿದೆ.

## ಕತೆಯ ಹಿನ್ನೆಲೆ

©KTBS Not to be republished

ಕೈಕೇಯಿಯ ಬಲವಂತಕ್ಕೆ ಕಟ್ಟುಬಿದ್ದು ದಶರಥನು ರಾಮನನ್ನು ವನವಾಸಕ್ಕೆ ಹೊರಡೆಂದು ಹೇಳಿದ ಮೇಲೆ ರಾಮನು ತನ್ನ ಪತ್ನಿ ಸೀತೆ ಹಾಗೂ ಸೋದರ ಲಕ್ಷ್ಮಣನೊಡಗೂಡಿ ಕಾಡಿಗೆ ತೆರಳುತ್ತಾನೆ. ಈ ಘಟನೆಯು ನಡೆದಾಗ ಭರತನು ಅಯೋಧ್ಯೆಯಲ್ಲಿರಲಿಲ್ಲ. ನಂತರ ಬಂದು ವಿಷಯ ತಿಳಿದು ಆಘಾತಗೊಂಡ ಭರತನು ಎಷ್ಟುಮಾತ್ರಕ್ಕೂ ತಾನು ಸಿಂಹಾಸನದಲ್ಲಿ ಕೂರೆನೆಂದೂ ರಾಮನೊಬ್ಬನೇ ಪಟ್ಟಾಭಿಷಿಕ್ತನಾಗಲು ಅರ್ಹನೆಂದೂ ಹೇಳಿ ತನ್ನ ಪರಿವಾರಸಮೇತನಾಗಿ ರಾಮನನ್ನು ಕಾಣಲು ಅರಣ್ಯಕ್ಕೆ ಬರುತ್ತಾನೆ. ಭರತನು ಯುದ್ಧ ಮಾಡುವುದಕ್ಕೆಂದೇ ಸನ್ನದ್ಧನಾಗಿ ಬರುತ್ತಿರಬೇಕೆಂದು ಲಕ್ಷ್ಮಣನು ಬಗೆದರೂ ಅವನನ್ನು ಸಮಾಧಾನಪಡಿಸಿದ ರಾಮನು ಭರತನ ಜೊತೆ ಸ್ನೇಹಭಾವದಿಂದ ಮಾತಾಡುತ್ತಾನೆ. ಆಗ ಆತನಿಗೆ ಭರತನ ಮೂಲಕ, ತನ್ನ ತಂದೆಯ ದೇಹಾಂತ್ಯದ ವಿಚಾರ ತಿಳಿಯುತ್ತದೆ. ತನ್ನನ್ನು ಮರಳಿ ಅಯೋಧ್ಯೆಗೆ ಬರುವಂತೆ ಭರತ ಎಷ್ಟು ಒತ್ತಾಯಿಸಿದರೂ ಕೇಳದೆ ರಾಮನು ತಂದೆಯ ಆದೇಶವನ್ನು ಪಾಲಿಸುವುದು ತನ್ನ ಕರ್ತವ್ಯ ಎಂದು ಹೇಳುತ್ತಾನೆ. ಆ ಸಂದರ್ಭದಲ್ಲಿ ಆತ ರಾಜ್ಯಾಡಳಿತದ ಬಗ್ಗೆ ಭರತನಲ್ಲಿ ಕೇಳುವ ಪ್ರಶ್ನೆಗಳು, ಹೇಳುವ ಅನುಭವದ ಮಾತುಗಳು ಈ ಅಧ್ಯಾಯದಲ್ಲಿ ಬಂದಿವೆ. ವನವಾಸಕ್ಕೆ ತೆರಳುವ ಮೊದಲು ೧೨ ವರ್ಷಗಳ ಕಾಲ ಅಯೋಧ್ಯೆಯ ಅಧಿಕಾರಿಯಾಗಿ ರಾಮನು ಪಡೆದಿದ್ದ ಅನುಭವವೂ ಇಲ್ಲಿ ಅವನ ಮಾತಿನಲ್ಲಿ ಪ್ರತಿಫಲಿಸುತ್ತಿದೆ. ರಾಜನಾದವನು ಎಷ್ಟು ಸೂಕ್ಷ್ಮಗ್ರಾಹಿಯಾಗಿರಬೇಕು, ಎಷ್ಟು ಸಮಚಿತ್ತ ಹೊಂದಿರಬೇಕು, ತನ್ನ ಸುತ್ತ ನಡೆಯುವ ವಿಚಾರಗಳಿಗೆ ಹೇಗೆ ಆತ ಪ್ರತಿಕ್ರಿಯಿಸುತ್ತಿರಬೇಕು, ಒಟ್ಟು ಆಡಳಿತದಲ್ಲಿ ಭ್ರಷ್ಟಾಚಾರವು ನುಸುಳದಂತೆ ಹೇಗೆ ಜಾಗ್ರತೆಯಿಂದ ವ್ಯವಹರಿಸಬೇಕು ಎಂಬ ಎಲ್ಲ ಸೂಕ್ಷ್ಮಚಿಂತನೆಗಳೂ ಇಲ್ಲಿ ರಾಮಮುಖದಿಂದ ಬಂದಿವೆ. ಅಯೋಧ್ಯೆಯಿಂದ ದೂರವಾದರೂ ಆ ರಾಜ್ಯದ ಯೋಗಕ್ಷೇಮದ ಕಳಕಳಿ ರಾಮನಲ್ಲಿ ಎಷ್ಟು ತುಂಬಿತ್ತು ಎಂಬುದಕ್ಕೂ ಈ ಮಾತುಗಳು ಸಾಕ್ಷಿಯಾಗಿವೆ.

## ಪದಗಳ ಅರ್ಥ

ನಾರುಮಡಿ – ಸಂನ್ಯಾಸಿಗಳು, ವನವಾಸದಲ್ಲಿರುವವರು ಧರಿಸುವ ಸಾಧಾರಣವಾದ ನಾರಿನ ಬಟ್ಟೆ

ಕೃಶ – ನಿತ್ರಾಣ

ಸಾವಧಾನ – ನಿಧಾನ, ಗಡಿಬಿಡಿಯಿಲ್ಲದೆ

ಮಂತ್ರಾಲೋಚನೆ – ಮಂತ್ರಿಗಳು, ಸಚಿವಸಂಪುಟ ಮೊದಲಾದ ಉನ್ನತಾಧಿಕಾರಿಗಳನ್ನು ಜೊತೆಗಿರಿಸಿಕೊಂಡು ನಡೆಸುವ ಮುಖ್ಯ ಸಭೆ. ಇಲ್ಲಿ ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ದೀರ್ಘವಾದ ಸಮಾಲೋಚನೆ ನಡೆಸಿ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ.

ಅಮಾತ್ಯ – ಮುಖ್ಯ ಸಚಿವ

ಗೋಪ್ಯ – ಗೌಪ್ಯ, ರಹಸ್ಯ

ಪರ್ಯಾಲೋಚಿಸು – ಚಿಂತಿಸು, ಸಮಾಲೋಚಿಸು

ಸಾಮಂತರಾಜರು – ಮಹಾರಾಜ ಅಥವಾ ಚಕ್ರವರ್ತಿಯ ಕೈಕೆಳಗಿರುವ ಸಣ್ಣ ಪ್ರಾಂತ್ಯಗಳ ಒಡೆಯರು; ಇವರು ಮುಖ್ಯ ರಾಜನಿಗೆ ನಿಗದಿತವಾಗಿ ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತ ತಮ್ಮ ಪ್ರಾಂತ್ಯಗಳನ್ನು ಸ್ವತಂತ್ರವಾಗಿ ಆಳುತ್ತಿರುತ್ತಾರೆ.

ಮೇಧಾವಿ – ಬುದ್ಧಿವಂತ

ಶ್ರೇಯಸ್ಸು – ಲಾಭ, ಜಯ, ಕೀರ್ತಿ

ಅನುಜ – ಸೋದರ

ಕಾರ್ಯದಕ್ಷ – ಕೆಲಸಕಾರ್ಯಗಳಲ್ಲಿ ಪರಿಣತ; ಕೆಲಸಗಳನ್ನು ಅತ್ಯಂತ ಸಮರ್ಥವಾಗಿ ಮಾಡಿಮುಗಿಸಬಲ್ಲವನು

ಜ್ಞಾತಿ – ಸಂಬಂಧಿಕ

ಒಮ್ಮನಸ್ಸು – ಒಂದೇ ಮನಸ್ಸು; ಎರಡನೇ ಯೋಚನೆ ಇಲ್ಲದೆ

ಉಪೇಕ್ಷೆ – ಉದಾಸೀನ; ಕಡೆಗಣನೆ

ದುರ್ಗ – ಕೋಟೆ

ಧನುರ್ಧಾರಿ – ಬಿಲ್ಲುಬಾಣಗಳನ್ನು ಹಿಡಿದ

ನಾಸ್ತಿಕಬುದ್ಧಿ – ವೇದಗಳನ್ನೂ ದೇವರನ್ನೂ ನಿರಾಕರಿಸಿ ಸ್ವತಂತ್ರವಾಗಿ ವರ್ತಿಸುವುದು; ಪರಂಪರೆಯನ್ನು ಧಿಕ್ಕರಿಸುವುದು

ಅನವಧಾನ – ಗಮನ ಕೊಡದಿರುವುದು; ಉದಾಸೀನತೆ

©KTBS Not to be republished

## ಅಭ್ಯಾಸ

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ:**

೧. ಅಮಾತ್ಯರು ಯಾವ ವಿಷಯದಲ್ಲಿ ನಿಪುಣರಾಗಿರಬೇಕು?

೨. ರಾಜನು ಯಾವ ಕಾರ್ಯವನ್ನು ಕೂಡಲೇ ಆಚರಣೆಗೆ ತರಬೇಕು?

೩. ಕಷ್ಟಕಾಲದಲ್ಲಿ ಸಹಾಯಕ್ಕೆ ನಿಲ್ಲುವವನು ಯಾರು?

೪. ರಾಜನಿಗೆ ಮಹತ್ತರವಾದ ಶ್ರೇಯಸ್ಸನ್ನು ತಂದುಕೊಡಬಲ್ಲವನು ಯಾರು?

೫. ಜನರು ಅರಸನನ್ನು ಹೇಗೆ ತಿರಸ್ಕರಿಸಬಹುದು?

೬. ದೇಶಕ್ಕೆ ದೊಡ್ಡ ಗಂಡಾಂತರ ತರಬಲ್ಲವರು ಯಾರು?

೭. ಯಾರೊಡನೆ ಸಮಾಲೋಚಿಸುವುದು ರಾಜದೋಷ ಎಂದು ರಾಮನು ಹೇಳುತ್ತಾನೆ?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ:**

೧. ಮಂತ್ರಾಲೋಚನೆಯನ್ನು ಹೇಗೆ ನಡೆಸಬೇಕೆಂದು ರಾಮನ ಅಭಿಪ್ರಾಯ?

೨. ರಾಜ್ಯದ ಅಮಾತ್ಯರಲ್ಲಿ ಯಾವ ಗುಣಗಳಿರಬೇಕು?

೩. ಯಾವ ಮೂರು ವ್ಯಕ್ತಿಗಳನ್ನು ರಾಜನು ತ್ಯಜಿಸಬೇಕು? ಯಾಕೆ?

೪. ದೂತನು ಹೇಗಿರಬೇಕು?

೫. ಸೇವಕರ ವಿಷಯದಲ್ಲಿ ರಾಜನು ಹೇಗೆ ವರ್ತಿಸಬೇಕು?

೬. ಖಜಾನೆಯನ್ನು ಹೇಗೆ ನಿಭಾಯಿಸಬೇಕೆಂದು ರಾಮನು ಹೇಳುತ್ತಾನೆ?

**ಇ) ಈ ಕೆಳಗಿನ ಪ್ರಶ್ನೆಗಳಿಗೆ ೧೦ ವಾಕ್ಯಗಳಲ್ಲಿ ವಿಸ್ತಾರವಾಗಿ ಉತ್ತರಿಸಿ:**

೧. ರಾಜ್ಯಾಡಳಿತದ ವಿಷಯದಲ್ಲಿ ರಾಮನ ಉಪದೇಶವನ್ನು ಸಂಗ್ರಹವಾಗಿ ಬರೆಯಿರಿ.

೨. ರಾಜನಲ್ಲಿ ತಲೆದೋರಬಹುದಾದ ಹದಿನಾಲ್ಕು ದೋಷಗಳ ಬಗ್ಗೆ ವಿವರಿಸಿ.

**ಈ) ಈ ಮಾತುಗಳ ಸ್ವಾರಸ್ಯವನ್ನು ವಿಸ್ತರಿಸಿ ಬರೆಯಿರಿ.**

೧. ಸಾವಿರ ಮೂರ್ಖರಿಗಿಂತ ಒಬ್ಬ ಪಂಡಿತ ಲೇಸು

೨. ದೂತನು ಕಾರ್ಯಸಮರ್ಥನೂ ಪ್ರತಿಭಾಶಾಲಿಯೂ ಆಗಿರಬೇಕು.

೩. ಪೂರ್ವಿಕರ ವ್ಯಕ್ತಿತ್ವದ ಅತ್ಯುತ್ತಮ ಅಂಶಗಳನ್ನು ರಾಜನು ಅಳವಡಿಸಿಕೊಳ್ಳಬೇಕು.

©KTBS Not to be republished

## ಭಾಷಾಭ್ಯಾಸ

**ಅ) ಈ ಕೆಳಗಿನ ಪದಗಳ ವಚನ ಬದಲಾಯಿಸಿ ಬರೆಯಿರಿ.**

**ಮಾದರಿ:** ದೂತ – ದೂತರು

ಅಮಾತ್ಯ

ಪ್ರಶ್ನೆ

ಧನುರ್ಧಾರಿಗಳು

ಮೌಲ್ಯ

ಬಹುಮಾನಗಳು

**ಆ) ಈ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.**

ಕೃಶ

ನಿದ್ರಾವಶ

ಏರ್ಪಾಡು

ಚಾಪಲ್ಯ

ಜ್ಞಾತಿ

**ಇ) ಈ ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ.**

ನಡೆಯುತ್ತಿದೆಯೆಂಬುದನ್ನು

ಜಾವದಲ್ಲೆದ್ದು

ದರ್ಶನವನ್ನು

ನಿರ್ಭಯವಾಗಿ

ಕಣ್ಣಿಟ್ಟಿರು

## ಭಾಷೆಯ ಸೊಬಗು

ಯಾವುದೇ ಒಂದು ಸಂಗತಿಯ ಭಾವವನ್ನು ಹೇಳುವಾಗ ನಾವು "ತೆ" ಎಂಬ ಪ್ರತ್ಯಯವನ್ನು ಸೇರಿಸುವುದು ಒಂದು ಕ್ರಮ. ಉದಾ: ಏಕದ ಭಾವ ಏಕತೆ. ಆತ್ಮೀಯವಾಗಿರುವುದರ ಭಾವ ಆತ್ಮೀಯತೆ. ಜಾತೀಯವಾಗಿರುವುದರ ಭಾವ ಜಾತೀಯತೆ.

ಕೆಲವೊಮ್ಮೆ ಇದನ್ನು ಬೇರೆ ರೀತಿಯಲ್ಲೂ ಹೇಳಬಹುದು. ಉದಾಹರಣೆಗೆ, ದುರ್ಬಲವಾಗಿರುವುದರ ಭಾವವನ್ನು ದುರ್ಬಲತೆ ಎನ್ನಬಹುದು, ದೌರ್ಬಲ್ಯ ಎಂದೂ ಹೇಳಬಹುದು. ಆದರೆ ಇವೆರಡನ್ನೂ ಜೊತೆಯಾಗಿಸಿ ದೌರ್ಬಲ್ಯತೆ ಎಂಬುದು ತಪ್ಪು.

ಏಕವಾಗಿರುವುದರ ಭಾವವನ್ನು ಏಕತೆ ಎನ್ನುವಂತೆಯೇ ಐಕ್ಯ ಎಂದೂ ಹೇಳಬಹುದು. ಆದರೆ ಐಕ್ಯತೆ ಎಂಬುದು ಸರಿಯಾದ ರೂಪವಲ್ಲ.

©KTBS Not to be republished

**ಈ ಕೆಳಗಿನವುಗಳನ್ನು ಬರೆಯಿರಿ:**

ಸಮರಸದ ಭಾವ –

ಪ್ರಮುಖದ ಭಾವ –

ಲಲಿತದ ಭಾವ –

ಇಂಥ ಇನ್ನೂ ಐದು ಶಬ್ದಗಳನ್ನು ಸಂಗ್ರಹಿಸಿ ಬರೆಯಿರಿ.

## ಸೈದ್ಧಾಂತಿಕ ಭಾಷಾಭ್ಯಾಸ

### ಪುನರಾವರ್ತನೆ

**ಕನ್ನಡ ಸಂಧಿಗಳು :**

**೧. ಲೋಪಸಂಧಿ :** ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವಪದದಲ್ಲಿರುವ ಸ್ವರವು ಅರ್ಥವು ಕೆಡದಿದ್ದ ಪಕ್ಷದಲ್ಲಿ ಮಾತ್ರ ಲೋಪವಾಗುವುದು. ಇದಕ್ಕೆ ಲೋಪಸಂಧಿ ಎಂದು ಹೆಸರು.

| | | | | | | |
|---|---|---|---|---|---|---|
| **ಉದಾ:** | ತುಪ್ಪಳದ | + | ಅಂತೆ | = | **ತುಪ್ಪಳದಂತೆ** | – ಅ ಕಾರ ಲೋಪ |
| | ಅಲ್ಲಿ | + | ಇದ್ದೇನೆ | = | **ಅಲ್ಲಿದ್ದೇನೆ** | – ಇ ಕಾರ ಲೋಪ |
| | ಇವನು | + | ಒಬ್ಬ | = | **ಇವನೊಬ್ಬ** | – ಉ ಕಾರ ಲೋಪ |
| | ಬೆಳ್ಳಗೆ | + | ಆಗಿ | = | **ಬೆಳ್ಳಗಾಗಿ** | – ಎ ಕಾರ ಲೋಪ |

©KTBS Not to be republished

**೨. ಆಗಮಸಂಧಿ :** ಸ್ವರದ ಮುಂದೆ ಸ್ವರವು ಬಂದು ಸಂಧಿಯಾದಾಗ ಪೂರ್ವಪದದ ಕೊನೆಯ ಸ್ವರ ಹಾಗೂ ಉತ್ತರ ಪದದ ಮೊದಲ ಸ್ವರಗಳ ಮಧ್ಯದಲ್ಲಿ 'ಯ್' ಕಾರವನ್ನು ಅಥವಾ 'ವ' ಕಾರವನ್ನು ಹೊಸದಾಗಿ ಸೇರಿಸಿ ಹೇಳಿದರೆ ಅದು ಆಗಮಸಂಧಿ.

| | | | | | |
|---|---|---|---|---|---|
| **ಉದಾ:** | ಹಳ್ಳಿ | + | ಅಲ್ಲಿ | = | **ಹಳ್ಳಿಯಲ್ಲಿ** |
| | ಭಾವನೆ | + | ಉಂಟಾಯಿತು | = | **ಭಾವನೆಯುಂಟಾಯಿತು** |
| | ಗುರು | + | ಅನ್ನು | = | **ಗುರುವನ್ನು** |
| | ಸ್ವಾರಸ್ಯ | + | ಇಲ್ಲ | = | **ಸ್ವಾರಸ್ಯವಿಲ್ಲ** |

**೩. ಆದೇಶಸಂಧಿ :** ಉತ್ತರ ಪದದ ಆದಿಯಲ್ಲಿರುವ ಕ,ತ,ಪ ವ್ಯಂಜನಗಳಿಗೆ ಕ್ರಮವಾಗಿ ಗ,ದ,ಬ ವ್ಯಂಜನಗಳು ಆದೇಶವಾಗುವುವು. ಇದನ್ನು ಆದೇಶಸಂಧಿ ಎನ್ನುವರು. ಕೆಲವೊಮ್ಮೆ ಉತ್ತರ ಪದದ ಆದಿಯ ಪ್, ಬ್, ಮ್ ವ್ಯಂಜನಗಳಿಗೆ 'ವ' ಕಾರವು ಆದೇಶವಾಗುವುದು.

| | | | | | | |
|---|---|---|---|---|---|---|
| **ಉದಾ:** | ತುದಿ | + | ಕಾಲಲ್ಲಿ | (ಕ್>ಗ್) | = | **ತುದಿಗಾಲಲ್ಲಿ** |
| | ಹುಲಿ | + | ತೊಗಲು | (ತ್>ದ್) | = | **ಹುಲಿದೊಗಲು** |
| | ಕಣ್ | + | ಪನಿ | (ಪ್>ಬ್) | = | **ಕಂಬನಿ** |
| | ನೀರ್ | + | ಪನಿ | (ಪ್>ವ್) | = | **ನೀರ್ವನಿ** |
| | ಕಡು | + | ಬೆಳ್ಪು | (ಬ್>ವ್) | = | **ಕಡುವೆಳ್ಪು** |
| | ಮೆಲ್ | + | ಮಾತು | (ಮ್>ವ್) | = | **ಮೆಲ್ವಾತು** |

## ಸಮಾಸಗಳು (ಪುನರಾವರ್ತನೆ)

ಎರಡು ಅಥವಾ ಅನೇಕ ಪದಗಳು ಅರ್ಥಕ್ಕನುಸಾರವಾಗಿ ಸೇರಿ, ಮಧ್ಯದಲ್ಲಿರುವ ವಿಭಕ್ತಿಪ್ರತ್ಯಯವನ್ನು ಲೋಪ ಮಾಡಿಕೊಂಡು ಒಂದು ಪದವಾಗುವುದೇ ಸಮಾಸ.

ಸಮಾಸದಲ್ಲಿ ಬರುವ ಮೊದಲನೆಯ ಪದವನ್ನು **ಪೂರ್ವಪದ**ವೆಂದೂ ಎರಡನೆಯ ಪದವನ್ನು **ಉತ್ತರಪದ**ವೆಂದೂ ಕರೆಯಲಾಗುವುದು. ಸಮಸ್ತ ಪದವನ್ನು ಬಿಡಿಸಿ ಬರೆಯುವುದಕ್ಕೆ **ವಿಗ್ರಹವಾಕ್ಯ** ವೆನ್ನುವರು.

### ತತ್ಪುರುಷ ಸಮಾಸ

ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರಪದದ ಅರ್ಥವು ಪ್ರಧಾನವಾಗುಳ್ಳ ಸಮಾಸವೇ **ತತ್ಪುರುಷ ಸಮಾಸ.**

**ಉದಾ:** ಕಣ್ಣಿನಿಂದ + ಕುರುಡ = **ಕಣ್ಗುರುಡ**
ಬೆಟ್ಟದ + ತಾವರೆ = **ಬೆಟ್ಟದಾವರೆ**
ತಲೆಯಲ್ಲಿ + ನೋವು = **ತಲೆನೋವು**

### ಕರ್ಮಧಾರಯ ಸಮಾಸ

ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು, ವಿಶೇಷಣ – ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸವೇ **ಕರ್ಮಧಾರಯ ಸಮಾಸ.**

**ಉದಾ:** ಹಿರಿದು + ಜೇನು = **ಹೆಜ್ಜೇನು**
ಹೊಸದು + ಕನ್ನಡ = **ಹೊಸಗನ್ನಡ**
ದಿವ್ಯವಾದ + ಪ್ರಕಾಶ = **ದಿವ್ಯಪ್ರಕಾಶ**

©KTBS
Not to be republished

### ದ್ವಿಗು ಸಮಾಸ

ಪೂರ್ವಪದವು ಸಂಖ್ಯಾವಾಚಕವಾಗಿದ್ದು, ಉತ್ತರ ಪದದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ **ದ್ವಿಗು ಸಮಾಸ.**

**ಉದಾ:** ಎರಡು + ಮಡಿ = **ಇಮ್ಮಡಿ**
ಮೂರು + ಗಾವುದ = **ಮೂಗಾವುದ**
ಪಂಚ + ಇಂದ್ರಿಯಗಳು = **ಪಂಚೇಂದ್ರಿಯಗಳು**

### ಭಾಷಾ ಚಟುವಟಿಕೆ

೧. ಆಗಮಸಂಧಿ ಎಂದರೇನು? ಉದಾಹರಣೆ ಕೊಡಿ.

೨. ಆದೇಶಸಂಧಿ ಎಂದರೇನು? ಉದಾಹರಣೆ ಕೊಡಿ.

೩. **ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ.**
ಪಾತ್ರವನ್ನು, ಶುದ್ಧಿಯನ್ನು, ಚಳಿಗಾಲ, ಪಡೆದಿದ್ದೇನೆ, ಬೆಮರ್ವನಿ

**೪. ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

ಅಂಧಕಾರ, ಹದಿನಾರಾಣೆ, ನಿಭಾಯಿಸು, ಮುಸುಕಿರುವ.

**೫. ಕೊಟ್ಟಿರುವ ಪದಗಳನ್ನು ವಿಗ್ರಹಿಸಿ, ಸಮಾಸ ಹೆಸರಿಸಿ.**

ಮರಗಾಲು, ಹೆಮ್ಮರ, ಬೆಳ್ಗೊಡೆ, ಒಗ್ಗಟ್ಟು, ಸಪ್ತಸ್ವರಗಳು.

**೬. ಕೊಟ್ಟಿರುವ ಗಾದೆಯನ್ನು ವಿಸ್ತರಿಸಿ ಬರೆಯಿರಿ.**

೧. ತುಂಬಿದ ಕೊಡ ತುಳುಕುವುದಿಲ್ಲ,

೨. ಬೆಳ್ಳಗಿರುವುದೆಲ್ಲ ಹಾಲಲ್ಲ.

## ಚಟುವಟಿಕೆಗಳು

೧. ರಾಮರಾಜ್ಯದ ಪರಿಕಲ್ಪನೆಗೂ ಕೌಟಿಲ್ಯನು ಪ್ರತಿಪಾದಿಸಿರುವ ರಾಜ್ಯಾಡಳಿತದ ಅಂಶಗಳಿಗೂ ಸಾಮ್ಯವಿದೆಯೇ? ಈ ಕುರಿತು ತರಗತಿಯಲ್ಲಿ ಒಂದು ಚರ್ಚೆ ನಡೆಸಿ.

೨. ವಿದ್ವಾನ್ ಡಾ. ಎನ್. ರಂಗನಾಥ ಶರ್ಮಾ ಅವರ ಇನ್ನಿತರ ಕೃತಿಗಳನ್ನು ಓದಿ ಅಭ್ಯಸಿಸಿರಿ.

©KTBS
Not to be republished

# ೨. ಬೆಡಗಿನ ತಾಣ ಜಯಪುರ

G8P9H5

**ಕೆ. ಶಿವರಾಮಕಾರಂತ–**

**ಪ್ರವೇಶ :** 'ದೇಶ ಸುತ್ತಿನೋಡು ಕೋಶ ಓದಿನೋಡು' ಎಂಬ ಗಾದೆಯಂತೆ ಜ್ಞಾನಸಂಗ್ರಹಕ್ಕೆ ಎರಡು ಮಾರ್ಗಗಳು. ದೇಶ ಸುತ್ತುವುದರಿಂದ ವ್ಯಕ್ತಿಗೆ ಪ್ರಾಯೋಗಿಕವಾಗಿ ಜ್ಞಾನ ದೊರೆಯುತ್ತದೆ. ಆ ಅನುಭವದ ಬರೆಹ ರೂಪದ ಅಭಿವ್ಯಕ್ತಿಯೇ ಪ್ರವಾಸ ಕಥನ. ಇದು ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಒಂದು. ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಸೂರಿ ವೆಂಕಟರಮಣಶಾಸ್ತ್ರೀ ಕರ್ಕಿ ಅವರ 'ದಕ್ಷಿಣ ಯಾತ್ರಾ ಚರಿತ್ರೆ' ಕೃತಿಯೇ ಮೊದಲ ಪ್ರವಾಸಕಥನವೆಂದು ತಿಳಿದು ಬಂದಿದೆ. ಇದು ಓದುಗನಿಗೆ ಪ್ರವಾಸದ ಪರೋಕ್ಷ ಅನುಭವವನ್ನು ನೀಡುವುದರಿಂದ ಪ್ರವಾಸ ಕಥನಕ್ಕೆ ಹೆಚ್ಚಿನ ಪ್ರಾಮುಖ್ಯವುಂಟು. ಪ್ರವಾಸಕಥನಗಳನ್ನು ನಾಡಿನ ಪ್ರವಾಸಕಥನಗಳು, ದೇಶೀ ಪ್ರವಾಸ ಕಥನಗಳು, ಅಂತಾರಾಷ್ಟ್ರೀಯ ಪ್ರವಾಸಕಥನಗಳೆಂದು ಸ್ಥೂಲವಾಗಿ ವಿಂಗಡಿಸಿದೆ. ಪ್ರಕೃತ ಪ್ರವಾಸ ಕಥನ ದೇಶೀ ನೆಲೆಯದ್ದು.

©KTBS Not to be republished

ಜಯಪುರ ನನ್ನ ಪಾಲಿಗೆ ಹೊಸತಾಗಿರಲಿಲ್ಲ. ಹದಿನೈದು ವರ್ಷಗಳ ಹಿಂದೊಮ್ಮೆ ಹೋಗಿದ್ದೆ. ಈ ಬಾರಿ ನಾನೂ ಶ್ರೀಪತಿಯೂ ರೈಲಿನಿಂದ ಇಳಿದಾಗ, ಬೆಳಗಿನ ಹನ್ನೊಂದು ಗಂಟೆಯ ಬಿಸಿಲು ಬಡಿಯುತ್ತಿತ್ತು. ಮಿತ್ರರಾದ ರೈಗಳು ನಿಲ್ದಾಣಕ್ಕೆ ಬಂದು ನಮಗಾಗಿ ಕಾದಿದ್ದರು. ನಮ್ಮನ್ನು ಊರ ಹೊರಗಿನ ಅವರ ಮನೆಗೆ ಕರೆದುಕೊಂಡು ಹೋದರು. ಹೊರಗಡೆ ನಾಲ್ಕು ಸುತ್ತಲೂ ಉಸುಬು ಹರಡಿದ್ದ ಮರುಭೂಮಿಯಲ್ಲಿ ಅವರ ಮನೆಯಿತ್ತು. ಅಲ್ಲಿ ಮಧ್ಯಾಹ್ನ ವೇಳೆ ಸ್ನಾನಕ್ಕೆ ನೀರು ಕಾಯಿಸುವ ಅಗತ್ಯವಿಲ್ಲ, ಉಸುಬಿನ ಕಾವಿನಿಂದ ನಲ್ಲಿಯ ನೀರು ಕಾದೇ ಬರುತ್ತಿತ್ತು. ನಾನೇನೋ ಬಿಸಿನೀರು ಸ್ನಾನ ಮಾಡುವವ. ಆದರೆ ನನಗೆ ಆದದ್ದು ಶ್ರೀಪತಿಗೆ ಆಗದು. ಶ್ರೀಪತಿ ತಣ್ಣೀರು ಮೀಯುತ್ತಿದ್ದ. ಹೀಗಾಗಿ ಕಾದಿದ್ದ ನೀರನ್ನು ಆರಿಸಿ, ತಣ್ಣೀರಿನ ಸ್ನಾನ ಮಾಡಿದ. ಅನಂತರ ಊಟ ಮಾಡಿ ಒಂದೆರಡು ತಾಸು ವಿಶ್ರಾಂತಿ ಪಡೆದೆವು. ನಮ್ಮ ಮೊದಲ ಕಾರ್ಯಕ್ರಮವೆಂದರೆ, ಅಂಬೇರಕ್ಕೆ ಹೋಗುವುದು. ಊರ ಹೊರಗಿರುವ ನಮ್ಮ ಮಿತ್ರ ರೈಗಳಿಗೆ, ಅಂಬೇರಕ್ಕೂ ಜಯಪುರಕ್ಕೂ ನಡುವೆ ಸಿಟಿ ಬಸ್ ನಡೆಯುತ್ತಿತ್ತೆಂದು ಸಹ ಗೊತ್ತಿರಲಿಲ್ಲ. ಹೀಗಾಗಿ ನಾವು ಟಾಂಗಾವನ್ನು ಗೊತ್ತು ಮಾಡಿಕೊಂಡು, ನಗರದ ಮಧ್ಯಭಾಗದಿಂದ ಹಾದು ಹೋದೆವು.

ಜಯಪುರದ ಮುಖ್ಯಬೀದಿಗಳು ನನ್ನ ಮನಸ್ಸಿನ ಮೇಲೆ ತುಂಬಾ ಪರಿಣಾಮವನ್ನು ಬೀರಿದವು. ಒಂದು ಶತಮಾನದ ಹಿಂದೆ ಆ ನಗರದ ಬೀದಿಗಳು ನಿರ್ಮಾಣವಾಗಿದ್ದರೂ ಬಹಳ ಅಗಲವಾದ ಬೀದಿಗಳವು; ನೇರವಾದವುಗಳು. ಬಹುದೂರದಿಂದ ಕಾಣಿಸುವ ಅಂಗಡಿ–ಮನೆಗಳ ದೇಶೀ ವಾಸ್ತುರಚನೆ ಚೆನ್ನಾಗಿ ಶೋಭಿಸುತ್ತದೆ. ಇಲ್ಲಿನ ಒಂದೊಂದು ಮನೆಯೂ ಒಂದೊಂದು ಶೈಲಿಯದೂ ಒಂದೊಂದು ದೇಶದ್ದೂ ಆಗಿ ಕಾಣಿಸುವುದಿಲ್ಲ. ಆದುದರಿಂದಲೇ ನನಗೆ ಅವುಗಳ ಮೇಲೆ ಮೋಹ. ಇಲ್ಲಿನ ಮುಖ್ಯ ಬೀದಿಗಳು ಸಂಧಿಸುವಲ್ಲಿ ಸುಂದರವಾದ ಚೌಕಗಳಿವೆ. ಕೆಲವೊಂದು ಕಡೆಗಳಲ್ಲಿ ಭವ್ಯವಾದ ಮಹಾದ್ವಾರಗಳಿವೆ. ಅಲ್ಲದೆ ಜಯಪುರ ಬಣ್ಣಗಾರರ ತವರೂರು. ಬಣ್ಣ ಹಾಕುವ ಕುಶಲಿಗರು ಆ ಊರಿನಲ್ಲಿ ಬಹಳ ಮಂದಿ ಇದ್ದಾರೆ. ಬಣ್ಣದ ಮೋಹವಿರುವ ಜನರೂ ಬಹಳ ಇದ್ದಾರೆ. ಗಿಡಮರಗಳಿಲ್ಲದ



ಸ್ಥಳದಲ್ಲಿ ವಾಸಿಸುವ ಜನರಿಗೆ, ಕಣ್ಣಿನ ತಣಿವು ಹೇಗೆ ಬರಬೇಕು? ಹಾಗೆಂದೋ ಏನೋ, ಇಲ್ಲಿನ ಜನರು ಅದರಲ್ಲೂ ಹೆಂಗಸರೂ ರಂಗುರಂಗಿನ ಲಂಗ, ಪಾಯಿಜಾಮಾ, ಸೀರೆ, ರವಿಕೆ, ಮೇಲುದೆ ತೊಡುವ ಅಭ್ಯಾಸದವರು. ಅದರಲ್ಲೂ ಕೆಂಪು, ಕಿತ್ತಳೆ, ಹಳದಿ ಎಂದರೆ ಪ್ರಾಣ. ನಿತ್ಯವೂ ಹೋಳಿ ಹುಣ್ಣಿಮೆ ಮಾಡುವವರಂತೆ ಬಣ್ಣದ ಚೆಲ್ಲಾಟ ಅವರ ಬಟ್ಟೆಗಳಲ್ಲಿ. ಗಂಡಸರೂ ರಂಗುರಾಯರೇ. ಅವರ ಪಂಚೆ, ಅಂಗಿಗಳಲ್ಲಿ ರಂಗು ಕಾಣಿಸದಿದ್ದರೂ ಮುಂಡಾಸಿನ ಮೂವತ್ತು ಮೊಳಗಳಲ್ಲಿ ಮುನ್ನೂರು ಬಣ್ಣಗಳನ್ನು ಮೆರೆಯಿಸುವುದುಂಟು. ಸುತ್ತುಸುತ್ತಿನ ಅವರ ದೇಶೀ ಮುಂಡಾಸನ್ನು ಚೆನ್ನಾಗಿ ಬಿಗಿದುಕೊಂಡಾಗ ಬಲು ಗಂಭೀರವಾಗಿಯೇ ಕಾಣಿಸುತ್ತದೆ.

ನಾವು ನಗರವನ್ನು ಕಳೆದು, ಸುಂದರವಾದ ರಸ್ತೆಗಳಲ್ಲಿ ಹಾದು, ಉನ್ನತ ಬೆಟ್ಟಗಳಿಗಭಿಮುಖವಾಗಿ ಹೊರಟೆವು. ಇನ್ನೊಂದು ನಾಲ್ಕು ಮೈಲಿಗೆ ಅಂಬೇರದ ಬೆಟ್ಟ ಸಿಗುತ್ತದೆ. ಅಂಬೇರ ಜಯಪುರದ ಪೂರ್ವಕಾಲದ ರಾಜಧಾನಿ. ಹಳೆಯ ಕೋಟೆ, ಅರಮನೆಗಳೆಲ್ಲ ಅಲ್ಲಿವೆ. ಸಂಜೆ, ಮುಂಜಾನೆಗಳಲ್ಲಿ ಅಲ್ಲಿಯ ಗುಡ್ಡ, ಬೆಟ್ಟ ಹಾಗೂ ಕಣಿವೆಗಳು ಅಪೂರ್ವ ಮೋಹಕತೆಯನ್ನು ತಾಳುತ್ತವೆ. ಹಿಂದೆ ನಾನು ಅಲ್ಲಿಗೆ ಹೋದಾಗ ಜನವಸತಿ ಇದ್ದಿರಲಿಲ್ಲ. ಹಲವಾರು ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು. ಈಗ ಹಾಗಿಲ್ಲ; ನೂರಾರು ಸಿಂಧೀ ಕುಟುಂಬಗಳು ಅಲ್ಲಿ ಮನೆ ಮಾಡಿಕೊಂಡಿವೆ. ಅಂಬೇರದ ಬುಡದಲ್ಲಿ ಒಂದು ಪುಟ್ಟ ಕೆರೆ. ಕೆರೆಯ ನೋಟ ಸುಂದರವಾದ ನೋಟ. ಸುತ್ತಲಿನ ಮರಗಳಲ್ಲಿ ಎಳೆ ಹಸುರು ತಳಿರುಗಳು ಚಿಗುರಿದ್ದು, ಮರಗಳು ಹಚ್ಚಗೆ ಕಾಣಿಸುತ್ತಿದ್ದುವು. ಕೆರೆಯ ಮಗ್ಗುಲಿನಿಂದ ಮುಂದುವರಿದರೆ, ಸುಂದರ ಉದ್ಯಾನವೊಂದು ಕಾಣಸಿಗುತ್ತದೆ. ಬಳಿಯಲ್ಲೇ ಕೆಂಪು ಕಲ್ಲಿನ ಹಳೆಯ ಕಾಲದ ಕೆಲವೊಂದು ಸುಂದರ ಪ್ರತಿಮೆಗಳಿವೆ. ಪ್ರಾಚೀನ ರಜಪೂತ ಕೆತ್ತನೆಯ ಸರಳತೆ, ವೈಖರಿ, ಭವ್ಯತೆಗಳೆಲ್ಲ ಕಾಣಿಸುತ್ತವೆ. ಉದ್ಯಾನವನ್ನು ಹಾಯ್ದು ದಿಡ್ಡಿಯ ಬಾಗಿಲೊಂದನ್ನು ದಾಟಿ, ಕೋಟೆಯ ದಾರಿಯನ್ನು ಏರಿ ಹೋಗಬೇಕು. ಏರುತ್ತ ಹೋದಂತೆ, ಕೆಳಗಿನ ನೋಟ ರಮಣೀಯವಾಗುತ್ತಾ ಹೋಗುವುದು. ನಾವು ಅವಸರ ಅವಸರವಾಗಿ ಕೋಟೆಯನ್ನು ಸೇರಿದೆವು. ಕೋಟೆಯ ಒಳಗೆ ಅರಮನೆ. ಅರಮನೆಗೆ ಸಂಬಂಧಿಸಿದ ಸಭಾಂಗಣ ದೇವಾಲಯ ಮೊದಲಾದುವನ್ನು ಅಲ್ಲಿ ಎರಡು ಮೂರು ಅಂತಸ್ತುಗಳಲ್ಲಿ ರಚಿಸಿದ್ದಾರೆ.

©KTBS Not to be republished

ಅರಮನೆಯ ಮೊದಲ ಅಂತಸ್ತಿನಲ್ಲಿ ಪುಟ್ಟ ದೇವಾಲಯವಿದೆ. ಈ ಪುಟ್ಟ ಮಂದಿರ ಚಿತ್ರ ಕೆಲಸಗಳಿಂದ ಕೂಡಿದ ಹಾಲುಗಲ್ಲಿನ ರಚನೆಯಿಂದ ಕೂಡಿದೆ. ಗೋಡೆಗಳೆಲ್ಲವೂ ಹಾಲುಗಲ್ಲಿನವೇ ; ನೆಲವೂ ಅದರದ್ದೇ. ಸ್ತಂಭಗಳೂ ಅವುಗಳದ್ದೇ. ಗುಡಿ ಚಿಕ್ಕದಾಗಿದ್ದರೂ ಶಾಂತವಾಗಿ ಕಾಣಿಸುವ ಮಂದಿರ. ಗುಡಿಯ ವಿಗ್ರಹ ಮಾತ್ರ ಆಕಾರ ಹಾಗೂ ಅಲಂಕಾರಗಳಿಂದ ಅಷ್ಟೊಂದು ಶೋಭಿಸದು. ಇಲ್ಲಿಯ ಗುಡಿಯನ್ನು ನೋಡಿ, ಮೇಲಿನ ಅಂಗಳವನ್ನೇರಿ ಹೋದರೆ ದೊಡ್ಡದೊಂದು ಸಭಾಂಗಣ ಬರುತ್ತದೆ. ಇದು ವಿಶಾಲವಾದ ಹಾಲುಗಲ್ಲಿನ ರಚನೆ. ಅದರ ಚಾವಣಿ, ರಜಪುತಾನದ ಶೈಲಿಯ ಕಮಾನು ಮತ್ತು ಕಂಬಗಳು ತುಂಬ ಲಲಿತವಾಗಿದ್ದು, ಪರಸ್ಪರ ಹೊಂದಿಕೊಂಡು, ಈ ರಚನೆಗೆ ಚೆಲುವನ್ನು ನೀಡಿವೆ. ಎದುರಿನ ಅಂಗಣವೂ ಸಾಕಷ್ಟು ವಿಶಾಲವಾಗಿದೆ. ಇಲ್ಲಿಂದ ಮೂರನೆಯ ಅಂತಸ್ತಿಗೆ ಹೋದರೆ ರಾಜರ ಅಂತಃಪುರವನ್ನು ನೋಡಬಹುದು. ಇಲ್ಲಿನ ಕೆಲವು ಭಾಗಗಳಲ್ಲಿ ಚಂದ್ರಕಾಂತ ಶಿಲೆಯ ಸುಂದರ ಮಂಟಪಗಳಿವೆ. ಶಿಲೆಯನ್ನು ಕೆತ್ತಿ ಬಣ್ಣದ ಕಲ್ಲುಗಳಿಂದ ಕೊರೆದು ತುಂಬಿಸಿದ ಲತಾಪುಷ್ಪಗಳ ಚಿತ್ರಾವಳಿಗಳೂ ಇವೆ. ಇನ್ನೊಂದೆರಡು ಚಾವಡಿಗಳು ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ, ಚಿತ್ರವಿಚಿತ್ರ ಪ್ರತಿರೂಪಗಳನ್ನು ನಿರ್ಮಿಸಿ ಅಲಂಕರಿಸಿದಂತಹ ಕಂಬ, ಮುಚ್ಚಿಕೆಗಳುಳ್ಳ ರಚನೆ. ಕತ್ತಲಿನಲ್ಲಿ ದೀವಿಗೆ ಹೊತ್ತಿಸಿದಾಗ, ಲಕ್ಷೋಪಲಕ್ಷ ಈ ಗಾಜಿನ ತುಣುಕುಗಳು, ಚಾವಡಿಗೆ ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ. ಅರಮನೆಯ ಮೊದಲನೆಯ ಮಟ್ಟದಲ್ಲಿ ಇನ್ನೊಂದು ಅಂತಃಪುರವಿದೆ. ಅಲ್ಲೂ ಹಾಲುಗಲ್ಲಿನ ಚಾವಡಿ ಮತ್ತು ನೀರಿನ ಕಾರಂಜಿಗಳಿವೆ; ಚಿತ್ರ ಕೊರೆದು ಮಾಡಿದ ಹಾಲುಗಲ್ಲಿನ ನೀರಕಾಲುವೆಗಳಿವೆ. ಇವೆಲ್ಲ ರಜಪೂತ ಅರಸರುಗಳ ರಸಿಕ ಜೀವನದ ದ್ಯೋತಕಗಳು.

ಆವರಣದ ಹಿಂದುಗಡೆ ಇರುವ ತಗ್ಗಿನ ಕಣಿವೆಯ ತಳದಲ್ಲೇ ಕಾಣಿಸುತ್ತದೆ ಮೀರಾಬಾಯಿಯ ದೇವಾಲಯ. ಆಕೆ ಗಿರಿಧರನಾಗರನನ್ನು ಪೂಜಿಸಿದ ಸ್ಥಳವಿದು. ಕೆಳಗಿಳಿದು ಹೋಗಿ ಗುಡಿಯನ್ನು ನೋಡಿದರೆ ಅದರ ಸೊಬಗು ಚೆನ್ನಾಗಿ ಕಾಣುತ್ತದೆ. ನಕ್ಷತ್ರಾಕೃತಿಯನ್ನು ತುಂಬಿಕೊಂಡ ಗರ್ಭಗೃಹ, ನವರಂಗಗಳಿವೆ. ಗುಡಿಯ ಸುಂದರ ಆವರಣವನ್ನು ನೋಡಿ ಹಿಗ್ಗಿ, ನಮ್ಮ ಟಾಂಗಾ ನಿಲ್ಲಿಸಿದಲ್ಲಿಗೆ ಮರಳಿ ಬಂದೆವು. ನಮ್ಮ ಜೀವ ತುಂಬ ದಣಿದಿತ್ತು. ನಮ್ಮೆಲ್ಲರಿಗೂ ಬಾಯಾರಿಕೆ ಏರಿ ಹೋಗಿತ್ತು. ನಾವು ಬಂದವರೇ, ಹಾದಿಯ ಮಗ್ಗುಲಿನ ಒಂದು ಅಂಗಡಿಯ ಮುಂದೆ ಕುಳಿತು, ಬಣ್ಣಬಣ್ಣದ ಸೋಡಾ, ಲೆಮನೇಡ್ ಕುಡಿದೆವು. ಉಡುಗೆಯಲ್ಲಿ ಅಷ್ಟೆಲ್ಲ ಬಣ್ಣಗಳನ್ನು ತುಂಬಿಸಿ ತಿರುಗುವ ಅಲ್ಲಿನ ಜನ, ಮಾರುವ ಸೋಡಾ, ಲೆಮನೇಡ್‌ಗಳಿಗೂ ಕಡುಪಿನ ರಂಗನ್ನು ಕೊಟ್ಟಿದ್ದಾರೆ. ಅವನ್ನು ಕಂಡರೆ ಇದು ಶಾಯಿಯೋ ಪಾನೀಯವೋ ಎಂಬ ಭ್ರಮೆ ಉಂಟಾಗುತ್ತದೆ. ನಮ್ಮ ಪಾಲಿಗೆ ದೊರೆತ, ಕುಡಿಯಬಹುದಾದ ಪಾನೀಯವೂ ಅದೊಂದೇ.

ಸರಿ, ಮನೆಗೆ ಹೊರಟೆವು. ಆಗ ಗೋಧೂಳಿಯ ಸಮಯ. ಟಾಂಗಾ ಕುದುರೆ ಮೆಲ್ಲಗೆ ನಮ್ಮ ಮಾನವೀ ಹೊರೆಯನ್ನು ಎಳೆದುಕೊಂಡು ಸಾಗುತ್ತಲಿತ್ತು. ಇಲ್ಲಿಂದ ಮುಂದೆ ತುಂಬ ಹೊಲಗಳು. ಹೊಲಗಳಲ್ಲಿ ಕೋಳಿ, ಕಾಗೆಗಳಿಗಿಂತ ಅಗ್ಗವಾಗಿ ಕಾಣಿಸುವ ನವಿಲಿನ ಹಿಂಡು. ನಿಜ, ನವಿಲುಗಳ ರಾಜ್ಯದಲ್ಲಿ ಬಣ್ಣದ ಕಣ್ಣು ಹುಟ್ಟಲು, ರಜಪುತಾನದ ಸ್ತ್ರೀಯರಿಗೆ ಬೇರೆ ಪ್ರೇರಣೆ ಬೇಕಿಲ್ಲ.

ಮರುದಿನ ಬೆಳಿಗ್ಗೆ ಅಲ್ಲಿಗೆ ಸಮೀಪವಾಗಿರುವ 'ಜಂತ್ರ ಮಂತ್ರ' ನೋಡಲು ಹೋದೆವು. 'ಜಂತ್ರ ಮಂತ್ರ' ಹಳೆಯ ಕಾಲದ ಖಗೋಳವಿಜ್ಞಾನದ ಪರಿಶೀಲನಾಲಯ. ೪೦೦-೫೦೦ ವರ್ಷಗಳ ಪೂರ್ವದಲ್ಲಿ, ಖಗೋಳಶಾಸ್ತ್ರಜ್ಞರು ಗ್ರಹ, ಸೂರ್ಯ ಚಂದ್ರ, ತಾರಾಮಂಡಲಗಳನ್ನು ಅಳೆದು, ಪರಿಶೀಲಿಸಿ

©KTBS Not to be republished

ನೋಡುವ ಸಲುವಾಗಿ, ಇಲ್ಲಿ ವಿಚಿತ್ರವಾದ ಸಾಧನಗಳನ್ನು ನೆಟ್ಟಿದ್ದಾರೆ. ಇಂಥ ಹತ್ತೆಂಟು ವಿಧದ ಸಾಧನಗಳ ವಿಚಿತ್ರ ರಚನೆಗಳಿವೆ. ಗಳಿಗೆ ಅಳೆಯವುದಕ್ಕೆ, ಪ್ರತಿಯೊಂದು ತಿಂಗಳಿನಲ್ಲೂ ಸೂರ್ಯ, ನಕ್ಷತ್ರಗಳ ಗತಿ ಪರಿಶೀಲಿಸುವುದಕ್ಕೆ ಏನೇನೋ ಏರ್ಪಾಟುಗಳಿವೆ. ಪ್ರತಿಯೊಂದು ಸಾಧನದ ಮೇಲೂ ಅವುಗಳ ಉಪಯೋಗ ಮತ್ತು ಕಾಲವನ್ನು ಅಳೆಯುವ ರೀತಿ ಮೊದಲಾದುವನ್ನು ನಮೂದಿಸಿದೆ. ದೂರದರ್ಶಿಯ ಸಹಾಯವಿಲ್ಲದೆ, ಬರಿಗಣ್ಣಿನಿಂದಲೇ ಖಗೋಳದ ಗ್ರಹಗಳ ಗತಿಯನ್ನು ಅಳೆಯಲು ಮಾಡಿದ ಈ ಸಾಧನಗಳು, ಗಣಿತಕ್ಕೂ ಸೂಕ್ಷ್ಮ ಪರಿಶೀಲನೆಗೂ ಹಿರಿಯರು ಸಲ್ಲಿಸಿದ ಕಾಣಿಕೆ. ಸೂರ್ಯ ನಡುಬಾನಿನಲ್ಲಿ ನಿಂತು ನಮ್ಮ ತಲೆಯನ್ನು ಕೊರೆಯುತ್ತಿದ್ದನಾದುದರಿಂದ, ಇತರ ಸ್ಥಳಗಳನ್ನು ನೋಡುವ ಆಸೆ ಮರೆತು, ಮನೆಗೆ ಓಡಿ ಬಂದೆವು.



ಜಯಪುರದಲ್ಲಿ ಜಾನಪದ ನೃತ್ಯಗಳನ್ನು ನೋಡಬೇಕೆಂಬ ಹಂಬಲ ನನ್ನದಾಗಿತ್ತು. ಹಾಗಾಗಿ, ಮುಂಚಿತವಾಗಿಯೇ ಮಿತ್ರರಿಗೆ ನನ್ನ ಅಪೇಕ್ಷೆ ತಿಳಿಸಿದ್ದೆ. ಅವರು ಗೆಳೆಯರಿಗೆ ತಿಳಿಸಿ ಏರ್ಪಾಟು ಮಾಡಿದ್ದರು. ಸಂಜೆಯಾಗುತ್ತಲೇ ಅಲ್ಲಿನ ಚೀಫ್ ಇಂಜಿನಿಯರ್ ಗೋಪಿನಾಥರಾಯರ ಮನೆಗೆ ಹೋದೆವು. ಅವರು ಮೈಸೂರಿನವರು. ಸದ್ಯ ಜಯಪುರದಲ್ಲೇ ಉದ್ಯೋಗ ಮಾಡಿಕೊಂಡು ಸ್ವಂತ ಮನೆಯಲ್ಲಿ ವಾಸವಾಗಿದ್ದಾರೆ. ಅವರ ಸುಂದರ ಬಂಗಲೆ ಎದುರಿಗೆ ಹಚ್ಚಹಸುರಿನ ಬಯಲಿನ ಒಂದು ತುಣುಕು ಜಾಗವಿದೆ. ಅಲ್ಲೇ ನೃತ್ಯ ಕಾರ್ಯಕ್ರಮ. ಊರಿನ ಜನಸಾಮಾನ್ಯರ ನೃತ್ಯವದು. ಇಬ್ಬರು ಯೌವನಸ್ಥರು ಸ್ತ್ರೀಯರ ಉಡುಗೆ ಉಟ್ಟಿದ್ದರು. ಮಾರವಾಡಿ ಸ್ತ್ರೀಯರಂತೆ ತಲೆಗೆ ಸೆರಗು ಹಾಕಿಕೊಂಡು, ಮುಖತೋರಿಸದೆ ಕುಣಿಯತೊಡಗಿದರು. ಹಿಮ್ಮೇಳಕ್ಕೆ ಡೋಲು ತಮಟೆಗಳಿದ್ದವು. ಮುಂಭಾಗದಲ್ಲಿ ಸ್ತ್ರೀವೇಷದ ನರ್ತಕರು ಲಾಸ್ಯವೆಸಗಿದರು. ಅವರ ಕಾಲಿನ ನಡಿಗೆಯಲ್ಲೂ ಕೈಗಳ ಚಲನೆಯಲ್ಲೂ ಜಾಣ್ಮೆ ಚೆಲುವುಗಳೆರಡೂ ಇದ್ದವು. ಅವರ ಜತೆಗೆ ಮೂರು, ನಾಲ್ಕು ಹುಡುಗರು ನಿತ್ಯದ ಉಡುಗೆಯಲ್ಲಿ ಕುಣಿದಾಡಿದರು. ಆ ನೋಟವನ್ನು ನೋಡುವುದಕ್ಕೆ ಪುರವಣಿಗರೂ ಬಂದು ಕಲೆತರು. ನಮಗಾಗಿ ಒಂದೇ ದಿನದ ಏರ್ಪಾಟಿನಿಂದ ಈ ಕಾರ್ಯಕ್ರಮವನ್ನು ಏರ್ಪಡಿಸಿದ ಮಿತ್ರರಿಗೆ ನಾನು ತುಂಬಾ ಕೃತಜ್ಞನಾಗಿರುವೆ. ಕೆಲಸವಾದ ಮೇಲೆ, ಗೋಪೀನಾಥರ ಆತಿಥ್ಯ ಸ್ವೀಕರಿಸಿ ಮನೆಗೆ ಮರಳಿದೆವು.

ಮುಂದೆಲ್ಲ ಅವಸರವೇ, ಅವಸರದ ಊಟ; ಅವಸರದ ಓಟ. ನಾವು ಧಾವಿಸಿ ಬರುವುದರೊಳಗಾಗಿ, ದಿಲ್ಲಿಗೆ ಹೋಗುವ ರೈಲುಬಂಡಿ ಬಂದಿತ್ತು. ಮಿತ್ರ ರೈಗಳ ಸತ್ಕಾರಕ್ಕೆ ವಂದನೆ ಸಲ್ಲಿಸಿ, ಬಂಡಿಯನ್ನೇರಿ, ಮೇಲಂತಸ್ತಿನಲ್ಲಿ ಹಾಸಿಗೆ ಬಿಡಿಸಿದೆವು. ನಮಗೆ ಬೆಳಗಾದದ್ದೇ ದೆಹಲಿಯನ್ನು ಸಮೀಪಿಸಿದಾಗ.

## ಕೃತಿಕಾರರ ಪರಿಚಯ



**ಶಿವರಾಮ ಕಾರಂತರು** ಸಾ. ಶ. ೧೯೦೨ ರಲ್ಲಿ ಉಡುಪಿ ಜಿಲ್ಲೆಯ **ಕೋಟಾ**ದಲ್ಲಿ ಜನಿಸಿದರು. ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿರುವ ಇವರ **ಚೋಮನದುಡಿ, ಮರಳಿಮಣ್ಣಿಗೆ, ಬೆಟ್ಟದಜೀವ, ಅಳಿದಮೇಲೆ** ಕಾದಂಬರಿಗಳು ಪ್ರಸಿದ್ಧವಾಗಿವೆ. **ಹಸಿವು, ಹಾವು, ಕವಿ, ಕರ್ಮ – ಕಥಾಸಂಕಲನ**ಗಳನ್ನು, **ರಾಷ್ಟ್ರಗೀತ ಸುಧಾಕರ ಮತ್ತು ಸೀಳ್ಗವನಗಳು – ಕವನ ಸಂಕಲನ**ಗಳನ್ನು ರಚಿಸಿದ್ದಾರೆ. **ನಾಟಕ, ಹರಟೆ, ಬಾಲಸಾಹಿತ್ಯ, ವಿಜ್ಞಾನ ಸಾಹಿತ್ಯ, ನಿಘಂಟು** ರಚನೆಯನ್ನು ಮಾಡಿರುವ ಇವರು **ಅಬುವಿನಿಂದ ಬರಾಮಕ್ಕೆ, ಅಪೂರ್ವ ಪಶ್ಚಿಮ, ಅರಸಿಕರಲ್ಲ, ಪಾತಾಳಕ್ಕೆ ಪಯಣ ಮತ್ತು ಪ್ರವಾಸ ಕಥನ**ಗಳು. **ಹುಚ್ಚು ಮನಸ್ಸಿನ ಹತ್ತು ಮುಖಗಳು** ಎಂಬ **ಆತ್ಮಕಥನ, ಯಕ್ಷಗಾನ ಬಯಲಾಟ – ಜಾನಪದ ಸಾಹಿತ್ಯ ಮುಂತಾದ ಕೃತಿ**ಗಳನ್ನು ರಚಿಸಿದ್ದಾರೆ.

ಇವರ **ಮೂಕಜ್ಜಿಯ ಕನಸುಗಳು** ಕಾದಂಬರಿಗೆ **ಜ್ಞಾನಪೀಠ** ಪ್ರಶಸ್ತಿ, **ಯಕ್ಷಗಾನ ಬಯಲಾಟ** ಕೃತಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ** ಪ್ರಶಸ್ತಿ ಮತ್ತು **ಮೈಮನಗಳ ಸುಳಿಯಲ್ಲಿ** ಕೃತಿಗೆ **ಪಂಪ** ಪ್ರಶಸ್ತಿ ಲಭಿಸಿದೆ. ಇವರು ೧೯೫೫ರಲ್ಲಿ ಮೈಸೂರಿನಲ್ಲಿ ನಡೆದ ೩೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪ್ರಕೃತ ಪ್ರವಾಸ ಕಥನ **ಬೆಡಗಿನತಾಣ ಜಯಪುರ** ಪಠ್ಯಭಾಗವನ್ನು **ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು** ಹೊರತಂದಿರುವ **ಶಿವರಾಮಕಾರಂತರ ಸಾಹಿತ್ಯ ಶ್ರೇಣಿಯ ಸಂಪುಟ – ೩೨, ಭಾಗ – ೨, ಗ್ರಂಥದ ಅಬುವಿನಿಂದ ಬರಾಮಕ್ಕೆ** ಭಾಗದಿಂದ ಆರಿಸಿ, ಸಂಪಾದಿಸಿ ನಿಗದಿಪಡಿಸಲಾಗಿದೆ.

## ಆಶಯ ಭಾವ

'ಬೆಡಗಿನತಾಣ ಜಯಪುರ' ಪಠ್ಯಭಾಗದಲ್ಲಿ ಭಾರತದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ನಗರಗಳಲ್ಲಿ ಒಂದಾದ ಜಯಪುರದ ಅಂದಚೆಂದ, ಅಲ್ಲಿನ ಜನರ ಉಡುಗೆ–ತೊಡುಗೆ, ಐತಿಹಾಸಿಕ ವೈಭವ, ಜಾನಪದ ಕಲೆಗಳ ಸೊಗಸು ಮೊದಲಾದ ವಿಚಾರಗಳ ಬಗ್ಗೆ ಲೇಖಕರು ತಿಳಿಸಿದ್ದಾರೆ. ಹಾಗೆಯೇ ಜಯಪುರದ ರಾಜರ ವೈಜ್ಞಾನಿಕತೆಗೆ ಸಾಕ್ಷಿಯಾದ ಜಂತ್ರ–ಮಂತ್ರ ಬಯಲು ಪ್ರಯೋಗಾಲಯದ ಬಗ್ಗೆ ವಿಶೇಷ ಉಲ್ಲೇಖವಿದೆ.

©KTBS Not to be republished

## ಪದಗಳ ಅರ್ಥ

ಉಸುಬು – ಮರಳು, ಉಸುಕು.

ಕಡುಪಿನ ಬಣ್ಣ – ದಟ್ಟವಾದ ಬಣ್ಣ, ರಂಗಾದ ಬಣ್ಣ.

ದೇಶೀಯ – ದೇಶದೊಳಗಿನ.

ನವರಂಗ – ದೇವಾಲಯದ ಸಭಾಮಂಟಪ.

ಮುಂಡಾಸು – ಪೇಟ, ತಲೆಯುಡುಗೆ.

ವಾಸ್ತು – ಕಟ್ಟಡ ನಿರ್ಮಾಣ ಶಾಸ್ತ್ರ.

ಮೇಲುದೆ – ಹೆಂಗಸರು ಮೈಮೇಲೆ ಹೊದೆಯುವವಸ್ತ್ರ.

ಹಾಲುಗಲ್ಲು – ಅಮೃತಶಿಲೆ

## ಟಿಪ್ಪಣಿ

**ಗೋಧೂಳಿ ಸಮಯ** : ಮುಸ್ಸಂಜೆಯ ಸಮಯ, ಗ್ರಾಮೀಣಪ್ರದೇಶಗಳಲ್ಲಿ ದನಕರುಗಳು ಮನೆಗೆ ಹಿಂದಿರುಗಿ ಬರುವಾಗ ಅವುಗಳ ಗೊರಸಿನ ಘರ್ಷಣೆಯಿಂದಾಗಿ ನೆಲದಿಂದ ಧೂಳು ಏಳುತ್ತದೆ. ಈ ಸಮಯವನ್ನು ಗೋಧೂಳಿ ಸಮಯ ಎನ್ನುವರು. ಪುಣ್ಯ ಕಾರ್ಯಗಳಿಗೆ ಅತ್ಯಂತ ಪ್ರಶಸ್ತವಾದ ಸಮಯ.

**ದಿಡ್ಡಿ** : ಸಣ್ಣ ಬಾಗಿಲು (ಹೆಬ್ಬಾಗಿಲು ಅಥವಾ ಮುಖ್ಯದ್ವಾರದ ಬಾಗಿಲು ಮುಚ್ಚಿದ್ದಾಗ ತೆರೆದಿರುವ ಕಿರು ಬಾಗಿಲು).

**ಮುಚ್ಚಿಕೆ ರಚನೆ** : ಕಟ್ಟಡ ರಚನಾವಿನ್ಯಾಸದ ಬಗೆ. ಪದರು ಪದರು ರೂಪದ ಹೊದಿಕೆಯ ಕಟ್ಟಡ ರಚನೆ.

**ರಜಪುತಾನ ಶೈಲಿ** : ಇದು ರಜಪೂತರ ರಾಜಸ್ತಾನ ಪ್ರಾಂತೀಯ ರಾಜವಂಶೀಯ ಶಿಲ್ಪ ಕಲಾ ಶೈಲಿಯ ಬಗೆ. ವಿಶಾಲ ಅಂಕಣದಲ್ಲಿ ಲಲಿತವಾದ ಕಮಾನು ಮತ್ತು ಕಂಬಗಳ ಪರಸ್ಪರ ಹೊಂದಿಕೆಯ ರಚನಾವಿನ್ಯಾಸ ನಮೂನೆ.

**ಚಂದ್ರಕಾಂತ ಶಿಲೆ** : ಚಂದ್ರ ಪ್ರಕಾಶದಿಂದ ದ್ರವಿಸುತ್ತದೆ ಎಂದು ಭಾವಿಸಲಾದ ಒಂದು ಬಗೆಯ ಬಿಳಿಯ ಕಲ್ಲು. ಅಮೃತಶಿಲೆ.

©KTBS
Not to be republished

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ರೈಗಳ ಮನೆ ಎಂಥ ಪ್ರದೇಶದಲ್ಲಿತ್ತು?

೨. ಲೇಖಕರಿಗೆ ಜಯಪುರದ ಮನೆಗಳ ಮೇಲೆ ಮೋಹವೇಕೆ?

೩. ಜಯಪುರದ ಜನರಿಗೆ ಯಾವ ಯಾವ ಬಣ್ಣಗಳು ಇಷ್ಟ?

೪. ಜಯಪುರದ ಪೂರ್ವದ ರಾಜಧಾನಿ ಯಾವುದು?

೫. ಲೇಖಕರಿಗಿದ್ದ ಹಂಬಲವೇನು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಜಯಪುರದ ಬೀದಿ ಹಾಗೂ ಮನೆಗಳ ಸೌಂದರ್ಯವನ್ನು ವರ್ಣಿಸಿ.

೨. ಲೇಖಕರ ಮೊದಲ ಅಂಬೇರ ಭೇಟಿಗೂ ಇತ್ತೀಚಿನ ಭೇಟಿಗೂ ಯಾವ ವ್ಯತ್ಯಾಸವಿತ್ತು?

೩. ಮೀರಾಬಾಯಿ ದೇವಾಲಯದ ಸೌಂದರ್ಯವನ್ನು ವಿವರಿಸಿ.

೪. ಲೇಖಕರು ನೋಡಿದ ಜನಪದ ನೃತ್ಯದ ಸೊಬಗನ್ನು ಚಿತ್ರಿಸಿ.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

೧. ಜಯಪುರದ ಜನರಿಗೆ ಬಣ್ಣಗಳ ಬಗೆಗೆ ಇರುವ ಮೋಹವನ್ನು ತಿಳಿಸಿ.

೨. ಅಂಬೇರ ಬೆಟ್ಟದ ಮೂರು ಅಂತಸ್ತಿನ ಅರಮನೆಯ ಒಳಾಂಗಣ ಚೆಲುವನ್ನು ತಿಳಿಸಿ.

೩. ಜಂತ್ರ ಮಂತ್ರದ ವಿಶೇಷತೆಯನ್ನು ಪರಿಚಯ ಮಾಡಿಕೊಡಿ.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಅಲ್ಲಿ ಮಧ್ಯಾಹ್ನ ವೇಳೆ ಸ್ನಾನಕ್ಕೆ ನೀರು ಕಾಯಿಸುವ ಅಗತ್ಯವಿಲ್ಲ."

೨. "ಗಂಡಸರೂ ರಂಗುರಾಯರೇ"

೩. "ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು"

೪. "ಚಾವಡಿಗೆ ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ"

**ಉ) ಬಿಟ್ಟ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ಜಯಪುರ ಬಣ್ಣಗಾರರ ________________

೨. ಚಿತ್ರಕೊರೆದು ಮಾಡಿದ ________________ ನೀರ ಕಾಲುವೆಗಳು.

೩. ರಾಜರ ಅಂತಃಪುರದ ಕೆಲವು ಭಾಗಗಳಲ್ಲಿ ________________ ಸುಂದರ ಮಂಟಪಗಳಿವೆ.

೪. ಹಿಮ್ಮೇಳಕ್ಕೆ ________________ ತಮಟೆಗಳಿದ್ದವು.

೫. ಮಿತ್ರ ರೈಗಳ ________________ ವಂದನೆ ಸಲ್ಲಿಸಿದೆವು.

©KTBS Not to be republished

ಊ) **ಹೊಂದಿಸಿ ಬರೆಯಿರಿ.**

| **'ಅ' ಪಟ್ಟಿ** | **'ಆ' ಪಟ್ಟಿ** |
|---|---|
| ೧. ಅಂಬೇರ | ಸವರ್ಣದೀರ್ಘಸಂಧಿ |
| ೨. ಲಕ್ಷೋಪಲಕ್ಷ | ತತ್ಸಮ |
| ೩. ಬಣ್ಣಬಣ್ಣ | ಪೂರ್ವದ ರಾಜಧಾನಿ |
| ೪. ಜಂತ್ರ ಮಂತ್ರ | ದ್ವಿರುಕ್ತಿ |
| ೫. ಶೃಂಗಾರ | ಖಗೋಳ ವೀಕ್ಷಣಾಲಯ |
| | ಮಂತ್ರವಾದಿ |
| | ಗುಣಸಂಧಿ |

## ಭಾಷೆಯ ಸೊಬಗು

**ಪ್ರಕಾರ ಎಂದರೆ ರೀತಿ, ಮಾದರಿ, ಬಗೆ.**

ಚಂಪೂ ಎಂಬುದು ಕಾವ್ಯದ ಒಂದು ಪ್ರಕಾರ. ಅನುಷ್ಟುಪ್ ಎಂಬುದು ಛಂದಸ್ಸಿನ ಒಂದು ಪ್ರಕಾರ. ಕಾದಂಬರಿ ಎಂಬುದು ಸಾಹಿತ್ಯದ ಒಂದು ಪ್ರಕಾರ.

**ಪ್ರಾಕಾರ ಎಂದರೆ ಆವರಣ.**

ಮನೆಯ ಪ್ರಾಕಾರ (ಎಂದರೆ ಮನೆಯ ಗೋಡೆ, ಆವರಣ). ದೇವಸ್ಥಾನದ ಪ್ರಾಕಾರ.

**ಇದೇ ರೀತಿ,**

೧. ಆಕರ ಮತ್ತು ಆಕಾರ – ಇವೆರಡರ ವ್ಯತ್ಯಾಸ ಗುರುತಿಸಿ.

೨. ವಿಭಿನ್ನ ಅರ್ಥಗಳನ್ನು ಕೊಡುವ ಇಂಥ ಪದಗಳ ಜೋಡಿಗಳನ್ನು ಬರೆಯಿರಿ.

## ಸೈದ್ಧಾಂತಿಕ ಭಾಷಾಭ್ಯಾಸ

**ಸಂಸ್ಕೃತ ಸಂಧಿಗಳು :**

ನಮೂದಿತ ವಾಕ್ಯಗಳನ್ನು ಗಮನಿಸಿ:

**– ರಾಮಾಯಣ ಮಹೋನ್ನತ ಗ್ರಂಥ.**

**– ಸೂರ್ಯೋದಯ ದೃಶ್ಯ ಅತ್ಯಂತ ಮನೋಹರವಾಗಿದೆ.**

©KTBS Not to be republished

ನಮೂದಿತ ಎರಡು ವಾಕ್ಯಗಳಲ್ಲಿರುವ **ರಾಮಾಯಣ, ಮಹೋನ್ನತ, ಗ್ರಂಥ, ಸೂರ್ಯೋದಯ, ದೃಶ್ಯ, ಅತ್ಯಂತ, ಮನೋಹರ** – ಎಲ್ಲವೂ ಸಂಸ್ಕೃತ ಪದಗಳು. ಆದರೆ ಕನ್ನಡ ಪದಗಳೆಂದು ಪರಿಗಣಿಸಲ್ಪಟ್ಟಿವೆ. ಹೀಗೆ ಕನ್ನಡ ಭಾಷೆಗೆ ಸಂಸ್ಕೃತ ಪದಗಳು ಸೇರ್ಪಡೆಯಾಗಿವೆ. ಇಂತಹ ಸಂಸ್ಕೃತ ಪದಗಳೇ ಸೇರಿ ಸಂಧಿಯಾದರೆ ಅವುಗಳನ್ನು **ಸಂಸ್ಕೃತಸಂಧಿ** ಎಂದು ಕರೆಯಲಾಗುತ್ತದೆ. ಎರಡು ಸ್ವರಗಳ ನಡುವೆ ಸಂಧಿಯಾದರೆ ಅದು **ಸ್ವರಸಂಧಿ.** ಸ್ವರಕ್ಕೆ ವ್ಯಂಜನ ಅಥವಾ ವ್ಯಂಜನಕ್ಕೆ ವ್ಯಂಜನ ಸೇರಿ ಸಂಧಿಯಾದರೆ ಅದು **ವ್ಯಂಜನಸಂಧಿ.**

## ಸಂಸ್ಕೃತ ಸ್ವರಸಂಧಿಗಳು

**ಸವರ್ಣದೀರ್ಘ ಸಂಧಿ**

– **ವಿದ್ಯಾಭ್ಯಾಸ** ಮಾಡು.

– **ರವೀಂದ್ರನು** ಹಾಡಿದನು.

– **ಗುರೂಪದೇಶ**ವನ್ನು ಪಡೆ.

ಈ ಹೇಳಿಕೆಗಳಲ್ಲಿರುವ **ವಿದ್ಯಾಭ್ಯಾಸ, ರವೀಂದ್ರ, ಗುರೂಪದೇಶ** ಪದಗಳನ್ನು ಗಮನಿಸಿ.

**ವಿದ್ಯಾ** + **ಅಭ್ಯಾಸ** > **ವಿದ್ಯಾಭ್ಯಾಸ**

**ದ್** + **ಯ್** + **ಆ** + **ಅ** > **ದ್** + **ಯ್** + **ಆ**

ಇಲ್ಲಿ ಪೂರ್ವಪದದ ಕೊನೆಯಲ್ಲಿರುವ **–ಆ** ಸ್ವರದ ಮುಂದೆ ಪರಪದದ ಆದಿಯಲ್ಲಿ **'ಅ'–** ಸ್ವರ ಇರುವುದು. ಇವೆರಡೂ ಸ್ವರಗಳು ಒಂದೇ ಸ್ಥಾನದಲ್ಲಿ ಹುಟ್ಟುವುದರಿಂದ ಇವು **ಸವರ್ಣಗಳು.** ಈ ಸವರ್ಣ ಸ್ವರಗಳು ಸಂಧಿಯಾದಾಗ ದೀರ್ಘಸ್ವರವಾಗಿ ಪರಿವರ್ತನೆಯಾಗುತ್ತವೆ. ಹಾಗಾಗಿ ಇದನ್ನು **ಸವರ್ಣ ದೀರ್ಘ ಸಂಧಿ** ಎಂದು ಕರೆಯಲಾಗಿದೆ. **(ಅ, ಆ; ಇ, ಈ; ಉ, ಊ; ಇವು ಸವರ್ಣಸ್ವರಗಳು)**

**ಉದಾ :**

**ರವಿ** + **ಇಂದ್ರ** > **ರವೀಂದ್ರ**

**ವ್** + ಇ + ಇ > **ವ್** + **ಈ**

ಇಲ್ಲಿ ಎರಡು **'ಇ'** ಕಾರಗಳು ಸೇರಿ **'ಈ'** ಕಾರವಾಗಿದೆ.

**ಗುರು** + **ಉಪದೇಶ** > **ಗುರೂಪದೇಶ**

**ರ್** + **ಉ** + **ಉ** > **ರ್** + **ಊ**

ಇಲ್ಲಿ ಎರಡು **'ಉ'** ಕಾರಗಳು ಸೇರಿ **'ಊ'** ಕಾರ ಆಗಿದೆ.

ಹಾಗಾಗಿ ಇವು ಕೂಡಾ ಸವರ್ಣದೀರ್ಘ ಸಂಧಿಗೆ ಉದಾಹರಣೆಗಳು.

©KTBS Not to be republished

**ಸೂತ್ರ : ಸವರ್ಣಸ್ವರಗಳು ಒಂದರ ಮುಂದೆ ಒಂದು ಸೇರಿ ಸಂಧಿಯಾದಾಗ ಅವೆರಡರ ಸ್ಥಾನದಲ್ಲಿ ಅದೇ ಜಾತಿಯ ದೀರ್ಘಸ್ವರ ಆದೇಶವಾಗಿ ಬಂದರೆ ಅದನ್ನು ಸವರ್ಣ ದೀರ್ಘಸಂಧಿ ಎಂದು ಕರೆಯುವರು.**

**ಉದಾ: ಸಭಾಂಗಣ, ದೇವಾಲಯ, ರವೀಶ, ವಧೂಪೇತ.**

**ಗುಣಸಂಧಿ**

– **ದೇವೇಂದ್ರ**ನ ಸಭೆ.

– **ಸೂರ್ಯೋದಯ**ವಾಯಿತು.

– **ಮಹರ್ಷಿ**ಯು ತಪವನ್ನು ಮಾಡುವನು.

ಇಲ್ಲಿರುವ **ದೇವೇಂದ್ರ, ಸೂರ್ಯೋದಯ ಮತ್ತು ಮಹರ್ಷಿ** ಪದಗಳನ್ನು ಗಮನಿಸಿ.

**ದೇವ** + **ಇಂದ್ರ** > **ದೇವೇಂದ್ರ**

**ವ್ + ಅ + ಇಂ > ವ್ + ಏಂ**

ಇಲ್ಲಿ ಪೂರ್ವಪದದ ಅಂತ್ಯದಲ್ಲಿರುವ **'ಅ'** ಕಾರಕ್ಕೆ ಪರಪದದ ಆದಿಯಲ್ಲಿರುವ **'ಇ'** ಕಾರ ಸೇರಿ **'ಏ'** ಕಾರ ಆದೇಶವಾಗಿದೆ.

**ಸೂರ್ಯ** + **ಉದಯ** > **ಸೂರ್ಯೋದಯ**

**ರ್ + ಯ್ + ಅ + ಉ > ರ್ + ಯ್ + ಓ**

ಇಲ್ಲಿ ಪೂರ್ವಪದದ ಅಂತ್ಯದಲ್ಲಿರುವ **'ಅ'** ಕಾರಕ್ಕೆ ಪರಪದದ ಆದಿಯಲ್ಲಿರುವ **'ಉ'** ಕಾರ ಸೇರಿ **'ಓ'** ಕಾರ ಆದೇಶವಾಗಿ ಬಂದಿದೆ.

**ಮಹಾ** + **ಋಷಿ** > **ಮಹರ್ಷಿ**

**ಹ್ + ಆ + ಋ > ಹ್ + ಅರ್**

ಇಲ್ಲಿ ಪೂರ್ವಪದದ ಅಂತ್ಯದಲ್ಲಿರುವ **'ಆ'** ಕಾರಕ್ಕೆ ಪರಪದದ ಆದಿಯಲ್ಲಿರುವ **'ಋ'** ಕಾರ ಸೇರಿ **'ಅರ್'** ಕಾರ ಆದೇಶವಾಗಿ ಬಂದಿದೆ.

ಸೂತ್ರ : **ಅ ಆ** ಕಾರಗಳಿಗೆ **ಇ ಈ** ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ **'ಏ'** ಕಾರವೂ **ಉ ಊ** ಕಾರಗಳು ಪರವಾದರೆ **'ಓ'** ಕಾರವೂ **'ಋ'** ಕಾರ ಪರವಾದರೆ **'ಅರ್'** ಕಾರವೂ ಆದೇಶವಾಗಿ ಬಂದರೆ ಅದು **ಗುಣಸಂಧಿ.**

**ಉದಾ: ಸುರೇಂದ್ರ, ಮಹೇಶ್ವರ, ಚಂದ್ರೋದಯ, ದೇವರ್ಷಿ.**

*****

©KTBS Not to be republished

## ಸಮಾಸ

**ಅಂಶಿಸಮಾಸ**

ದೈನಂದಿನ ಜೀವನದಲ್ಲಿ ಮಾತನಾಡುವಾಗ **ಅಂಗೈ, ಮುಂದಲೆ, ಕೊನೆಹುಬ್ಬು** ಇತ್ಯಾದಿ ಪದಗಳನ್ನು ಬಳಸುತ್ತೇವೆ. ಈ ಪದಗಳ ರಚನೆ ಇಂತಿವೆ:

**ಉದಾ.:** **ಕೈಯ + ಅಡಿ > ಅಂಗೈ**

**ತಲೆಯ + ಮುಂದು > ಮುಂದಲೆ**

**ಹುಬ್ಬಿನ + ಕೊನೆ > ಕೊನೆಹುಬ್ಬು**

ನಮೂದಿತ ಉದಾಹರಣೆಗಳನ್ನು ಗಮನಿಸಿದಾಗ ಪೂರ್ವಪದವು ಅನೇಕ ಅಂಶಗಳನ್ನು ಹೊಂದಿರುವ ಅಂಶಿಯೂ ಪರಪದವು ಅಂಶಿಯ ಒಂದು ಅಂಶವನ್ನೂ ಸೂಚಿಸುವುದು.

**ಸೂತ್ರ : ಪೂರ್ವೋತ್ತರ ಪದಗಳು ಅಂಶಾಂಶಿ ಭಾವಸಂಬಂಧದಿಂದ ಸೇರಿ ಪೂರ್ವಪದದ ಅರ್ಥ ಪ್ರಧಾನವಾಗುಳ್ಳ ಸಮಾಸವೇ ಅಂಶಿಸಮಾಸ. ಈ ಸಮಾಸವನ್ನು ಅವ್ಯಯೀಭಾವ ಸಮಾಸವೆಂತಲೂ ಕರೆಯುವರು.**

**ಉದಾ.: ಅಂಗಾಲು, ಮುಂಗಾಲು, ಹಿಂದಲೆ, ಮುಂಬಾಗಿಲು.**

**ದ್ವಂದ್ವಸಮಾಸ**

**ಕೆರೆಯೂ ಕಟ್ಟೆಯೂ ಬಾವಿಯೂ – ಕೆರೆಕಟ್ಟೆಬಾವಿಗಳು**

**ಆನೆಯೂ ಕುದುರೆಯೂ ಒಂಟೆಯೂ – ಆನೆಕುದುರೆಒಂಟೆಗಳು**

**ಗಿಡವೂ ಮರವೂ ಬಳ್ಳಿಯೂ –ಗಿಡಮರಬಳ್ಳಿಗಳು**

ಈ ಉದಾಹರಣೆಗಳನ್ನು ಗಮನಿಸಿದಾಗ ಬೇರೆ ಸಮಾಸಗಳಲ್ಲಿದ್ದಂತೆ ಪೂರ್ವಪದ ಮತ್ತು ಪರಪದ ಎಂಬ ವಿಭಾಗಗಳು ಇಲ್ಲವೆಂಬುದು ಗೋಚರಿಸುತ್ತದೆ. ಅಲ್ಲದೆ ಅರ್ಥ ಪ್ರಾಧಾನ್ಯದಲ್ಲೂ ಒಂದೇ ಪದಕ್ಕೆ ಅಂದರೆ ಪೂರ್ವಪದ ಅಥವಾ ಪರಪದಕ್ಕೆ ಸೀಮಿತವಾಗಿಲ್ಲದೆ ಎಲ್ಲಾ ಪದಗಳ ಅರ್ಥವೂ ಪ್ರಧಾನವಾಗಿರುತ್ತದೆ.

**ಸೂತ್ರ : ಎರಡು ಅಥವಾ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸೇರಿ ಎಲ್ಲಾ ಪದಗಳ ಅರ್ಥವೂ ಪ್ರಧಾನವಾಗಿ ಇರುವ ಸಮಾಸವೇ ದ್ವಂದ್ವಸಮಾಸ.**

ಉದಾ.: **ಗುಡುಗುಸಿಡಿಲುಮಿಂಚುಗಳು, ಗಿರಿವನದುರ್ಗಗಳು, ಸೂರ್ಯಚಂದ್ರನಕ್ಷತ್ರಗಳು, ಕರಿತುರಗರಥಗಳು.**

©KTBS Not to be republished

## ಭಾಷಾ ಚಟುವಟಿಕೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಸಂಸ್ಕೃತ ಸಂಧಿ ಎಂದರೇನು? ಅದರ ವಿಧಗಳಾವುವು?

೨. ಸವರ್ಣದೀರ್ಘಸಂಧಿ ಎಂದರೇನು?

೩. ಗುಣಸಂಧಿ ಎಂದರೇನು? ಉದಾಹರಣೆ ಕೊಡಿ.

೪. ಸಮಾಸ ಎಂದರೇನು? ಅದರ ವಿಧಗಳಾವುವು?

೫. ಅಂಶಿ ಸಮಾಸ ಎಂದರೇನು? ಎರಡು ಉದಾಹರಣೆಗಳನ್ನು ಬರೆಯಿರಿ.

೬. ದ್ವಂದ್ವ ಸಮಾಸ ಎಂದರೇನು? ಎರಡು ಉದಾಹರಣೆಗಳನ್ನು ಬರೆಯಿರಿ.

**ಆ. ಕೊಟ್ಟಿರುವ ಪದಗಳಲ್ಲಿ ಅನುಸ್ವಾರ–ವಿಸರ್ಗ ಸಹಿತ ಅಕ್ಷರಗಳನ್ನು ಗುರುತಿಸಿ ಬರೆಯಿರಿ.**

| | | | | | |
|---|---|---|---|---|---|
| ಸ್ವತಃ | ಸುಂದರ | ರಂಗುರಂಗಿನ | ಕೆಂಪು | ದುಃಖ | |
| ಹಿಂದೊಮ್ಮೆ | ಗಂಡಸರು | ಅಂತಃಕರಣ | ಪಂಚೆ | ಅಂಗಿ | ಮುಂಡಾಸು |
| ಅಂಬೇರ | ಸಭಾಂಗಣ | ಅಂತಃಪುರ | ಪುನಃ | ಜಂತ್ರಮಂತ್ರ | ಅಂತಸ್ತು |

**ಇ. ಕೊಟ್ಟಿರುವ ಪದಗಳಲ್ಲಿ ಅನುನಾಸಿಕ ಅಕ್ಷರಗಳನ್ನು ಗುರುತಿಸಿ ಬರೆಯಿರಿ.**

| | | | | |
|---|---|---|---|---|
| ನಗರ | ಮಧ್ಯ | ಪರಿಣಾಮ | ಬಣ್ಣ | ನಿತ್ಯ |
| ಜನ | ಮನೆ | ಕಣಿವೆ | ಮಂದಿರ | ವಿಜ್ಞಾನ |

**ಈ. ಕೊಟ್ಟಿರುವ ವಿಷಯಗಳನ್ನು ಕುರಿತು ಒಂದು ಪುಟಕ್ಕೆ ಮೀರದಂತೆ ಪ್ರಬಂಧ ಬರೆಯಿರಿ.**

೧. ಜನಸಂಖ್ಯೆ ೨. ನಿರುದ್ಯೋಗ

## ಪೂರಕ ಓದು

೧ **ಕೋಟ ಶಿವರಾಮಕಾರಂತ** ಅವರ **ಅಬುವಿನಿಂದ ಬರಾಮಕ್ಕೆ** ಪ್ರವಾಸ ಕಥನ ಓದಿ

©KTBS Not to be republished

# ೩. ನಾನು ಕಂಡಂತೆ
# ಡಾ. ಬಿ. ಜಿ. ಎಲ್. ಸ್ವಾಮಿ

H3H3I5

– ಡಾ. ಎಸ್. ಎಲ್. ಭೈರಪ್ಪ

ಪ್ರವೇಶ : ಡಾ. ಎಸ್. ಎಲ್. ಭೈರಪ್ಪನವರು ಈ ಪ್ರಬಂಧದಲ್ಲಿ ತಮಗೂ ಡಾ. ಬಿ. ಜಿ. ಎಲ್. ಸ್ವಾಮಿಯವರಿಗೂ ಇದ್ದ ಸ್ನೇಹದ ಬಗ್ಗೆ ಬರೆದಿದ್ದಾರೆ. ಇಬ್ಬರು ಪ್ರಸಿದ್ಧರ ಸ್ನೇಹದಲ್ಲಿನ ಹೊಳಹುಗಳು ಇಲ್ಲಿ ಮಾರ್ಮಿಕವಾಗಿ ವ್ಯಕ್ತವಾಗಿವೆ. ಪರಸ್ಪರ ಗೌರವ ಮತ್ತು ಪೂರ್ವಗ್ರಹ ಪೀಡಿತವಲ್ಲದ ಯೋಚನೆಗಳು – ಇವೆರಡು ಇದ್ದಾಗ ವ್ಯಕ್ತಿಗಳ ನಡುವಿನ ಸ್ನೇಹ ಎಷ್ಟು ಅರ್ಥಪೂರ್ಣವೂ ವ್ಯಕ್ತಿತ್ವವಿಕಾಸ ಪೂರಕವೂ ಆಗಿರುತ್ತದೆ ಎಂಬುದನ್ನು ಪ್ರಸ್ತುತ ಬರಹವು ಕಾಣಿಸುತ್ತದೆ.

ಸ್ವಾಮಿಯವರಿಗೂ ನನಗೂ ಮುಖತಃ ಪರಿಚಯವಾದದ್ದು ಅವರ ಜೀವನದ ಕೊನೆಯ ವರ್ಷದಲ್ಲಿ. ನಾನು ಉತ್ತರ ಭಾರತದಲ್ಲಿ, ಅವರು ಮದರಾಸಿನಲ್ಲಿ ಇದ್ದು, ಭೇಟಿಯ ಸಂದರ್ಭ ಒದಗಿರಲಿಲ್ಲ. ಅವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಬಂದು, ನಾವು ಆಗಾಗ ಕಲೆತು ಮಾತನಾಡುವ ಅವಕಾಶವಾಯಿತು. ಇಂಥ ಸ್ಥಳದಲ್ಲಿ ಇಂಥವರಿಂದ ಅವರ ಪರಿಚಯವಾಯಿತೆಂಬ ಖಚಿತ ನೆನಪು ನನಗಿಲ್ಲ. ಆದರೆ ನಾನು ಅವರು ಕೂತು ಒಟ್ಟಿಗೆ ಎರಡೂವರೆ ಮೂರು ಗಂಟೆ ಮಾತನಾಡಿದ ನಂತರ ಈತನ ಜ್ಞಾನ ವಿವಿಧ ವಿಸ್ತಾರಗಳದ್ದು ಎನ್ನಿಸಿದುದು ಮಾತ್ರವಲ್ಲ, ಅವರ ಬಗೆಗೆ ನನ್ನಲ್ಲೆ ಸ್ನೇಹ–ಪ್ರೀತಿಗಳು ಹುಟ್ಟಿರುವುದು ನನ್ನ ಅರಿವಿಗೆ ಬಂತು. ಸಾಧಾರಣವಾಗಿ ಯಾರ ಬಗೆಗೂ ಪ್ರೀತಿ ಸ್ನೇಹ ಆತ್ಮೀಯತೆ ಉಪೇಕ್ಷೆಗಳು ನನ್ನಲ್ಲಿ ಅಷ್ಟು ಬೇಗ ಹುಟ್ಟುವುದಿಲ್ಲ. ತುಂಬ ದಿನ ಒಡನಾಡಿ ಜೊತೆಯಲ್ಲಿ ಕೆಲಸಮಾಡಿ ಅಥವಾ ವ್ಯಕ್ತಿತ್ವದ ಪರೀಕ್ಷೆಯಾಗುವ ಸಂದರ್ಭಗಳನ್ನು ದಾಟಿದ ನಂತರವೇ ನನ್ನಲ್ಲಿ ಯಾರ ವಿಷಯದಲ್ಲಾದರೂ ಒಂದು ಸ್ಪಷ್ಟಭಾವ ಮತ್ತು ಅಭಿಪ್ರಾಯಗಳು ಬೆಳೆಯುವುದು. ಸ್ವಾಮಿಯವರಂತೆ ಬಹು ಬೇಗ ನನ್ನಲ್ಲಿ ಸ್ನೇಹವನ್ನು ಹುಟ್ಟಿಸಿದವರು ನನ್ನ ಜೀವನದಲ್ಲಿ ಇನ್ನು ಒಬ್ಬಿಬ್ಬರು ಮಾತ್ರ.

“ಬೆಳಗ್ಗೆ ಎಷ್ಟು ಹೊತ್ತಿಗೆ ಏಳ್ತೀರಿ?” ಅವರು ಕೇಳಿದರು. “ಮೂರೂವರೆ ಮೂರೂ ಮುಕ್ಕಾಲು,” ನಾನೆಂದೆ. “ನಂದೂ ಹೆಚ್ಚುಕಡಿಮೆ ಅದೇ ಹೊತ್ತೇ. ಆದರೆ ನಾನು ಓದೊದೋ ಪಿಟೀಲು ಅಭ್ಯಾಸವೋ ಮಾಡ್ತೀನಿ. ನಿಮ್ಮ ಹಾಗೆ ವ್ಯಾಯಾಮ ವಾಕಿಂಗ್ ಇಲ್ಲ,” ಎಂದರು. ಆಗ ಅವರು ಗಂಗೋತ್ರಿಯ ಅತಿಥಿಗೃಹದ ಒಂದು ಕೋಣೆಯಲ್ಲಿದ್ದರು. ದಿನಾ ನಾನು ಐದೂವರೆಯ ಹೊತ್ತಿಗೆ ಆ ಮಾರ್ಗ ತಿರುಗಾಡಲು ಹೋಗುವ ಪದ್ಧತಿ. ಒಂದು ದಿನ ಅವರ ಕೋಣೆಯ ಬಾಗಿಲಿಗೆ ಹೋಗಿ ನಿಂತೆ. ಹೊರಗಿನ ಬೆಳಕು ಒಳಗೆ ಬರದಂತೆ ‘ಗಾಳಿ ಬಾಗಿಲಿನ’ ಗಾಜಿಗೆ ಕಪ್ಪು ಕಾಗದ ಅಂಟಿಸಿದ್ದರು. ಕಿಟಕಿ ಬಾಗಿಲುಗಳನ್ನೆಲ್ಲ ಬಿಗಿಯಾಗಿ ಮುಚ್ಚಿದ್ದರು. ಆಲಿಸಿದರೆ ಒಳಗಿನಿಂದ ಪಿಟೀಲುನಾದ. ಅಭ್ಯಾಸ ಮಾಡುತ್ತಿದ್ದಾರೆಂಬುದು ಸ್ಪಷ್ಟವಾದರೂ ಬರೀ ಗುರು ಹೇಳಿಕೊಟ್ಟದ್ದನ್ನು ತೀಡುತ್ತಿಲ್ಲ, ಹೊಸಹೊಸದನ್ನು ಸೃಷ್ಟಿಸಲು ಪಿಟೀಲಿನಲ್ಲಿ

©KTBS Not to be republished

ಪ್ರಯೋಗ ಮಾಡುತ್ತಿದ್ದಾರೆ ಎನ್ನಿಸಿತು. ಅಲ್ಲಿಯೇ ಅರ್ಧ ಗಂಟೆಗೂ ಮಿಕ್ಕಿ ನಿಂತು ಕೇಳುತ್ತಿದ್ದೆ. ಮೇಟಿ ಕಾಫಿ ತಂದು ಬಾಗಿಲು ತಟ್ಟಿದಾಗ ಅವರು ತೆಗೆದರು. ನನ್ನನ್ನು ನೋಡಿ, "ಎಷ್ಟು ಹೊತ್ತಿನಿಂದ ನಿಂತಿದ್ದೀರಿ? ಬಾಗಿಲು ಯಾಕೆ ತಟ್ಟಲಿಲ್ಲ?" ಎಂದರು. "ಒಳಗೆ ಬಂದಿದ್ದರೆ ನೀವು ನುಡಿಸುತ್ತಿರಲಿಲ್ಲ," ಎಂದೆ. ಒಪ್ಪಿಕೊಳ್ಳುವಂತೆ ನಕ್ಕರು. ಹೀಗೆ ಮುಂಜಾನೆ ತಿರುಗಾಡಲು ಹೋದಾಗ ನಾನು ದಿನಾ ಅವರ ಕಿಟಕಿ ಬಾಗಿಲುಗಳನ್ನು ಗಮನಿಸುತ್ತಿದ್ದೆ. ಪ್ರತಿದಿನಾ ಎದ್ದಿರುತ್ತಿದ್ದರು. ಆದರೆ ಎಲ್ಲ ದಿನವೂ ಪಿಟೀಲು ಅಭ್ಯಾಸ ಮಾಡುತ್ತಿರಲಿಲ್ಲ. ಬಾಗಿಲು ಕಿಟಕಿ ಮುಚ್ಚಿದರೆ ಪಿಟೀಲೆಂಬುದು ಖಚಿತ. ತೆರೆದಿದ್ದರೆ ಓದುವುದೋ ಸಂಶೋಧನೆಗೆ ಸಂಬಂಧಿಸಿದ ಟಿಪ್ಪಣಿ ಕಾರ್ಡುಗಳನ್ನು ಅವಲೋಕಿಸುವುದೋ ಮಾಡುತ್ತಿದ್ದರು. ಏಳೆಂಟು ದಿನಕ್ಕೊಮ್ಮೆ ನಾನು ಒಳಗೆ ಹೋಗಿ ಕೂರುತ್ತಿದ್ದೆ. ಹಳೆಗನ್ನಡ, ದಕ್ಷಿಣದ ದೇವಾಲಯಗಳು, ಸಮಕಾಲೀನ ಸಾಹಿತ್ಯ, ಫ್ರೆಂಚ್ ವಸ್ತುಸ್ಥಿತಿವಾದ, ಸಂಗೀತ ಹೀಗೆ ಯಾವುದಾದರೂ ವಿಷಯ ಬೆಳೆಯುತ್ತಿತ್ತು. ಸಸ್ಯಶಾಸ್ತ್ರವಂತೂ ಅವರ ಖಾಸಾಕ್ಷೇತ್ರ. ವೇದ ಉಪನಿಷತ್ತು ಸಂಸ್ಕೃತ ಕಾವ್ಯಗಳೂ ಒಮ್ಮೊಮ್ಮೆ ನುಸುಳುತ್ತಿದ್ದವು.



ಪಿಟೀಲು ನುಡಿಸುತ್ತಿರುವ ಡಾ.ಬಿ.ಜಿ.ಎಲ್.ಸ್ವಾಮಿ. ಈ ಅಪರೂಪದ ಚಿತ್ರವನ್ನು ಸೆರೆಹಿಡಿದವರು ಕನ್ನಡದ ಇನ್ನೋರ್ವ ಶ್ರೇಷ್ಠ ಸಾಹಿತಿ ಡಾ. ಕೃಷ್ಣಾನಂದ ಕಾಮತರು.

ಸ್ವಾಮಿಯಂಥವರನ್ನು ನೋಡಿದರೆ ನನಗೆ ನಮ್ಮ ದೇಶದಲ್ಲಿ ಇತರರು ಹೇಳುವಂತೆ 'ಅದ್ಭುತ, ಆಶ್ಚರ್ಯ'ಗಳಾಗುತ್ತಿರಲಿಲ್ಲ. ಮೇಧಾಶಕ್ತಿಯುಳ್ಳ ಯಾವ ವ್ಯಕ್ತಿಯಾದರೂ ಅವರಂತೆ ಹಲವು ಕ್ಷೇತ್ರಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡು, ಕಾಡುಹರಟೆಯಲ್ಲಿ ಕಾಲ ಕಳೆಯದೆ, ಜ್ಞಾನಾರ್ಜನೆ ಸಂಶೋಧನೆಗಳಲ್ಲಿ ಜೀವನದ ಸಂತೋಷವನ್ನು ಕಾಣುವ ಅಭ್ಯಾಸ ಮಾಡಿಕೊಂಡರೆ ಅವರಂತೆಯೇ 'ಅದ್ಭುತ'ರಾಗಬಹುದು. ಪಶ್ಚಿಮ ದೇಶಗಳಲ್ಲಿ ಅಂಥವರು ಹಲವರಿದ್ದಾರೆ. ಆದರೆ ನಮ್ಮ ದೇಶದ ಸದ್ಯದ ದುರದೃಷ್ಟ: ಮೇಧಾಶಕ್ತಿ ಇರುವ ಅನೇಕರಿಗೆ ಇತರ ಆಕರ್ಷಣೆಗಳ ರೋಗ ಬಡಿಯುತ್ತದೆ. ವಿದ್ವತ್ತು ಸಂಶೋಧನೆಗಳಲ್ಲಿ ಸ್ವಲ್ಪ ಮೇಲೆ ಏರಿದ ತಕ್ಷಣ ತಾನು ಪ್ರೊಫೆಸರನಾಗಲಿಲ್ಲ, ಉಪಕುಲಪತಿಯಾಗಲಿಲ್ಲ, ನಿರ್ದೇಶಕನಾಗಲಿಲ್ಲವೆಂಬ ಕೊರಗು ಹತ್ತುತ್ತದೆ. ಜ್ಞಾನದ ಬೆಳವಣಿಗೆಯಲ್ಲೇ ಜೀವನಸಂತೋಷದ ರುಚಿ ಅವರಿಗೆ ಹತ್ತುವುದೇ ಇಲ್ಲ.

ಒಮ್ಮೆ ಸ್ವಾಮಿ ನನಗೆ ಹೇಳಿದರು: "ಈ ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ವಿಭಾಗದಲ್ಲಿದೆಯಲ್ಲ, ವಿದ್ಯುತ್ ಸೂಕ್ಷ್ಮದರ್ಶಕ ಯಂತ್ರ, ಇದೇನು ಕಡಿಮೆಯದಲ್ಲ. ಕೇಂಬ್ರಿಜ್, ಹಾರ್ವರ್ಡ್‌ಗಳಲ್ಲಿ ಕೂಡ ಎರಡು ಮೂರು ಇಲಾಖೆಗಳು ಇಂಥ

©KTBS Not to be republished

ಒಂದೊಂದು ಯಂತ್ರವನ್ನು ಹಂಚಿಕೊಂಡು ಅಂಥಾ ದೊಡ್ಡ ಸಂಶೋಧನೆ ಮಾಡ್ತಾವೆ." ಅಂಥ ಯಂತ್ರದ ಮೂಲಕ ನಮ್ಮ ದೇಶದಲ್ಲಿ ಎಷ್ಟು ಜನ ನೋಡುವ ಅಭ್ಯಾಸ ಬೆಳೆಸಿಕೊಂಡಿದ್ದಾರೋ ನಾ ಕಾಣೆ. ನೋಡಿದರೂ ಸ್ವಾಮಿಗೆ ಕಾಣುತ್ತಿದ್ದುದು ಅವರಿಗೆ ಕಾಣುತ್ತಿರಲಿಲ್ಲ. ಇತರರು ನೂರು ಬಾರಿ ಇಣುಕಿ ತಿಣುಕಿದರೂ ತಪ್ಪಿಸಿಕೊಳ್ಳುತ್ತಿದ್ದ ಉತ್ತರವು ಸ್ವಾಮಿಯ ಕಣ್ಣಿಗೆ ಮೊದಲ ಬಾರಿಗೆ ಕಾಣಿಸುತ್ತಿತ್ತೆಂದು ಅವರೊಡನೆ ಕೆಲಸ ಮಾಡುತ್ತಿದ್ದ ಸಹೋದ್ಯೋಗಿಗಳು ನನಗೆ ಹೇಳಿದ್ದಾರೆ. ಯಾಕೆ? ತಾನು ಏನನ್ನು ಹುಡುಕಬೇಕೆಂಬ ಅರೆಕಲ್ಪನೆ ಸ್ವಾಮಿಗೆ ಮೊದಲೇ ಇರುತ್ತಿತ್ತು. ಅಲ್ಲದೆ ಪ್ರಕೃತಿಯಲ್ಲಿ, ಸಸ್ಯದ ಕಾಂಡ, ನರ, ರಚನೆಗಳಲ್ಲಿರುವ ವಿನ್ಯಾಸಗಳನ್ನು ತಕ್ಷಣ ಗ್ರಹಿಸುವ ಕಲ್ಪನಾಶಕ್ತಿ ಅವರಿಗಿತ್ತು. ಅದನ್ನವರು ಬೆಳೆಸಿಕೊಂಡಿದ್ದರು. "ಒಂದು ಸಣ್ಣ ಕಾಂಡವನ್ನು ಕತ್ತರಿಸಿ ವಿದ್ಯುತ್ ಸೂಕ್ಷ್ಮದರ್ಶಕದಲ್ಲಿ ನೋಡಿದರೆ ಎಂತಹ ಅದ್ಭುತ ರಚನಾ ವೈಖರಿ ಕಾಣುತ್ತೆ ಗೊತ್ತೆ! ಒಂದೊಂದು ಜಾತಿಯ ಸಸ್ಯದ ಒಂದೊಂದು ಕಾಂಡಕ್ಕೂ ತನ್ನದೇ ಆದ ರಚನಾ ವೈಖರಿ ಇರುತ್ತದೆ. ಅದನ್ನೆಲ್ಲ ಫೋಟೋ ತೆಗೆದು ಮುದ್ರಿಸಿಕೊಂಡರೆ ನಮ್ಮ ಸೀರೆಯ ಬಣ್ಣಗಳನ್ನು ಮುದ್ರಿಸುವವರಿಗೆ ಎಂಥ ಸಿರಿಯ ಗಣಿ ಸಿಕ್ಕುತ್ತೆ ಅಂತೀರಿ," ಒಂದು ದಿನ ನನಗೆ ಹೇಳಿದರು. ಅವರ ಮನೋಧರ್ಮವೇ ಅಂಥದು.

ಪಿಟೀಲು ನುಡಿಸುವಾಗ ಅವರು ಹುಡುಕುತ್ತಿದ್ದುದು ಶಬ್ದಗಳ ರಚನಾ ವೈಖರಿಯನ್ನು, ಅಂಥ ಅನಂತ ರಚನೆಗಳ ಸಾಧ್ಯತೆಯನ್ನು. ಚಿತ್ರಕಲೆಯಲ್ಲೂ ಇಂಥ ರಚನಾಬಂಧಗಳನ್ನೇ ಅರಸುತ್ತಿದ್ದರು. ನಮ್ಮಿಬ್ಬರಿಗೂ ಸಮಾನ ಪ್ರೀತಿಯಿದ್ದ ಪ್ಯಾರಿಸ್‌ನ ಲೂವ್ರ ಚಿತ್ರಕಲಾ ಪ್ರದರ್ಶನ ಶಾಲೆಯನ್ನು ಕುರಿತು, ಅಲ್ಲಿಯ ಪ್ರಸಿದ್ಧ ಚಿತ್ರಗಳನ್ನು ಕುರಿತು ಹಲವು ಬಾರಿ ಮಾತನಾಡಿದ್ದೇವೆ. "ರೇಖೆ, ವರ್ಣಗಳಲ್ಲಿ ಎಂಥೆಂಥ ರಚನಾಬಂಧಗಳನ್ನು ಸಾಧಿಸಬಹುದು?" ಎಂದು ಅವರು ಚಿಕ್ಕ ಮಕ್ಕಳಿಗೆ ಸಹಜವೆನ್ನಿಸುವ ಕೌತುಕವನ್ನು ಕಣ್ಣುಗಳಲ್ಲಿ ಸೂಸುತ್ತಿದ್ದರು. ಪ್ರಕೃತಿಯಲ್ಲಿ ಅದರಲ್ಲೂ ಸಸ್ಯಗಳಲ್ಲಿರುವುದೂ ಇದನ್ನು ಹೋಲುವ ರಚನಾರಹಸ್ಯವೇನೋ! ಇಂಥ ಮನಸ್ಸು ಬುದ್ಧಿ ಕಲ್ಪನಾ ಶಕ್ತಿಗಳನ್ನು ರೂಪಿಸಿ ರೂಢಿಸಿ ಬೆಳೆಸಿಕೊಂಡಿದ್ದ ಸ್ವಾಮಿಗೆ ಸೂಕ್ಷ್ಮದರ್ಶಕದ ಮೊದಲ ನೋಟದಲ್ಲೇ ಗುಟ್ಟು ಕಾಣಿಸಿಬಿಡುತ್ತಿತ್ತು. ಸಸ್ಯ ಮತ್ತು ವನಗಳನ್ನು ಅವರೆಂದೂ ಒಣ ಸಂಶೋಧಕನಾಗಿ ನೋಡುತ್ತಿರಲಿಲ್ಲ. ಕಲೆಯ ರಸ ಆನಂದ ಮತ್ತು ಕೌತುಕಗಳು ಅವರ ಸಂಶೋಧನೆಯ ಇನ್ನೊಂದು ಮುಖವಾಗಿರುತ್ತಿತ್ತು. ಆದ್ದರಿಂದಲೇ ಅವರು ಸಂಶೋಧನೆಗೆ ಎಂದೂ ವಿದಾಯ ಹೇಳಲಿಲ್ಲ. ಇದೊಂದೇ ಅವರ ಸಂಶೋಧನೆಯ ಕ್ಷೇತ್ರವಾಗಿರಲಿಲ್ಲ. ಇತಿಹಾಸ ಸಾಹಿತ್ಯ ಇತರ ಲಲಿತಕಲೆಗಳಲ್ಲೂ ಅವರ ಸಂಶೋಧಕಬುದ್ಧಿ ಕೆಲಸ ಮಾಡುತ್ತಲೇ ಇತ್ತು.

ಸಾಧಾರಣವಾಗಿ ನಾನು ಅವರ ಮನೆಗೆ ಹೋದಾಗ ಹೆಚ್ಚಾಗಿ ಮಾತನಾಡುತ್ತಿದ್ದೆವು. ಅವರು ನನ್ನ ಮನೆಗೆ ಬಂದಾಗ ಮಾತು ಕಡಿಮೆ; ನನ್ನಲ್ಲಿರುವ ಸಂಗೀತದ ರಿಕಾರ್ಡ್‌ಗಳನ್ನು ಕೇಳುತ್ತಿದ್ದರು. ಎಹೂದಿ ಮೆನೂಹಿನ್‌ರ ಪಿಟೀಲೆಂದರೆ ಅವರಿಗೆ ತುಂಬ ಆಸೆ. ನನ್ನಲ್ಲಿರುವ ಮೆನೂಹಿನ್ ರಿಕಾರ್ಡುಗಳನ್ನು ಪದೇ ಪದೇ ಹಾಕಿಸುತ್ತಿದ್ದರು. "ನೋಡಿ, ಈತನ ಹಾಗೆ ಪಿಟೀಲಿನ ಸರ್ವಸಾಧ್ಯತೆಗಳನ್ನು ಹುಡುಕಿ ಹುಡುಕಿ ಹೊರಹೊಮ್ಮಿಸುವ ವಾದಕ ಬೇರೆ ಯಾರಿದ್ದಾನೆ? ನಮ್ಮೋರು ಏನು ಮಾಡ್ತಾರೆ? ಪಿಟೀಲಿನಲ್ಲಿ ಬ್ರೋಚೇವಾರೆವರುರಾ ನುಡಿಸಿದರೆ ಅದು ಬ್ರೋಚೇವಾ ಕುಯ್ಯ್ ಹಾಗಾಗುತ್ತೆಯೇ ಹೊರತು ಪಿಟೀಲು

©KTBS Not to be republished

ನುಡಿಸಿದ ಹಾಗಾಗಲ್ಲ. ಅದೇ ಕೃತಿ, ಅದೇ ರಾಗಬಂಧ, ಪಿಟೀಲಿನಲ್ಲೂ ಅದೇ, ವೀಣೇಲೂ ಅದೇ, ಕ್ಲಾರಿಯೋನೆಟ್‌ನಲ್ಲೂ ಅದೇ, ಹಾಡುಗಾರಿಕೇಲೂ ಅದೇ. ಆ ವಾದ್ಯದ ವಿಶೇಷ ಏನು ಬಂತು? ಈ ಕೃತಿಪದ್ಧತಿ ನಮ್ಮ ಸಂಗೀತದ ಬೆಳವಣಿಗೆಗೆ ದೊಡ್ಡ ಅಡ್ಡಗಲ್ಲಾಗಿ ನಿಂತು ಬಿಟ್ಟಿದೆ. ನಮ್ಮ ಸಂಗೀತಗಾರರಿಗೆ ಇದು ತಿಳಿಯುವುದೇ ಇಲ್ಲ. ತಂಜಾವೂರು ವಾಲಗದೋರೊಬ್ಬರಿಗೇ ತಮ್ಮ ವಾದ್ಯದ ಸಾಧ್ಯತೆಗಳೇನೇನು ಅಂತ ಗೊತ್ತಿರೋದು. ಒಂದು ರಾಗ ತಗೊಂಡರೆ ಮೂರು ಗಂಟೆ ಕಾಲ ವಾಲಗದಲ್ಲಿ ಏನೇನು ಹೊರಡಿಸಬೌದೋ ಅದನ್ನೆಲ್ಲ ಹೊರಡಿಸಿ ಬೆಳೆಸಿ ಆ ರಾಗ ನಾವು ಕೇಳಿದ್ದಷ್ಟೇ ಅಲ್ಲ ಇನ್ನೂ ಇಷ್ಟೆಲ್ಲ ಇದೆ ಅನ್ನಿಸಿಬಿಡ್ತಾರೆ. ಎಹೂದಿ ಮೆನೂಹಿನ್‌ನ ಕೈಲಿ ಪಿಟೀಲು ತನ್ನೆಲ್ಲ ಧ್ವನಿಗಳಿಂದಲೂ ನುಡಿಯುತ್ತೆ. ಅವನು ಪಿಟೀಲಿನ ಮೇಲೆ ಇನ್ನೆಂಥದೋ ನುಡಿಸಿದ ಅನ್ನಿಸಲ್ಲ."

ಸಂಗೀತದ ಬಗೆಗೆ ನಾನೂ ಹೆಚ್ಚು ಕಡಿಮೆ ಇದೇ ರೀತಿ ಬಹಳ ವರ್ಷಗಳಿಂದ ಆಲೋಚಿಸಿದ್ದೆ. ನನ್ನ ವಿಚಾರಗಳನ್ನು ಅವರಿಗೆ ಹೇಳಿದೆ. ಸ್ವಾಮಿ ಉತ್ಸುಕರಾದರು. "ಹಾಗಾದರೆ ನೀವು ಒಂದು ಲೇಖನ ಬರೀಬೇಕು, ಸಂಗೀತಗಾರರೆಲ್ಲ ಓದುವ ಹಾಗೆ ಪ್ರಕಟಿಸೋಣ. ನಾನು ತಮಿಳಿಗೆ ಅನುವಾದಿಸಿ ಅಲ್ಲಿಯ ಸಂಗೀತಗಾರರು, ರಸಿಕರು ಓದುವ ಹಾಗೆ ಮಾಡ್ತೀನಿ," ಎಂದರು. ನಾನೆಂದೆ : "ಕೇಳಿ ಕೇಳಿ ನನಗೆ ಸಂಗೀತದ ರೂಪರೇಷೆ ಗೊತ್ತಷ್ಟೆ. ನಿಮಗಾದರೆ ಕರ್ನಾಟಕದ ಸಂಗೀತದ ತಾಂತ್ರಿಕ ತಿಳಿವಳಿಕೆಯೂ ಇದೆ. ಈಗ ಪಿಟೀಲು ಕೂಡ ಕಲೀತಿದೀರಿ. ಆದ್ದರಿಂದ ನೀವು ಬರೀರಿ. ಅದನ್ನು ಓದಿ ನನ್ನ ವಿಚಾರಗಳನ್ನು ಅಲ್ಲಲ್ಲಿ ಸೇರಿಸಿ ಸೂಕ್ತ ಅನ್ನಿಸಿದ ಕಡೆ ಮಾರ್ಪಾಟುಗಳನ್ನು ನಾನು ಸೂಚಿಸುತ್ತೇನೆ." ಈ ವಿಷಯ ಮುಂದೆ ನಮ್ಮಿಬ್ಬರಲ್ಲಿ ಮೂರು ನಾಲ್ಕು ಸಲ ಚರ್ಚೆಗೆ ಬಂತು. ಅನಂತರ ಒಂದು ಒಪ್ಪಂದವಾಯಿತು: ಲೇಖನವನ್ನು ನಾನು ಮೊದಲು ಬರೆಯುವುದು, ಅವರು ಪರಿಷ್ಕರಿಸುವುದು. ಅನಂತರ ನಮ್ಮಿಬ್ಬರ ಹೆಸರಿನಲ್ಲಿ ಪ್ರಕಟಿಸುವುದು. ಇದೇ ಸಂದರ್ಭದಲ್ಲಿ ಅವರು ಹೇಳಿದರು : "ನೋಡಿ, ನಾನೀಗ ಪಿಟೀಲು ಕಲೀತಿದೀನಲ್ಲ, ಹೇಳಿಕೊಡುವಂಥ ಒಬ್ಬ ಮೇಷ್ಟರಿಗಾಗಿ ಎಷ್ಟು ಹುಡುಕುತಿದೀನಿ ಗೊತ್ತೆ? ಬರೋರೆಲ್ಲ ನಿಮಗೆ ಅಷ್ಟು ಕೃತಿ ಕಲುಸ್ತೀನಿ, ಇಷ್ಟು ಜಾವಳಿ ಕಲುಸ್ತೀನಿ ಅಂತಾರೆಯೇ ಹೊರತು ಪಿಟೀಲು ಕಲಿಸೋರು ಯಾರೂ ಇಲ್ಲ. ಅದೇ ಜಡ್ಡುಗಟ್ಟಿದ ಪಾಠಗಳು. ನಮ್ಮ ವಿಶ್ವವಿದ್ಯಾಲಯಗಳ ಪಾಠದ ರೀತಿ."

©KTBS Not to be republished

ಆ ಸಂದರ್ಭದಲ್ಲಿ ನನ್ನ ಮನಸ್ಸು 'ನೆಲೆ' ಕಾದಂಬರಿಯ ಸ್ವರೂಪವನ್ನು ಬದಲಿಸುವುದರಲ್ಲಿ ಮಗ್ನವಾಗಿತ್ತು. ಅದು ಮುಗಿದ ನಂತರ ಈ ಸಂಗೀತದ ಲೇಖನ ಬರೆಯುವುದಾಗಿ ಒಪ್ಪಿಕೊಂಡೆ. ಅದನ್ನು ಮುಗಿಸುವ ಮೊದಲೇ ಸ್ವಾಮಿ ಇಲ್ಲವಾದರು. ನಾನೊಬ್ಬನೇ ಬರೆಯಲು ಉತ್ಸಾಹವಿಲ್ಲದೆ ಕೈಬಿಟ್ಟೆ.

"ಸ್ವಾಮಿಯವರು ನಿಮ್ಮ ಸ್ನೇಹಿತರಲ್ಲ? ನಮ್ಮ ಕಾಲೇಜಿಗೆ ಒಂದು ಭಾಷಣಕ್ಕೆ ಬರುವಂತೆ ಒಪ್ಪಿಸಿ" ಎಂದು ನನ್ನ ಕಾಲೇಜಿನವರು ನನಗೆ ಗಂಟು ಬಿದ್ದರು. ಸ್ವಾಮಿ ಒಪ್ಪಿಕೊಂಡರು. ಆದರೆ ಭಾಷಣದ ದಿನವನ್ನು, ಕೆಲವು ಸಿದ್ಧತೆಗಳಾಗಬೇಕೆಂದು ಮುಂದೆ ಮುಂದೆ ಹಾಕುತ್ತಾ ಹೋದರು. ಕೊನೆಗೆ ಒಂದು ದಿನ ಅವರೇ ತಾರೀಖು ಕೊಟ್ಟು ಸ್ಲೈಡ್ ಪ್ರೊಜೆಕ್ಟರ್ ಬೇಕೆಂದರು. ಹೈಸ್ಕೂಲು ಮಕ್ಕಳಿಗೆ ಸಸ್ಯಶಾಸ್ತ್ರವನ್ನು ಹೇಗೆ ಬೋಧಿಸಬೇಕೆಂಬುದು ವಿಷಯ. ಈ ವಿಷಯದ ಬೋಧನಾಕ್ರಮದಲ್ಲೇ ಪರಿಣತಿ ಪಡೆದವರು ನಮ್ಮಲ್ಲಿದ್ದಾರೆ. ಹೇಳಿ ಕೇಳಿ ಶಿಕ್ಷಣ ಕಾಲೇಜು ಇದು. ಆದರೆ ಸ್ವತಃ ಮೇಲ್ದರ್ಜೆಯ ವಿಜ್ಞಾನಿಯೊಬ್ಬರು

ಮಕ್ಕಳಿಗೆ ಈ ವಿಜ್ಞಾನವನ್ನು ಹೇಗೆ ಆಕರ್ಷಕವಾಗಿ ಬೋಧಿಸಬಹುದೆಂಬ ಮಾದರಿಗಳನ್ನು ವಿವರಿಸುತ್ತಿರುವಾಗ ಬೋಧನಾಕ್ರಮದ ಪರಿಣತರೆಲ್ಲ ನಿಬ್ಬೆರಗಾದರು. ಇಂಥ ಸ್ವತಂತ್ರ ಆಲೋಚನೆಯು ಇವರಿಗೆ ಹೊಳೆದೇ ಇರಲಿಲ್ಲ.

ನಾನೂ ಸ್ವಾಮಿಯವರೂ ಜೊತೆಯಲ್ಲಿ ಕಾಡುಗಳಿಗೆ ಹೋಗಬೇಕು, ಅಲ್ಲಿ ಅವರು ಹಲವು ರೀತಿಯ ಸಸ್ಯಗಳನ್ನು ನನಗೆ ವಿವರಿಸಬೇಕು ಎಂದು ಯೋಜಿಸಿದ್ದೆವು. ತಂಜಾವೂರಿಗೆ ಹೋಗಿ ಓಲುಗ ಕೇಳುವ ಆಲೋಚನೆ ಮಾಡಿದ್ದೆವು. ಅವರು ಹೀಗೆ ಇದ್ದಕ್ಕಿದ್ದಂತೆ ಇಷ್ಟು ಬೇಗ ಸಾಯುತ್ತಾರೆಂಬ ಕಲ್ಪನೆ ಇರುವುದೂ ಸಾಧ್ಯವಿರಲಿಲ್ಲ. ಸಾಧಾರಣವಾಗಿ ಸಾವು ನನ್ನನ್ನು ದುಃಖದಲ್ಲಿ ಮುಳುಗಿಸುವುದಿಲ್ಲ. ಆದರೆ ಸ್ವಾಮಿ ಸತ್ತಾಗ ನಾನು ಹಲವು ದಿನಗಳು ದುಃಖದಿಂದ ಮಂಕಾಗಿದ್ದುದು ಮಾತ್ರವಲ್ಲ, ಜೀವನದ ಮೂಲಭೂತ ಪ್ರಶ್ನೆ, ಭಾವನೆಗಳು ನನ್ನನ್ನು ತುಂಬಿಕೊಂಡವು. ಸ್ವಾಮಿ ಆಹಾರದಲ್ಲಿ ಕ್ಲುಪ್ತವಾಗಿದ್ದವರು. ಸಿಗರೇಟು ಸೇದುತ್ತಿದ್ದರೂ ಅತಿ ಎನ್ನುವಷ್ಟು ಸೇದುತ್ತಿರಲಿಲ್ಲ. ಓದು ಬರಹ ಸಂಶೋಧನೆಗಳಲ್ಲಿ ತಮ್ಮನ್ನು ತಾವು ವಿಪರೀತ ಸವೆಸಿಕೊಂಡುಮಾಡಿದರೂ ಅದರಲ್ಲಿ ಮಗ್ನರಾಗುತ್ತಿದ್ದರು, ಸಂತೋಷ ಪಡುತ್ತಿದ್ದರು. ಸಂತೋಷವಿದ್ದಲ್ಲಿ ಯಾರೂ ಸವೆಯುವುದಿಲ್ಲ. ಅವರು ಮೊದಲಿನಿಂದ ಕ್ರಮವಾಗಿ ಲಘು ವ್ಯಾಯಾಮವನ್ನೋ ಮುಂಜಾನೆ ನಾಲ್ಕೈದು ಮೈಲಿ ತಿರುಗಾಟವನ್ನೋ ಇಟ್ಟುಕೊಳ್ಳಬೇಕಾಗಿತ್ತು ಎನ್ನಿಸುತ್ತದೆ. ಆದರೆ ಈ ಕ್ರಮವನ್ನಿಟ್ಟುಕೊಂಡು ಎಷ್ಟು ಜನ ಸ್ವಾಮಿಯವರು ಸತ್ತ ವಯಸ್ಸಿಗಿಂತ ಮೊದಲು ಸತ್ತಿಲ್ಲ; ಇಟ್ಟುಕೊಳ್ಳದಿದ್ದವರು ಅವರಿಗಿಂತ ದೀರ್ಘಾಯುವಾಗಿಲ್ಲ... ಎಂಬ ಹೋಲಿಕೆಗಳು ಮನಸ್ಸಿಗೆ ಬಂದಾಗ ಇಂಥ ವ್ಯಕ್ತಿಗಳ ಆಯುಷ್ಯದ, ಸಾವಿನ ಕಾರಣವನ್ನು ಹುಡುಕಹೋಗುವುದು ನಮ್ಮ ದುಃಖವನ್ನು ತಗಲುಹಾಕಲು ನಾವು ಸೃಷ್ಟಿಸುವ ಒಂದು ನಿಮಿತ್ತ ಮಾತ್ರ ಎನಿಸುತ್ತದೆ.

©KTBS Not to be republished

## ಕೃತಿಕಾರರ ಪರಿಚಯ



**ಡಾ. ಎಸ್. ಎಲ್. ಭೈರಪ್ಪ,** ಭಾರತದ ಪ್ರಸಿದ್ಧ ಸಾಹಿತಿ, ಕಾದಂಬರಿಕಾರರು. ಇವರು **ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಸಂತೇಶಿವರದಲ್ಲಿ ೨೦ ಆಗಸ್ಟ್ ೧೯೩೧**ರಲ್ಲಿ ಜನಿಸಿದರು. ಚಿನ್ನದ ಪದಕದೊಂದಿಗೆ ಎಂ.ಎ. ಪದವಿ ಪಡೆದ ಇವರು ನಂತರ ಬರೋಡದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದಿಂದ **"ಸತ್ಯ ಮತ್ತು ಸೌಂದರ್ಯ"** ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿ ಪಡೆದರು. ಗುಜರಾತ್, ದೆಹಲಿ, ಮೈಸೂರು – ಹೀಗೆ ಹಲವೆಡೆ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು.

ಇಪ್ಪತ್ತೈದಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದಿರುವ ಡಾ. ಭೈರಪ್ಪನವರ **ಧರ್ಮಶ್ರೀ, ಗೃಹಭಂಗ, ವಂಶವೃಕ್ಷ, ಅನ್ವೇಷಣ, ದಾಟು, ಪರ್ವ, ಮಂದ್ರ, ಆವರಣ** ಮೊದಲಾದ ಕೃತಿಗಳು ಭಾರತದ ಹಲವು

ಭಾಷೆಗಳಿಗೆ ಅನುವಾದಗೊಂಡಿವೆ. ಮನುಷ್ಯನ ಭಾವಪ್ರಪಂಚದ ಆಳಗಳಿಗೆ ಪಾತಾಳಗರಡಿಯನ್ನಿಳಿಸಿ ಅಲ್ಲಿರುವ ಸಕಲ ಗುಣಾವಗುಣಗಳನ್ನೂ ಅತ್ಯಂತ ಸ್ಪಷ್ಟವಾಗಿ ತೆರೆದುತೋರುವ ಭೈರಪ್ಪನವರ ಬರವಣಿಗೆಗೆ ಮನಸೋಲದವರಿಲ್ಲ. ಇವರು ಸಾಹಿತ್ಯದಂತೆಯೇ ಸಂಗೀತದಲ್ಲೂ ಆಸಕ್ತರು, ಆಳವಾದ ಪರಿಶ್ರಮ ಉಳ್ಳವರು. ಇವರ ಮಂದ್ರ ಕಾದಂಬರಿಯಲ್ಲಿ ಭಾರತೀಯ ಸಂಗೀತದ ಹಲವಾರು ಸೂಕ್ಷ್ಮವಿವರಗಳು, ವ್ಯಕ್ತಿತ್ವಗಳ ಸಂಕೀರ್ಣತೆಗಳು, ಬದುಕಿನ ಒಳನೋಟಗಳು ಅತ್ಯಂತ ಮನೋಜ್ಞವಾಗಿ ಬಂದಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸರಸ್ವತೀ ಸಮ್ಮಾನ್, ನಾಡೋಜ ಪ್ರಶಸ್ತಿ ಸೇರಿದಂತೆ ಅನೇಕ ಗೌರವಗಳೂ ಡಾ. ಭೈರಪ್ಪ ಅವರಿಗೆ ಸಂದಿವೆ. ಇವರ ಕಾದಂಬರಿಗಳು ಚಲನಚಿತ್ರಗಳಾಗಿ, ಧಾರಾವಾಹಿಗಳಾಗಿಯೂ ಪ್ರಸಿದ್ಧಿ ಹೊಂದಿವೆ. ಕಾದಂಬರಿಗಳಲ್ಲದೆ **ಸಾಹಿತ್ಯ ಮೀಮಾಂಸೆಗೆ ಸಂಬಂಧಿಸಿದ 'ಸಾಹಿತ್ಯ ಮತ್ತು ಪ್ರತೀಕ', 'ಕಥೆ ಮತ್ತು ಕಥಾವಸ್ತು', 'ನಾನೇಕೆ ಬರೆಯುತ್ತೇನೆ'** ಎಂಬ ಕೃತಿಗಳನ್ನೂ ಭೈರಪ್ಪ ಅವರು ರಚಿಸಿದ್ದಾರೆ. ಪ್ರಸ್ತುತ ಇವರು ದೇಶದ ಪ್ರತಿಷ್ಠಿತ **"ನ್ಯಾಷನಲ್ ಪ್ರೊಫೆಸರ್"** ಹುದ್ದೆಯನ್ನು ಅಲಂಕರಿಸಿದ್ದಾರೆ.

## ಪಠ್ಯದ ಆಶಯ:

ಡಾ. ಬಿ. ಜಿ. ಎಲ್. ಸ್ವಾಮಿ, ಕರ್ನಾಟಕದ ಪ್ರಸಿದ್ಧ ಸಾಹಿತಿಗಳಲ್ಲಿ ಒಬ್ಬರಾಗಿದ್ದರು. ಸಸ್ಯವಿಜ್ಞಾನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಇವರು, ತಮ್ಮ ಹಾಸ್ಯಬರಹಗಳಿಗೆ ಕೂಡ ಜನಜನಿತರು. ಹಸಿರುಹೊನ್ನು, ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ, ಕಾಲೇಜು ರಂಗ ಮೊದಲಾದ ಪ್ರಸಿದ್ಧ ಕೃತಿಗಳ ಕರ್ತೃ. ಡಿ.ವಿ.ಜಿ.ಯವರ ಮಗನಾಗಿದ್ದ ಬಿ. ಜಿ. ಎಲ್ ಸ್ವಾಮಿಯವರು ತಮ್ಮ ವೃತ್ತಿಯ ಹೊರತಾಗಿ, ಸಾಹಿತ್ಯ ಸಂಗೀತ ಕ್ಷೇತ್ರಗಳಲ್ಲಿ ಕೂಡ ಆಸಕ್ತಿಯನ್ನು ಹೊಂದಿದ್ದ ವ್ಯಕ್ತಿ. ಎಸ್. ಎಲ್. ಭೈರಪ್ಪನವರು ಈ ಪ್ರಬಂಧದಲ್ಲಿ ಸ್ವಾಮಿಯವರ ಬಹುಮುಖೀ ವ್ಯಕ್ತಿತ್ವದ ಬಗ್ಗೆಯೇ ಬೆಳಕು ಚೆಲ್ಲಿದ್ದಾರೆ. ಸಂಗೀತದ ಮೇಲಿನ ಪ್ರೀತಿ, ಸಸ್ಯಶಾಸ್ತ್ರದ ಕುರಿತ ಪಾಂಡಿತ್ಯ, ಕಾಡುಗಳ ಓಡಾಟ, ಬರವಣಿಗೆಯ ಸಾಂಗತ್ಯ, ಅಧ್ಯಯನದ ಆಸ್ಥೆ ಹೀಗೆ ವ್ಯಕ್ತಿಯೊಬ್ಬರು ತನ್ನ ಬದುಕಿನಲ್ಲಿ ಮಾಡಬಹುದಾದ ಅನಂತ ಸಾಧ್ಯತೆಗಳ ಕುರಿತು ಇಲ್ಲಿ ಲೇಖಕರು ವಿವರಿಸುತ್ತಾರೆ. ಕೇವಲ ವೃತ್ತಿ ಮಾತ್ರವೇ ಮುಖ್ಯವಲ್ಲ ಪ್ರವೃತ್ತಿಯೂ ಅವಶ್ಯ ಎನ್ನುವುದು ಇಲ್ಲಿನ ಭಾವ. ಯೋಚನಾಶಕ್ತಿಯನ್ನು ಹರಿಬಿಟ್ಟರೆ ಸಾಧಿಸಲು ಸಾಧ್ಯವಾಗದೇ ಇರುವುದು ಇಲ್ಲ ಎಂಬ ವಿಚಾರವನ್ನು ಅರಿತುಕೊಳ್ಳಬೇಕಿದೆ.

©KTBS Not to be republished

## ಪದಗಳ ಅರ್ಥ

ಉಪೇಕ್ಷೆ – ತಾತ್ಸಾರ

ಮೇಧಾಶಕ್ತಿ – ಬುದ್ಧಿಮತ್ತೆ

ವೈಖರಿ – ಶೈಲಿ, ಧಾಟಿ

ಮಾರ್ಪಾಟು – ಬದಲಾವಣೆ

ನಿಮಿತ್ತ – ಕಾರಣ

## ಅಭ್ಯಾಸ

**ಒಂದು ವಾಕ್ಯದಲ್ಲಿ ಉತ್ತರಿಸಿ**

೧. ಸ್ವಾಮಿಯವರಿಗೂ ಲೇಖಕರಿಗೂ ಪರಿಚಯವಾಗಿದ್ದು ಎಲ್ಲಿ?

೨. ಸ್ವಾಮಿಯವರು ನುಡಿಸುತ್ತಿದ್ದ ಸಂಗೀತವಾದ್ಯ ಯಾವುದು?

೩. ಸ್ವಾಮಿಯವರು ವಿಜ್ಞಾನದ ಯಾವ ವಿಭಾಗದಲ್ಲಿ ಪರಿಣತರಾಗಿದ್ದರು?

೪. ಸ್ವಾಮಿಯವರಿಗೆ ಯಾರ ಪಿಟೀಲು ವಾದನ ಎಂದರೆ ಬಹಳ ಆಸೆ?

**ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ**

೧. ಲೇಖಕರು ಮತ್ತು ಸ್ವಾಮಿಯವರು ಯಾವ ವಿಷಯದ ಕುರಿತು ಚರ್ಚೆ ಮಾಡುತ್ತಿದ್ದರು?

೨. ಸ್ವಾಮಿಯವರ ಸಂಶೋಧನೆಯ ಆಸಕ್ತಿ ಹೇಗಿತ್ತು?

೩. ಸ್ವಾಮಿಯವರ ಸಾವು ಲೇಖಕರನ್ನು ಯಾಕೆ ಕಾಡಿತು?

**ಏಳೆಂಟು ಸಾಲುಗಳಲ್ಲಿ ಉತ್ತರಿಸಿ**

೧. ಸ್ವಾಮಿಯವರ ಸಂಗೀತಾಸಕ್ತಿಯನ್ನು ವಿವರಿಸಿರಿ.

೨. ಸ್ವಾಮಿಯವರ ಸಂಶೋಧಕ ಬುದ್ಧಿ ಹೇಗಿತ್ತು?

©KTBS Not to be republished

**ಸ್ವಾರಸ್ಯ ವಿಸ್ತರಿಸಿ ಬರೆ**

೧. "ಒಳಗೆ ಬಂದಿದ್ದರೆ ನೀವು ನುಡಿಸುತ್ತಿರಲಿಲ್ಲ"

೨. "ಒಂದೊಂದು ಜಾತಿಯ ಸಸ್ಯದ ಒಂದೊಂದು ಕಾಂಡಕ್ಕೂ ತನ್ನದೇ ಆದ ರಚನಾ ವೈಖರಿ ಇರುತ್ತದೆ"

**ಬಿಟ್ಟ ಸ್ಥಳ ತುಂಬಿ ಬರೆಯಿರಿ**

೧. ರೇಖೆ, ವರ್ಣಗಳಲ್ಲಿ ಎಂಥೆಂಥ ________ ಸಾಧಿಸಬಹುದು?

೨. ಹೊರಗಿನ ಬೆಳಕು ಬರದಂತೆ ______ ಗಾಜಿಗೆ ಕಪ್ಪುಕಾಗದ ಅಂಟಿಸಿದ್ದರು.

**ವಿರುದ್ಧಾರ್ಥಕ ಪದ ಬರೆ**

ಕಲ್ಪನೆ

ಪ್ರಸಿದ್ಧ

ದೀರ್ಘಾಯು

## ಭಾಷೆಯ ಸೊಬಗು

ಒಂದು ಶಬ್ದದ ಕೊನೆಯಲ್ಲಿ ಊ–ಕಾರ ಬಂದಾಗ ಅದು ಎರಡು ಬಗೆಯ ಅರ್ಥಗಳನ್ನು ಕೊಡಬಹುದು. ಕೊಕ್ಕರೆಯೂ ಕಪ್ಪೆಯೂ ಗೆಳೆಯರು – ಎಂಬ ವಾಕ್ಯದ ಅರ್ಥವೇನು? ಕೊಕ್ಕರೆ ಮತ್ತು ಕಪ್ಪೆ ಇಬ್ಬರೂ (ಅಥವಾ ಎರಡೂ) ಗೆಳೆಯರು ಎಂದು ಅರ್ಥ. ಇಲ್ಲಿ ಊ–ಕಾರವು ಒಂದರ ಜೊತೆ ಇನ್ನೊಂದನ್ನು ಕೂಡಿಸುವ ಕೆಲಸವನ್ನು ಮಾಡುತ್ತಿದೆ. ಕೊಕ್ಕರೆಯು ಕಪ್ಪೆಯ ಗೆಳೆಯ. ಕಪ್ಪೆ ಕೊಕ್ಕರೆಯ ಗೆಳೆಯ.

ಇನ್ನು "ಕೊಕ್ಕರೆಯೂ ಹಸಿದಿತ್ತು" ಎನ್ನುವಾಗ ಕೊಕ್ಕರೆ ಕೂಡ ಹಸಿದಿತ್ತು ಎಂಬ ಅರ್ಥವಾಗುತ್ತದೆ. ಇಲ್ಲಿ ಊ–ಕಾರವು "ಕೂಡ" ಎಂಬ ಅರ್ಥವನ್ನು ಕೊಡುತ್ತದೆ. ಹಾಗಾಗಿ "ಕೊಕ್ಕರೆ ಕೂಡ ಹಸಿದಿತ್ತು" ಎಂದು ಅಥವಾ "ಕೊಕ್ಕರೆಯೂ ಹಸಿದಿತ್ತು" ಎಂದು ಹೇಳುವುದು ಸರಿ. "ಕೊಕ್ಕರೆಯೂ ಕೂಡ ಹಸಿದಿತ್ತು" ಎಂಬಲ್ಲಿ ಒಂದೇ ಸಂಗತಿಯನ್ನು ("ಕೂಡ") ಎರಡು ಸಲ ಹೇಳಿದಂತಾಗಿದೆ.

**ಈ ಕೆಳಗಿನ ವಾಕ್ಯಗಳನ್ನು ಸರಿಪಡಿಸಿರಿ:**

ಹಸೀನಳೂ ಸಹ ಆಟವಾಡಲು ಹೋದಳು.

ಕೀರ್ತನನೂ ಕೂಡ ಪುಸ್ತಕ ತಂದಿರಲಿಲ್ಲ.

ಇಂಥ ಇನ್ನಷ್ಟು ವಾಕ್ಯಗಳನ್ನು ಸಂಗ್ರಹಿಸಿರಿ.

©KTBS Not to be republished

## ಸೈದ್ಧಾಂತಿಕ ಭಾಷಾಭ್ಯಾಸ

**ಸಂಧಿ** (ಮುಂದುವರಿದುದು)

**ವೃದ್ಧಿಸಂಧಿ**

– ಅವನು ಏಕೈಕ ವೀರ.

– ಆಯುರ್ವೇದದಲ್ಲಿ ವನೌಷಧಗಳನ್ನು ಬಳಸುತ್ತಾರೆ.

ಇಲ್ಲಿರುವ ಏಕೈಕ ಪದವನ್ನು ಗಮನಿಸಿ.

**ಏಕ + ಏಕ > ಏಕೈಕ**

**ಕ್ + ಅ + ಏ > ಕ್ + ಐ**

ಇಲ್ಲಿ ಪೂರ್ವಪದದ ಅಂತ್ಯದಲ್ಲಿರುವ **ಅ** ಕಾರಕ್ಕೆ ಪರಪದದ ಆದಿಯಲ್ಲಿರುವ **'ಏ'** ಕಾರವು ಪರವಾಗಿ ಸಂಧಿಯಾದಾಗ **'ಐ'** ಕಾರವು ಏಕಾದೇಶವಾಗಿ ಬಂದಿದೆ.

**ವನ + ಓಷಧ > ವನೌಷಧ**

**ನ್ + ಅ + ಓ > ನ್ + ಔ**

ಇಲ್ಲಿ ಪೂರ್ವಪದದ ಅಂತ್ಯದಲ್ಲಿರುವ **'ಅ'** ಕಾರಕ್ಕೆ ಪರಪದದ ಆದಿಯಲ್ಲಿರುವ **'ಓ'** ಕಾರವು ಪರವಾಗಿ ಸಂಧಿಯಾದಾಗ **'ಔ'** ಕಾರವು ಏಕಾದೇಶವಾಗಿ ಬಂದಿದೆ.

**ಸೂತ್ರ :** ಅ ಆ ಕಾರಗಳಿಗೆ ಏ ಐ ಕಾರಗಳು ಪರವಾದಾಗ ಅವೆರಡರ ಸ್ಥಾನದಲ್ಲಿ **'ಐ'** ಕಾರವೂ ಓ ಔ ಕಾರಗಳು ಪರವಾದಾಗ **'ಔ'** ಕಾರವೂ ಆದೇಶವಾಗಿ ಬಂದರೆ (**ಐ, ಔ** ಕಾರಗಳು ಆದೇಶವಾಗಿ ಬಂದಾಗ) ಅದೇ ವೃದ್ಧಿಸಂಧಿ.

**ಉದಾ : ಲೋಕೈಕ, ಜನೈಕ್ಯ, ಜಲೌಘ.**

**ಯಣ್‌ಸಂಧಿ**

ಸಂಸ್ಕೃತ ವ್ಯಾಕರಣದಲ್ಲಿ ಕೆಲವು ಸಂಜ್ಞೆಗಳನ್ನು ಮಾಡಿಕೊಳ್ಳಲಾಗಿದೆ. ಅವುಗಳಲ್ಲಿ **'ಯಣ್'** ಎಂಬ ಸಂಜ್ಞೆಯೂ ಒಂದು. **ಯ್ ರ್ ಲ್ ವ್** ಎಂಬ ನಾಲ್ಕು ವ್ಯಂಜನಗಳನ್ನು **ಯಣ್** ಅಕ್ಷರಗಳೆಂದು ಗುರುತಿಸಲಾಗಿದೆ. ಸಂಧಿಯಾಗುವಾಗ **ಯಣ್** ಅಕ್ಷರಗಳಲ್ಲಿ ಯಾವುದಾದರೂ ಒಂದು ಅಕ್ಷರ ಆದೇಶವಾಗಿ ಬಂದರೆ ಅದೇ **ಯಣ್** ಸಂಧಿ.

– ಅವನು **ಅತ್ಯಂತ** ಪರಾಕ್ರಮಿ.

– ಯುದ್ಧದಲ್ಲಿ **ಅಣ್ವಸ್ತ್ರಗಳನ್ನು** ಬಳಸುತ್ತಾರೆ.

– ಎಲ್ಲಾ ಮಕ್ಕಳಿಗೂ **ಪಿತ್ರಾರ್ಜಿತ** ಆಸ್ತಿಯ ಮೇಲೆ ಹಕ್ಕು ಇರುತ್ತದೆ.

ಈ ವಾಕ್ಯದಲ್ಲಿರುವ **ಅತ್ಯಂತ ಅಣ್ವಸ್ತ್ರ** ಮತ್ತು **ಪಿತ್ರಾರ್ಜಿತ** ಎಂಬ ಪದವನ್ನು ಗಮನಿಸಿ.

**ಅತಿ + ಅಂತ > ಅತ್ಯಂತ**

**ತ್ + ಇ + ಅಂ > ತ್ + ಯ್ + ಅಂ**

ಇಲ್ಲಿ ಪೂರ್ವಪದದ ಅಂತ್ಯದಲ್ಲಿರುವ ಇ ಕಾರಕ್ಕೆ ಪರಪದದ ಆದಿಯಲ್ಲಿರುವ **ಅ** ಕಾರ ಸೇರಿ ಸಂಧಿಯಾದಾಗ ಇ ಕಾರದ ಬದಲಿಗೆ **ಯ್** ಕಾರ ಆದೇಶವಾಗಿದೆ.

**ಅಣು + ಅಸ್ತ್ರ > ಅಣ್ವಸ್ತ್ರ**

**ಣ್ + ಉ + ಅ > ಣ್ + ಉ + ಅ**

ಇಲ್ಲಿ ಪೂರ್ವಪದದ ಅಂತ್ಯದಲ್ಲಿರುವ **'ಉ'** ಕಾರಕ್ಕೆ ಪರಪದದ ಆದಿಯಲ್ಲಿರುವ **'ಅ'** ಕಾರ ಸೇರಿ ಸಂಧಿಯಾದಾಗ **'ಉ'** ಕಾರದ ಬದಲಿಗೆ **'ವ್'** ಕಾರ ಆದೇಶವಾಗಿದೆ.

**ಪಿತೃ + ಆರ್ಜಿತ > ಪಿತ್ರಾರ್ಜಿತ**

**ತ್ + ಋ + ಆ > ತ್ + ರ್ + ಆ**

ಇಲ್ಲಿ ಪೂರ್ವಪದದ ಅಂತ್ಯದಲ್ಲಿರುವ **'ಋ'** ಕಾರಕ್ಕೆ ಪರಪದದ ಆದಿಯಲ್ಲಿರುವ **'ಆ'** ಕಾರ ಸೇರಿ ಸಂಧಿಯಾದಾಗ **'ಋ'** ಕಾರದ ಬದಲಿಗೆ **'ರ್'** ಕಾರ ಆದೇಶವಾಗಿದೆ.

©KTBS Not to be republished

**ಸೂತ್ರ : ಇ ಈ ಕಾರಗಳಿಗೆ 'ಯ್' ಕಾರವೂ ಉ ಊ ಕಾರಗಳಿಗೆ 'ವ್' ಕಾರವೂ 'ಋ' ಕಾರಕ್ಕೆ 'ರ್' ಕಾರವೂ ಆದೇಶವಾಗಿ ಬಂದರೆ ಅದು ಯಣ್ ಸಂಧಿ.**

**ಉದಾ:** ಅತ್ಯವಸರ, ಜಾತ್ಯತೀತ, ಕೋಟ್ಯಧೀಶ, ಪ್ರತ್ಯುತ್ತರ, ಮನ್ವಾದಿ, ಮನ್ವಂತರ.

**ಹೊಸಗನ್ನಡದ ವಿಭಕ್ತಿ ಪ್ರತ್ಯಯಗಳು**

| ವಿಭಕ್ತಿ | ಕಾರಕಾರ್ಥಗಳು | ಪ್ರತ್ಯಯ ಹೊಸಗನ್ನಡ | ಏಕವಚನ | ಬಹುವಚನ |
|---|---|---|---|---|
| ಪ್ರಥಮಾ | ಕರ್ತ್ರರ್ಥ | ~ಉ | ಶರಣನು | ಶರಣರು |
| ದ್ವಿತೀಯಾ | ಕರ್ಮಾರ್ಥ | ~ಅನ್ನು | ಶರಣನನ್ನು | ಶರಣರನ್ನು |
| ತೃತೀಯಾ | ಕರಣಾರ್ಥ | ~ಇಂದ | ಶರಣನಿಂದ | ಶರಣರಿಂದ |
| ಚತುರ್ಥೀ | ಸಂಪ್ರದಾನ | ~ಗೆ,~ಇಗೆ,~ಕೆ,~ಕ್ಕೆ | ಶರಣನಿಗೆ | ಶರಣರಿಗೆ |
| ಪಂಚಮೀ | ಅಪಾದಾನ | ~ದೆಸೆಯಿಂದ | ಶರಣನ ದೆಸೆಯಿಂದ | ಶರಣರ ದೆಸೆಯಿಂದ |
| ಷಷ್ಠೀ | ಸಂಬಂಧ | ~ಅ | ಶರಣನ | ಶರಣರ |
| ಸಪ್ತಮೀ | ಅಧಿಕರಣ | ~ಅಲ್ಲಿ | ಶರಣನಲ್ಲಿ | ಶರಣರಲ್ಲಿ |

©KTBS Not to be republished

**ಭಾಷಾ ಚಟುವಟಿಕೆ**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ವೃದ್ಧಿಸಂಧಿ ಎಂದರೇನು? ನಿದರ್ಶನ ಸಹಿತ ಬರೆಯಿರಿ.

೨. ಯಣ್ ಸಂಧಿ ಎಂದರೇನು? ನಿದರ್ಶನ ಸಹಿತ ಬರೆಯಿರಿ.

**ಆ) ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ.**

ಚರಣಾಂಬುಜ, ಮಂಡಳೇಶ್ವರ, ಸಕಳಾಚಾರ್ಯ, ಭೇದವಿಲ್ಲ, ಕೈವಿಡಿದು, ವೃದ್ಧಿಯಾಗಿ, ಭೇದವಾಗಿ, ಕಾಣಲಾಗದು, ಜಿನಾಲಯ, ತಪ್ಪಲೀಯದೆ, ಚಂದ್ರಾರ್ಕ.

**ಇ) ಕೊಟ್ಟಿರುವ ಪದಗಳ ತತ್ಸಮ ತದ್ಭವ ಬರೆಯಿರಿ.**

ವರ್ಷ, ಶ್ರೀ, ರಾಯ, ವೀರ, ಭಕ್ತ, ಬಿನ್ನಹ, ದೆಸೆ, ಚಂದ್ರ, ಸೊದೆ.

**ಈ) ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿರಿ.**

ಸಂವಾದ, ಸಮಸ್ತ, ಭೇದವಿಲ್ಲ, ಕೈಹಿಡಿ.

**ಉ) ಕೊಟ್ಟಿರುವ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.**

(೧) ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?

(೨) ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ.

## ಪೂರಕ ಓದು

ಅ) ಎಸ್. ಎಲ್. ಭೈರಪ್ಪನವರ ಇತರೆ ಸಾಹಿತ್ಯ ಕೃತಿಗಳನ್ನು ಓದಿ.

©KTBS Not to be republished

# ೪. ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್

T2Y5R7

**ಸಮಿತಿ ರಚನೆ –**

**ಪ್ರವೇಶ :** ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವ್ಯಕ್ತಿಚಿತ್ರವೂ ಒಂದು. ನಿರ್ದಿಷ್ಟ ವ್ಯಕ್ತಿಯ ಜೀವನ ಸಾಧನೆ–ಸಿದ್ಧಿಯನ್ನು ಕಲಾತ್ಮಕವಾಗಿ ದಾಖಲಿಸುವ ಕ್ರಮ. ವಿಸ್ತೃತ ಸುದೀರ್ಘ ವಿವರದ ಬರೆಹ ಜೀವನಚರಿತ್ರೆಯಾದರೆ, ಸ್ಥೂಲಚಿತ್ರಣ ವ್ಯಕ್ತಿಚಿತ್ರ. ವ್ಯಕ್ತಿ ತನ್ನ ಜೀವನದ ಘಟನೆಗಳನ್ನು ಸ್ವತಃ ಬರೆದುಕೊಂಡರೆ ಅದು ಆತ್ಮಕಥನ. ಹೀಗೆ ಆಧುನಿಕ ಕನ್ನಡದಲ್ಲಿ ಮೂರೂ ಬಗೆಯ ಸಾಹಿತ್ಯ ಕೃತಿಗಳು ರಚನೆಯಾಗಿವೆ. ಸರ್ವೇಪಲ್ಲಿ ಡಾ. ರಾಧಾಕೃಷ್ಣನ್ ಅವರದು ವಿಶಿಷ್ಟ ವ್ಯಕ್ತಿತ್ವ. ಆದರ್ಶಶಿಕ್ಷಕ, ತತ್ತ್ವಜ್ಞಾನಿ, ಉಪರಾಷ್ಟ್ರಪತಿ ಮತ್ತು ರಾಷ್ಟ್ರಪತಿಯಾಗಿ ಮಾದರಿಯಾಗಿದ್ದಾರೆ. ಅವರ ಜೀವನ–ಸಾಧನೆಯ ಸ್ಥೂಲನೋಟ ಪ್ರಕೃತ ಗದ್ಯಪಾಠದಲ್ಲಿ ವ್ಯಕ್ತಗೊಂಡಿದೆ.

©KTBS Not to be republished

"ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯನಂತೆ ಕಂಡು ವರ್ತಿಸಿದವರು. ನೀವು ನಮ್ಮನ್ನು ಬಿಟ್ಟು ಹೋಗುತ್ತಿರುವಿರಿ. ನನಗೆ ಇದು ದುಃಖ ನೀಡಿದೆ. ನೀವು ಹೆಚ್ಚು ಕಾಲ ಬಾಳಬೇಕೆಂಬುದೇ ನನ್ನಾಸೆ. ನಾನು ಹೆಚ್ಚು ಕಾಲ ಬಾಳುವುದಿಲ್ಲ" ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರಿಗೆ ಮಾಸ್ಕೋದಲ್ಲಿ ನೀಡಿದ ಬೀಳ್ಕೊಡುಗೆ ಸಮಾರಂಭದಲ್ಲಿ ಹೀಗೆ ಹೇಳಿದರು. ಅಷ್ಟೇ ಅಲ್ಲ "ಅಶೋಕನು ಕಳಿಂಗ ಯುದ್ಧದ ಅನಂತರ ಶ್ರೇಷ್ಠ ಮನುಷ್ಯನಾದಂತೆ ನೀವೂ ಆಗುವಿರಿ" ಎಂದು ತಮ್ಮ ಪ್ರಥಮ ಭೇಟಿಯಲ್ಲಿ ರಾಧಾಕೃಷ್ಣನ್ ಹೇಳಿದ ಮಾತುಗಳನ್ನು ಸ್ಮರಿಸಿಕೊಂಡರು. ಪ್ರತಿಯೊಂದು ಧರ್ಮದ ಅಂತಿಮ ಸತ್ಯ ಒಂದೇ. ಪ್ರತಿ ಧರ್ಮವೂ ಅದರ ಶ್ರೇಷ್ಠ ಗುಣವನ್ನು ತೋರುತ್ತದೆ. ಅದನ್ನು ಅಳವಡಿಸಿಕೊಂಡಾಗ ಯಾವುದೇ ಧರ್ಮದ ಅಸಾಮಾನ್ಯತೆಯ ಅರಿವಾಗುವುದೆಂಬ ವಿಷಯವನ್ನು ಅವರು ಎಲ್ಲ ಧರ್ಮಗಳ ಆಳವಾದ ಅಧ್ಯಯನದಿಂದ ಸಾಧಿಸಿ ತೋರಿಸಿದರು. ರಾಧಾಕೃಷ್ಣನ್ ತಮ್ಮ ವಿದ್ವತ್ ತಪದ ಫಲವಾಗಿ ಯುಗದ ಪರಿವರ್ತನಶೀಲ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರೆನಿಸಿದರು.

ರಾಧಾಕೃಷ್ಣನ್ ಅವರು ಆಂಧ್ರಪ್ರದೇಶ (ಈಗಿನ ಸೀಮಾಂಧ್ರ) ಮತ್ತು ತಮಿಳುನಾಡಿನ ಗಡಿಯಲ್ಲಿರುವ ತಿರುತ್ತಣಿ ಎಂಬ ಪುಟ್ಟ ಗ್ರಾಮದಲ್ಲಿ ಕ್ರಿಸ್ತ ಶಕ ೧೮೮೮ ಸೆಪ್ಟೆಂಬರ್ ೫ ರಂದು ಜನಿಸಿದರು. ತಂದೆ ವೀರಸ್ವಾಮಿ, ತಾಯಿ ಸೀತಮ್ಮ. ಅವರ ಮುತ್ತಜ್ಜ ವೀರಸ್ವಾಮಿ ಆಂಧ್ರದ ಸರ್ವೇಪಲ್ಲಿಯಿಂದ ತಮಿಳುನಾಡಿನ ತಿರುತ್ತಣಿಗೆ ಬಂದು ನೆಲೆಸಿದರು. ಪತ್ನಿ ಶಿವಕಾಮು(ಪದ್ಮ) ರಾಧಾಕೃಷ್ಣನ್ ಅವರ ಸಾಧನೆಯಲ್ಲಿ ವಿಶೇಷ ಸಹಕಾರ ನೀಡಿದರು.



ವೀರಸ್ವಾಮಿ ಅವರಿಗೆ ತಮ್ಮ ಮಗ ಆಂಗ್ಲ ಭಾಷೆ ಕಲಿಯುವುದು ಇಷ್ಟವಿರಲಿಲ್ಲ. ದೇಶೀ ಭಾಷೆಯಾಗಿದ್ದ ಸಂಸ್ಕೃತವನ್ನು ಕಲಿಯಲಿ ಎಂಬ ಅಪೇಕ್ಷೆ. ಆದರೆ ಅದೂ ಸಾಧ್ಯವಾಗಲಿಲ್ಲ. ಅನಂತರ ತಿರುಪತಿಯ ಹರ್ಮನ್ಸ್ ಬರ್ಗ್ ಮಿಷನರಿ ಶಾಲೆಗೆ ಸೇರಿಸಿದರು. ಅಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಹೆಚ್ಚು ಮನ್ನಣೆಯಿತ್ತು. ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿದ ರಾಧಾಕೃಷ್ಣನ್ ವೆಲ್ಲೂರಿನ

ವೂರ್ಸ್ ಕಾಲೇಜಿಗೆ ಬಿ. ಎ. ಪೂರ್ವದ ಎರಡು ವರ್ಷಗಳ ಕಲಾ ಪದವಿಗೆ ಸೇರಿದರು. ಮಿಷನರಿ ಶಾಲೆಯ ಶಿಸ್ತಿನ ತರಬೇತಿಯಿಂದ ರಾಧಾಕೃಷ್ಣನ್ ಅವರ ಮನಸ್ಸು ನಿಧಾನವಾಗಿ ಅಧ್ಯಯನದತ್ತ ವಾಲಿತು. ಗ್ರಹಣಶಕ್ತಿ ಚುರುಕಾಯಿತು. ವಿದ್ಯಾರ್ಥಿ ಜೀವನದ ಗುರಿಯ ಅರಿವು ಅವರಿಗಾಯಿತು. ಶಿಸ್ತು ಗಾಂಭೀರ್ಯಗಳೊಡನೆ ಅಧ್ಯಯನಶೀಲರಾಗತೊಡಗಿದರು. ವಿದ್ಯಾರ್ಥಿವೇತನ ಪಡೆದು ಅಂದಿನ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ. ಎ. ಪದವಿಗೆ ಸೇರಿದರಲ್ಲದೆ ತತ್ತ್ವಶಾಸ್ತ್ರದ ಉತ್ತಮ ವಿದ್ಯಾರ್ಥಿ ಎನಿಸಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಮನೆಯ ಜವಾಬ್ದಾರಿ ಹೊತ್ತ ಇವರು ಕಿರಿಯ ಸಹಪಾಠಿಗಳಿಗೆ ಮನೆಯ ಪಾಠ ಹೇಳಿ ಹಣಗಳಿಸುತ್ತಿದ್ದರು, ಆರ್ಥಿಕ ಪರಿಸ್ಥಿತಿ ತಮ್ಮ ಸಾಧನೆಯಲ್ಲಿ ನಿವಾರಿಸಲಾಗದ ತೊಡಕೆಂದು ಭಾವಿಸಲಿಲ್ಲ. ಬಡತನದ ಬೇಗೆಯಲ್ಲೇ ತಮ್ಮ ಆಸಕ್ತಿಯ ವಿಷಯವಾದ ತತ್ತ್ವಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪಡೆದರು.

ರಾಧಾಕೃಷ್ಣನ್ ಅವರು ಶಿಕ್ಷಣ ಇಲಾಖೆಯ ಉಪಸಹಾಯಕ ಇನ್ಸ್‌ಪೆಕ್ಟರ್ ಆಗಿ ಮದ್ರಾಸಿನಲ್ಲಿ (ಈಗಿನ ಚೆನ್ನೈ) ಮೊದಲ ಸೇವೆಯನ್ನು ಆರಂಭಿಸಿದರು. ಅನಂತರ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜು, ಸಯ್ಯದ್ ಪೇಟೆಯ ಟೀಚರ್ಸ್ ಟ್ರೈನಿಂಗ್ ಕಾಲೇಜು, ಆಂಧ್ರದ ಅನಂತಪುರ ಹಾಗೂ ರಾಜಮಂಡ್ರಿಯ ಸರ್ಕಾರಿ ಕಲಾಕಾಲೇಜುಗಳಲ್ಲಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಸಂಸ್ಕೃತವನ್ನು ಪಂಡಿತರಿಂದ ಕಲಿತರಲ್ಲದೇ ಗಾಂಧೀಜಿ ಅವರನ್ನು ಭೇಟಿ ಮಾಡಿ ರಾಷ್ಟ್ರೀಯ ಹೋರಾಟವನ್ನು ಬೆಂಬಲಿಸಿ ಲೇಖನಗಳನ್ನು ಬರೆದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಉಪಪ್ರಾಧ್ಯಾಪಕರಾಗಿ ಹಾಗೂ ಕೋಲ್ಕೊತಾದಲ್ಲಿ (ಹಿಂದಿನ ಕಲ್ಕತ್ತಾ) ಪ್ರಾಧ್ಯಾಪಕರಾಗಿ ಸಲ್ಲಿಸಿದ ಸೇವೆ ಸ್ಮರಣೀಯ. ಇದಲ್ಲದೆ ಆಂಧ್ರ, ದೆಹಲಿ, ಬನಾರಸ್ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಯಾಗಿ ಸೇವೆ ಸಲ್ಲಿಸಿ, ಅವುಗಳ ಪುರೋಭಿವೃದ್ಧಿಗೆ ಶ್ರಮಿಸಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲೂ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ರಾಧಾಕೃಷ್ಣನ್ ಅವರ ಬೋಧನಾ ಶೈಲಿ, ನಿರರ್ಗಳತೆ, ವಿಷಯದ ಮೇಲಿನ ಪ್ರಭುತ್ವ ವಿದ್ಯಾರ್ಥಿಗಳನ್ನು ಬಹುಬೇಗ ಆಕರ್ಷಿಸಿತು. ತಮ್ಮ ಪ್ರಾಧ್ಯಾಪಕತ್ವವನ್ನು ಯಾವಾಗಲೆಂದರೆ ಆವಾಗ ಕಳಚಿ ಏರು ಜವ್ವನದ ಯುವಕರಂತೆ ಹಾಸ್ಯ ವಿನೋದಗಳಲ್ಲಿ ತೊಡಗುತ್ತಿದ್ದರು. ಶಿಕ್ಷಕನೊಬ್ಬನ ಗೌರವವು ಬೋಧನೆಯಿಂದಲೇ ವೃದ್ಧಿಸುತ್ತದೆ ಜತೆಗೆ ವ್ಯಕ್ತಿತ್ವದ ಸೌಜನ್ಯ, ಸ್ನೇಹಶೀಲತೆ ಎಲ್ಲರ ಗಮನವನ್ನೂ ಸೆಳೆಯುತ್ತದೆ.

ಅವರು ಕೋಲ್ಕೊತ ವಿಶ್ವವಿದ್ಯಾಲಯದ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾಗಿ ನೇಮಕಗೊಂಡಾಗ ಮೈಸೂರಿನಿಂದ ಹೊರಟ ದಿನ ಅವರಿಗೆ ಕೊಟ್ಟಂತಹ ವೈಭವದ ಬೀಳ್ಕೊಡುಗೆ ಯಾವ ಚಕ್ರವರ್ತಿಗೂ ದೊರೆತಿರಲಾರದು. ಅಂದಿನ ವಾತಾವರಣದಲ್ಲಿದ್ದುದು ವೈಭವಕ್ಕಿಂತ ಹೆಚ್ಚಾಗಿ ಹೃದಯದಿಂದ ನೇರವಾಗಿ ಹೊರಹೊಮ್ಮಿದ ಗುರುಪ್ರೇಮ. ವಿದ್ಯಾರ್ಥಿಗಳೆಲ್ಲರಲ್ಲೂ ಭಕ್ತಿಪ್ರೇಮದ ಚಿಲುಮೆ ಉಕ್ಕಿಬಂತು. ರಾಧಾಕೃಷ್ಣನ್ ಅವರನ್ನು ಮಹಾರಾಜ ಕಾಲೇಜಿನಿಂದ ರೈಲು ನಿಲ್ದಾಣಕ್ಕೆ ಕರೆದೊಯ್ಯುವಾಗ ಸಾರೋಟಿಗೆ ಕುದುರೆಯನ್ನು ಕಟ್ಟಲಿಲ್ಲ. ಸ್ವತಃ ವಿದ್ಯಾರ್ಥಿಗಳೇ ಎಳೆದೊಯ್ದರು. ರಾಧಾಕೃಷ್ಣನ್ ಅವರಿಗಾಗಿ ಕಾದಿರಿಸಿದ್ದ ಕಂಪಾರ್ಟ್‌ಮೆಂಟನ್ನು, ಒರಗುದಿಂಬು ಹಾಗೂ ರತ್ನಗಂಬಳಿಯನ್ನು ಹಾಸಿ ಮಲಗುವ ಸೀಟನ್ನು, ನೆಲವನ್ನು ಹೂವಿನಿಂದ ಸುಪ್ಪತ್ತಿಗೆಯಂತೆ ಮಾಡಿ ದೈವಮಂದಿರವನ್ನು ಭಕ್ತರು ಅಲಂಕರಿಸುವಂತೆ

©KTBS Not to be republished

ಅಲಂಕರಿಸಲಾಗಿತ್ತು. "ರಾಧಾಕೃಷ್ಣನ್ ಅವರಿಗೆ ಜಯವಾಗಲಿ" ಎಂಬ ಕೂಗು ರೈಲ್ವೆ ಸ್ಟೇಷನ್ನಿನ ಆವರಣದಲ್ಲೆಲ್ಲ ಮೊಳಗುತ್ತಿತ್ತು. ಆ ದಿನ ಭಾವೋದ್ರೇಕದಿಂದ ಅದೆಷ್ಟು ಜನ ಅತ್ತರೋ!. ವಿದ್ಯಾರ್ಥಿಗಳು ತೋರಿದ ವಿಶ್ವಾಸ ಅವರ ಕಣ್ಣಿನಲ್ಲೂ ನೀರು ತಂದಿತು.



ಸ್ವಾತಂತ್ರ್ಯ ಪೂರ್ವದಲ್ಲೂ ಸ್ವಾತಂತ್ರ್ಯ ಬಂದ ಆರಂಭದಲ್ಲೂ ಪಾಶ್ಚಿಮಾತ್ಯರು ಭಾರತಕ್ಕೆ ಮನ್ನಣೆ ನೀಡುತ್ತಿರಲಿಲ್ಲ. ಭಾರತದ ವಿಷಯದಲ್ಲಿ ಪಾಶ್ಚಾತ್ಯರಿಗಿದ್ದ ಈ ಕಲ್ಪನೆಯನ್ನು ತೊಡೆದು ಹಾಕಿ ಅದರ ಸ್ಥಾನದಲ್ಲಿ ನ್ಯಾಯ ಸಮ್ಮತವಾದ ಬೇರೊಂದು ಕಲ್ಪನೆಯನ್ನಿಡುವುದು ಅವಶ್ಯವಾಗಿತ್ತು. ಆ ಕೆಲಸವನ್ನು ಸ್ವಲ್ಪಮಟ್ಟಿಗಾದರೂ ರಾಧಾಕೃಷ್ಣನ್ ಅವರು ಮಾಡಿದರು. ಅವರ ಬರೆವಣಿಗೆಯ ಮೂಲಕ ಪಾಶ್ಚಾತ್ಯರಿಗೆ ಭಾರತೀಯ ಸಂಸ್ಕೃತಿಯ ಪರಿಚಯವಾಯಿತು. ಅಲ್ಲದೆ ಅವರು ಭಾರತದ ಪ್ರತಿನಿಧಿಯಾಗಿ ಇಂಗ್ಲೆಂಡ್, ಅಮೇರಿಕಾ ಮುಂತಾದ ದೇಶಗಳಿಗೆ ಹೋಗಿ ಭಾಷಣ ಮಾಡಿದಾಗ ಅವರ ವಾಕ್ಚಾತುರ್ಯವೂ ತರ್ಕಬದ್ಧವಾದ ವಿಚಾರ ಸರಣಿಯೂ ಎಲ್ಲರನ್ನೂ ಬೆರಗುಗೊಳಿಸಿತು. ಅವರ ಭಾಷಣ ಕೇಳಿದ ಅಲ್ಲಿನ ಜನ ಮಂತ್ರಮುಗ್ಧರಾಗಿ ಯಾರ ಪ್ರೇರಣೆಯೂ ಇಲ್ಲದೆ, ಎದ್ದುನಿಂತು ಜಯಕಾರ ಮಾಡಿ ಗೌರವ ಸೂಚಿಸಿದರು.

©KTBS Not to be republished

ರಾಧಾಕೃಷ್ಣನ್ ಅವರು ಹಿಂದೂ ಧರ್ಮದ ತತ್ತ್ವಶಾಸ್ತ್ರ ಮತ್ತು ಸಾಹಿತ್ಯವನ್ನೆಲ್ಲ ಅಧ್ಯಯನ ಮಾಡಿದರು. ಯೂರೋಪಿಯನ್ ತತ್ತ್ವಶಾಸ್ತ್ರ ಮತ್ತು ಸಾಹಿತ್ಯದ ಅಭಿವ್ಯಕ್ತ ವಿಚಾರಗಳಿಂದ ಅವರ ವಿಶ್ವದೃಷ್ಟಿ ಮತ್ತು ತಾತ್ವಿಕ ದೃಷ್ಟಿಕೋನ ಪ್ರಭಾವಿತವಾಯಿತು. ಸ್ವಾಮಿ ವಿವೇಕಾನಂದರ ವಿಚಾರಧಾರೆ ಅವರ ಮನವನ್ನು ಆಕರ್ಷಿಸಿತು. ಅವರು "ಹಿಂದೂ ಧರ್ಮವು ಒಂದು ವೈಚಾರಿಕ ಜೀವನ ಮಾರ್ಗವೆಂದೂ, ನೈತಿಕ ಗುಣಾತ್ಮಕ ವಿಷಯಗಳಿಂದ ಕೂಡಿದ್ದು, ಮಾನವನ ಆಂತರಿಕ ಜೀವನದ ಬಗ್ಗೆ ಪ್ರಾಮುಖ್ಯತೆವುಳ್ಳದ್ದಾಗಿದೆ. ಹಿಂದೂಧರ್ಮವಾಗಲಿ, ವೇದಾಂತವಾಗಲಿ ಅಸತ್ಯವನ್ನು ಹೇಳುವುದಿಲ್ಲ. ಭಾರತೀಯ ಚಿಂತನೆಗಳು ಯಾವುದೋ ವಿಚಿತ್ರ ಮತ್ತು ನಿಗೂಢ ಪರಿಕಲ್ಪನೆಗಳಾಗಿಲ್ಲ, ಜೀವನದ

ನಾಡಿಮಿಡಿತಗಳನ್ನು ಸೂಕ್ಷ್ಮಮನಸ್ಸಿನ ಚಿಂತನೆಗಳನ್ನು ತಿಳಿಯಪಡಿಸುವುದಾಗಿದೆ" ಎಂದು ಸರಳವಾಗಿ ಹೇಳಿದರು. ಶಿಕ್ಷಣದ ಮಹತ್ವವನ್ನು ಮನಗಂಡ ಇವರು "ಶಿಕ್ಷಣವು ಜೀವನದ ಅವಿಭಾಜ್ಯ ಅಂಗ. ಅದು ಮಾನವನನ್ನು ಪರಿಪೂರ್ಣತೆ ಹಾಗೂ ಸುಸಂಸ್ಕೃತಿಯತ್ತ ಒಯ್ಯುವ ಸಾಧನ ಮಾರ್ಗ" ಎಂದಿದ್ದಾರೆ. ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣದಲ್ಲಿ "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ" ಎಂದು ತಮ್ಮ ನಿಲುವನ್ನು ಅಭಿವ್ಯಕ್ತಿಸಿದರು.

ರಾಧಾಕೃಷ್ಣನ್ ಅವರ ಬಹುಮುಖ ಪ್ರತಿಭೆಯನ್ನು ಹತ್ತಿರದಿಂದ ಬಲ್ಲವರಾಗಿದ್ದ ನೆಹರೂ ಅವರು ಇವರನ್ನು ಮಾಸ್ಕೋದಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಿದರು. ರಷ್ಯಾದ ಅಧ್ಯಕ್ಷರಾಗಿದ್ದ ಸ್ಟಾಲಿನ್ ಅವರ ಸ್ನೇಹ ಸೌಹಾರ್ದಗಳ ಭೇಟಿ ಫಲಪ್ರದವಾಗಿ ಉಭಯ ದೇಶಗಳ ಬಾಂಧವ್ಯ ವೃದ್ಧಿಸಿತು. ಇದರಿಂದ ಸಂತಸಗೊಂಡ ನೆಹರು ಅವರು ರಾಧಾಕೃಷ್ಣನ್ ಅವರನ್ನು ಮೆಚ್ಚಿ ಪ್ರಶಂಸಿಸಿದರು. ಅನಂತರ ಇವರನ್ನು ಭಾರತದ ಉಪರಾಷ್ಟ್ರಪತಿ ಸ್ಥಾನಕ್ಕೆ ನಾಮಕರಣ ಮಾಡಲಾಯಿತು. ಎರಡು ಬಾರಿ ಉಪರಾಷ್ಟ್ರಪತಿಗಳಾಗಿ ರಾಷ್ಟ್ರಕ್ಕೆ ಅನುಪಮ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಹಲವಾರು ರಾಷ್ಟ್ರಗಳಿಗೆ ಭೇಟಿ ನೀಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಸೌಹಾರ್ದವನ್ನು ಕಾಪಾಡುವಲ್ಲಿ ಯಶಸ್ವಿಯಾದರು. ಇವರ ಪ್ರವಾಸದ ಉದ್ದೇಶ ಭಾರತೀಯ ಜೀವನ, ಸಂಸ್ಕೃತಿ, ಚಿಂತನೆ ಮತ್ತು ಮಾನವಧರ್ಮವನ್ನು ಪ್ರಚಾರ ಮಾಡುವುದಾದ್ದರಿಂದ ವಿಶ್ವದ ಬುದ್ಧಿವಂತರ ಮೆಚ್ಚುಗೆ ಗಳಿಸಿದರು. ವಿಶ್ವದೆಲ್ಲೆಡೆಗಳಿಂದ ಶ್ಲಾಘಿಸಲ್ಪಟ್ಟ ಇವರನ್ನು ಪದವಿ ಹಾಗೂ ಹುದ್ದೆ ಅನಾಯಾಸವಾಗಿ ಹಂತ ಹಂತವಾಗಿ ಅರಸಿ ಬಂದವು. ಉಪರಾಷ್ಟ್ರಪತಿಯ ಸೇವೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಅನಂತರ ರಾಷ್ಟ್ರಪತಿ ಸ್ಥಾನಕ್ಕೆ ಸರ್ವಾನುಮತದಿಂದ ನಾಮಕರಣ ಮಾಡಲಾಯಿತು. ಅವರಿಗೆ ಬರುತ್ತಿದ್ದ ಹತ್ತು ಸಾವಿರ ರೂಪಾಯಿಗಳ ವೇತನದಲ್ಲಿ ಎರಡು ಸಾವಿರದ ಐನೂರು ರುಪಾಯಿಗಳನ್ನು ಮಾತ್ರ ಪಡೆದು, ಉಳಿದ ಹಣವನ್ನು ಪ್ರಧಾನಮಂತ್ರಿಗಳ ಪರಿಹಾರನಿಧಿಗೆ ವಂತಿಗೆಯಾಗಿ ನೀಡುತ್ತಿದ್ದರು.

ಇವರ ಸ್ಮರಣೀಯ ಸೇವೆಯನ್ನು ಗುರುತಿಸಿ ಭಾರತ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ'ವನ್ನು ನೀಡಿ ಗೌರವಿಸಲಾಯಿತು. ಬ್ರಸೆಲ್ಸ್‌ನ ಫ್ರಿ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿತು. ಭಾರತೀಯ ವಿದ್ಯಾಭವನದ 'ಬ್ರಹ್ಮವಿದ್ಯಾಭಾಸ್ಕರ' ಬಿರುದಿಗೂ ಪಾತ್ರರಾದರು. ಹೀಗೆ ಇವರಿಗೆ ದೇಶ ವಿದೇಶಗಳ ಹಲವಾರು ಗೌರವ ಪದವಿಗಳು ದೊರಕಿದವು. ಭಾರತ ಸರ್ಕಾರ ಸೆಪ್ಟೆಂಬರ್ ೫ರಂದು ಡಾ. ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ೧೯೬೨ ರಿಂದ 'ರಾಷ್ಟ್ರೀಯ ಶಿಕ್ಷಕರ ದಿನ' ಎಂದು ಘೋಷಿಸಿ ಪ್ರತಿವರ್ಷವೂ ಆಚರಿಸಲು ನಿರ್ಧರಿಸಿತು.

ರಾಧಾಕೃಷ್ಣನ್ ಅವರ ಬಾಹ್ಯರೂಪ ಎತ್ತರವಾದ ನಿಲುವು, ಬಿಸ್ಕೆಟ್ ಬಣ್ಣದ ರೇಷ್ಮೆಯ ನಿಲುವಂಗಿ, ಶುಭ್ರವೂ ನಿರಾಡಂಬರವೂ ಆದ ಬಿಳಿಯ ಪಂಚೆ ಮತ್ತು ರುಮಾಲು, ಕೋಪಸೂಚಕವಲ್ಲದ ಹುಬ್ಬು, ಯಾವುದೋ ಸಮಸ್ಯೆಯ ಒಳಹೋಗುವಂತಿರುವ ಕಣ್ಣನೋಟ, ಮುಗುಳುನಗೆಯ ಸುಳಿವು ಇವು ಭಾರತೀಯರೆಲ್ಲರಿಗೂ ಪರಿಚಿತ. ಪ್ರಪಂಚದ ಫ್ಯಾಷನ್ ಎಷ್ಟೇ ಬದಲಾದರೂ ರಾಧಾಕೃಷ್ಣನ್ ತಮ್ಮ ವೇಷಭೂಷಣಗಳನ್ನು ಕೊನೆಯವರೆಗೂ ಜತನವಾಗಿ ಉಳಿಸಿಕೊಂಡಿದ್ದರು.

©KTBS Not to be republished

ರಾಧಾಕೃಷ್ಣನ್ ಅವರು ಧರ್ಮ, ಸಂಸ್ಕೃತಿ, ಶಿಕ್ಷಣ, ತತ್ತ್ವಶಾಸ್ತ್ರ, ಮನಶ್ಶಾಸ್ತ್ರ ಮೊದಲಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹಲವಾರು ಮೌಲ್ಯಯುತ ಕೃತಿಗಳನ್ನು ರಚಿಸಿದ್ದಾರೆ. 'ಇಂಡಿಯನ್ ಫಿಲಾಸಫಿ', 'ದಿ ಹಿಂದೂ ವ್ಯೂ ಆಫ್ ಲೈಫ್', 'ಆನ್ ಐಡಿಯಾಲಿಸ್ಟ್ ವ್ಯೂ ಆಫ್ ಲೈಫ್', 'ಈಸ್ಟ್ ಅಂಡ್ ವೆಸ್ಟ್ ಇನ್ ರಿಲಿಜನ್', ಕಾಂಟೆಂಪರರಿ ಇಂಡಿಯನ್ ಫಿಲಾಸಫಿ' ಇವು ಅವರ ಪ್ರಮುಖ ಕೃತಿಗಳು. ಶ್ರೀಯುತರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರೂ ಅಹುದು. ರಾಷ್ಟ್ರಪತಿ ಹುದ್ದೆಯಿಂದ ನಿವೃತ್ತಿ ಹೊಂದಿದ ಅನಂತರ ಮದ್ರಾಸಿಗೆ (ಚೆನ್ನೈ) ಹಿಂದಿರುಗಿದರು.

ಶಿಕ್ಷಕ ಹುದ್ದೆಯಿಂದ ರಾಷ್ಟ್ರಪತಿ ಹುದ್ದೆಯವರೆಗೆ ಹಂತಹಂತವಾಗಿ ಮೇಲೇರಿದ ಮಹಾನ್ ನಾಯಕ ಕ್ರಿಸ್ತ ಶಕ ೧೯೭೫ ರಲ್ಲಿ ಇಹಲೋಕ ತ್ಯಜಿಸಿದರು. ಅವರು ವಿದ್ಯಾರ್ಜನೆಯ ಜತೆಗೆ ಅಪಾರ ಲೋಕಾನುಭವ ಮತ್ತು ಜೀವನಾನುಭವ ಪಡೆದವರು. ಅಷ್ಟೇ ಅಲ್ಲದೆ ಶ್ರೇಷ್ಠ ಶಿಕ್ಷಣ ತಜ್ಞ, ಮಹಾ ತತ್ತ್ವಜ್ಞಾನಿ ಹಾಗೂ ಮಾನವತಾವಾದಿಯಾಗಿ ಬಹುಮುಖ ಪ್ರತಿಭೆಯಿಂದ ವಿಶ್ವ ವಿಖ್ಯಾತರಾಗಿದ್ದರು.

## ಆಶಯ ಭಾವ

©KTBS Not to be republished

**ಡಾ. ಎಸ್. ರಾಧಾಕೃಷ್ಣನ್** ಅವರು ಭಾರತದ ತತ್ತ್ವಜ್ಞಾನ ಕ್ಷೇತ್ರದ ಅಸಾಮಾನ್ಯ ಪ್ರತಿಭೆ. ಇವರು ತಾತ್ತ್ವಿಕರೂ ದಾರ್ಶನಿಕರೂ ಹೌದು. ಆಧ್ಯಾತ್ಮಿಕ ಸಂಪತ್ತನ್ನೂ ಬೌದ್ಧಿಕ ನಿಲುವನ್ನು ಪ್ರಚುರಪಡಿಸಿದ ರಾಜಕೀಯ ಧುರೀಣರು. ಇವರ **ವಿದ್ವತ್ಪೂರ್ಣ ವಿಚಾರ ಮತ್ತು ಚಿಂತನೆ ಉದ್ಬೋಧಕವೂ ಸ್ಫೂರ್ತಿಯುತವೂ** ಆಗಿವೆ. ಆದರ್ಶ ಶಿಕ್ಷಕರಾಗಿದ್ದ ಇವರು ಗುರುವಿನ ಸ್ಥಾನ ಹಾಗೂ ಗೌರವವನ್ನು ಹೆಚ್ಚಿಸಿ, ಆದರ್ಶ ಸಮಾಜದ ನಿರ್ಮಾಣಕ್ಕೆ ಶಿಕ್ಷಕರ ಪಾತ್ರ ಅಗತ್ಯವೆಂಬುದನ್ನು ತೋರಿಸಿಕೊಟ್ಟರು. ಆತ್ಮವಂಚನೆ ಇಲ್ಲದೆ ಶ್ರದ್ಧಾಪೂರ್ವಕವಾಗಿ ಸಚ್ಚಾರಿತ್ರ್ಯ ಮೌಲ್ಯಗಳನ್ನು ವೃದ್ಧಿಸಿಕೊಂಡು ಭಾರತದ ರಾಷ್ಟ್ರಪತಿಗಳಾಗಿ ಅನುಪಮ ಸೇವೆಗೈದವರು. ಇಂಥ ಮೇರು ಆದರ್ಶ ವ್ಯಕ್ತಿತ್ವದ ಡಾ. ಎಸ್. ರಾಧಾಕೃಷ್ಣನ್ ಅವರ ಜೀವನ ಸಾಧನೆಯನ್ನು ಪರಿಚಯಿಸುವುದೇ ಪ್ರಸ್ತುತ ಗದ್ಯಭಾಗದ ಆಶಯ ಭಾವ.

* * * *

ಪ್ರಕೃತ **ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್** ವ್ಯಕ್ತಿಚಿತ್ರ ಗದ್ಯ ಭಾಗವನ್ನು ಕೆ. ಎಸ್. ರತ್ನಮ್ಮ ಅವರ **ಡಾ. ಎಸ್. ರಾಧಾಕೃಷ್ಣನ್ – ಜೀವನ ಸಾಧನೆ** ಮತ್ತು ಎ.ಎನ್. **ಮೂರ್ತಿರಾವ್** ಅವರ **ಚಿತ್ರಗಳು – ಪತ್ರಗಳು** ಕೃತಿಗಳ ಆಧಾರದಿಂದ ಪಠ್ಯಪುಸ್ತಕ ರಚನಾ ಸಮಿತಿ ಸಿದ್ಧಪಡಿಸಿ, ನಿಗದಿ ಮಾಡಿದೆ.

## ಪದಗಳ ಅರ್ಥ

ಗ್ರಹಣ ಶಕ್ತಿ – ವಿಷಯವನ್ನು ತಿಳಿದುಕೊಳ್ಳುವ ಸಾಮರ್ಥ್ಯ

ಅಮರ – ಶಾಶ್ವತ

ಅನುಪಮ – ಎಣೆಯಿಲ್ಲದ

ಬುನಾದಿ – ತಳಹದಿ, ಅಡಿಪಾಯ

ಬೇಗೆ – ಸಂಕಟ

ಬೆರಗು – ಆಶ್ಚರ್ಯ

ಮಂತ್ರಮುಗ್ಧ – ಮೌನ, ಆಶ್ಚರ್ಯಚಕಿತ

ಭಾವೋದ್ರೇಕ – ಭಾವನಾ ಪರವಶತೆ

ವ್ಯಾಪಕ – ವಿಸ್ತಾರವಾದ

ಮೊಳಗು – ಧ್ವನಿಮಾಡು

## ಟಿಪ್ಪಣಿ

**ಪ್ರೆಸಿಡೆನ್ಸಿ ಕಾಲೇಜು** : ಬ್ರಿಟಿಷರು ಮದ್ರಾಸು(ಚೆನ್ನೈ), ಬೊಂಬಾಯಿ(ಮುಂಬೈ), ಕೊಲ್ಕತ್ತಾ (ಕಲ್ಕತ್ತಾ) ಗಳಲ್ಲಿ ನಡೆಸುತ್ತಿದ್ದ ಕಾಲೇಜು.

**ಆಕ್ಸ್‌ಫರ್ಡ್** : ಇಂಗ್ಲೆಂಡಿನಲ್ಲಿರುವ ಹಳೆಯ ವಿಶ್ವವಿದ್ಯಾಲಯ.

**ಕಂಪಾರ್ಟ್‌ಮೆಂಟ್** : ರೈಲುಬೋಗಿ.

**ಸಾರೋಟ್** : ಕುದುರೆಗಳನ್ನು ಕಟ್ಟಿ ಓಡಿಸುವ ನಾಲ್ಕು ಚಕ್ರದ ರಥ/ಗಾಡಿ.

**ಮಿಷನರಿ ಶಾಲೆ** : ಕ್ರೈಸ್ತ ಪಾದ್ರಿಗಳು ನಡೆಸುವ ಶಾಲೆ.

**ಪಾಶ್ಚಿಮಾತ್ಯ** : ಪಶ್ಚಿಮ ದೇಶಗಳಿಗೆ ಸಂಬಂಧಿಸಿದ (ಯೂರೋಪ್ ಅಮೆರಿಕಾ ಇತ್ಯಾದಿ).

**ಭಾರತರತ್ನ** : ಭಾರತ ಸರ್ಕಾರ ನೀಡುವ ಅತ್ಯುನ್ನತ ಪ್ರಶಸ್ತಿ.

©KTBS Not to be republished

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ರಾಧಾಕೃಷ್ಣನ್ ಅವರ ತಂದೆತಾಯಿಯರ ಹೆಸರೇನು?

೨. ರಾಧಾಕೃಷ್ಣನ್ ಅವರ ತಂದೆಯ ಅಪೇಕ್ಷೆ ಏನಾಗಿತ್ತು?

೩. ರಾಷ್ಟ್ರಪತಿಗಳಾಗಿ ಪಡೆಯುತ್ತಿದ್ದ ವೇತನವನ್ನು ರಾಧಾಕೃಷ್ಣನ್ ಅವರು ಹೇಗೆ ಸದುಪಯೋಗಪಡಿಸಿಕೊಂಡರು?

೪. ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತಿದೆ?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಏನು ಹೇಳಿದರು?

೨. ರಾಧಾಕೃಷ್ಣನ್ ಅವರ ವಿದ್ಯಾಭ್ಯಾಸ ಎಲ್ಲೆಲ್ಲಿ ನಡೆಯಿತು?

೩. ರಾಧಾಕೃಷ್ಣನ್ ಅವರ ವೇಷಭೂಷಣಗಳ ಬಗ್ಗೆ ಬರೆಯಿರಿ.

೪. ಶಿಕ್ಷಣದ ಮಹತ್ತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ?

೫. ರಾಧಾಕೃಷ್ಣನ್ ಅವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಯಾವುವು?

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ರಾಧಾಕೃಷ್ಣನ್ ಅವರು ಅಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸಿ.

೨. ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ.

೩. ಹಿಂದೂ ಧರ್ಮ ಮತ್ತು ತತ್ತ್ವಶಾಸ್ತ್ರದ ಬಗ್ಗೆ ರಾಧಾಕೃಷ್ಣನ್ ಅಭಿಪ್ರಾಯವೇನು? ವಿವರಿಸಿ

**ಈ) ಕೊಟ್ಟಿರುವ ವಾಕ್ಯಗಳ ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯನಂತೆ ಕಂಡು ವರ್ತಿಸಿದವರು"

೨. "ಆರ್ಥಿಕ ಪರಿಸ್ಥಿತಿ ತಮ್ಮ ಸಾಧನೆಯಲ್ಲಿ ನಿವಾರಿಸಲಾಗದ ತೊಡಕೆಂದು ಭಾವಿಸಲಿಲ್ಲ"

೩. "ಏರು ಜವ್ವನದ ಯುವಕರಂತೆ ಹಾಸ್ಯ ವಿನೋದಗಳಲ್ಲಿ ತೊಡಗುತ್ತಿದ್ದರು"

೪. "ಅಶೋಕನು ಕಳಿಂಗ ಯುದ್ಧದ ಅನಂತರ ಶ್ರೇಷ್ಠ ಮನುಷ್ಯನಾದಂತೆ ನೀವೂ ಆಗುವಿರಿ"

೫. "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ"

©KTBS Not to be republished

**ಉ) ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗೂ ನೀಡಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

೧. ರಾಧಾಕೃಷ್ಣನ್ ಅವರ ಸಾಧನೆಯಲ್ಲಿ ವಿಶೇಷ ಸಹಕಾರ ನೀಡಿದವರು ______________

(ತಂದೆ, ತಾಯಿ, ಪತ್ನಿ, ಸಹೋದರಿ)

೨. ಮದ್ರಾಸಿನ ಕ್ರಿಶ್ಚಿಯನ್ ಶಾಲೆಯಲ್ಲಿ ರಾಧಾಕೃಷ್ಣನ್ ಅವರು ಉತ್ತಮ ವಿದ್ಯಾರ್ಥಿ ಎಂದು ಪರಿಗಣಿಸಲ್ಪಟ್ಟ ವಿಷಯ ______________

(ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಧರ್ಮಶಾಸ್ತ್ರ, ತತ್ತ್ವಶಾಸ್ತ್ರ)

೩. ರಾಧಾಕೃಷ್ಣನ್ ಅವರು ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ ವಿಶ್ವವಿದ್ಯಾನಿಲಯ ______________

(ಬನಾರಸ್, ಕೇಂಬ್ರಿಡ್ಜ್, ಆಕ್ಸ್‌ಫರ್ಡ್, ಉಸ್ಮಾನಿಯ)

೪. "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ" ಎಂದು ರಾಧಾಕೃಷ್ಣನ್ ಅವರು ರೇಡಿಯೋ ಪ್ರಸಾರ ಭಾಷಣ ಮಾಡಿದ ದೇಶ ________________

(ಇಂಗ್ಲೆಂಡ್, ಕೆನಡಾ, ಅಮೇರಿಕ, ರಷ್ಯಾ)

೫. ಭಾರತ ಮತ್ತು ರಷ್ಯಾದ ಬಾಂಧವ್ಯವನ್ನು ವೃದ್ಧಿಗೊಳಿಸಿದ ರಾಧಾಕೃಷ್ಣನ್ ಅವರನ್ನು ಪ್ರಶಂಸಿಸಿದವರು ____________________

(ಮಹಾತ್ಮಗಾಂಧೀಜಿ, ಜವಾಹರಲಾಲ್ ನೆಹರು, ಸ್ಟಾಲಿನ್, ಸಿ.ಇ.ಎಂ. ಜೋಡ್)

**ಊ) ಹೊಂದಿಸಿ ಬರೆಯಿರಿ**

| 'ಅ' ಪಟ್ಟಿ | 'ಆ' ಪಟ್ಟಿ |
|---|---|
| ೧. ಸ್ಟಾಲಿನ್ | ರಾಷ್ಟ್ರೀಯ ಶಿಕ್ಷಕರ ದಿನಾಚರಣೆ |
| ೨. ಹರ್ಮನ್ಸ್ ಬರ್ಗ್ | ಮಿಷನರಿ ಶಾಲೆ |
| ೩. ಭಾರತೀಯ ವಿದ್ಯಾಭವನ | ಮಾಸ್ಕೊ |
| ೪. ಆಕ್ಸ್‌ಫರ್ಡ್ | ವಿಶ್ವವಿದ್ಯಾಲಯ |
| ೫. ಸೆಪ್ಟೆಂಬರ್೦೫ | ಬ್ರಹ್ಮವಿದ್ಯಾಭಾಸ್ಕರ |
| | ಸ್ವಾತಂತ್ರ್ಯ ದಿನಾಚರಣೆ |

©KTBS Not to be republished

## ಭಾಷೆಯ ಸೊಬಗು

"ಇಂದಿನ ಕಾರ್ಯಕ್ರಮಕ್ಕೆ ನಿಮಗೆಲ್ಲರಿಗೂ ಸ್ವಾಗತಾ... ಸುಸ್ವಾಗತಾ...!" ಎಂಬ ಮಾತುಗಳನ್ನು ಕೇಳಿಯೇ ಇರುತ್ತೀರಿ. ಇಲ್ಲೇನು ತಪ್ಪಿದೆ ಎನ್ನುತ್ತೀರಾ?

ಸ್ವಾಗತ ಎಂದರೆ ಸು+ಆಗತ ಎಂದು ಅರ್ಥ. ಇದು ಇಂಗ್ಲೀಷಿನ "ವೆಲ್‌ಕಮ್" ಎಂಬ ಶಬ್ದಕ್ಕೆ ಸಮ. ಅಂದರೆ "ಶುಭ ಆಗಮನ" ಎಂದು ಅರ್ಥ. ಸುಸ್ವಾಗತ ಎಂದರೆ ಏನಾಗುತ್ತದೆ? ಸು+ಸು+ಆಗತ ಎಂದಾಯಿತು. ಅಂದರೆ "ಶುಭ ಶುಭ ಆಗಮನ" ಎಂದಾಯಿತು. ಹಾಗಾದರೆ ಸುಸ್ವಾಗತ ಎಂಬುದು ವ್ಯಾಕರಣರೀತ್ಯಾ ತಪ್ಪು ಅಲ್ಲವೆ?

"ನನ್ನ ಸ್ವಾನುಭವ" ಎಂಬಲ್ಲಿ ತಪ್ಪು ಎಲ್ಲಿದೆ, ಗುರುತಿಸಿ.

"ಅಜಗಜಾಂತರವ್ಯತ್ಯಾಸ" ಎಂಬಲ್ಲಿ ತಪ್ಪಾಗಿದೆಯೇ, ಚರ್ಚಿಸಿ.

# ಸೈದ್ಧಾಂತಿಕ ಭಾಷಾಭ್ಯಾಸ

## ಸಂಸ್ಕೃತ ವ್ಯಂಜನ ಸಂಧಿಗಳು :

**ಜಶ್ತ್ವಸಂಧಿ**

ಸಂಸ್ಕೃತ ವ್ಯಾಕರಣದಲ್ಲಿ ವರ್ಗೀಯ ವ್ಯಂಜನದ ವರ್ಗ ತೃತೀಯಾಕ್ಷರಗಳಾದ **ಗ್ ಜ್ ಡ್ ದ್ ಬ್** ಅಕ್ಷರಗಳನ್ನು **'ಜಶ್'** ಎಂಬ ಸಂಜ್ಞೆಯಿಂದ ಕರೆಯಲಾಗಿದೆ. ಈ ಜಶ್ ಅಕ್ಷರಗಳು ಆದೇಶವಾಗಿ ಬರುವ ಸಂಧಿಗಳೇ ಜಶ್ತ್ವ ಸಂಧಿ.

– ಷಣ್ಮುಖನಿಗೆ ಷಡಾನನ ಎಂಬ ಹೆಸರೂ ಇದೆ.

ಈ ವಾಕ್ಯದಲ್ಲಿರುವ **ಷಡಾನನ** ಪದರಚನೆಯನ್ನು ಗಮನಿಸಿ

**ಷಟ್** + **ಆನನ** > **ಷಡಾನನ**

**ಟ್** + **ಆ** > **ಡ್** + **ಆ**

ಇಲ್ಲಿ ಪೂರ್ವಪದದ ಅಂತ್ಯದಲ್ಲಿರುವ **'ಟ'** ಕಾರಕ್ಕೆ (ವರ್ಗದ ಪ್ರಥಮಾಕ್ಷರಕ್ಕೆ) ಪರಪದದ ಆದಿಯಲ್ಲಿರುವ **'ಆ'** ಕಾರ ಪರವಾಗಿ ಸಂಧಿಯಾದಾಗ **'ಡ್'** ಕಾರ (ಅದೇ ವರ್ಗದ ತೃತೀಯಾಕ್ಷರ ಅಂದರೆ **ಜಶ್** ಅಕ್ಷರಗಳಲ್ಲಿ ಒಂದು) ಆದೇಶವಾಗಿ ಬಂದಿದೆ.

**ಸೂತ್ರ ಪೂರ್ವಪದದ ಕೊನೆಯಲ್ಲಿರುವ ವರ್ಗ ಪ್ರಥಮಾಕ್ಷರಕ್ಕೆ ಅಂದರೆ ಕ್ ಚ್ ಟ್ ತ್ ಪ್ ಗಳಿಗೆ ಅದೇ ವರ್ಗದ ತೃತೀಯಾಕ್ಷರಗಳು ಅಂದರೆ ಗ್ ಜ್ ಡ್ ದ್ ಬ್ ಗಳು ಅಂದರೆ ಜಶ್ ಅಕ್ಷರಗಳು ಆದೇಶವಾಗಿ ಬಂದರೆ ಅದೇ ಜಶ್ತ್ವ ಸಂಧಿ.**

ಉದಾ: ವಾಗ್ದೇವಿ, ಅಜಂತ, ಷಡಂಗ, ಚಿದಾನಂದ, ಅಬ್ಧಿ.

**ಶ್ಚುತ್ವಸಂಧಿ**

**ಶ್ ಚ್ ಛ್ ಜ್ ಝ್ ಞ್** – ಈ ಆರು ಅಕ್ಷರಗಳನ್ನು **'ಶ್ಚು'** ಎಂಬ ಸಂಜ್ಞೆಯಿಂದ ಕರೆಯಲಾಗಿದೆ. **'ಶ್ಚು'** ಅಕ್ಷರಗಳು ಆದೇಶವಾಗಿ ಬರುವ ಸಂಧಿಗಳೇ **ಶ್ಚುತ್ವ** ಸಂಧಿ.

– ಮಾನವನಿಗೆ ಮನಶ್ಶುದ್ಧಿ ಇರಬೇಕು

ಈ ವಾಕ್ಯದಲ್ಲಿರುವ **ಮನಶ್ಶುದ್ಧಿ** ಪದವನ್ನು ಗಮನಿಸಿ

**ಮನಸ್** + **ಶುದ್ಧಿ** > **ಮನಶ್ಶುದ್ಧಿ**

**ಸ್** + **ಶ್** + **ಉ** > **ಶ್** + **ಶ್** + **ಉ**

ಇಲ್ಲಿ ಪೂರ್ವಪದದ ಅಂತ್ಯದಲ್ಲಿರುವ **'ಸ'** ಕಾರಕ್ಕೆ ಪರಪದದ ಆದಿಯಲ್ಲಿರುವ **'ಶ'** ಕಾರ ಪರವಾಗಿ ಸಂಧಿಯಾದಾಗ ಪೂರ್ವಪದದ ಅಂತ್ಯದ **'ಸ'** ಕಾರಕ್ಕೆ **'ಶ'** ಕಾರ ಆದೇಶವಾಗಿ ಬಂದಿರುವುದು.

**ಸೂತ್ರ: ಸ ಕಾರ ತ ವರ್ಗಗಳಿಗೆ ಶ ಕಾರ ಚ ವರ್ಗಗಳು ಅಂದರೆ ಶ್ಚು ಅಕ್ಷರಗಳು ಆದೇಶವಾಗಿ ಬಂದರೆ ಅಂತಹ ಸಂಧಿಗಳೇ ಶ್ಚುತ್ವ ಸಂಧಿ.**

ಉದಾ: ಪಯಶ್ಶಯನ, ಶರಚ್ಚಂದ್ರ, ಜಗಜ್ಜ್ಯೋತಿ.

©KTBS Not to be republished

## (ಸಮಾಸ ಮುಂದುವರಿದುದು)

**ಬಹುವ್ರೀಹಿ ಸಮಾಸ**

– ಮೂರು ಕಣ್ಣು ಉಳ್ಳವನು = ಮುಕ್ಕಣ್ಣ = ಶಿವ

– ಹಣೆಯಲ್ಲಿ ಕಣ್ಣುಳ್ಳವನು = ಹಣೆಗಣ್ಣ = ಶಿವ

ಈ ಪದಗಳಲ್ಲಿ ಪೂರ್ವಪದದ ಅರ್ಥವಾಗಲೀ ಪರಪದದ ಅರ್ಥವಾಗಲೀ ಪ್ರಧಾನವಾಗಿಲ್ಲದೇ ಬೇರೊಂದು ಪದವಾದ ಶಿವ ಪದದ ಅರ್ಥವೇ ಪ್ರಧಾನವಾಗಿದೆ.

**ಸೂತ್ರ : ಎರಡು ಅಥವಾ ಅನೇಕ ಪದಗಳು ಸೇರಿ ಸಮಾಸವಾದಾಗ ಬೇರೊಂದು (ಅನ್ಯಪದ) ಪದದ ಅರ್ಥವು ಪ್ರಧಾನವಾಗಿರುವ ಸಮಾಸವೇ ಬಹುವ್ರೀಹಿ ಸಮಾಸ.**

ಉದಾ: ನಾಲ್ಕು ಮೊಗ ಉಳ್ಳವನು ಆವನೋ ಅವನು = ನಾಲ್ಮೊಗ = ಬ್ರಹ್ಮ

ಚಕ್ರವು ಪಾಣಿಯಲ್ಲಿ ಉಳ್ಳವನು ಆವನೋ ಅವನು = ಚಕ್ರಪಾಣಿ = ವಿಷ್ಣು

ಫಾಲದಲ್ಲಿ ನೇತ್ರ ಉಳ್ಳವನು ಆವನೋ ಅವನು = ಫಾಲನೇತ್ರ = ಶಿವ

©KTBS Not to be republished

### ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

೧. ಜಶ್ತ್ವ ಸಂಧಿಯ ಸೂತ್ರವೇನು?

೨. ಶ್ಚುತ್ವ ಸಂಧಿಯನ್ನು ನಿದರ್ಶನದೊಂದಿಗೆ ವಿವರಿಸಿ.

೩. ಕೊಟ್ಟಿರುವ ಪದಗಳ ಸಮಾಸ ಹೆಸರಿಸಿ.

ಮುಕ್ಕಣ್ಣ, ಹಣೆಗಣ್ಣ

೪. ಕೊಟ್ಟಿರುವ ಪದಗಳ ಸಂಧಿ ಹೆಸರಿಸಿ.

ವಾಗ್ದೇವಿ ಚಿದಾನಂದ

### ಪೂರಕ ಓದು

ಅ) ಕೆ. ಎಸ್. ರತ್ನಮ್ಮ ಅವರ ಎಸ್. ರಾಧಾಕೃಷ್ಣನ್ ಜೀವನ ಸಾಧನೆ ಪುಸ್ತಕವನ್ನು ಓದಿ.

ಆ) ಎ.ಎನ್. ಮೂರ್ತಿರಾವ್ ಅವರ "ಚಿತ್ರಗಳು – ಪತ್ರಗಳು" ಪುಸ್ತಕವನ್ನು ಓದಿ.

# ೫. ಪ್ರಜಾನಿಷ್ಠೆ

B8U1U9

**ಸಾ. ಶಿ. ಮರುಳಯ್ಯ–**

**ಪ್ರವೇಶ :** ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯೂ ಕೂಡ ಒಂದು. ಕಾದಂಬರಿಗಳು ಕೇವಲ ಮನೋರಂಜನೆಯ ಸಾಧನಗಳಾಗಿರದೆ ಬದುಕಿನ ಮಹಾಕಾವ್ಯಗಳಾಗಿವೆ. ಇದು ಮನುಷ್ಯನ ಬದುಕಿನ ರಹಸ್ಯವನ್ನು ಬಿಡಿಸಿ ತೋರಿಸುವ ಸಾಹಿತ್ಯ ಪ್ರಕಾರ. ಕೌಟುಂಬಿಕ, ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ವೈಚಾರಿಕ, ಪತ್ತೇದಾರಿ ಇತ್ಯಾದಿ ವಿವಿಧ ಬಗೆಯ ಕಾದಂಬರಿಗಳನ್ನು ನೋಡಬಹುದು. ಬಿ. ವೆಂಕಟಾಚಾರ್ಯ, ಗುಲ್ವಾಡಿ ವೆಂಕಟರಾಯ, ಕೆರೂರ ವಾಸುದೇವಾಚಾರ್ಯ, ಎಂ. ಎಸ್. ಪುಟ್ಟಣ್ಣ, ಕುವೆಂಪು, ಶಿವರಾಮ ಕಾರಂತ, ಅನಕೃ, ತರಾಸು, ಬಸವರಾಜ ಕಟ್ಟೀಮನಿ, ನಿರಂಜನ, ಎಸ್. ಎಲ್. ಭೈರಪ್ಪ, ಪಿ. ಲಂಕೇಶ್, ಜಿ. ವಿ. ಅಯ್ಯರ್, ತ್ರಿವೇಣಿ, ಎಂ.ಕೆ. ಇಂದಿರಾ, ಗೀತಾನಾಗಭೂಷಣ ಮೊದಲಾದ ಪ್ರಮುಖ ಕಾದಂಬರಿಕಾರರನ್ನು ಕನ್ನಡ ಕಾದಂಬರಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಿಸಬಹುದಾಗಿದೆ.

ಡಾ. ಸಾ. ಶಿ. ಮರುಳಯ್ಯ ಅವರು 'ನಾಟ್ಯ ಮಯೂರಿ' ಕಿರು ಕಾದಂಬರಿಯನ್ನು ಹೊಯ್ಸಳ ಸಾಮ್ರಾಜ್ಯದ ಹೆಸರಾಂತ ದೊರೆ ವಿಷ್ಣುವರ್ಧನ ಹಾಗೂ ನಾಟ್ಯರಾಣಿ ಶಾಂತಲೆಯನ್ನು ಕುರಿತು ಬರೆದಿರುವುದಾಗಿದೆ. ಅದರಲ್ಲಿನ ಪ್ರಮುಖ ವ್ಯಕ್ತಿಯಾಗಿ ಕಾಣಬರುವ ಶಾಂತಲೆಯು ಪ್ರಜೆಗಳ ಮೇಲೆ ಇಟ್ಟಿರುವ ನಿಷ್ಠೆ ಹಾಗೂ ಕಾಳಜಿಯನ್ನೂ ಪ್ರಜೆಗಳು ಸ್ವಾರ್ಥರಹಿತರಾಗಿ ರಾಜ್ಯಾಭಿವೃದ್ಧಿ ಹಾಗೂ ರಾಜ ಭಕ್ತಿ ತೋರುವುದನ್ನು ಈ ಪಾಠದಲ್ಲಿ ಕಾಣಬಹುದಾಗಿದೆ.

©KTBS Not to be republished

ಹೊಯ್ಸಳ ಸಾಮ್ರಾಜ್ಯದ ಪ್ರಗತಿಯನ್ನು ಕಂಡ ಪರರಾಜರ ಕಣ್ಣುಗಳು ಕಿಸುರಾದವು. ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿರುವ ವಿಷ್ಣುವರ್ಧನ ಭೂಪಾಲನನ್ನು ಬಡಿಯಬೇಕೆಂದು ಶತ್ರು ರಾಜರುಗಳನೇಕರು–ಹವಣಿಸುತ್ತಿದ್ದರು. ಅವರಲ್ಲಿ ಚೋಳಮಂಡಲದ ಕುಲೋತ್ತುಂಗ ಪ್ರಮುಖನಾದವನು. ಗಂಗರ ತಲಕಾಡು ಅವನ ಸ್ವಾಧೀನದಲ್ಲಿತ್ತು. ಅಲ್ಲಿ ಆದಿಯಮ ಎಂಬುವನನ್ನು ರಾಜಪ್ರತಿನಿಧಿಯಾಗಿ ನೇಮಿಸಿದ್ದನು. ಕುಲೋತ್ತುಂಗ ಪ್ರಚಂಡ ಆಶಾವಾದಿ. ಅಖಂಡ ಭರತಖಂಡದ ಒಡೆತನವನ್ನು ಬಯಸುತ್ತಿದ್ದ ದುರಾಶಾಪಿಶಾಚಿ. ಹೊಯ್ಸಳ ಸಾಮ್ರಾಜ್ಯವನ್ನು ತನ್ನ ವಶ ಮಾಡಿಕೊಳ್ಳಲೆಂದು ಆಶಿಸಿ, ಆದಿಯಮನನ್ನು ಪ್ರಚೋದಿಸಿ ದ್ವಾರಸಮುದ್ರದ ಮೇಲೆ ಕಳುಹಿಸಿದ. ಆದಿಯಮ ಮೊದಮೊದಲು ಗಡಿನಾಡುಗಳಲ್ಲಿ ಚಿಕ್ಕ ಪುಟ್ಟ ದಾಳಿಗಳನ್ನು ನಡೆಸುತ್ತಿದ್ದವನು ಒಂದು ದೊಡ್ಡ ದಂಡ–ಯಾತ್ರೆಯನ್ನು ಕೈಗೊಂಡ. ಇದನ್ನು ಗುಪ್ತಚಾರರಿಂದ ತಿಳಿದ ಹೊಯ್ಸಳೇಶ್ವರನು ಸಕಲ ಸೇನಾ ಸಮೇತನಾಗಿ ಯುದ್ಧಕ್ಕೆ ಸನ್ನದ್ಧನಾಗಲೇಬೇಕಾಯಿತು.

ಶಕವರ್ಷ ಒಂದು ಸಾವಿರದ ಮೂವತ್ತೆಂಟನೆಯ ದುರ್ಮುಖಿನಾಮ ಸಂವತ್ಸರದ ಆಶ್ವಯುಜ ಶುದ್ಧ ದಶಮಿಯಂದು ದ್ವಾರಸಮುದ್ರದ ಸೇನೆ ತಲಕಾಡಿನ ಕಡೆಗೆ ಜೈತ್ರಯಾತ್ರೆ ಹೊರಟಿತು. ಮಳವಳ್ಳಿ, ಮುಡುಕುತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆದು; ಹೊಯ್ಸಳರ ಕೈ ಮೇಲಾಗಿ ಚೋಳಸೇನೆ

ಕಂಗಾಲಾಯಿತು. ಆದಿಯಮ ಯುದ್ಧದಲ್ಲಿ ಮಡಿದ. ಅವನ ಸತ್ತ ಸುದ್ದಿ ತಿಳಿಯುತ್ತಲೆ ಚೋಳಸೇನೆ ದಿಕ್ಕಾಪಾಲಾಗಿ ಓಡಿತು. ತಲಕಾಡ ಕೋಟೆ ಸುಲಭವಾಗಿ ವಿಷ್ಣುವರ್ಧನ ಭೂಪಾಲನ ಕೈವಶವಾಯಿತು. ಸಮಸ್ತ ಸೇನೆಯು 'ತಲಕಾಡುಗೊಂಡನಿಗೆ ಜಯವಾಗಲಿ' ಎಂದು ಜೈಕಾರ ಹಾಕಿತು.

ಹಲವರು ತಲಕಾಡು ನಗರವನ್ನು ಲೂಟಿ ಮಾಡಬೇಕೆಂದು ಇಚ್ಛಿಸಿದರು. ಆದರೆ ವಿಷ್ಣುವರ್ಧನ ಭೂಪಾಲ ಅದಕ್ಕೆ ಆಸ್ಪದ ಕೊಡಲಿಲ್ಲ. "ಕೆಚ್ಚೆದೆಯ ಕಟ್ಟಾಳುಗಳೇ, ಇದು ನಮ್ಮ ವಿಜಯದ ದಿನವೆಂದು ತಿಳಿದು ಮೈಮರೆಯಬಾರದು. ಇದು ನಮ್ಮ ಸತ್ತ್ವ ಪರೀಕ್ಷೆಯ ಸಮಯವೂ ಹೌದು. ಆದ್ದರಿಂದ ಎಷ್ಟೇ ಸ್ಥಾನಮಾನ ಪದವಿ ಪ್ರಶಸ್ತಿಗಳು ಲಭಿಸಲಿ, ಮಾನವ ತನ್ನ ಮಾನವೀಯ ಗುಣಗಳನ್ನು ಮಾತ್ರ ಗಾಳಿಯಲ್ಲಿ ತೂರಿಬಿಡಬಾರದು. ಸೆರೆ ಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮ ಅಲ್ಲ; ಸೋತ ಸಾಮ್ರಾಜ್ಯವನ್ನು ಲೂಟಿ ಮಾಡುವುದು ಯುದ್ಧ ಧರ್ಮವಲ್ಲ... ಆ ಕಾರಣ ನೀವೆಲ್ಲರೂ ತಲಕಾಡವರನ್ನು ತಮ್ಮವರೆಂದೇ ತಿಳಿದು ನಡೆಸಿಕೊಳ್ಳಿ. ಅವರ ಮನೋಭೀತಿಯನ್ನು ದೂರ ಮಾಡಿ ಶಾಂತಿ ಸ್ಥಾಪನೆ ಮಾಡಿ, ನಾಲ್ಕು ದಿನಗಳಾದ ಮೇಲೆ ರಾಜಧಾನಿಗೆ ಹಿಂದಿರುಗೋಣ."

ಪ್ರಜಾಪಾಲಕನಾದ ವಿಷ್ಣುವರ್ಧನ ಭೂಪಾಲನ ಮಾತುಗಳು ಎಲ್ಲರಿಗೂ ಹಿಡಿಸಿತು. ಅವನ ಇಚ್ಛೆಯನ್ನು ಮಹಾಮಂತ್ರಿ ಗಂಗರಾಜರೂ, ದಂಡಾಧೀಶ ತುಂಗದೇವನೂ ಅನುಮೋದಿಸಿದರು.

ಇತ್ತ ರಾಜಧಾನಿಯಲ್ಲಿ ಸಂರಕ್ಷಕಳಾಗಿ ನಿಂತಿದ್ದ ದೇವತೆ ಎಂದರೆ ಮಹಾರಾಣಿ ಶಾಂತಲಾದೇವಿ. ಅವಳಿಗೆ ನೆರವು ನೀಡುವುದಕ್ಕೆ ನೇಮಿತನಾಗಿದ್ದವನು ಯುವರಾಜ ಕುಮಾರ ಉದಯಾದಿತ್ಯ. ಯುದ್ಧಕ್ಕಾಗಿ ಸಮಸ್ತ ಸೇನೆಯೂ ರಾಜ್ಯದಿಂದ ದೂರ ಹೋದಾಗ ಪಕ್ಕದ ಪಾಳೇಗಾರರೂ, ದುಷ್ಟರೂ ದೊಂಬಿ ಏಳುವುದು ಸಹಜ. ಆದರೆ ಮಹಾರಾಣಿಯವರು ದಂಡವನ್ನು ಹಿಡಿದು ಕುಳಿತಿರುವುದನ್ನು ಕೇಳಿದ ಕೂಡಲೆ ಯಾವ ಗದ್ದಲವೂ ಕೇಳಿ ಬರದಾಯಿತು. ಮಹಾರಾಣಿ ಪರಿಸ್ಥಿತಿಯನ್ನು ಗೂಢಚಾರರಿಂದ ತಿಳಿಯುತ್ತಿದ್ದಳು. ಆಗಾಗ ತಾನೂ ವೇಷ ಮರೆಸಿಕೊಂಡು ದೇಶದ ಒಳಭಾಗಗಳಲ್ಲಿ ಸಂಚರಿಸಿ ಬರುತ್ತಿದ್ದಳು.

ಒಮ್ಮೆ–

ತಾನು ಗಂಡುಡೆಗೆಯನ್ನುಟ್ಟು ಯುವರಾಜ ಕುಮಾರ ಉದಯಾದಿತ್ಯನನ್ನು ಜೊತೆಯಲ್ಲಿ ಕರೆದುಕೊಂಡು ಬೆಳಗಿನ ಜಾವಕ್ಕೆ ಕುದುರೆಯೇರಿ ದ್ವಾರಸಮುದ್ರದ ದ್ವಾರದಿಂದ ಹೊರಹೊರಟಳು. ರಾಜ್ಯದ ದಕ್ಷಿಣ ವಿಭಾಗವನ್ನು ವೀಕ್ಷಿಸುವ ಸಲುವಾಗಿ ಬೆಳ್ಗೊಳ, ಬಾಣಾವರ ನಾಡುಗಳನ್ನು ದಾಟಿ ಅಂದೇ ಸಂಜೆ ತೆಂಗಿನ ಸೀಮೆಯ ಹಳ್ಳಿಯೊಂದರ ಬಳಿ ಬಂದರು. ಅದರ ಹೆಸರು ಬನದಮ್ಮನಹಳ್ಳಿ. ಊರ ಆಚೆ ಬನಶಂಕರಿಯ ದೇವಾಲಯ ಭವ್ಯವಾಗಿ ಬೆಳಗುತ್ತಿತ್ತು. ಅಲ್ಲಿ ಹೋಗಿ ದೇವಿಗೆ ನಮಸ್ಕರಿಸಿ ಪಯಣವನ್ನು ಮುಂದುವರಿಸುವುದೆಂದು ಆಲೋಚಿಸಿ ಅಲ್ಲಿಗೆ ನಡೆದರು. ಆದರೆ ಬನಶಂಕರಿಯ ದೇವಾಲಯದ ಮುಂಭಾಗದ ಕಟ್ಟೆಯ ಮೇಲೆ ನೂರಾರು ಜನರು ಒಂದು ಪಂಚಾಯಿತಿ ನೆರೆದಿದ್ದುದು ಕಂಡು ಬಂತು. ಯಾವುದೊ ಹಳ್ಳಿಜಗಳ ಇರಬೇಕೆಂದು ಅಂದುಕೊಂಡಳು ಶಾಂತಲೆ. ಆದರೆ ಅದು ಜಗಳವಾಗಿರಲಿಲ್ಲ. ಏನೋ ಒಂದು ಹೊಸ ಬಗೆಯ ನ್ಯಾಯವನ್ನು ಬೇಡಲಾಗುತ್ತಿತ್ತು.

© KTBS Not to be republished



ಪಂಚಾಯಿತಿಯ ಜನಸಮೂಹಕ್ಕೆ ಕಾಣಿಸದಂತೆ ದೂರದ ಹಿಪ್ಪೆಯ ಮರದ ಮರೆಯಲ್ಲಿ ನಿಂತು ಶಾಂತಲೆ ಮತ್ತು ಉದಯಾದಿತ್ಯರು ಅಲ್ಲಿ ನಡೆಯುತ್ತಿದ್ದ ನ್ಯಾಯ ವಿಚಾರಣೆಯನ್ನು ಆಲಿಸುತ್ತಿದ್ದರು.

"ಏನ್ರಪ್ಪಾ... ದೈವದವರು ಏನು ಹೇಳ್ತೀರಾ ಹೇಳ್ರಿ..." ಗಾದಿಯ ಮೇಲೆ ಕುಳಿತಿದ್ದ ದಪ್ಪ ಮೀಸೆಯ ಗಾವುಂಡ ಕೇತಮಲ್ಲ ನಾಯಕ ಅದೇ ಕಟ್ಟೆಯ ಮೇಲೆ ಕುಳಿತಿದ್ದ ಹತ್ತೂ ಜನರನ್ನು ಕೇಳಿದ. ಎಲ್ಲರೂ ಮುಂಡಾಸುಗಳನ್ನು ಸುತ್ತಿಕೊಂಡಿದ್ದರು.

"ಏನು ತಾತಾ... ಈವೊತ್ತಿನ ಇಚಾರಾ" ಎಂದ ಒಬ್ಬ.

ಕೇತಮಲ್ಲನಾಯಕ ವಿಷಯವನ್ನು ವಿವರಿಸಿದ –

"ನೋಡಿ, ಬೀರಣ್ಣ ತನ್ನ ಮೂಡಲ ದಿಕ್ಕಿನಾಗಿರೊ ಹಳ್ಳೀ ಹೊಲಾನ ಈರಣ್ಣನಿಗೆ ನೂರಾ ಎಂಟು ಹೊನ್ನಿಗೆ ಕೊಟ್ಟಿದ್ದ ಎರಡು ವರ್ಷಗಳ ಹಿಂದೆ. ಕ್ರಯಕ್ಕೆ ತಕ್ಕೊಂಡು ಹೊಲದಾಗೆ ಉಳುಮೆ ಮಾಡೋವಾಗ ನಿನ್ನೆ ದಿನಾ ಒಂದು ಕೊಪ್ಪರಿಗೆ ಬಂಗಾರ ಸಿಕ್ತು. ಇಗಾ ಇಲ್ಲೈತೆ ನೋಡ್ರಿ" ಹೊನ್ನು ತುಂಬಿದ ಕೊಪ್ಪರಿಗೆಯನ್ನು ತೋರಿದ ಆ ನಾಯಕ. "ಇದನ್ನು ಈರಣ್ಣ ಪೂಜೆ ಮಾಡಿ ಬೀರಣ್ಣನ ಮನೆಗೆ ಕೊಂಡೋಗಿ 'ತಕ್ಕಳಪ್ಪ ಇದು ನೀನು ಕೊಟ್ಟ ಹೊಲದಾಗೆ ಸಿಕ್ಕಿತು... ಯಾರೋ ನಿನ್ನ ಪೂರ್ವಿಕರು ನಿನಗಾಗಿ ಇಟ್ಟುದ್ರು ಅಂತಾ ಕಾಣ್ಸುತ್ತೆ ತಕ್ಕೊ' – ಅಂದ."

ಬೀರಣ್ಣ ಒಪ್ಪಲಿಲ್ಲ "ಅಲ್ಲವೇನಪ್ಪಾ ಬೀರಣ್ಣಾ?" ಕೇಳಿದ ಕೇತಮಲ್ಲ. "ಹೌದು ಗವುಡಪ್ಪಾ... ಹೊಲ ಮಾರಿದ ಮ್ಯಾಗೆ ಹಣ ಕೊಟ್ಟ ಮ್ಯಾಗೆ, ಆ ನೆಲದ ಮೇಲೆ ನನಗೇನೈತೆ ಹಕ್ಕು... ಅದರಾಗೆ ಸಿಕ್ಕಿದ್ದೆಲ್ಲಾ ಹೊಲ ಕೊಂಡುಕೊಂಡ ಒಡೆಯಂದು ತಾನೆ?"

©KTBS Not to be republished

“ಆದರೆ ಅದಕ್ಕೆ ನಾನೊಪ್ಪಲ್ಲ ಗೌಡಪ್ಪಾ...” ಈರಣ್ಣ ಹೇಳಿದ, “ನಾನು ಹಣ ಕೊಟ್ಟದ್ದು ಮಣ್ಣಿಗೇ ಹೊರತು ಅದರಲ್ಲಿ ಸಿಕ್ಕೊ ಹೊನ್ನಿಗಲ್ಲ... ಈ ಹೊನ್ನು ಬೀರಣ್ಣಂದೆ... ಯಾಕೆ ಅಂತಿರೋ ಆ ಹೊಲ ಇವನ ಪಿತ್ರಾರ್ಜಿತ ಆಸ್ತಿ. ಏನೋ ಕಷ್ಟ ಬಂತು ಅಂತ ನನಗೆ ಮಾರಿದ. ಮಾರೋವಾಗ ಅದರಾಗಿನ ಹೊನ್ನು ನಿಂದೇ ಅಂತಾ ಹೇಳಿರಲಿಲ್ಲ. ಅಂದಮ್ಯಾಲೆ, ಹೊನ್ನು ಅವನ್ದೇ... ನಂದಲ್ಲ.”

“ಅದೆಂಗಾದಾತು... ! ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯಿಗಾಕ್ಕೊಳ್ಳೋ ಕೆಟ್ಟತನ ಬ್ಯಾಡಾ... ಹೊನ್ನು, ಹೊಲ ಕೊಂಡುಕೊಂಡ ಈರಣ್ಣಂದೇ... ಅವನು ತಗೊಳ್ಳೊ ಹಂಗ ಮಾಡಿ ಉಪಕಾರ ಮಾಡಬೇಕು ದೈವದವರು” ಎಂದು ಬೇಡಿದ ಬೀರಣ್ಣ –

ಕಟ್ಟೆಯ ಮೇಲಿದ್ದ ದೈವದವರಿಗೆ ಏನೂ ತೋಚಲಿಲ್ಲ... ಕಡೆಗೆ ಮುಖ್ಯಸ್ಥನಾದ ಕೇತಮಲ್ಲ ಹೇಳಿದ– “ಹೋಗಲಿ ಬಿಡಿ... ಇಬ್ಬರಿಗೂ ಬ್ಯಾಡವಾದ ಹೊನ್ನು ರಾಜ್ಯದ ಬೊಕ್ಕಸಾ ಸೇರಲಿ...” ಅಂದ.

ಕೂಡಲೆ ಮರದ ಮರೆಯಲ್ಲಿದ್ದ ಶಾಂತಲೆ ಮುಂದೆ ಬಂದು, ‘ಕೂಡದು... ಕೂಡದು...’ – ಎಂದು ಕೂಗಿದಳು. ಎಲ್ಲರೂ ಅತ್ತ ಕಣ್ಣು ಹಾಯಿಸಿದರು. ಗಂಡುವೇಷದ ಶಾಂತಲೆ ಮತ್ತು ಉದಯಾದಿತ್ಯರು ಪಂಚಾಯಿತರ ಕಡೆಗೇ ಬರುತ್ತಿದ್ದುದು ಕಾಣಿಸಿತು. ಗಂಡುಡುಗೆಯನ್ನು ಉಟ್ಟಿದ್ದ ಶಾಂತಲೆಯನ್ನು ಅವರು ಗಂಡಸೆಂದೇ ಭಾವಿಸಿದರು. ಅವರ ದೇಹ ಸೌಂದರ್ಯವನ್ನು ನೋಡಿ ಎಲ್ಲರಿಗೂ ಸಂತಸವಾಯಿತು. ಅವರನ್ನು ಮಾತನಾಡಿಸಬೇಕು ಎನ್ನಿಸಿತು. ಕೇತಮಲ್ಲ ಕೇಳಿದ–

“ನೀವು ಯಾರೇ ಆಗಿರಿ... ಆದರೆ... ನೀವು... ಈ ಹೊನ್ನು ರಾಜ್ಯದ ಬೊಕ್ಕಸಕ್ಕೆ ಸೇರಬಾರದು ಅಂದಿರಲ್ಲಾ ಯಾಕೆ?”

“ತಾತ, ಬೊಕ್ಕಸಕ್ಕೆ ಸೇರಲು ಇದು ಸಾಮ್ರಾಟರ ದುಡಿಮೆಯಲ್ಲ... ಅವರ ಬೆವರಿನ ಫಲ ಅಲ್ಲ... ಅದು ಪ್ರಜೆಗಳ ಬೆವರಿನ ಫಲ!”

“ಹೌದು ಈ ಹೊನ್ನು ಪ್ರಜೆಗಳದು, ಹಾಗಾದರೆ ಪ್ರಜೆಗಳು ಯಾರವರು?” ಎಂದು ಪ್ರಶ್ನೆ ಹಾಕಿದ. ಶಾಂತಲೆ ಉತ್ತರಿಸದಾದಳು. ಕೇತಮಲ್ಲನೇ ಮುಂದುವರಿದ–

“ಹೇಳು ನನ್ನಪ್ಪಾ... ನಾವೆಲ್ಲಾ ಹೊಯ್ಸಳೇಶ್ವರರ ಮಕ್ಕಳಲ್ಲವೇನಪ್ಪಾ... ಮಕ್ಕಳ ದುಡಿಮೆ ತಂದೆಯದಲ್ಲವೆ?”

“ಹೋಗಲಿ, ನಿಮ್ಮ ಊರಿನ ಹಣ ನಿಮ್ಮೂರಿನ ಏಳಿಗೆಗಾಗಿಯೇ ವಿನಿಯೋಗವಾಗಲಿ.”

“ಅಷ್ಟು ಸ್ವಾರ್ಥ ಯಾಕೊ ನನ್ನಪ್ಪಾ... ನಾರಾಯಣನಂತಹ ಮಹಾರಾಜರು, ಲಕ್ಷ್ಮಿಯಂತಹ ಮಹಾರಾಣಿ ಇರೋವಾಗ ನಮಗೆ ಹಣಕ್ಕೆ ಕೊರತೆಯೇ... ನಮ್ಮೂರಿಗೆ ಯಾವುದೂ ಈಗ ಬೇಡ... ನಾವು ಒಂದರ್ಥದಲ್ಲಿ ತೃಪ್ತರು. ಏನಾದರೂ ಊರಿಗೆ ಬೇಕಾದರೆ ನಾವೇ ಮಾಡಿಕೊಳ್ತೀವಿ... ಇದು ದೊರೆಯ ಹಣ, ಧರೆಯ ಕ್ಷೇಮಕ್ಕೆ ಮೀಸಲು.”

ಕೇತಮಲ್ಲನ ಮಾತು ಕೇಳಿ

“ಅಣ್ಣಗಳಿರಾ, ನಿಮ್ಮಂತಹ ಪುಣ್ಯವಂತ ಪ್ರಜೆಗಳನ್ನು ಪಡೆದ ರಾಜ ಅದೆಷ್ಟು ಭಾಗ್ಯವಂತನೋ...”

©KTBS Not to be republished

"ಇರಬಹುದು... ಅಂಥ ರಾಜ ರಾಣಿಯರನ್ನು ಪಡೆದ ನಾವು ಪುಣ್ಯವಂತರು" ಅಂದ ಕೇತಮಲ್ಲ.

"ನಿಮ್ಮ ಸಮಾಗಮದ ಸೌಭಾಗ್ಯವನ್ನು ಕಂಡ ನಾವೂ ಪುಣ್ಯವಂತರು!"– ಎಂದು ಮುಂದೆ ಬಂದ ಉದಯಾದಿತ್ಯ, ಎಲ್ಲರೂ ಅಚ್ಚರಿಗೊಳ್ಳುವಂತೆ ನುಡಿದ–

"ಅಣ್ಣಗಳಿರಾ... ಇವರು ಯಾರೆಂದು ತಿಳಿದಿರಿ, ಇವರೇ ನಿಮ್ಮ ನಮ್ಮ ಭಾಗ್ಯದೇವತೆ ಶಾಂತಲಾದೇವಿಯವರು ಗಂಡುಡುಗೆಯಲ್ಲಿದ್ದುದರಿಂದ ನಿಮಗೆ ಗುರುತಿಸಲಾಗಲಿಲ್ಲ... ನೋಡಿ" ಎಂದು ಶಾಂತಲೆಯ ತಲೆಯ ಮೇಲಿನ ಮುಂಡಾಸು ತೆಗೆದ. ಅಂಟಿಸಿಕೊಂಡಿದ್ದ ಮೀಸೆಯನ್ನು ತೆಗೆದಳು ಶಾಂತಲೆ...!

ಆ ಬನದಮ್ಮನ ಹಳ್ಳಿಯ ಜನರಿಗೆ ಸ್ವರ್ಗ ಒಂದೇ ಮೆಟ್ಟಿಲಲ್ಲಿ ಉಳಿಯಿತು. ಅವರ ಆನಂದಕ್ಕೆ ಪಾರವೇ ಇಲ್ಲವಾಯಿತು. ಎಲ್ಲರೂ ಕಟ್ಟೆಯಿಂದ ಧುಮುಕಿ, ಉದ್ದಕ್ಕೆ ನೆಲದ ಮೇಲೆ ಅಡ್ಡಬಿದ್ದಿದ್ದರು. ದೇವಾಲಯದ ಒಳಭಾಗದಲ್ಲಿ ಪಂಚಾಯಿತಿ ನೋಡಲು ಬಂದಿದ್ದ ಹೆಂಗಳೆಯರು ಓಡಿ ಬಂದು ಶಾಂತಲೆಯನ್ನು ಸುತ್ತುಗಟ್ಟಿದರು. ಅವಳನ್ನು ಮುಟ್ಟಿ ಮಾತನಾಡಿಸಿ ಮುಕ್ತಿ ಪಡೆದಷ್ಟು ಸಂತುಷ್ಟರಾದರು. ಅವಳ ಪಾದಗಳನ್ನು ಮುಟ್ಟಿ ಮುಟ್ಟಿ ಕಣ್ಣುಗಳಿಗೆ ಒತ್ತಿಕೊಂಡರು. ಅವಳು ಹೆಜ್ಜೆ ಇಟ್ಟ ಸ್ಥಳದ ಧೂಳನ್ನು ತೆಗೆದು ನೆತ್ತಿಯಲ್ಲಿ ಧರಿಸಿದರು. ಶಾಂತಲೆ ಎಷ್ಟು ತಡೆದರೂ ಅವರ ಭಕ್ತಿಯ ಪ್ರದರ್ಶನ ನಿಲ್ಲಲೇ ಇಲ್ಲ. ಕಡೆಗೆ ಉದಯಾದಿತ್ಯ ಬಹು ಪ್ರಯಾಸದಿಂದ ತಡೆಯಬೇಕಾಯಿತು. ಎಲ್ಲ ದೈವದವರೂ ಆ ಹೊನ್ನನ್ನು ಬೊಕ್ಕಸಕ್ಕೆಂದು ಒಪ್ಪಿಸಿಕೊಳ್ಳದ ಹೊರತು ಮಹಾರಾಣಿಯವರ ಮತ್ತು ಯುವರಾಜರ ಪಾದಗಳನ್ನು ಬಿಡುವುದಿಲ್ಲ ಎಂದು ಹಠ ಮಾಡಲು ಶಾಂತಲೆ,

"ಅಣ್ಣಂದಿರಾ, ತಾಯಂದಿರೆ, ಇದೋ ಈ ಹೊನ್ನನ್ನು ನೇರವಾಗಿ ನಾನು ರಾಜ್ಯದ ಕೋಶಕ್ಕೆ ಸೇರಿಸುವುದಿಲ್ಲ... ಇದು ದೈವದ ದುಡ್ಡು, ದೇವಕಾರ್ಯಕ್ಕೆ ವಿನಿಯೋಗವಾಗಬೇಕಾದ್ದು ಧರ್ಮ... ಕೇಳಿ, ನನಗೆ ಬಹಳ ದಿನಗಳಿಂದಲೂ ಒಂದು ಆಸೆ ಇದೆ... ನಮ್ಮ ಸಂಸ್ಕೃತಿಯ ಶ್ರೀಮಂತಿಕೆಗೆ ಸಾಕ್ಷಿಯಾಗಿ ಒಂದು ಕಲಾದೇಗುಲವನ್ನು ರಾಜಧಾನಿ ದ್ವಾರಸಮುದ್ರದಲ್ಲಿ ನಿರ್ಮಿಸಬೇಕು ಎಂದು. ಅವಳಿ ದೇಗುಲಗಳ ಶಿಲ್ಪಕಲೆ ಹೊಯ್ಸಳರ ಶೈಲಿಗೆ ಮಾದರಿಯಾಗಿರಬೇಕು... ವೇಲಾಪುರಿಯ ಚೆನ್ನಕೇಶವ ದೇವಾಲಯದಲ್ಲಿ ಲಾಲಿತ್ಯವಿದ್ದರೆ, ದ್ವಾರಸಮುದ್ರದ ದೇಗುಲದಲ್ಲಿ ಭವ್ಯತೆ ನೆಲೆಗೊಂಡಿರಬೇಕು. ಅಂತಹ ಒಂದು ಕಲಾಪೂರ್ಣ ದೇವಾಲಯಕ್ಕಾಗಿ ಈ ಹೊನ್ನು ವಿನಿಯೋಗವಾಗಲಿ... ಆದರೆ ಒಂದು ಮಾತು."

"ಏನು ತಾಯಿ?"

"ಕೇತಮಲ್ಲ ನಾಯಕರು ನಮಗೆಲ್ಲರಿಗೂ ಹಿರಿಯರು, ಪಿತೃ ಸಮಾನರು. ಮುಂದೆ ದ್ವಾರಸಮುದ್ರದಲ್ಲಿ ನಿರ್ಮಾಣವಾಗುವ ಅವಳಿ ದೇವಾಲಯಗಳು ಅವರ ಹೆಸರಿನಲ್ಲಿಯೆ ನಿರ್ಮಾಣವಾಗಲಿ! ಶ್ರೀ ಕೇತಮಲ್ಲ ನಾಯಕರ ಹೆಸರಿನಲ್ಲೇ ಒಂದು ಶಿಲಾಶಾಸನ ಸಾಕ್ಷೀಕರಿಸಲಿ!

ಕೇತಮಲ್ಲನಾಯಕ ಏನೋ ಹೇಳಹೊರಟ. ಆದರೆ ಬನದಮ್ಮನ ಹಳ್ಳಿಯ ಜನ ಬಿಡಲಿಲ್ಲ. "ಮಹಾತಾಯಿ ಹಾಗೆಯೇ ಆಗಲಿ... ಕೇತಮಲ್ಲಪ್ಪನ ಹೆಸರಿನಲ್ಲೇ ಕಟ್ಟೋಣವಾಗಲಿ" ಎಂದು ಒಕ್ಕೊರಲಲ್ಲಿ ಕೂಗಿದರು.

©KTBS Not to be republished

ಜೊತೆಯಲ್ಲಿ ಮತ್ತೊಂದು ಕೂಗು – "ಕಟ್ಟುವ ದೇವಾಲಯಗಳು ಹೊಯ್ಸಳೇಶ್ವರ, ಶಾಂತಲೇಶ್ವರ" ಎಂದಿತು!

"ಹೌದು... ಹೊಯ್ಸಳೇಶ್ವರ ಶಾಂತಲೇಶ್ವರರಿಗೆ ಜಯವಾಗಲಿ" ಎಂದು ಘೋಷಿಸಿತು ಸಾಸಲು ಬನದಮ್ಮನಹಳ್ಳಿಯ ಭಾಗ್ಯವಂತ ಜನತೆ.

ಅತ್ತಿಗೆ ಮೈದುನರು ತಮ್ಮ ತಮ್ಮ ಕುದುರೆಗಳನ್ನೇರಿದರು. ಸಾಸಲು ಬನದಮ್ಮನ ಹಳ್ಳಿಯ ಜನತೆ,

'ಮಹಾರಾಣಿಯವರಿಗೆ ಜಯವಾಗಲಿ'
'ಯುವರಾಜರಿಗೆ ಜಯವಾಗಲಿ...'
'ಹೊಯ್ಸಳೇಶ್ವರರಿಗೆ ಜಯವಾಗಲಿ...'
ಎಂದು ಹರ್ಷಘೋಷ ಮಾಡಿತು.

* * * * *

## ಕೃತಿಕಾರರ ಪರಿಚಯ



**ಸಾ. ಶಿ. ಮರುಳಯ್ಯ : ಶ್ರೀ ಸಾಸಲು ಶಿವರುದ್ರಯ್ಯ ಮರುಳಯ್ಯ** ಇವರು **ಸಾ.ಶ.** ೧೯೩೧ರಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ **ಸಾಸಲು** ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಶಿವರುದ್ರಯ್ಯ, ತಾಯಿ ಸಿದ್ದಮ್ಮ. ಇವರು **ಸಾ.ಶ. ೧೯೫೬** ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ. ಎ. ಪದವಿಯನ್ನು ಮತ್ತು **ಸಾ. ಶ.** ೧೯೭೧ ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ **'ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ'** ಕುರಿತ **ಮಹಾಪ್ರಬಂಧಕ್ಕೆ ಪಿಎಚ್.ಡಿ.** ಪದವಿಯನ್ನು ಪಡೆದರು. **ಸಾ. ಶ.** ೧೯೯೫ ರಿಂದ ೧೯೯೮ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ರಾಜ್ಯಭಾಷಾ ಆಯೋಗದ ಸದಸ್ಯರಾಗಿಯೂ ಸೇವೆಯನ್ನು ಸಲ್ಲಿಸಿದರು. ಇವರು **ಶಿವತಾಂಡವ, ಕೆಂಗನಕಲ್ಲು, ವಚನ ವೈಭವ, ನೆಲದ ಸೊಗಡು, ನಾಟ್ಯ ಮಯೂರಿ, ವಿಜಯ ವಾತಾಪಿ** ಮೊದಲಾದ ೯೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ **ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ದೇವರಾಜ್ ಬಹದ್ದೂರ್ ಪ್ರಶಸ್ತಿಗಳನ್ನು** ನೀಡಿ ಗೌರವಿಸಲಾಗಿದೆ.ಇವರು ದಿನಾಂಕ ೫–೦೨–೨೦೧೬ ರಂದು ವಿಧಿವಶರಾದರು.

ಪ್ರಕೃತ 'ಪ್ರಜಾನಿಷ್ಠೆ' ಗದ್ಯಪಾಠವನ್ನು **ಸಾ. ಶಿ. ಮರುಳಯ್ಯ** ಅವರು ರಚಿಸಿರುವ **'ನಾಟ್ಯ ಮಯೂರಿ'** ಎಂಬ ಕೃತಿಯಿಂದ (ಪುಟ ಸಂಖ್ಯೆ ೬೮ ರಿಂದ ೭೯ ರವರೆಗೆ) ಆಯ್ದು ನಿಗದಿಪಡಿಸಿದೆ.

©KTBS Not to be republished

## ಆಶಯ ಭಾವ

ಹೊಯ್ಸಳ ವಂಶದ ಪ್ರಸಿದ್ಧ ದೊರೆ ವಿಷ್ಣುವರ್ಧನ. ಆತನ ಮಹಾರಾಣಿ ಶಾಂತಲಾದೇವಿ. ಪ್ರಜಾಪ್ರೇಮಿಯಾಗಿದ್ದ ಈಕೆಯು ಒಮ್ಮೆ ಮಾರುವೇಷದಲ್ಲಿ ರಾಜ್ಯ ಸಂಚಾರ ಮಾಡುತ್ತಿದ್ದಳು. ಆ ಸಮಯದಲ್ಲಿ ಪ್ರಜೆಗಳ ಪ್ರಾಮಾಣಿಕತೆಯನ್ನು ಕಂಡಳು. ಭೂಮಿಯಲ್ಲಿ ದೊರಕಿದ ಸಂಪತ್ತು ಪ್ರಜೆಗಳಿಗೆ ಸೇರಿದ್ದಾದ್ದರಿಂದ ಅದನ್ನು ಪ್ರಜೆಗಳಿಗಾಗಿಯೇ ಬಳಸಬೇಕು ಎಂಬ ಅಭಿಪ್ರಾಯದಂತೆ ದೇವಾಲಯ ನಿರ್ಮಾಣಕ್ಕೆ ಆ ಸಂಪತ್ತನ್ನು ಬಳಸಲು ಮಾಡಿದ ತೀರ್ಮಾನವನ್ನು ಈ ಪ್ರಜಾನಿಷ್ಠೆ ಎಂಬ ಪಾಠದಲ್ಲಿ ಕಾಣಬಹುದಾಗಿದೆ.

## ಪದಗಳ ಅರ್ಥ

ಕಿಸುರು – ಕೆಂಪು ಬಣ್ಣ

ಕೊಪ್ಪರಿಗೆ – ಅಗಲವಾದ ಬಾಯಿಯುಳ್ಳ ಲೋಹದ ಪಾತ್ರೆ

ಗಾವುಂಡ – ಗ್ರಾಮದ ಮುಖ್ಯಸ್ಥ

ಚೈತ್ರಯಾತ್ರೆ – ವಿಜಯಯಾತ್ರೆ

ದೈವದವರು – ಊರಿನ ಹಿರಿಯರು, ಕುಲದ ಹಿರಿಯರು.

ಪಿತ್ರಾರ್ಜಿತ – ತಂದೆಯ ಆಸ್ತಿ, ವಂಶದ ಪೂರ್ವಿಕರು ಆರ್ಜಿಸಿದ ಸಂಪತ್ತು.

ಪೂರ್ವಿಕರು – ವಂಶದ ಹಿಂದಿನ ವ್ಯಕ್ತಿ, ಪೂರ್ವಜರು.

ಪ್ರವರ್ಧಮಾನ – ಅಭಿವೃದ್ಧಿ ಹೊಂದುವುದು

ಮುಂಡಾಸು – ರುಮಾಲು, ತಲೆಯುಡುಗೆ

©KTBS Not to be republished

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಚೋಳರು ಮತ್ತು ಹೊಯ್ಸಳರ ನಡುವೆ ಎಲ್ಲಿ ಯುದ್ಧ ನಡೆಯಿತು?

೨. ಸಾಮ್ರಾಟನು ರಾಜಧಾನಿಯಲ್ಲಿ ಇಲ್ಲದಿದ್ದಾಗ ರಾಜ್ಯದ ಸಂರಕ್ಷಕರಾಗಿ ನಿಂತಿದ್ದವರು ಯಾರು?

೩. ಬನದಮ್ಮನ ಹಳ್ಳಿಯ ಜನರು ಎಲ್ಲಿ ಪಂಚಾಯಿತಿ ಸೇರಿದ್ದರು?

೪. ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ಯಾರ್‍ಯಾರ ನಡುವಿನ ನ್ಯಾಯ ತೀರ್ಮಾನವಾಗುತ್ತಿತ್ತು?

ಆ) **ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಹಲವರು ತಲಕಾಡನ್ನು ಲೂಟಿ ಮಾಡಬೇಕೆಂದು ಹೇಳಿದಾಗ ದೊರೆ ವಿಷ್ಣುವರ್ಧನನು ಏನೆಂದು ಹೇಳಿದನು?

೨. ತಲಕಾಡಿನ ಲೂಟಿಯ ವಿಚಾರದಲ್ಲಿ ವಿಷ್ಣುವರ್ಧನನ ನಿಲುವೇನು?

೩. ಬನದಮ್ಮನ ಹಳ್ಳಿಯ ದೇವಾಲಯದ ಮುಂದೆ ಯಾವ ವಿಚಾರವಾಗಿ ಚರ್ಚೆ ನಡೆದಿತ್ತು?

೪. ದೈವದವರ ತೀರ್ಪಿನ ಬಗೆಗೆ ಶಾಂತಲೆಯ ಅಭಿಪ್ರಾಯವೇನು?

೫. ಶಾಂತಲೆಯು ನೀಡಿದ ತೀರ್ಪೇನು?

ಇ) **ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಚೋಳ ದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಇದ್ದ ಕಾರಣ ಹಾಗೂ ಪರಿಣಾಮವನ್ನು ವಿವರಿಸಿ.

೨. ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಪಿನ ಬಗ್ಗೆ ವಿವರಿಸಿ.

©KTBS Not to be republished

ಈ) **ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ತಲಕಾಡುಗೊಂಡನಿಗೆ ಜಯವಾಗಲಿ"

೨. "ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮವಲ್ಲ"

೩. "ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯಿಗಾಕ್ಕೊಳ್ಳೋ ಕೆಟ್ಟತನ ಬ್ಯಾಡಾ"

ಉ) **ಬಿಟ್ಟಸ್ಥಳದಲ್ಲಿ ಸೂಕ್ತಪದವನ್ನು ತುಂಬಿರಿ.**

೧. ದ್ವಾರಸಮುದ್ರದ ಸೇನೆ ______________ ಕಡೆಗೆ ಚೈತ್ರಯಾತ್ರೆ ಹೊರಟಿತು.

೨. ಮಾನವ ತನ್ನ ______________ ಗುಣಗಳನ್ನು ಗಾಳಿಯಲ್ಲಿ ತೂರಿಬಿಡಬಾರದು.

೩. ನಿಮ್ಮ ಊರಿನ ಹಣ ನಮ್ಮೂರಿನ ______________ ಯೇ ವಿನಿಯೋಗವಾಗಲಿ.

೪. ಬನದಮ್ಮನ ಹಳ್ಳಿಯ ಜನರಿಗೆ ______________ ಒಂದೇ ಮೆಟ್ಟಿಲಲ್ಲಿ ಉಳಿಯಿತು.

## ಭಾಷೆಯ ಸೊಬಗು

(೧) ಹಕ್ಕಿಗಳ ಹಿಂಡು ಬಲೆಯ ಸಮೇತ ಹಾರಿದವು.

(೨) ೨೦೬ ಮೂಳೆಗಳು ಸೇರಿ ಮನುಷ್ಯನ ಅಸ್ಥಿಪಂಜರವನ್ನು ರೂಪಿಸಿದೆ.

(೩) ತೋಟದಲ್ಲಿ ಅಂದು ಬೆಳಗ್ಗೆ ನೂರಾರು ಹೂವು ಅರಳಿತು.

– ಈ ಮೇಲಿನ ವಾಕ್ಯಗಳನ್ನು ಗಮನಿಸಿ. ಇಲ್ಲಿ ಎಲ್ಲಿ ತಪ್ಪಾಗಿದೆ? ಹಕ್ಕಿಗಳ ಹಿಂಡು ಇದ್ದುದು ಒಂದೇ. ಆದರೆ ನಾವು "ಹಾರಿದವು" ಎಂದು ಬರೆದಿದ್ದೇವೆ. ಅದು "ಹಕ್ಕಿಗಳ ಹಿಂಡು ಬಲೆಯ ಸಮೇತ ಹಾರಿತು" ಎಂದಾಗಬೇಕಿತ್ತಲ್ಲವೆ?

ಹಾಗೆಯೇ, ಮೂಳೆಗಳು ಎಂದು ಬಹುವಚನ ಇದ್ದಾಗ ವಾಕ್ಯದ ಕೊನೆಯಲ್ಲಿ "ರೂಪಿಸಿವೆ" ಎಂದು ಬರೆಯಬೇಕಿತ್ತು, "ರೂಪಿಸಿದೆ" ಅಲ್ಲ. ಮೂರನೇ ವಾಕ್ಯದಲ್ಲಿ "ನೂರಾರು" ಎಂದ ಮೇಲೆ "ಹೂವುಗಳು ಅರಳಿದವು" ಎಂದರೆ ಸರಿಯಾಗುತ್ತದೆ.

ವಾಕ್ಯಗಳನ್ನು ಬರೆಯುವಾಗ ಏಕವಚನ, ಬಹುವಚನಗಳ ಕಡೆ ಗಮನ ಕೊಡಬೇಕು.

**ಈ ಕೆಳಗಿನ ವಾಕ್ಯಗಳನ್ನು, ತಪ್ಪಿದ್ದರೆ ಸರಿಪಡಿಸಿ:**

(೧) ರಾಮನ ಬಾಣಗಳು ರಾವಣನ ಎದೆಯನ್ನು ನಾಟಿತು.

(೨) ಸುಧೀರನು ಹಚ್ಚಿದ ಪತಾಕೆಗಳು ನನಗೆ ದೂರದಿಂದಲೇ ಕಂಡಿತು.

(೩) ಇಡೀ ಕಪಿಸೈನ್ಯವು ಲಂಕೆಗೆ ದಾಳಿ ಮಾಡಿದವು.

## ಸೈದ್ಧಾಂತಿಕ ಭಾಷಾಭ್ಯಾಸ

©KTBS Not to be republished

**(ಸಂಧಿ ಮುಂದುವರಿದುದು)**

**ಅನುನಾಸಿಕಸಂಧಿ**

ಅನುನಾಸಿಕ ಅಕ್ಷರಗಳಾದ **ಙ್ ಞ್ ಣ್ ನ್ ಮ್** ಗಳು ಆದೇಶವಾಗಿ ಬರುವ ಸಂಧಿಯೇ **ಅನುನಾಸಿಕ** ಸಂಧಿ.

**ಉದಾ: ವಾಕ್ + ಮಯ > ವಾಙ್ಮಯ**

**ಕ್ + ಮ್ + ಅ > ಙ್ + ಮ್ + ಅ**

ಇಲ್ಲಿ ಪೂರ್ವಪದದ ಕೊನೆಯ ಅಕ್ಷರವಾದ **'ಕ'** ಕಾರಕ್ಕೆ ಪರಪದದ ಆದಿಯಲ್ಲಿರುವ **'ಮ'** ಕಾರ ಪರವಾಗಿ ಸಂಧಿಯಾದಾಗ 'ಕ' ಕಾರದ ಬದಲಿಗೆ ಅದೇ ವರ್ಗದ ಅನುನಾಸಿಕ ಅಕ್ಷರ **'ಙ'** ಕಾರ ಆದೇಶವಾಗಿ ಬಂದಿದೆ.

**ಸೂತ್ರ : ವರ್ಗದ ಪ್ರಥಮಾಕ್ಷರಗಳಿಗೆ ಯಾವುದೇ ಅನುನಾಸಿಕ ಅಕ್ಷರಗಳು ಪರವಾದರೂ ಅವುಗಳಿಗೆ ಅಂದರೆ ವರ್ಗದ ಪ್ರಥಮಾಕ್ಷರಗಳಿಗೆ ಅದೇ ವರ್ಗದ ಅನುನಾಸಿಕ ಅಕ್ಷರಗಳು ಆದೇಶವಾಗಿ ಬಂದರೆ ಅದು ಅನುನಾಸಿಕ ಸಂಧಿ.**

**ಉದಾ: ವಾಙ್ಮಯ, ಷಣ್ಮುಖ, ಸನ್ಮಾನ.**

## ಸಮಾಸ (ಮುಂದುವರಿದುದು)

**ಕ್ರಿಯಾಸಮಾಸ**

| | | | | |
|---|---|---|---|---|
| **ಮನೆಯನ್ನು** | + | **ಕಟ್ಟಿದನು** | > | **ಮನೆಕಟ್ಟಿದನು** |
| **ಮೈಯನ್ನು** | + | **ಮರೆತು** | > | **ಮೈಮರೆತು** |
| **ಕೈಯಂ** | + | **ಪಿಡಿದು** | > | **ಕೈವಿಡಿದು** |

ಇಲ್ಲಿ ಪೂರ್ವಪದ ನಾಮಪದವಾಗಿದ್ದು ದ್ವಿತೀಯಾ ವಿಭಕ್ತಿಯಿಂದ ಕೂಡಿದ್ದು ಪರಪದವು ಕ್ರಿಯಾಪದವಾಗಿದೆ. ಕೆಲವೊಮ್ಮೆ ಪೂರ್ವಪದವು ಬೇರೆ ವಿಭಕ್ತಿಪ್ರತ್ಯಯದಿಂದಲೂ ಕೂಡಿರುವುದುಂಟು.

**ಸೂತ್ರ: ಪೂರ್ವಪದ ಹೆಚ್ಚಾಗಿ ದ್ವಿತೀಯಾ ವಿಭಕ್ತ್ಯಂತ ನಾಮಪದವಾಗಿದ್ದು ಪರಪದವು ಕ್ರಿಯಾರೂಪದಿಂದ ಕೂಡಿರುವ ಸಮಾಸವೇ ಕ್ರಿಯಾಸಮಾಸ. ಈ ಸಮಾಸಕ್ಕೆ ಅರಿಸಮಾಸ ದೋಷವಲ್ಲ.**

**ಉದಾ.: ಮೈದಡವಿ, ಕಣ್ದೆರೆ, ಬಟ್ಟೆದೋರು (ಬಟ್ಟೆ ಎಂದರೆ ದಾರಿ ಎಂದರ್ಥ).**

**ಗಮಕಸಮಾಸ**

**ಅದು + ಮನೆ > ಆ ಮನೆ**

**ಇವನು + ಮನುಷ್ಯ > ಈ ಮನುಷ್ಯ**

ಇಲ್ಲಿ ಪೂರ್ವಪದಗಳಾದ ಅದು ಮತ್ತು ಇವನು ಸರ್ವನಾಮಗಳಾಗಿದ್ದು, ಪರಪದಗಳಾದ ಮನೆ ಮತ್ತು ಮನುಷ್ಯ ನಾಮಪದಗಳಾಗಿವೆ.

**ಸೂತ್ರ : ಪೂರ್ವಪದ ಸರ್ವನಾಮ ಅಥವಾ ಕೃದಂತವಾಗಿದ್ದು, ಉತ್ತರಪದ ನಾಮಪದವಾಗಿದ್ದು ಆಗುವ ಸಮಾಸವೇ ಗಮಕಸಮಾಸ.**

**ಉದಾ.:** ಪೂರ್ವಪದ ಸರ್ವನಾಮವಾಗಿರುವುದಕ್ಕೆ –

**ಆ ಹುಡುಗ, ಆ ಕಲ್ಲು, ಈ ಮುದುಕಿ, ಈ ಬೆಕ್ಕು.**

ಪೂರ್ವಪದ ಕೃದಂತವಾಗಿರುವುದಕ್ಕೆ –

**ಮಾಡಿದಡುಗೆ, ತಿಂದಕೂಳು, ಸಿಡಿಮದ್ದು.**

©KTBS Not to be republished

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧. ಅನುನಾಸಿಕ ಸಂಧಿ ಎಂದರೇನು? ಉದಾಹರಣೆ ಕೊಡಿ.

೨. ಕ್ರಿಯಾಸಮಾಸ ಎಂದರೇನು? ಉದಾಹರಣೆ ಕೊಡಿ.

**ಆ) ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದವನ್ನು ಬರೆಯಿರಿ.**

೧. ಯ್,ರ್,ಲ್,ವ್ : ಅವರ್ಗೀಯ ವ್ಯಂಜನಗಳು :: ಙ್, ಞ್, ಣ್, ನ್, ಮ್ : ____

೨. ಷಡಂಗ : ಜಶ್ತ್ವಸಂಧಿ :: ಷಣ್ಮಾಸ : ____

೩. ಈ ಹೊನ್ನು : ಗಮಕ ಸಮಾಸ :: ಸ್ಥಾಪನೆ ಮಾಡು : ____

೪. ವಾಗ್ದೇವಿ : ಜಶ್ತ್ವಸಂಧಿ :: ಜಗಜ್ಜ್ಯೋತಿ : ____

**ಇ) ಕೊಟ್ಟಿರುವ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.**

೧. ಹಿತ್ತಲ ಗಿಡ ಮದ್ದಲ್ಲ. ೨. ದೂರದ ಬೆಟ್ಟ ನುಣ್ಣಗೆ.

## ಪೂರಕ ಓದು

೧. ಕೆ. ವಿ. ಅಯ್ಯರ್ ಅವರು ರಚಿಸಿರುವ 'ಶಾಂತಲಾ' ಕಾದಂಬರಿಯನ್ನು ಓದಿ.

೨. ಸಿ. ಕೆ. ನಾಗರಾಜರಾವ್ ಅವರು ರಚಿಸಿರುವ 'ಪಟ್ಟಮಹಾದೇವಿ ಶಾನ್ತಲಾದೇವಿ' ಕಾದಂಬರಿಯನ್ನು ಓದಿ.

©KTBS Not to be republished

# ೬. ಜನಪದ ಕಲೆಗಳ ವೈಭವ

A9L6Z9

**ಸಮಿತಿ ರಚನೆ–**

**ಪ್ರವೇಶ:** ಜನಪದ–ಕಲೆಗಳು ಮನುಷ್ಯನಷ್ಟೇ ಪ್ರಾಚೀನವಾದುವು. ಪರಿಸರ ವೀಕ್ಷಣೆ ಮತ್ತು ಅನುಕರಣೆಯಿಂದ ಅರಿತಿದ್ದನ್ನು ರೂಪಿಸಿಕೊಂಡಿರುವುದು, ಮಾನವನ ಸಹಜ ಗುಣ. ಹಾಗಾಗಿ ಇಂಥ ಕಲೆಗಳು ಅಸ್ತಿತ್ವಕ್ಕೆ ಬಂದವು. ಕಲೆ ಮನಸ್ಸಿಗೆ ನೆಮ್ಮದಿ, ಸಂತೋಷ ನೀಡುವುದಲ್ಲದೆ ಮುಂದಿನ ಪೀಳಿಗೆಗೆ ಆಕರವಾಗುತ್ತವೆ. ಜನಪದ ಸಂಸ್ಕೃತಿಯ ಪ್ರತಿ ಹೆಜ್ಜೆಯಲ್ಲೂ ಜನಪದ–ಕಲೆಗಳನ್ನು ಕಾಣಬಹುದು. ಜನಪದರ ಬದುಕೇ ಒಂದು ಕಲೆ. ಮುಗ್ಧ ಜನರಿಗೆ ತಿಳಿದೋ, ತಿಳಿಯದೆಯೋ ಅವರ ಬದುಕಿನಲ್ಲಿ ಕಲೆ ಹಾಸುಹೊಕ್ಕಾಗಿದೆ. ಜನಪದ ಕಲೆಗಳಿಗೂ ಜೀವನಕ್ಕೂ ನಿಕಟ ಸಂಬಂಧವಿದೆ. ನಿತ್ಯ ದುಡಿಮೆಯ ಆಯಾಸ, ಬದುಕಿನ ಏಕತಾನತೆ, ಆಸರಿಕೆ–ಬೇಸರಿಕೆಯನ್ನು ನಿವಾರಿಸಿಕೊಳ್ಳಲು ಮನುಷ್ಯ–ಕಲೆಗಳ ಮೊರೆ ಹೋಗಿದ್ದಾನೆ. ಇವನ್ನು ಜತನವಾಗಿ ರಕ್ಷಿಸಿ ಬೆಳೆಸಿಕೊಂಡು ಬಂದಿದ್ದಾನೆ. ಪ್ರಾರಂಭದಲ್ಲಿ ಆಂಗಿಕ ಸಂಜ್ಞೆಗಳಿಂದ ಕೂಡಿದ ಕಲೆಗಳು ಕ್ರಮೇಣ ಚಿತ್ರ, ಶಿಲ್ಪ, ಹಾಡು, ಕುಣಿತ ಮೊದಲಾದ ಆಯಾಮಗಳನ್ನು ಪಡೆದುಕೊಂಡಿವೆ. ಜನಪದ ನೃತ್ಯಗಳು ಕರ್ನಾಟಕದಾದ್ಯಂತ ಪ್ರಚಲಿತವಿದ್ದು ನಲವತ್ತಕ್ಕೂ ಹೆಚ್ಚು ಪ್ರಕಾರಗಳು ರೂಢಿಯಲ್ಲಿವೆ. ಕೆಲವು ಪ್ರಾದೇಶಿಕವಾಗಿ ಪ್ರಚಲಿತವಿದ್ದು ಜನಪ್ರಿಯತೆ ಪಡೆದಿವೆ.

©KTBS Not to be republished

**ವೀರಗಾಸೆ**

ವೀರಗಾಸೆ ಶೈವ ಸಂಪ್ರದಾಯದ ಧಾರ್ಮಿಕ ವೀರನೃತ್ಯ. ಸಾಮೂಹಿಕ ನೃತ್ಯವನ್ನೊಳಗೊಂಡ ಕರ್ನಾಟಕದ ಜನಪದ ಕಲೆ. ಇಬ್ಬರಿಂದ ಮೂವತ್ತು ಮಂದಿ ಇದರಲ್ಲಿ ಭಾಗವಹಿಸುತ್ತಾರೆ. ಪಂಚವಾದ್ಯಗಳಾದ ತಾಳ, ಶ್ರುತಿ, ಚಮಾಳ, ಓಲಗ, ಕರಡೆ ಬಳಕೆಯಾಗುತ್ತವೆ. ಕರಡೆಯು ಕುಣಿತದಲ್ಲಿ ಅನಿವಾರ್ಯ ವಾದ್ಯ ಎನಿಸಿದೆ.

ವೀರಗಾಸೆ ಕುಣಿತದವರ ವೇಷಭೂಷಣ ವಿಶೇಷವಾಗಿರುತ್ತದೆ. ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಶಿಣ ಅಥವಾ ನೀಲಿ ಬಣ್ಣದ ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಸರ, ಹಣೆಗೆ ವಿಭೂತಿ, ಕರ್ಣಕುಂಡಲ, ಸೊಂಟಪಟ್ಟಿ, ಬಿಚ್ಚುಗತ್ತಿ, ಕಾಲ್ಗೆಜ್ಜೆ ಧರಿಸುತ್ತಾರೆ.

"ಅಹಹಾ ರುದ್ರಾ ಅಹಹಾ ದೇವಾ" ಎಂದು ವೀರಗಾಸೆಯ ನರ್ತಕ ಹೇಳುವ ಒಡಪಿನೊಂದಿಗೆ ಕುಣಿತ ಪ್ರಾರಂಭವಾಗುತ್ತದೆ. ಈ ಕುಣಿತದಲ್ಲಿ ವೀರಭದ್ರ ಹುಟ್ಟಿದ ಸಂದರ್ಭದ ವರ್ಣನೆ ಹೀಗಿದೆ. "ವೀರಭದ್ರದೇವರು ಹುಟ್ಟಿದ ರೂಪ ಎಂತು ಎಂದೊಡೆ ಹುಟ್ಟಿದಾಗಲೆ ಹೂವಿನಗಾಸೆ, ಮಂಜುಳಗಾಸೆ, ಬ್ರಹ್ಮಗಾಸೆ, ವಿಷ್ಣುಗಾಸೆ, ರುದ್ರಗಾಸೆ, ಮೆಟ್ಟಿದ ಹೊನ್ನಾವಿಗೆ, ಸಾವಿರ ಶಿರ, ಮೂರುಸಾವಿರ ನಯನ, ಎರಡುಸಾವಿರ ಭುಜ, ಕೆಕ್ಕರಿಸಿದ ಕಣ್ಣು, ಜುಂಜುಮಂಡೆ ಇಂತಪ್ಪ ಶ್ರೀ ವೀರಭದ್ರದೇವರು ಹೋಮದ ಕುಂಡದ ಒಳಗೆ ಹೇಗೆ ಬರುತ್ತಾರೆಂದರೆ . . . . . ."



ಚಮಾಳ ಹಾಗೂ ಕರಡೆಯ ಬಡಿತ ಇವರ ಕುಣಿತಕ್ಕೆ ಸ್ಫೂರ್ತಿ ನೀಡುತ್ತವೆ. ನಾಲ್ಕೈದು ಗತಿಗಳಿರುವ ವೀರಗಾಸೆಯ ಕುಣಿತದಲ್ಲಿ ಒಂದೊಂದು ಗತಿಯ ಕುಣಿತದ ಆನಂತರ ಮತ್ತೊಬ್ಬ ನರ್ತಕ ಒಡಪು ಹೇಳುತ್ತಾನೆ. ಒಡಪು ಮುಗಿಯುತ್ತಿದ್ದಂತೆ ವಾದ್ಯಗಳ ಭೋರ್ಗರೆತದೊಂದಿಗೆ ಮುಂದಿನ ಗತಿಯ ಕುಣಿತ ಪ್ರಾರಂಭವಾಗುತ್ತದೆ. ಗತಿಯಿಂದ ಗತಿಗೆ, ಕುಣಿತ, ಬಡಿತಗಳ ವೇಗ ಹೆಚ್ಚುತ್ತಾ ಹೋಗುತ್ತದೆ.

ವೀರಭದ್ರನ ಕುಣಿತ ಒಬ್ಬ ವ್ಯಕ್ತಿಯ ಕುಣಿತ. ವೀರಗಾಸೆ ಸಾಮೂಹಿಕ ನೃತ್ಯ. ವೀರಭದ್ರ ಕುಣಿತಕ್ಕೆ ದಕ್ಷಿಣಕರ್ನಾಟಕ ಪ್ರದೇಶದಲ್ಲಿ ಲಿಂಗಬೀರ, ಲಿಂಗಧೀರ, ಲಿಂಗವೀರ ಕುಣಿತವೆಂದು ಹೆಸರಿದೆ. ಉತ್ತರ ಕರ್ನಾಟಕದಲ್ಲಿ ಪುರವಂತರ ಕುಣಿತವೆಂದು ಜನಪ್ರಿಯವಾಗಿದೆ. ವೀರಶೈವ ಸಂಪ್ರದಾಯದವರು ವಂಶಪಾರಂಪರ್ಯವಾಗಿ ಈ ವೃತ್ತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ವೀರಭದ್ರ ವೇಷಧಾರಿ ದಕ್ಷಯಾಗ, ವೀರಭದ್ರನ ಜನನ ಮತ್ತು ವೀರಭದ್ರನ ವಿಜಯ ಮುಂತಾದ ಒಡಪುಗಳನ್ನು ಹೇಳುತ್ತಾನೆ. ಇದಕ್ಕೆ 'ಖಡ್ಗ' ಎಂದು ಕರೆಯುತ್ತಾರೆ. ಉತ್ತರಕರ್ನಾಟಕದಲ್ಲಿ 'ಒಡಪು' ಎನ್ನುವರು. ಮತ್ತೊಬ್ಬ ವ್ಯಕ್ತಿ "ಭಲರೇ ವೀರ, ಅಹಹಾ ವೀರ" ಎಂದು ಕಾಕು ಹೇಳುತ್ತ ಜಾಗಟೆ ಬಡಿಯುತ್ತ ನಿಧಾನವಾಗಿ ವೀರಭದ್ರನ ಸುತ್ತ ತಿರುಗುತ್ತಾನೆ.

ಸಾಮಾನ್ಯವಾಗಿ ಮದುವೆ, ಗೃಹಪ್ರವೇಶ, ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳಲ್ಲಿ ವೀರಭದ್ರನ ಕುಣಿತ ಏರ್ಪಡಿಸುತ್ತಾರೆ. ವೀರಗಾಸೆ ಸಾಮಾಜಿಕ ಸಂದರ್ಭಗಳಲ್ಲಿ ಮನರಂಜನೆಗಾಗಿಯೂ ಬಳಕೆಯಾಗುತ್ತಿದೆ. ಕುಣಿತ ನೋಡುವವರಿಗೆ ರೋಮಾಂಚನವನ್ನುಂಟು ಮಾಡುತ್ತದೆ.

©KTBS Not to be republished

**ಕಂಸಾಳೆ**



**ಕೂಗೋ ಕೂಗೋ ಮಾದೇವನ**
**ಕೂಗಯ್ಯ ದುಂಡು ಮಾದೇವನ**
**ಕೂಗಿದರೆ ಕುಣಿಯುತ್ತ ಬರುವನು**
**ಮಾದೇವ**
**ಕೂಗಯ್ಯ ಮುದ್ದು ಮಾದೇವನ**

ದಕ್ಷಿಣಕರ್ನಾಟಕದ ಜನ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮಹದೇಶ್ವರನ ಕಾವ್ಯವನ್ನು ಹೀಗೆ ಹಾಡುತ್ತ ಕಂಸಾಳೆಯೊಂದಿಗೆ ಕುಣಿಯುತ್ತ ಮಹದೇಶ್ವರನ ಬೆಟ್ಟಕ್ಕೆ ಹೋಗುವುದು ವಾಡಿಕೆ. ಕಂಸಾಳೆಯು ಮಲೆಯ ಮಹದೇಶ್ವರನ ಭಕ್ತರಾದ ದೇವರ ಗುಡ್ಡರು ಎಂಬ ಧಾರ್ಮಿಕ ವೃತ್ತಿಗಾಯಕರು ಬಳಸುವ ಕಂಚಿನ ತಾಳಗಳು. ಇದೊಂದು ಧಾರ್ಮಿಕ ಜನಪದವಾದ್ಯ. ಕಾಂಸತಾಲ್ಯ ಎಂಬ ಪದದ ತದ್ಭವ ರೂಪವೇ ಕಂಸಾಳೆ. ದೇವರ ಗುಡ್ಡರು ಇದನ್ನು ಬಿರುದು ಎಂದು ಕರೆಯುವರು. ಸಾಧಾರಣ ಬಟ್ಟು ತಾಳಗಳಿಗಿಂತ ಕಂಸಾಳೆ ಗಾತ್ರದಲ್ಲಿ ದೊಡ್ಡದು. ಆಕೃತಿಯಲ್ಲಿ ವಿಶಿಷ್ಟವಾದುದು. ಅಂಗೈ ಅಗಲದ ಚಕ್ರಾಕಾರದ ಬಟ್ಟಲು ಚಿಕ್ಕ ಜಾಗಟೆಯಂತಿರುವ ಮಟ್ಟಸವಾದ ಮೇಲುತಾಳ. ಮೇಲುತಾಳಕ್ಕೆ ಸೇರಿದಂತೆ ಹಿಡಿದುಕೊಳ್ಳಲು ಮಾಡಿಕೊಂಡ ಗೊಂಡೇವದ ಕಲಾತ್ಮಕ ಹುರಿ, ಇವು ಕಂಸಾಳೆಯ ಮುಖ್ಯ ಭಾಗಗಳು. ಬಟ್ಟಲನ್ನು ಮೇಲು ಮುಖವಾಗಿ ಎಡ ಅಂಗೈ ಮೇಲೆ ಇರಿಸಿಕೊಂಡು ಬಲಗೈಯಲ್ಲಿ ಹಿಡಿದ ಮೇಲುತಾಳವನ್ನು ಅದರ ಮೇಲೆ ಕುಟ್ಟುತ್ತಾರೆ. ಈ ನಾದದ ಹಿನ್ನೆಲೆಯಲ್ಲಿ ಗುಡ್ಡರು ಹಾಡುತ್ತಾರೆ. ವೃತ್ತಿಗಾಯಕರು ಬಳಸುವ ವಾದ್ಯಗಳಲ್ಲೆಲ್ಲ ಕಾಣಿಕೆ ಪಡೆಯುವ ಪಾತ್ರೆಯಾಗಿಯೂ ಬಳಕೆಯಾಗುವ ಏಕಮಾತ್ರ ಸಾಧನ ಕಂಸಾಳೆ. ಗುಡ್ಡರು ಕಾಣಿಕೆಯನ್ನು ಸ್ವೀಕರಿಸುವಾಗ ಕಂಸಾಳೆಯ ಬಟ್ಟಲನ್ನು ಮಾತ್ರ ಮುಂದೆ ಒಡ್ಡಿ ಪಡೆದು ಅನಂತರ ಜೋಳಿಗೆಗೆ ಸುರಿದುಕೊಳ್ಳುತ್ತಾರೆ. ಇದೊಂದು ಪವಿತ್ರ ಸಾಧನವಾದುದರಿಂದ ಅರ್ಪಿಸುವ ಕಾಣಿಕೆ ಮಲೆಯ ಮಹದೇಶ್ವರನಿಗೆ ಸಮರ್ಪಿತವಾದಂತೆಯೇ ಎಂಬ ಭಾವನೆ ಗುಡ್ಡನಿಗೂ ದಾನಿಗೂ ಇರುತ್ತದೆ. ಕಂಸಾಳೆಯ ಮಹಿಮೆ ಅಪಾರ ಎಂದು ಭಾವಿಸುವ ಗುಡ್ಡರು ಅದನ್ನು ಪೂಜಿಸುತ್ತಾರೆ. ಕೈಗೆತ್ತಿಕೊಳ್ಳುವ ಮೊದಲು "ಏಳ್ಮಲೆ ಹೆತ್ತಯ್ಯ ನಮ್ಮಪ್ಪಾಜಿ ಮಾಯ್ಕಾರ ಮಾದೇವ ನಿನ್ನ ಪಾದವೇ ಗತಿಕಣಪ್ಪ ಶರಣು ಶರಣಾರ್ಥಿ" ಎಂದು ನಮಸ್ಕರಿಸಿ ಕಣ್ಣಿಗೊತ್ತಿಕೊಂಡು ಅನಂತರ ಬಾರಿಸಲು ಪ್ರಾರಂಭಿಸುವರು.

©KTBS Not to be republished

ಭಜನೆ ಹಾಗೂ ಜಾತ್ರೆಗಳ ಸಂದರ್ಭದಲ್ಲಿ ಬಿಡಿ ಹಾಡುಗಳನ್ನು ಹೇಳಿಕೊಳ್ಳಲು ಮಾತ್ರವಲ್ಲದೆ ವಿಶೇಷ ಸಂದರ್ಭ ಹಾಗೂ ಹಬ್ಬ ಆಚರಣೆಗಳಲ್ಲಿ ಮೇಳವನ್ನು ನಡೆಸಲು ಹಾಗೂ ಬೀಸುಕಂಸಾಳೆ ನೃತ್ಯದಲ್ಲಿ ಹಾಡಲು, ಕುಣಿಯಲು ಕಂಸಾಳೆಯನ್ನು ಬಳಸುತ್ತಾರೆ. ಸಾಮಾನ್ಯವಾಗಿ ದೇವರ ಗುಡ್ಡರು ಸಾಂಪ್ರದಾಯಿಕವಾದ ವೇಷಭೂಷಣಗಳನ್ನು ಧರಿಸಿ, ಎತ್ತರವಾದ ರಂಗದಲ್ಲಿ ಕುಳಿತು ಕಥೆ ಮಾಡುತ್ತಾರೆ. ಇದನ್ನು ನಡೆಸಲು ಕೊನೇ ಪಕ್ಷ ಮೂವರು ಗುಡ್ಡರಾದರೂ ಇರಬೇಕು. ಮೇಳದಲ್ಲಿ ಏಕತಾರಿ, ದಮ್ಮಡಿಗಳನ್ನು ಹಿಮ್ಮೇಳದವರು ಬಳಸುತ್ತಾರೆ. ಮುಖ್ಯ ಗುಡ್ಡ, ಮುಮ್ಮೇಳಗಾರ ಕಂಸಾಳೆಯನ್ನು ಹಿಡಿಯುವರು. ಉಳಿದವರು ತಾಳದ ಗತ್ತಿಗೆ ತಕ್ಕಂತೆ ವಿವಿಧ ಮಟ್ಟುಗಳಲ್ಲಿ ಹಾಡುತ್ತಾರೆ. ಗತ್ತಿಗೆ ತಕ್ಕಂತೆ ತಾಳಕ್ಕೆ ಅನುಗುಣವಾಗಿಯೇ ಕಥೆಯನ್ನು ಪದ್ಯರೂಪದಲ್ಲಿ ನಡುನಡುವೆ ವಿಶೇಷವಾಗಿ ವಚನದಲ್ಲಿ ನಿರೂಪಿಸಲಾಗುತ್ತದೆ. ಇದು ವಿಶಿಷ್ಟವಾದ ಪದ್ಯಗಂಧಿಯಾದ ಗದ್ಯ. ವಚನವನ್ನು ಪ್ರಧಾನ ಗಾಯಕ ನಿರೂಪಿಸುತ್ತಿರುವಾಗ ಅದರ ಪ್ರತಿ ಸಾಲಿನ ಅಂತ್ಯದಲ್ಲಿ ಸೊಲ್ಲಿನವರು “ಹೌದು, ಹೌದೌದು, ಶಿವಶಿವಾ, ಮಾದೇವ, ಹುಂ” ಮುಂತಾಗಿ ದನಿ ಕೊಡುತ್ತಿದ್ದು ಇದು ಕಥಾವಾಹಿನಿ ನಿರರ್ಗಳವಾಗಿ ಹರಿಯಲು ಪೋಷಕವಾಗಿರುತ್ತದೆ. ಒಂದೊಂದು ಪುಟ್ಟ ಪಾದದ ಅಂತ್ಯದಲ್ಲಿ ಕಂಸಾಳೆಯನ್ನು ಬಾರಿಸುತ್ತ ಕಥಾ ನಿರೂಪಣೆಗೆ ಚೈತನ್ಯವನ್ನು ತುಂಬಿಕೊಳ್ಳುವರು. ಹೆಜ್ಜೆ ಹೆಜ್ಜೆಗೂ ಕಂಸಾಳೆಯ ಮಿಡಿತ ಅದರ ಜತೆಯಲ್ಲಿ ಸಾಗುವ ವಿಸ್ತಾರ ಗದ್ಯಕಥನ ಆಕರ್ಷಕ ಹಾಗೂ ಮನಮೋಹಕ.

ದೇವರ ಗುಡ್ಡರು ಜನಪದ ಮಹಾಕಾವ್ಯಗಳಲ್ಲೊಂದಾದ ಮಲೆಯ ಮಹದೇಶ್ವರನ ಕಥೆಯನ್ನು ಪ್ರಧಾನವಾಗಿ ಹಾಡುತ್ತಾರೆ. ಇದಲ್ಲದೆ ಪಿರಿಯಾಪಟ್ಟಣದ ಕಾಳಗ, ಸಾರಂಗಧರ, ಬಿಳಿಗಿರಿ ರಂಗಸ್ವಾಮಿ, ಬೆಟ್ಟದ ಚಾಮುಂಡಿ, ಬಾಲನಾಗಮ್ಮ, ಮುಡುಕುತೊರೆ ಮಲ್ಲಪ್ಪ, ಕೋಳೂರ ಕೊಡಗೂಸು ಮೊದಲಾದ ಲೌಕಿಕ, ಧಾರ್ಮಿಕ ಹಾಗೂ ಐತಿಹಾಸಿಕ ಕಾವ್ಯಗಳನ್ನು ಹಾಡುತ್ತಾರೆ. ಮಂಟೇಸ್ವಾಮಿ ಕಾವ್ಯವನ್ನು ಅದರಲ್ಲೂ ಸಿದ್ದಪ್ಪಾಜಿಗೆ ಸಂಬಂಧಿಸಿದ ಭಾಗವನ್ನು ಕಂಸಾಳೆ ಗತ್ತಿಗೆ ಅಳವಡಿಸಿಕೊಂಡು ಹಾಡುತ್ತಾರೆ.

ಬೀಸುಕಂಸಾಳೆ ದೇವರಗುಡ್ಡರ ವಿಶಿಷ್ಟ ನೃತ್ಯ. ಕರ್ನಾಟಕದ ಜನಪದ ನೃತ್ಯಗಳಲ್ಲಿ ಅಪೂರ್ವವಾದುದು. ಇದರಲ್ಲಿ ತಾರ್‌ಬಟ್ಲು, ತಟ್‌ಬಟ್ಲು ಮುಂತಾದ ಬಗೆಗಳಿವೆ. ನಾಲ್ಕು ಮಂದಿ ಗುಡ್ಡರು ಒಂದು ಕಡೆ ನಿಂತು ಲಿಂಗ ಬಾ, ಮುದ್ದುಲಿಂಗ ಬಾ, ನಮ್ಮ ಮುದ್ದು ಮಾದಯ್ಯನ ಲಿಂಗ ಬಾ ಎಂದು ಹಾಡುತ್ತಾರೆ. ಕಂಸಾಳೆ ಹಿಡಿದ ಗುಡ್ಡ ತಾಳಕ್ಕೆ ತಕ್ಕಂತೆ ವಿವಿಧ ವಿನ್ಯಾಸದಲ್ಲಿ ಬಾರಿಸುತ್ತ ಕುಣಿಯುತ್ತಾನೆ. ತಲೆಯ ಮೇಲೆ, ಬೆನ್ನ ಹಿಂದೆ, ಕಾಲ ಕೆಳಗೆ, ಕುಳಿತು, ನಿಂತು, ಬಾಗಿ, ಬಳುಕಿ ತೀವ್ರಗತಿಯಲ್ಲಿ ನರ್ತಿಸುವ ಭಂಗಿ ಆಶ್ಚರ್ಯಕರ ಹಾಗೂ ಅದ್ಭುತ. ಒಮ್ಮೊಮ್ಮೆ ಇಬ್ಬರು ಗುಡ್ಡರು ಕಲೆತು ನರ್ತಿಸುವುದುಂಟು. ಒಬ್ಬರ ಕಂಸಾಳೆಗೆ ಮತ್ತೊಬ್ಬರು ಕುಟ್ಟುತ್ತಾ ಕುಣಿಯುವ ವೈಖರಿ ಆಕರ್ಷಕವಾಗಿರುತ್ತದೆ.

## ಡೊಳ್ಳುಕುಣಿತ

ಡೊಳ್ಳುಕುಣಿತ ಜನಪದ ಕಲೆಗಳಲ್ಲಿ ವಿಶಿಷ್ಟವಾದುದು. ಇದು ವಾದ್ಯ ಪ್ರಧಾನ ಕಲೆ. ಬೀರೇಶ್ವರ ಸಂಪ್ರದಾಯಕ್ಕೆ ಸೇರಿದ ಹಾಲುಮತ ಸಮುದಾಯದ ಕುಣಿತ. 'ಡೊಳ್ಳು' ಚರ್ಮವಾದ್ಯ. ಪೊಳ್ಳು ಪಡಗದ ಎರಡೂ ಬಾಯಿಗಳಿಗೆ ತೊಗಲು ಹೊದಿಸಿದ ಎರಡು ಪರಡೆಗಳನ್ನಿಟ್ಟು ಹಗ್ಗದಿಂದ ಬಿಗಿದಿರುತ್ತಾರೆ. ಇದನ್ನು ಎರಡೂ ಕೈಗಳಿಂದ ಬಾರಿಸಬಹುದು. ಬಲಗೈಯಲ್ಲಿ ಬಾರಿಸುವ 'ಗುಣಿ' ಇರುತ್ತದೆ. ಗುಣಿಯಿಂದ

©KTBS Not to be republished

ಬಾರಿಸಿದ ಗತಿಗೆ ಹೊಂದಿಕೆಯಾಗುವಂತೆ ಎಡಗೈಯಿಂದ ಛಾಪು ಹಾಕಲಾಗುತ್ತದೆ. ಭರಮದೇವರ ಬ್ರಹ್ಮಪಲ್ಲಕ್ಕಿ ಉತ್ಸವ ಕಾಲಕ್ಕೆ ಡೊಳ್ಳು ಬಾರಿಸುತ್ತಾರೆ. ಸಾಮಾನ್ಯವಾಗಿ ಡೊಳ್ಳು ಬಾರಿಸುವವರು ದೇಹದ ಮೇಲುಭಾಗಕ್ಕೆ ಕರಿಯ ಕಂಬಳಿಯನ್ನೂ ಸೊಂಟದ ಭಾಗಕ್ಕೆ ಮೊಳಕಾಲು ಮೇಲೆ ಬರುವಂತೆ ಕಚ್ಚೆಪಂಚೆಯನ್ನೂ ಉಡುತ್ತಾರೆ. ಕೆಲವೊಮ್ಮೆ ಹುಲಿಯ ಚರ್ಮದ ರೀತಿಯ ಉಡುಪನ್ನೂ ಧರಿಸುತ್ತಾರೆ.



ಕುಣಿತದ ಕಾಲಕ್ಕೆ ವಾದ್ಯಗಾರರು ಹಸಿರು ಇಲ್ಲವೇ ಕೆಂಪು ಬಣ್ಣದ ಗಗ್ಗರಿ, ಅಂಗಿ ಟೊಪ್ಪಿಗೆ ತೊಡುವರು. ಎರಡೂ ಕೈಗಳಲ್ಲೂ ಅದೇ ಬಣ್ಣದ ಕರವಸ್ತ್ರ ಹಿಡಿದಿರುತ್ತಾರೆ. ಕುಣಿತಕ್ಕೆ ಹಿನ್ನೆಲೆಯಾಗಿ ಡೊಳ್ಳು, ತಾಳ ಮತ್ತು ಕೊಳಲು ಇರುತ್ತವೆ. ಶ್ರಾವಣ ಸೋಮವಾರ, ಅಮಾವಾಸ್ಯೆಯ ದಿನ ಮತ್ತು ಯುಗಾದಿಯಂದು ಪಲ್ಲಕ್ಕಿ ಉತ್ಸವದ ತರುವಾಯ ಭರಮದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ನಡೆಯುತ್ತದೆ. ಅದರಂತೆ ಭಕ್ತರು ದೇವರ ಮುಮ್ಮೇಳದವರಾಗಿ ಒಬ್ಬರು ಡೊಳ್ಳು ಬಾರಿಸುತ್ತ ಹಾಡು ಹೇಳುತ್ತಾರೆ. ಹಿಮ್ಮೇಳದಲ್ಲಿ ಹಲವರು ತಾಳ ಮತ್ತು ಕೊಳಲು ಬಾರಿಸುತ್ತ ಮುಮ್ಮೇಳದವರು ಹೇಳಿಕೊಟ್ಟ ಹಾಡಿನ ಭಾಗವನ್ನು ಹೇಳುತ್ತಾರೆ. ಸಾಮಾನ್ಯವಾಗಿ ಹಾಡಿನ ವಿಷಯ ದೈವಮಹಿಮೆ ಅಥವಾ ದೈವಭಕ್ತರ ಕಥೆಯಾಗಿರುತ್ತದೆ. ಈ ಕಥನ ಕವನಕ್ಕೆ ರಗಳೆಯೇ ತಕ್ಕ ಧಾಟಿ. ಡೊಳ್ಳಿನ ಹಾಡು ಹೀಗೆ ಆರಂಭವಾಗುತ್ತದೆ:

**ಸ್ವಾಮಿ ನಮ್ಮಯ ದೇವರು ಬಂದಾನ ಬನ್ನಿರೇ**
**ಗುರುವೇ ನಮ್ಮಯ ದೇವರು ಬಂದಾನ ಬನ್ನಿರೇ**

ಬೀರೇಶ್ವರಹಾಡು ಬಹಳ ಹಿಂದಿನಿಂದಲೂ ಭಕ್ತರು ಮೌಖಿಕವಾಗಿ ಜತನವಾಗಿ ಕಾಯ್ದುಕೊಂಡು ಬಂದಿರುವ ಉತ್ತಮ ಕಾವ್ಯಗೀತೆ. ಡೊಳ್ಳಿನ ಹಾಡುಗಳು, ಬಾಳೇ ಮುಖ್ಯವೆಂದೂ ಅದಕ್ಕೆ ಬೀರದೇವರೇ ಬೆನ್ನಾಧಾರವೆಂದೂ ಸಾರಿ ಸಕಲ ಜನರಿಗೆ ಸುಖವಾಗಲೆಂದೂ ಸಂದೇಶ ನೀಡುತ್ತವೆ.

ಡೊಳ್ಳು ಕುಣಿತದಲ್ಲಿ ಹಲವಾರು ಕಸರತ್ತುಗಳೇ ಅಲ್ಲದೆ, ಕುದುರೆಕುಣಿತ, ಕೋಲುಕುಣಿತ, ಸಾರು ಕುಣಿತ, ಹುಚ್ಚೆಳ್ಳುಬಡಿತ, ಕೈಬಾರಿಕೆ, ಒಂದ್ಹೆಜ್ಜೆ, ಎರಡ್ಹೆಜ್ಜೆಕುಣಿತ, ಜೋಡುಸಾಲಿನ ಜಗ್ಗಿನ ಕೈಯಿ – ಮೊದಲಾದ ವೈವಿಧ್ಯಮಯ ಕುಣಿತಗಳಿವೆ. ಬೀರಪ್ಪನ ಡೊಳ್ಳು ಎಂದೇ ಬೆಳೆದು ಬಂದ ಈ ಅದ್ಭುತ ಪ್ರದರ್ಶನ ಕಲೆ ಇಂದು ಧಾರ್ಮಿಕತೆಯ ಆವರಣದಿಂದ ಹೊರಬಂದು ಲೌಕಿಕ ಉತ್ಸವಗಳಿಗೆ ತೆರೆದುಕೊಂಡಿದೆ.

©KTBS Not to be republished



## ಯಕ್ಷಗಾನ

ಯಕ್ಷಗಾನ ನೃತ್ಯಪ್ರಧಾನ ಕಲೆ. ಪ್ರಾರಂಭದಲ್ಲಿ ದೇಸೀ ಕಲೆಯಾಗಿದ್ದು ಅನಂತರ ಶಾಸ್ತ್ರದ ಚೌಕಟ್ಟಿಗೆ ಒಳಪಟ್ಟಿದೆ. ಇದು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುವ ಅಪೂರ್ವ ಶಕ್ತಿಯುಳ್ಳ ಕಲೆ. ಯಕ್ಷಗಾನದಲ್ಲಿ ಪ್ರಾದೇಶಿಕ ಪ್ರಭೇದಗಳಿವೆ. ಅದರಲ್ಲಿ ಮುಖ್ಯವಾದ ಮೂರು ಶೈಲಿಗಳು ತೆಂಕುತಿಟ್ಟು, ಬಡಗುತಿಟ್ಟು ಮತ್ತು ಬಡಬಡಗುತಿಟ್ಟು. ಯಕ್ಷಗಾನಕ್ಕೆ ದಶಾವತಾರ, ಬಯಲಾಟ, ಭಾಗವತರಾಟ ಎಂಬ ಹೆಸರೂ ಇವೆ. ಸಾಮಾನ್ಯವಾಗಿ ಬಯಲಾಟ ಪ್ರದರ್ಶಿತವಾಗುವುದು ಹಳ್ಳಿಯ ಬಯಲಿನಲ್ಲಿ. ಆದ್ದರಿಂದ ಅದು ಬಯಲಾಟ. ಯಕ್ಷಗಾನ ಕಲಿಸುವವನೇ ಭಾಗವತನಾದ್ದರಿಂದ ಭಾಗವತರಾಟ ಎಂಬ ಹೆಸರು ಬಂದಿದೆ.

©KTBS
Not to be republished

ಗೀತ, ಕುಣಿತ, ವೇಷಭೂಷಣ, ಮಾತುಗಾರಿಕೆ, ವಾದ್ಯ ಇವು ಬಯಲಾಟದ(ಮ್ಯಾಳ ಅಥವಾ ಅಟ್ಟದಾಟ) ಪಂಚ ಅಂಗಗಳು.

ಆಟ ಆಡಿಸುವ ಸ್ಥಳ ರಂಗಸ್ಥಳ. ಆರಂಭದ ಕಾಲದಲ್ಲಿ ಬಿದಿರು ಅಥವಾ ಕಂಬಗಳನ್ನು ಕಟ್ಟಿ ಮಾವಿನ ತೋರಣಗಳಿಂದ ಅಲಂಕರಿಸುತ್ತಿದ್ದರು. ಈಗ, ಸಿದ್ಧಪಡಿಸಿದ ರಂಗಸ್ಥಳದಲ್ಲಿ ಪ್ರದರ್ಶನ ನಡೆಸುವರು. ಹಿಮ್ಮೇಳದವರಿಗೆ ಆಸನ ವ್ಯವಸ್ಥೆ ಇರುತ್ತದೆ. ತೆಂಕುತಿಟ್ಟಿನ ಚಂಡೆ ವಾದಕನಿಗೆ ಆಸನ ವ್ಯವಸ್ಥೆಯಿರುವುದಿಲ್ಲ. ಪಾತ್ರಧಾರಿಗಳಿಗೆ ಒಂದು ಸಿಂಹಾಸನವಿರುತ್ತದೆ. ಬಡಗುತಿಟ್ಟಿನಲ್ಲಿ ಇದರ ಬದಲಿಗೆ ರಥದ ಆಕೃತಿಯ ಆಸನವನ್ನು ಸಾಂಪ್ರದಾಯಿಕವಾಗಿ ಬಳಸುತ್ತಿದ್ದರು. ಹಿಮ್ಮೇಳದ ಪ್ರಮುಖ ವಾದ್ಯ ಪರಿಕರಗಳೆಂದರೆ, ಚಂಡೆ, ಮದ್ದಳೆ, ಶ್ರುತಿ, ತಾಳ ಅಥವಾ ಜಾಗಟೆ. ಯಕ್ಷಗಾನದಲ್ಲಿ ಬಳಸುವ ವೇಷಭೂಷಣಗಳು ತಿಟ್ಟು ಮತ್ತು ಪಾತ್ರಕ್ಕನುಗುಣವಾಗಿ ವೈವಿಧ್ಯಮಯವಾಗಿರುತ್ತವೆ. ತೆಂಕಿನಲ್ಲಿ ಅರ್ಥಗಾರಿಕೆಗೆ ಪ್ರಾಧಾನ್ಯ ಇದ್ದು, ದೊಡ್ಡ ದೊಡ್ಡ ಹೆಜ್ಜೆ ಹಾಕಿ ಗಿರಕಿ ಹೊಡೆಯುವುದು ಇದರ ವೈಶಿಷ್ಟ್ಯ. ಬಡಗಿನಲ್ಲಿ ಕುಣಿತ ಹಾಗೂ ಅಭಿನಯಕ್ಕೆ ಪ್ರಾಧಾನ್ಯ ಇದ್ದು, ಚಕ್ರಮಂಡಿ ಕುಣಿತವಿರುತ್ತದೆ. ಹಾಡುಗಾರಿಕೆ ಹಾಗೂ ಕುಣಿತ ಯಕ್ಷಗಾನದ ಪ್ರಮುಖ ಅಂಗಗಳು. ಕುಣಿತಕ್ಕೆ ತಕ್ಕಂತೆ ಅಭಿನಯ, ಜಿಗಿತ, ಸಂಭಾಷಣೆ, ಹುಬ್ಬುಗಳ ಚಲನೆ

ಪ್ರೇಕ್ಷಕರನ್ನು ತನ್ಮಯಗೊಳಿಸುತ್ತದೆ. ಇದರಲ್ಲಿ ನವರಸಗಳ ಅಭಿವ್ಯಕ್ತಿಗೆ ಅವಕಾಶವಿದೆ. ರಾಮಾಯಣ, ಮಹಾಭಾರತ ಮತ್ತು ಭಾಗವತದ ಪ್ರಸಂಗಗಳನ್ನು ಆಡಲಾಗುತ್ತದೆ. ಸಾಮಾನ್ಯವಾಗಿ ಕಾಳಗ, ಸಂಹಾರ ಮತ್ತು ಕಲ್ಯಾಣಗಳಿಗೆ ಸಂಬಂಧಪಟ್ಟ ಪ್ರಸಂಗಗಳೇ ಹೆಚ್ಚು. ಕಾಳಗವಿಲ್ಲದೆ ಯಕ್ಷಗಾನವಾಗಲೀ ಬಯಲಾಟವಾಗಲೀ ಇಲ್ಲ.

ರಂಗಸ್ಥಳ ಸಮೀಪವಿರುವ ನೇಪಥ್ಯವೇ ಚೌಕಿ ಅಥವಾ ಬಣ್ಣದ ಮನೆ. ಭಾಗವತರು ಹಿಮ್ಮೇಳ ಹಾಗೂ ಪಾತ್ರಧಾರಿಗಳೊಂದಿಗೆ ಇಲ್ಲಿಗೆ ಆಗಮಿಸುತ್ತಾರೆ. ಪಾತ್ರಧಾರಿಗಳು ತಮ್ಮ ಬಣ್ಣಗಳನ್ನು ತಾವೇ ಹಚ್ಚಿಕೊಳ್ಳುತ್ತಾರೆ. ಮೊದಲು ಚೌಕಿಯಲ್ಲಿ ಗಣಪತಿ ಪೂಜೆ ನಡೆಯುತ್ತದೆ. ತದನಂತರ ಕೋಡಂಗಿಗಳು ರಂಗ ಪ್ರವೇಶಿಸುವರು. ಗಣಪತಿ ಸ್ತುತಿಯ ಬಳಿಕ ವಿಷ್ಣು, ಪರಮೇಶ್ವರ, ದುರ್ಗೆ ಮೊದಲಾದ ದೇವತೆಗಳ ಸ್ತುತಿಯನ್ನು ಭಾಗವತರು ಮಾಡುತ್ತಾರೆ. ಹಾಡಿನ ಅನಂತರ ಭಾಗವತರಿಂದ ಸಭಾವಂದನೆ ಅನಂತರ ಕೋಡಂಗಿಗಳು ಕುಣಿದು ಕುಪ್ಪಳಿಸಿ ಪ್ರೇಕ್ಷಕರನ್ನು ರಂಜಿಸುತ್ತಾರೆ. ಅನಂತರ ಬಾಲಗೋಪಾಲರ ಆಗಮನ ಹಾಗೂ ಸ್ತ್ರೀ ವೇಷಗಳ ಕುಣಿತ. ಪುರುಷರೇ ಸ್ತ್ರೀ ವೇಷ ಹಾಕುವುದು ಯಕ್ಷಗಾನದ ವೈಶಿಷ್ಟ್ಯ. ಯಕ್ಷಗಾನದ ಪೂರ್ವರಂಗ ಎಂದು ಕರೆಯಲಾಗುವ ಬಾಲಗೋಪಾಲ, ಸ್ತ್ರೀ ವೇಷಗಳ ಉದ್ದೇಶ ಮುಂದಿನ ಕಥಾ ಪ್ರಸಂಗಕ್ಕೆ ಪ್ರೇಕ್ಷಕರನ್ನು ಮಾನಸಿಕವಾಗಿ ಅಣಿಗೊಳಿಸುವುದೇ ಆಗಿದೆ. ಪುನಾ ದೇವತಾ ಸ್ತುತಿ ಆದನಂತರ ಅಂದಿನ ಪ್ರಸಂಗಕ್ಕೆ ಸಂಬಂಧಿಸಿದಂತೆ ಒಡ್ಡೋಲಗ ಪ್ರಾರಂಭವಾಗುತ್ತದೆ. ಪಾತ್ರಧಾರಿಗಳು ಭಾಗವತರಿಗೆ ಅನಂತರ ರಂಗಸ್ಥಳಕ್ಕೆ ವಂದಿಸಿ ಕುಣಿದು ತಮ್ಮ ಸಾಮರ್ಥ್ಯ ಪ್ರದರ್ಶಿಸುವರು.

ಕೃಷ್ಣಾರ್ಜುನ ಕಾಳಗ, ಕರ್ಣಾರ್ಜುನ ಕಾಳಗ, ಬಭ್ರುವಾಹನ ಕಾಳಗ, ಸುಧನ್ವಾರ್ಜುನ ಕಾಳಗ ಮೊದಲಾದವು ವೀರರಸ ಪ್ರಧಾನವಾದವುಗಳು. ಚಂದ್ರಾವಳಿ ವಿಲಾಸ, ರತಿಕಲ್ಯಾಣ, ರತ್ನಾವತಿ ಕಲ್ಯಾಣ ಮೊದಲಾದವು ಶೃಂಗಾರ ರಸ ಪ್ರಧಾನ ಪ್ರಸಂಗಗಳು. ಇವಲ್ಲದೆ ಪ್ರಸಿದ್ಧ ಕ್ಷೇತ್ರಗಳ ಕ್ಷೇತ್ರಮಹಾತ್ಮೆಗಳಿವೆ. ಯಕ್ಷಗಾನದ ಎಲ್ಲ ಪ್ರಸಂಗಗಳಲ್ಲೂ ಹಾಸ್ಯ ಕಂಡುಬರುತ್ತದೆ. ವಿಡಂಬನೆ ಕೂಡ ಹಾಸ್ಯದ ಒಂದು ಅಂಗ. ಅದರಲ್ಲಿ ಹನುಮನಾಯಕ, ಕುಬ್ಜೆ, ಚಾರಕ, ವನಪಾಲಕ ಮೊದಲಾದ ಪಾತ್ರಗಳಲ್ಲಿ ಹಾಸ್ಯ ಕಾಣಿಸಿಕೊಳ್ಳುವುದು.

ಯಕ್ಷಗಾನದಲ್ಲಿ ತುಂಬ ಕಲಾತ್ಮಕವಾದದ್ದು ಬಣ್ಣದ ವೇಷ. ಇಂತಹ ಬೃಹತ್ ವೇಷಗಳು ಸಾಮಾನ್ಯವಾಗಿ ಬರುವುದು ನಡುರಾತ್ರಿಯಲ್ಲಿ. ರಾಕ್ಷಸ ವೇಷಗಳು ಒಮ್ಮೊಮ್ಮೆ ಪ್ರೇಕ್ಷಕರ ಮಧ್ಯದಿಂದ ರಂಗ ಪ್ರವೇಶಿಸುವುದುಂಟು. ಈ ಪಾತ್ರ ಪ್ರವೇಶಿಸುವಾಗ ಎರಡು ಬದಿಗೆ ದೀವಟಿಗೆಗಳನ್ನು ಹಿಡಿದು, ರಾಳದ ಪುಡಿಯನ್ನು ಎರಚಿ ಜ್ವಾಲೆ ಎಬ್ಬಿಸಿ ಭಯಾನಕ ವಾತಾವರಣವನ್ನು ಸೃಷ್ಟಿಸುತ್ತಾರೆ. ಚಂಡೆಯ ಬಡಿತ, ರಾಕ್ಷಸರ ಕೂಗು ಅರೆನಿದ್ರೆಯಲ್ಲಿರುವ ಪ್ರೇಕ್ಷಕರನ್ನು ಬಡಿದೆಬ್ಬಿಸುತ್ತದೆ. ಪ್ರಧಾನ ಪಾತ್ರಗಳು ಭಾಗವತರ ಮೂಲಕ ತಮ್ಮ ಪರಿಚಯವನ್ನು ಮಾಡಿಕೊಳ್ಳುತ್ತವೆ.

ಯಕ್ಷಗಾನ ಜನರಲ್ಲಿ ಧಾರ್ಮಿಕ ಮತ್ತು ನೀತಿ ಪ್ರಜ್ಞೆಗಳನ್ನು ಬೆಳೆಸಲು ಸಹಕಾರಿಯಾಗಿದೆ. ಯಕ್ಷಗಾನ ಪ್ರಸಂಗ ರಚಿಸಿದವರು ದುಷ್ಟನಿಗ್ರಹ ಶಿಷ್ಟಪರಿಪಾಲನೆ ತತ್ವಗಳನ್ನು ಪ್ರಸಂಗಗಳಲ್ಲಿ ಅಳವಡಿಸಿರುತ್ತಾರೆ.

©KTBS Not to be republished

## ಕೃತಿಕಾರರ ಪರಿಚಯ

ಪ್ರಕೃತ **ಜನಪದ ಕಲೆಗಳ ವೈಭವ** – ಜಾನಪದ ಗದ್ಯ ಭಾಗವನ್ನು **ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ** ಸಂಸ್ಥೆ ಪ್ರಕಟಿಸಿರುವ **ಜಾನಪದ** ವಿಷಯ ವಿಶ್ವಕೋಶ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ [ಕರ್ನಾಟಕ] ಹೊರತಂದಿರುವ 'ವಿಷಯ ಸಂಪದೀಕರಣ ಸಂಪನ್ಮೂಲ ಸಾಹಿತ್ಯ – ಕನ್ನಡ ಭಾಷೆ' ಕೃತಿಗಳಲ್ಲಿರುವ ಸಂಪನ್ಮೂಲದ ಆಧಾರದಿಂದ ಈ ಗದ್ಯ ಭಾಗವನ್ನು ನಿಗದಿಪಡಿಸಿದೆ.

## ಆಶಯ ಭಾವ

ಜನಪದ ಕಲೆ ಅತ್ಯಂತ ಪ್ರಾಚೀನವಾದುದು. ಪರಂಪರೆಯಿಂದ ಉಳಿದು ಬಂದಿರುವ ಸಂಪ್ರದಾಯವಾಗಿದ್ದು, ಆಂಗಿಕ ಅಭಿನಯದ ಮೂಲಕ ವ್ಯಕ್ತವಾಗುವ ಕಲೆ ಹೆಚ್ಚು ಜನಪ್ರಿಯವಾಗಿದೆ. ವಿವಿಧ ಪ್ರಕಾರಗಳಲ್ಲಿ ವ್ಯಕ್ತವಾಗುವ ಕಲೆ, ಪ್ರಾದೇಶಿಕ ಮಹತ್ತ್ವ ಪಡೆದಿದೆ. ಆಧುನಿಕತೆಯ ಪ್ರಭಾವದಿಂದ ಜನಪದ ಕಲೆ ನಶಿಸುತ್ತಿದೆ. ಇದರಿಂದ ಎಷ್ಟೋ ಪ್ರಕಾರಗಳು ಕಣ್ಮರೆಯಾಗಿವೆ. ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿದ್ದ ಕಲೆ ಮನರಂಜನೆಯ ಮಾಧ್ಯಮವೂ ಕ್ರಿಯಾಶೀಲತೆಯ ಸಂಕೇತವೂ ಆಗಿರುವುದು ಗಮನಾರ್ಹ ಅಂಶ. ವಿಶಿಷ್ಟ ನಂಬಿಕೆ, ಆಚರಣೆಯ ಪ್ರಾತಿನಿಧಿಕ ರೂಪವಾಗಿ ಜನಪದ ಕಲೆ ರೂಪಗೊಂಡಿದ್ದು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಹತ್ತ್ವ ಪಡೆದಿದೆ ಅದರ ಕಿರು ಪರಿಚಯವೇ ಈ **'ಜನಪದ ಕಲೆಗಳ ವೈಭವ'** ಪಾಠ.

©KTBS Not to be republished

## ಪದಗಳ ಅರ್ಥ

ಏಕತಾನತೆ – ಒಂದೇ ರೀತಿಯ

ಕಾಳಗ – ಯುದ್ಧ

ಗಿರಕಿ – ತಿರುಗು

ಗೊಂಡೇವ – ಬಣ್ಣಬಣ್ಣದ ದಾರದ ಗೊಂಚಲು

ಚಕ್ರಮಂಡಿ – ಯಕ್ಷಗಾನ ನೃತ್ಯದ ಒಂದು ಹೆಜ್ಜೆ

ಚಂಡೆ – ಚರ್ಮವಾದ್ಯ

ದೀವಟಿಗೆ – ಪಂಜು

ಬಟ್ಟು – ವೃತ್ತಾಕಾರದ

ರಾಳ – ಬೆಂಕಿಯ ಜ್ವಾಲೆ ಹೆಚ್ಚಿಸಲು ಬಳಸುವ ಪುಡಿ;

ವಾಡಿಕೆ – ರೂಢಿ

ಕಥನಕವನ – ಹಾಡಿನ ಮೂಲಕ ಹೇಳುವ ಕತೆ;

ಕುಬ್ಜೆ – ಗೂನು ಬೆನ್ನಿನವಳು (ಮಂಥರೆ);

ಗುಣಿ – ಡೊಳ್ಳು ಬಾರಿಸುವ ಮರದ ತುಂಡು;

ಛಾಪು – ವರ್ಚಸ್ಸು;

ನೇಪಥ್ಯ – ತೆರೆಯ ಹಿಂಭಾಗ

ಮಂತ್ರಮುಗ್ಧ– ಪರವಶ;

ಹಾಸುಹೊಕ್ಕು – ಆವರಿಸು

ಹೊನ್ನಾವಿಗೆ – ಚಿನ್ನದ ಪಾದುಕೆ

ವೈಖರಿ – ರೀತಿ

## ಟಿಪ್ಪಣಿ

**ದೇವರಗುಡ್ಡರು** : ದೇವರನ್ನು ವಂಶಪಾರಂಪರ್ಯವಾಗಿ ಪೂಜಿಸುವ ಮನೆತನದವರು.

**ಏಳ್ಮಲೆ ಹೆತ್ತಯ್ಯ(ಏಳುಮಲೆಯ ಹೆತ್ತ ತಂದೆ)**: ಮಲೆಮಹದೇಶ್ವರ ಸ್ವಾಮಿಯು ಏಳುಬೆಟ್ಟಗಳ ಮೇಲಿರುವ ಮಹದೇಶ್ವರ ಬೆಟ್ಟದಲ್ಲಿದ್ದಾನೆಂಬುದು ಭಕ್ತರ ನಂಬಿಕೆ.

**ದಮ್ಮಡಿ** : ಕಂಸಾಳೆಯವರು ಕತೆ ಹೇಳುವಾಗ ಹಿಮ್ಮೇಳದವರು ಬಾರಿಸುವ ವೃತ್ತಾಕಾರದ ಚರ್ಮವಾದ್ಯ ಸಾಧನ.

**ಏಕತಾರಿ** : ಒಂದೇ ತಂತಿಯುಳ್ಳ ಸಂಗೀತ ವಾದ್ಯ.

**ಜೋಳಿಗೆ** : ಕಾಣಿಕೆ ಪಡೆದ ದವಸ–ಧಾನ್ಯಗಳನ್ನು ಹಾಕಿಕೊಳ್ಳಲು ಹೆಗಲಿಗೆ ನೇತು ಹಾಕಿಕೊಳ್ಳುವ ಉದ್ದನೆಯ ಚೀಲ.

**ಜನಪದ ಮಹಾಕಾವ್ಯ** : ಮೌಖಿಕ ಸಾಹಿತ್ಯದ, ಸುದೀರ್ಘಕಥನ.

**ಗಗ್ಗರಿ** : ಡೊಳ್ಳುಕುಣಿತದ ವಾದ್ಯಗಾರರು ಉಡುವ ಹಸಿರು ಇಲ್ಲವೇ ಕೆಂಪು ಬಣ್ಣದ ಬಹಳ ನಿರಿಗೆಯುಳ್ಳ ಲಂಗ ತೆರನಾದ ಉಡುಗೆ.

**ಒಡಪು** : ಇದು ಕರ್ನಾಟಕದ ವಿಶಿಷ್ಟ ಜನಪದ ಸಾಹಿತ್ಯ ಪ್ರಕಾರ. ಶ್ರಮಿಕ ವರ್ಗದವರು ಆಯಾಸವನ್ನು ಮರೆಯಲು, ನೆನಪಿನ ಶಕ್ತಿಯನ್ನು ಇಮ್ಮಡಿಸಿಕೊಳ್ಳಲು, ಬೌದ್ಧಿಕ ಕೌಶಲವನ್ನು ಮೆರೆಯಲು ಬಳಸುವ ಚಾಣಾಕ್ಷ ನುಡಿಗಡಣ. ಮದುವೆ–ಮುಂಜಿಗಳಲ್ಲಿ ಮನರಂಜನೆಗಾಗಿ ಚಾಲ್ತಿಗೆ ಬಂದ ಪರಂಪರೆಯ ಸಂಪ್ರದಾಯ.

**ವೀರಗಾಸೆ** : ದಕ್ಷಬ್ರಹ್ಮ ತಾನು ಮಾಡಿದ ಯಾಗಕ್ಕೆ ಶಿವನೊಬ್ಬನನ್ನು ಬಿಟ್ಟು ಉಳಿದ ದೇವಾನುದೇವತೆಗಳನ್ನು ಆಹ್ವಾನಿಸುತ್ತಾನೆ. ತಂದೆ ಉದ್ದೇಶಪೂರ್ವಕವಾಗಿ ಗಂಡನನ್ನು ಅವಮಾನಿಸಿದ್ದಾನೆಂದು ಭಾವಿಸಿದ ದಾಕ್ಷಾಯಿಣಿ ಕೋಪಗೊಂಡು ನ್ಯಾಯ ಕೇಳುವುದಕ್ಕಾಗಿ ಗಂಡನ ಆಜ್ಞೆಯನ್ನು ಉಲ್ಲಂಘಿಸಿ ತಂದೆ ಬಳಿ ಬರುತ್ತಾಳೆ. ಅಳಿಯನ ಮೇಲಿನ ಕೋಪದಿಂದ ಮಗಳೆಂಬ ಮಮತೆಯನ್ನು ತೊರೆದು ದಕ್ಷಬ್ರಹ್ಮ ದಾಕ್ಷಾಯಿಣಿಯನ್ನು ಉದಾಸೀನದಿಂದ ನಡೆಸಿಕೊಂಡಿದ್ದಲ್ಲದೇ ಅವಳೆದುರಿಗೆ ಶಿವನನ್ನು ನಿಂದಿಸುತ್ತಾನೆ. ಪತಿನಿಂದನೆಯನ್ನು ಸಹಿಸಲಾಗದೆ ದಾಕ್ಷಾಯಿಣಿ ಅಗ್ನಿಕುಂಡವನ್ನು ಪ್ರವೇಶಿಸುತ್ತಾಳೆ. ಈ ದುರ್ಘಟನೆಯಿಂದ ಕುಪಿತನಾದ ಶಿವ ಉಗ್ರನಾಗಿ ತಾಂಡವ ನೃತ್ಯ ಮಾಡುತ್ತಾನೆ. ಕೋಪದಿಂದ ಹಣೆಯ ಬೆವರನ್ನು ಬೆರಳುಗಳಿಂದ ಬಾಚಿ ನೆಲಕ್ಕೆ ಅಪ್ಪಳಿಸುತ್ತಾನೆ. ಆಗ ನೂರೊಂದು ಆಯುಧಗಳನ್ನು ಧರಿಸಿದ ವೀರಭದ್ರನ ಅವತಾರವಾಗುತ್ತದೆ. ಮುಂದೆ ವೀರಭದ್ರ ದಕ್ಷಬ್ರಹ್ಮನ ಯಾಗಶಾಲೆಗೆ ಬಂದು ಅದನ್ನು ನಾಶಪಡಿಸುತ್ತಾನೆ. ಅಲ್ಲಿ ವೀರಭದ್ರ ತೋರಿದ ಪ್ರತಾಪದ ಪ್ರತೀಕವೇ ವೀರಗಾಸೆ ಕುಣಿತ. ಅಂದಿನಿಂದ ಈ ಕಲೆ ಬೆಳಕಿಗೆ ಬಂದಿತೆಂದು ಕಲಾವಿದರು ಹೇಳುತ್ತಾರೆ.

© KTBS Not to be republished

**ಜನಪದ :** ಜನಾಂಗದ ಸಂಸ್ಕೃತಿ, ಬದುಕು, ಸಮಾಜದ ಒಟ್ಟಾರೆ ಸಹಜ ಕ್ರಿಯಾತ್ಮಕತೆಯೇ ಜನಪದ. ಸಾಮಾನ್ಯ ಜನತೆ ತಾವಾಡುವ ಭಾಷೆಯಲ್ಲೇ ಕಟ್ಟಿಕೊಂಡು ಉಳಿಸಿಕೊಂಡಿರುವ ಸಾಹಿತ್ಯ ಸಂಪನ್ಮೂಲವೇ ಜನಪದ ಸಾಹಿತ್ಯ. ಇದು ಮೌಖಿಕ ಪರಂಪರೆಯ ಅಭಿವ್ಯಕ್ತಿ ರೂಪ.

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ವೀರಗಾಸೆಯಲ್ಲಿ ಬಳಸುವ ವಾದ್ಯಗಳು ಯಾವುವು?

೨. 'ಕಂಸಾಳೆ' ಎಂಬ ಹೆಸರು ಹೇಗೆ ಬಂದಿತು?

೩. ಡೊಳ್ಳು ಕುಣಿತ ಯಾವ ಸಂಪ್ರದಾಯಕ್ಕೆ ಸೇರಿದ ಕುಣಿತವಾಗಿದೆ?

೪. ಭರಮ ದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ಯಾವಾಗ ನಡೆಯುತ್ತದೆ?

೫. ಯಕ್ಷಗಾನದ ಮೂರು ಶೈಲಿಗಳು ಯಾವುವು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ವೀರಗಾಸೆ ಕುಣಿತದ ವೇಷಭೂಷಣಗಳು ಹೇಗಿರುತ್ತವೆ? ವಿವರಿಸಿ.

೨. ದೇವರಗುಡ್ಡರಿಗೆ ಕಂಸಾಳೆಯ ಬಗ್ಗೆ ಇರುವ ಗೌರವ ಭಾವನೆ ಹೇಗೆ ವ್ಯಕ್ತಗೊಂಡಿದೆ? ವಿವರಿಸಿ.

೩. ಭರಮದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ಹೇಗೆ ನಡೆಯುತ್ತದೆ?

೪. ಯಕ್ಷಗಾನದಲ್ಲಿ ತೆಂಕುತಿಟ್ಟು ಮತ್ತು ಬಡಗುತಿಟ್ಟುಗಳ ವೈಶಿಷ್ಟ್ಯವೇನು? ವಿವರಿಸಿ.

೫. ಚೌಕಿಯಲ್ಲಿ ನಡೆಯುವ ವಿಶೇಷಗಳೇನು? ವಿವರಿಸಿ.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ವೀರಗಾಸೆ ನರ್ತಕನ ಒಡಪಿನೊಂದಿಗಿನ ಕುಣಿತ ಹೇಗಿರುತ್ತದೆ?

೨. ಬೀಸು ಕಂಸಾಳೆಯ ವೈಶಿಷ್ಟ್ಯತೆಯನ್ನು ವಿವರಿಸಿ.

೩. ಡೊಳ್ಳು ಬಾರಿಸುವ ಕಲಾವಿದರ ವೇಷಭೂಷಣಗಳು ಹೇಗಿರುತ್ತವೆ?

೪. ಯಕ್ಷಗಾನದ ವೈಶಿಷ್ಟ್ಯ ಹಾಗೂ ಪೂರ್ವರಂಗದ ಉದ್ದೇಶವೇನು?

©KTBS Not to be republished

**ಈ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಅಹಹಾ ರುದ್ರಾ ಅಹಹಾ ದೇವಾ"

೨. "ಭಲರೇ ವೀರ, ಅಹಹಾವೀರ"

೩. "ಏಳ್ಮಲೆ ಹೆತ್ತಯ್ಯ ನಮ್ಮಪ್ಪಾಜಿ ಮಾಯ್ಕಾರ ಮಾದೇವ ನಿನ್ನ ಪಾದವೇ ಗತಿಕಣಪ್ಪ ಶರಣು ಶರಣಾರ್ಥಿ"

೪. "ಸ್ವಾಮಿ ನಮ್ಮಯ ದೇವರು ಬಂದಾನ ಬನ್ನಿರೇ"

೫. "ದುಷ್ಟ ನಿಗ್ರಹ, ಶಿಷ್ಟ ಪರಿಪಾಲನೆ."

**ಉ) ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಸಂಭಾವ್ಯ ಉತ್ತರಗಳನ್ನು ನೀಡಿದೆ, ಅವುಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

೧. ವೀರಗಾಸೆ ____________ ಸಂಪ್ರದಾಯಕ್ಕೆ ಸೇರಿದ ನೃತ್ಯ

(ಶೈವ, ವೈಷ್ಣವ, ಬೀರೇಶ್ವರ, ಶ್ರೀವೈಷ್ಣವ)

©KTBS
Not to be republished

೨. ಕಂಸಾಳೆಗುಡ್ಡರು ಕಂಸಾಳೆಯನ್ನು ಕೈಗೆತ್ತಿಕೊಳ್ಳುವ ಮೊದಲು ________ ದೇವರನ್ನು ಸ್ಮರಿಸುತ್ತಾರೆ.

(ಭೈರವೇಶ್ವರ, ಮಹದೇಶ್ವರ, ನಂಜುಡೇಶ್ವರ, ವೈದ್ಯೇಶ್ವರ)

೩. ಡೊಳ್ಳು ಕುಣಿತದ ಕಲಾವಿದರು ಹಾಡುವ ಬೀರೇಶ್ವರ ದೇವರ ಹಾಡು __________ ಗೆ ಉದಾಹರಣೆ.

(ಭಕ್ತಿಗೀತೆ, ಭಾವಗೀತೆ, ಕಾವ್ಯಗೀತೆ, ಜನಪದಗೀತೆ)

೪. ಯಕ್ಷಗಾನದಲ್ಲಿ ರಂಗಸ್ಥಳದ ಸಮೀಪವಿರುವ ನೇಪಥ್ಯವನ್ನು ____________ ಎಂದು ಕರೆಯುತ್ತಾರೆ.

(ವೇದಿಕೆ, ತೆರೆ, ಸಭಾಮಂಟಪ, ಚೌಕಿ)

ಊ) **ಹೊಂದಿಸಿ ಬರೆಯಿರಿ**

| 'ಅ' ಪಟ್ಟಿ | | 'ಆ' ಪಟ್ಟಿ |
|---|---|---|
| ೧. | ವೀರಭದ್ರ | ಕಾಂಸತಾಲ್ಯ |
| ೨. | ಕಂಸಾಳೆ | ಚರ್ಮವಾದ್ಯ |
| ೩. | ಡೊಳ್ಳು | ಮಹಾಕಾವ್ಯ |
| ೪. | ಯಕ್ಷಗಾನ | ಒಡಪು |
| ೫. | ಮಹದೇಶ್ವರ | ವೇಷಭೂಷಣ |
| | | ಭಾಗವತ |
| | | ಏಳ್ಮಲೆ ಹೆತ್ತಯ್ಯ |
| | | ದೀವಟಿಗೆ |

## ಭಾಷೆಯ ಸೊಬಗು

ವೇದಗಳಲ್ಲಿ ಮೊದಲನೆಯದು ಋಗ್ವೇದ. ಈ ಶಬ್ದದಲ್ಲಿ ಒಂದು ವಿಶೇಷವಿದೆ. ಅದು ಆ ಶಬ್ದದ ಮೊದಲ ಅಕ್ಷರವಾದ ಋಕಾರ. ಋಕಾರವು ರಕಾರಕ್ಕಿಂತ ಭಿನ್ನವಾದುದು. ಕುವೆಂಪು ಒಬ್ಬರು ರಸಋಷಿ – ಎಂಬ ವಾಕ್ಯದಲ್ಲಿ ಋಕಾರವನ್ನು ಬದಲಿಸಿ ರು ಅಥವಾ ರಿ ಎಂಬ ಅಕ್ಷರವನ್ನು ಹಾಕಲಾಗದು.

ಕುವೆಂಪು ಒಬ್ಬರು ರಸರುಷಿ

ಕುವೆಂಪು ಒಬ್ಬರು ರಸರಿಷಿ

– ಇವೆರಡೂ ಸಾಧು ರೂಪಗಳಲ್ಲ.

ಗೃಹ ಎಂಬಲ್ಲಿ ಗ ಎಂಬ ಅಕ್ಷರಕ್ಕೆ ಋಕಾರವು ಅಡಿವೊತ್ತಾಗಿ ಬಂದಿದೆ. ಗ್ರಹ ಎಂಬಲ್ಲಿ ಗ ಎಂಬ ಅಕ್ಷರಕ್ಕೆ ರಕಾರವು ಅಡಿವೊತ್ತಾಗಿ ಬಂದಿದೆ.

ಗೃಹ ಎಂದರೆ ಮನೆ. ಗ್ರಹ ಎಂದರೆ ಆಕಾಶದಲ್ಲಿ ಚಲಿಸುವ ಕಾಯ (ಬುಧ, ಶುಕ್ರ, ಭೂಮಿ ಮುಂತಾದವು).

ಗೃಹಪ್ರವೇಶ ಎಂದರೆ ಮನೆಯೊಳಗೆ ಹೋಗುವುದು. ಗ್ರಹಪ್ರವೇಶ ಎಂದರೆ ಯಾವುದೋ ಆಕಾಶಕಾಯದೊಳಗೆ ಪಯಣಿಸುವುದು!

**ಸರಿ ರೂಪಗಳನ್ನು ಗುರುತಿಸಿ:**

ವೃತ/ವ್ರತ

ಶ್ರುತಿ/ಶೃತಿ

ಕೃತಿ/ಕ್ರಿತಿ

ಹ್ರಸ್ವ/ಹೃಸ್ವ

©KTBS Not to be republished

## ಸೈದ್ಧಾಂತಿಕ ಭಾಷಾಭ್ಯಾಸ

**ಕ್ರಿಯಾಪದ – ಪರಿಚಯಾತ್ಮಕ ಸ್ಥೂಲ ವಿವರ**

– ತಾಯಿಯು ಅಡುಗೆಯನ್ನು **ಮಾಡುತ್ತಾಳೆ.**
– ತಂದೆಯು ಕೆಲಸವನ್ನು **ಮಾಡಿದನು.**
– ಅವನು ಊಟವನ್ನು **ಮಾಡುವನು.**
– ದೇವರು ಒಳ್ಳೆಯದನ್ನು **ಮಾಡಲಿ.**

ಈ ವಾಕ್ಯಗಳಲ್ಲಿ ಅಡಿಗೆರೆ ಎಳೆದಿರುವ ಪದಗಳು ಕ್ರಿಯೆ ಪೂರ್ಣಗೊಂಡಿರುವುದನ್ನು ಸೂಚಿಸುತ್ತವೆ. ಹೀಗೆ ಕ್ರಿಯೆ ಪೂರ್ಣಗೊಂಡಿದೆ ಎಂಬ ಅರ್ಥವನ್ನು ಸೂಚಿಸಬಲ್ಲ ಪದವೇ **ಕ್ರಿಯಾಪದ.**

ಈ ವಾಕ್ಯಗಳಲ್ಲಿರುವ ಎಲ್ಲ ಕ್ರಿಯಾಪದಗಳಿಗೂ ಮೂಲಪದ **ಮಾಡು** ಎಂಬುದು ಇಂತಹ ಮೂಲರೂಪ ಪದಗಳೇ **ಕ್ರಿಯಾಪ್ರಕೃತಿ ಅಥವಾ ಧಾತು.**

**ಸೂತ್ರ : ಕ್ರಿಯಾರ್ಥವನ್ನು ಸೂಚಿಸುವ ಪ್ರತ್ಯಯುವನ್ನು ಹೊಂದದಿರುವ ಪದವೇ ಕ್ರಿಯಾಪ್ರಕೃತಿ ಅಥವಾ ಧಾತು. ಕ್ರಿಯಾಪದದ ಮೂಲರೂಪವೇ ಧಾತು.**

©KTBS Not to be republished

**ಸಕರ್ಮಕ ಮತ್ತು ಅಕರ್ಮಕ ಧಾತುಗಳು**

ಈ ವಾಕ್ಯಗಳನ್ನು ಗಮನಿಸಿ
– ರಾಮನು ಗಿಡವನ್ನು **ನೆಟ್ಟನು.**
– ಶಿಲ್ಪಿಗಳು ಗುಡಿಯನ್ನು **ಕಟ್ಟಿದರು.**
– ವಿದ್ಯಾರ್ಥಿಗಳು ಪಾಠವನ್ನು **ಓದಿದರು.**

ಮೂರು ವಾಕ್ಯಗಳಲ್ಲಿರುವ **ನೆಟ್ಟನು, ಕಟ್ಟಿದರು, ಓದಿದರು** ಎಂಬ ಕ್ರಿಯಾಪದಗಳಿಗೆ ಏನನ್ನು ಎಂಬ ಪ್ರಶ್ನೆ ಹಾಕಿದಾಗ ಅನುಕ್ರಮವಾಗಿ ಗಿಡವನ್ನು, ಗುಡಿಯನ್ನು, ಪಾಠವನ್ನು ಎಂಬ ಉತ್ತರ ದೊರೆಯುವುದು ಇಂತಹ ಪದಗಳೇ **ಕರ್ಮಪದಗಳು.**

ಇಲ್ಲಿರುವ ಮೂರು ಕ್ರಿಯಾಪದಗಳಲ್ಲಿ ಅನುಕ್ರಮವಾಗಿ **ನೆಡು, ಕಟ್ಟು, ಓದು** ಎಂಬ ಧಾತುಗಳಿವೆ. ಎಲ್ಲಾ ಧಾತುಗಳಿಗೂ ಕರ್ಮಪದ ಬೇಕಾಗುತ್ತದೆ. ಇಲ್ಲವಾದಲ್ಲಿ ವಾಕ್ಯ ಪೂರ್ಣ ಅರ್ಥವನ್ನು ಕೊಡಲಾರದು.

**ಸೂತ್ರ: ಕರ್ಮಪದವನ್ನು ಬಯಸುವ ಧಾತುಗಳೇ ಸಕರ್ಮಕ ಧಾತುಗಳು**

ಈ ವಾಕ್ಯಗಳನ್ನು ಗಮನಿಸಿ – ಕೂಸು **ಮಲಗಿತು.**
– ಅವನು **ಬದುಕಿದನು.**
– ಆಕಾಶ **ಹೊಳೆಯುತ್ತಿದೆ.**

ಇಲ್ಲಿ **ಮಲಗಿತು, ಬದುಕಿದನು, ಹೊಳೆಯುತ್ತಿದೆ** ಎಂಬ ಪದಗಳು ಕ್ರಿಯಾಪದಗಳು. ಈ ಕ್ರಿಯಾಪದಗಳಿಗೆ ಏನನ್ನು ಎಂದು ಪ್ರಶ್ನೆ ಹಾಕಲು ಸಾಧ್ಯವಿಲ್ಲ. ಹಾಗಾಗಿ ಈ ಕ್ರಿಯಾಪದಗಳಲ್ಲಿರುವ **ಮಲಗು, ಬದುಕು, ಹೊಳೆಯು** ಎಂಬ ಧಾತುಗಳು ಕರ್ಮಪದವನ್ನು ಬಯಸುವುದಿಲ್ಲ.

**ಸೂತ್ರ : ಕರ್ಮಪದವನ್ನು ಬಯಸದೇ ಇರುವ ಧಾತುಗಳೇ ಅಕರ್ಮಕ ಧಾತುಗಳು.**

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧. ಕ್ರಿಯಾಪದ ಎಂದರೇನು?

೨. ಕ್ರಿಯಾಪ್ರಕೃತಿ ಎಂದರೇನು? ಉದಾಹರಣೆ ಕೊಡಿ.

೩. ಸಕರ್ಮಕ ಧಾತುವನ್ನು ಉದಾಹರಣೆ ಸಹಿತ ವಿವರಿಸಿ.

೪. ಅಕರ್ಮಕ ಧಾತುಗಳಿಗೆ ಐದು ನಿದರ್ಶನ ಕೊಡಿ.

**ಆ) ಕೊಟ್ಟಿರುವ ವಾಕ್ಯಗಳಲ್ಲಿ ಸಕರ್ಮಕ ಮತ್ತು ಅಕರ್ಮಕ ಧಾತುಗಳನ್ನು ಗುರುತಿಸಿ ಬರೆಯಿರಿ.**

೧. ವಿದ್ಯಾರ್ಥಿನಿಯರು ಆಟವನ್ನು ಆಡಿದರು.

೨. ಗಾಳಿಯು ಬೀಸುತ್ತಿದೆ.

೩. ಹಕ್ಕಿಗಳು ಚಿಲಿಪಿಲಿಗುಟ್ಟಿದವು.

೪. ರೈತನು ಹೊಲವನ್ನು ಉಳುತ್ತಾನೆ.

**ಇ) ಕೊಟ್ಟಿರುವ ವಿಷಯಗಳನ್ನು ಕುರಿತು ಪ್ರಬಂಧ ಬರೆಯಿರಿ.**

೧. ಸಾವಯವ ಕೃಷಿ   ೨. ಮಳೆ ಕೊಯ್ಲು

©KTBS Not to be republished

## ಪೂರಕ ಓದು

೧. ಜೀ.ಶಂ. ಪರಮಶಿವಯ್ಯ ಅವರ **'ಜಾನಪದ'** ಪುಸ್ತಕವನ್ನು ಓದಿ

೨. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ಹೊರತಂದಿರುವ **'ಜಾನಪದ ವಿಷಯ ವಿಶ್ವಕೋಶ'** ಗ್ರಂಥವನ್ನು ಅವಲೋಕಿಸಿ.

೩. ಡಾ. ಎಂ.ಎನ್. ವಾಲಿ ಸಂಪಾದಕತ್ವದ **ಜಾನಪದ ಒಗಟುಗಳು, ಸಿರಿಗನ್ನಡ ಒಡಪುಗಳು** ಪುಸ್ತಕಗಳನ್ನು ಸಂಗ್ರಹಿಸಿ ಓದಿ.

# ೭. ಚೆನ್ನಭೈರಾದೇವಿ

[ನಾಟಕ]

Q5D8V4

**ಡಾ. ಗಜಾನನ ಶರ್ಮ –**

**ಪ್ರವೇಶ:** ಕರ್ನಾಟಕ ಮಾತ್ರವಲ್ಲ, ಭಾರತ ಕಂಡ ಅಪ್ರತಿಮ ರಾಣಿ, ಚೆನ್ನಭೈರಾದೇವಿ. ಸುಮಾರು ಐವತ್ತನಾಲ್ಕು ವರ್ಷಗಳ ಕಾಲ ಕರ್ನಾಟಕದ ಮಲೆನಾಡು ಕರಾವಳಿ ಪ್ರಾಂತ್ಯವನ್ನು ಆಳಿದ ಈಕೆಗೆ "ಕರಿಮೆಣಸಿನ ರಾಣಿ" ಎನ್ನುವ ಬಿರುದು ಇತ್ತು. ಈ ರಾಣಿಯ ಕಾಲದಲ್ಲಿ ಯುರೋಪಿನ ದೇಶಗಳಿಗೆ ಕಾಳು ಮೆಣಸು, ದಾಲ್ಚಿನ್ನಿ, ಶುಂಠಿ ಮೊದಲಾದ ಸಾಂಬಾರ ಪದಾರ್ಥಗಳನ್ನು ರಫ್ತು ಮಾಡಲಾಗುತ್ತಿತ್ತು. ಕೆಳದಿ ಅರಸರು, ಬಿಜಾಪುರದ ಸುಲ್ತಾನರ ನಡುವಿನ ಯುದ್ಧಗಳನ್ನು ಕೂಡ ಚಾಣಾಕ್ಷತೆಯಿಂದ ನಿರ್ವಹಿಸಿದ್ದ ಈಕೆಯನ್ನು ಪೋರ್ಚುಗೀಸರು 'ರೈನಾ ದೆ ಪಿಮೆಂಟಾ' ಎಂದು ಕರೆಯುತ್ತಿದ್ದರು. ಮೇಲಿಂದ ಮೇಲೆ ತನ್ನ ಸಾಮ್ರಾಜ್ಯದ ಮೇಲೆ ದಾಳಿಗಳು ಆಗುತ್ತಿದ್ದರೂ, ಅದನ್ನ ಸಮರ್ಥವಾಗಿ ಐದು ದಶಕಗಳ ಕಾಲ ಎದುರಿಸಿ ನಿಂತ ದಿಟ್ಟ ರಾಣಿ ಚೆನ್ನಭೈರಾದೇವಿ.

©KTBS Not to be republished

### ದೃಶ್ಯ– ೧

(ಗೇರುಸೊಪ್ಪೆಯ ರಾಜಸಭೆ; ಮಹಾಮಂತ್ರಿ ವರ್ಧಮಾನ ಸಿದ್ಧಾಂತಿಗಳು, ರಾಜಗುರು ಭಟ್ಟಾಕಳಂಕರು, ದಂಡನಾಯಕ ಭೈರವನಾಯಕ, ಹೊನ್ನಾವರದ ಕೊತವಾಲ ಕಂಠಪ್ಪ ನಾಯಕ, ಕಾರಭಾರಿ ಸತ್ರಾಜಿತ ಶೆಣೈ ಉಪಸ್ಥಿತರಿದ್ದಾರೆ. ಸ್ತುತಿಪಾಠಕರು ರಾಣಿಯ ಪ್ರವೇಶವನ್ನು ಉದ್ಘೋಷಿಸುತ್ತಾರೆ)

ಸ್ತುತಿಪಾಠಕ : ಗೇರುಸೊಪ್ಪೆ ಮತ್ತು ಹಾಡುವಳ್ಳಿ ಜೋಡಿ ಸಾಮ್ರಾಜ್ಯಗಳ ಪಟ್ಟದ ರಾಣಿ, ಹೈವ ಕೊಂಕಣ ತುಳು ರಾಜ್ಯಗಳ ಒಡತಿ, ಚೆನ್ನಭೈರಾದೇವಿ ಅಮ್ಮನವರು ಆಗಮಿಸುತ್ತಿದ್ದಾರೆ.

(ಸಭೆಯಲ್ಲಿ ಇರುವವರು ಎದ್ದು ನಿಲ್ಲುತ್ತಾರೆ)

ಸ್ತುತಿಪಾಠಕ : ಮಹಾರಾಣಿ ಚೆನ್ನಭೈರಾದೇವಿ ಅಮ್ಮನವರಿಗೆ ಜಯವಾಗಲಿ.

(ಮಹಾರಾಣಿ ಚೆನ್ನಭೈರಾದೇವಿ ಪ್ರವೇಶಿಸಿ, ರಾಜಗುರುಗಳಿಗೂ ಸಿಂಹಾಸನಕ್ಕೂ ನಿಂತಲ್ಲೇ ಬಾಗಿ ಕೈಮುಗಿದು ಸಿಂಹಾಸನವನ್ನೇರಿ ಕುಳಿತುಕೊಳ್ಳುತ್ತಾಳೆ.
ರಾಣಿ ಕುಳಿತೊಡನೆ ಸಭೆಯಲ್ಲಿದ್ದವರೂ ಬಾಗಿ ನಮಸ್ಕರಿಸಿ, ಕುಳಿತುಕೊಳ್ಳುತ್ತಾರೆ)

ಮಹಾರಾಣಿ : ಮಹಾಮಂತ್ರಿಗಳೇ, ಅವಸರದಲ್ಲಿ ಮಂತ್ರಾಲೋಚನೆಗೆ ಸಭೆ ಕರೆಯುವ ಅವಶ್ಯಕತೆ ಇದೆಯೆಂದು ಕೋರಲು ಕಾರಣವೇನು? ರಾಜ್ಯದಲ್ಲಿ ಎಲ್ಲವೂ ಕ್ಷೇಮವಷ್ಟೆ?

ವರ್ಧಮಾನ ಸಿದ್ಧಾಂತಿ : ತಾಯಿ, ಪ್ರಜೆಗಳೆಲ್ಲ ಕ್ಷೇಮವಾಗಿದ್ದಾರೆ. ರಾಜ್ಯವು ಸುಭಿಕ್ಷವಾಗಿದೆ. ಗೋವೆಯ ಪೋರ್ಚುಗೀಸ್ ಗವರ್ನರ್ ಲೂಯಿಸ್ ಅಟಾಯಿಡೆ ಉದ್ಧಟತನದ ಪತ್ರವೊಂದನ್ನು ಕಳುಹಿಸಿದ್ದಾನೆ.

ಮಹಾರಾಣಿ : ಏನಿದೆ ಪತ್ರದಲ್ಲಿ?

ಸಿದ್ಧಾಂತಿ : ಕಾರಭಾರಿಗಳೇ, ಪತ್ರವನ್ನು ಓದಿರಿ.

ಸತ್ರಾಜಿತ : ಹಾಡುವಳ್ಳಿ ಗೇರುಸೊಪ್ಪೆಗಳ ಮಹಾರಾಣಿಗೆ, ಗೋವೆಯ ಗವರ್ನರ್ ಲೂಯಿಸ್ ಅಟಾಯಿಡೆಯ ಶುಭಾಶಯಗಳು.


ಚೆನ್ನಭೈರಾದೇವಿ
ಲೋಹದ ಮೂರ್ತಿ

ಗೌರವಾನ್ವಿತರೇ, ತಾವು ಹೊನ್ನಾವರ ಮತ್ತು ಭಟ್ಕಳ ಬಂದರುಗಳಲ್ಲಿ ನಮ್ಮ ಒಪ್ಪಿಗೆ ಪತ್ರವನ್ನು ಪಡೆಯದ ಮುಸಲ್ಮಾನರ ಹಡಗುಗಳಿಗೆ ಕರಿಮೆಣಸು, ದಾಲ್ಚಿನ್ನಿ, ಕೆಂಪಕ್ಕಿ ಮತ್ತು ಶ್ರೀಗಂಧವನ್ನು ತುಂಬಿಸಿ, ಅವರ ಸಮುದ್ರ ವ್ಯಾಪಾರಕ್ಕೆ ಸಹಕರಿಸುತ್ತಿದ್ದೀರಿ. ಇದು ನಮ್ಮ ಆಶಯಕ್ಕೆ ವಿರುದ್ಧವಾಗಿದೆ. ಕೂಡಲೇ ತಾವು ನಮ್ಮ ಒಪ್ಪಿಗೆ ಪಡೆಯದ ಮುಸಲ್ಮಾನರ ಹಡಗುಗಳನ್ನು ನಿಮ್ಮ ಬಂದರುಗಳಿಂದ ಹೊರಗಟ್ಟಬೇಕು ಇಲ್ಲವೇ ವಶಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ನಿಮ್ಮ ಮೇಲೆ ಕ್ರಮ ಕೈಗೊಳ್ಳುವುದು ನಮಗೆ ಅನಿವಾರ್ಯವಾಗುತ್ತದೆ. ಜೊತೆಗೆ ನೀವು ಪೋರ್ಚುಗೀಸ್ ರಾಜದ್ರೋಹಿ ರೊಜಾರಿಯೋಗೆ ಆಶ್ರಯ ನೀಡಿದ್ದೀರಿ. ಆತನನ್ನು ಕೂಡಲೇ ನಮಗೆ ಒಪ್ಪಿಸಬೇಕು. ಮೇಲಾಗಿ ನೀವು ಕಳೆದ ಹಲವು ವರ್ಷಗಳಿಂದ ನಮಗೆ ಕಪ್ಪವನ್ನು ಕೊಟ್ಟಿಲ್ಲ. ಇನ್ನೊಂದು ವಾರದೊಳಗೆ ಕಪ್ಪವನ್ನೂ, ರೊಜಾರಿಯೋನನ್ನೂ ನಮಗೆ ತಂದೊಪ್ಪಿಸದಿದ್ದರೆ ನಿಮ್ಮನ್ನು ದಂಡಿಸಬೇಕಾಗುತ್ತದೆ. ನಮ್ಮ ಚಕ್ರವರ್ತಿಗಳು ನಿಮಗೆ ನೀಡಿದ 'ಕಾಳುಮೆಣಸಿನ ರಾಣಿ' ಎಂಬ ಬಿರುದನ್ನು ಹಿಂದಕ್ಕೆ ಪಡೆಯಬೇಕಾಗುತ್ತದೆ, ಎಚ್ಚರಿಕೆ.

ಮಹಾರಾಣಿ : ನಿಲ್ಲಿಸಿ, ಅತಿಯಾಯಿತು ಉದ್ಧಟತನ. ನಮ್ಮ ನೆಲದ ನಾವಿಕ ರೊಜಾರಿಯೋನನ್ನು ಅವರಿಗೊಪ್ಪಿಸಲು ನಾವೇನು ಹೆಂಬೇಡಿಗಳಲ್ಲ. ನಾವು ಮುಸಲ್ಮಾನರೊಡನೆ ವ್ಯಾಪಾರ ಮಾಡಲು ಇವರದೇನು ಅಡ್ಡಿ! ಇನ್ನು ಕಪ್ಪ, ಕಪ್ಪ ಕೊಡಲು ಈ ನೆಲ ಇವರಪ್ಪನದಲ್ಲ. ಕಾರಭಾರಿಗಳೇ ಕೂಡಲೇ ಅವರಿಗೆ ಪತ್ರಿಸಿ. ಅವರ ಯಾವ ಕರಾರುಗಳನ್ನೂ ನಾವು ಒಪ್ಪುವುದಿಲ್ಲ. ನಮಗೆ ಕೊಟ್ಟ ಬಿರುದನ್ನು ಅವರೇನು ಹಿಂದಕ್ಕೆ ಪಡೆಯುವುದು? ನಾವೇ ಅದನ್ನು ಅವರಿಗೆ ಹಿಂದಿರುಗಿಸುತ್ತೇವೆ. ಬಿರುದನ್ನು ಕೊಡಿರೆಂದು ನಾವು ಇವರನ್ನು ಬೇಡಿಕೊಂಡಿದ್ದೇವೇನು?

© KTBS Not to be republished

ಇಂದೇ ಅವರಿಗೆ ನಮ್ಮ ಉತ್ತರವನ್ನು ಕಳುಹಿಸಿ. ಭೈರವ ನಾಯಕರೇ, ಹೊಗೆವಡ್ಡಿ ಮತ್ತು ಇತರೆಡೆಯಲ್ಲಿ ಬೀಡುಬಿಟ್ಟ ನಮ್ಮ ಸೈನ್ಯ ಕೂಡಲೇ ಹೊನ್ನಾವರಕ್ಕೆ ಬರಲಿ. ಹೊನ್ನಾವರ ಬಂದರಿನ ರಕ್ಷಣೆಗೆ ಇನ್ನಷ್ಟು ಯೋಧರನ್ನು ನೇಮಿಸಿ.

ಭೈರವ ನಾಯಕ : ಅಪ್ಪಣೆ ಮಹಾರಾಣಿ.

ಮಹಾರಾಣಿ : ಹೊನ್ನಾವರದಲ್ಲಿರುವ ನಮ್ಮ ನಾವಿಕ ಪಡೆಯ ಸರದಾರ ರೊಜಾರಿಯೋನನ್ನು ಕೂಡಲೇ ಕಾನೂರಿಗೆ ಕಳುಹಿಸುವ ವ್ಯವಸ್ಥೆ ಮಾಡಿ. ಕಂಠಪ್ಪ ನಾಯಕರೇ, ಹೊನ್ನಾವರ ಕೋಟೆ ಸುಭದ್ರವಾಗಿದೆಯಷ್ಟೆ?

ಕಂಠಪ್ಪ ನಾಯಕ : ಸುಭದ್ರವಾಗಿದೆ, ಮಹಾರಾಣಿ. ನಮ್ಮಲ್ಲಿ ಮುನ್ನೂರು ಮಂದಿ ಸಶಸ್ತ್ರ ಕಾವಲು ಪಡೆಯ ಯೋಧರಿದ್ದಾರೆ. ಅಗತ್ಯ ಬಿದ್ದರೆ ದಂಡನಾಯಕರ ಬಳಿ ಹೆಚ್ಚು ನೆರವು ಕೇಳುತ್ತೇನೆ.

(ಅಷ್ಟರಲ್ಲಿ ಕಾವಲು ಭಟ ಬಂದು ಶಬಲೆ ಒಳಗೆ ಬರಲು ಅಪ್ಪಣೆ ಕೇಳುತ್ತಿದ್ದಾಳೆಂದು ಹೇಳುತ್ತಾನೆ. ಮಹಾರಾಣಿ ಅವಳನ್ನು ಒಳಗೆ ಕಳಿಸು ಎನ್ನುತ್ತಾಳೆ)

ಶಬಲೆ : (ಒಳಗೆ ಬಂದು ಮಹಾರಾಣಿಗೆ ತಲೆಬಾಗಿ ವಂದಿಸಿ) ಮಹಾರಾಣಿಯವರಿಗೆ ಜಯವಾಗಲಿ. ತಮ್ಮಲ್ಲಿ ಅರಿಕೆ ಮಾಡಿಕೊಳ್ಳಲು ಅವಸರದ ಸಂಗತಿಯೊಂದಿದೆ ಮಹಾರಾಣಿ.

ಮಹಾರಾಣಿ : ಹೇಳು ಶಬಲೆ.

ಶಬಲೆ : ಮಹಾರಾಣಿ, ಗೋವೆಯ ಗವರ್ನರ್ ಲೂಯೀಸ್ ಅಟಾಯಿಡೆಯ ನಾವಿಕದಂಡು ಹೊನ್ನಾವರದ ಮೇಲೆ ದಾಳಿಮಾಡಲು ಹೊರಡುವುದಕ್ಕೆ ಸಿದ್ಧವಾಗಿ ನಿಂತಿದೆ. ಇನ್ನೆರಡು ದಿನದಲ್ಲಿ ದಂಡು ಗೋವೆಯಿಂದ ಹೊರಡಲಿದೆ.

ಸಿದ್ಧಾಂತಿ : ಹೌದೇನು? ಪತ್ರದಲ್ಲಿ ಆತ ಒಂದು ವಾರದ ಗಡವು ಕೊಟ್ಟಿದ್ದಾನೆ.

ಮಹಾರಾಣಿ : ಅದು ಅವರ ಯುದ್ಧತಂತ್ರ, ಮಹಾಮಂತ್ರಿಗಳೇ. ಕುತಂತ್ರವೇ ಯುದ್ಧನೀತಿಯಾಗಿರುವ ಪೋರ್ಚುಗೀಸರು ಹೇಳುವುದೊಂದು, ಮಾಡುವುದೊಂದು. ಅದರಲ್ಲೇನು ಹೊಸದು! ದಂಡನಾಯಕರೇ, ಈ ಬಾರಿ ಅವರಿಗೆ ಸರಿಯಾದ ಪಾಠ ಕಲಿಸಬೇಕು.

ಶಬಲೆ : ಮಹಾರಾಣಿ, ಅವರು ಯುದ್ಧಕ್ಕೆ ಸಿದ್ಧರಾಗಿರುವುದು ಎರಡು ಉದ್ದೇಶಕ್ಕೆ. ಒಂದು ನಮಗೆ ಸಹಾಯ ಮಾಡಿದ ತಪ್ಪಿಗೆ ರುಜಾರಿಯೋನನ್ನು ಪೋರ್ಚುಗಲ್ಲಿಗೆ ಒಯ್ದು ದಂಡನೆ ನೀಡಲು. ಇನ್ನೊಂದು ನೀವು

©KTBS Not to be republished

ಮತಾಂತರಕ್ಕಾಗಿ ಬರುವ ಮಿಶನರಿಗಳಿಗೆ ಅವಕಾಶ ನೀಡುತ್ತಿಲ್ಲವೆಂದು ನಿಮ್ಮನ್ನು ಬಂಧಿಸಿ ಗೋವೆಗೆ ಒಯ್ಯಲು. ಅದಕ್ಕಾಗಿಯೇ ಅಟಾಯಿಡೆ ಪೋರ್ಚುಗಲ್ಲಿನ ಪ್ರಭು ಸೆಬಾಸ್ಟಿಯನ್‌ಗೆ ವಿಶೇಷ ಪತ್ರ ಕಳುಹಿಸಿ ಹೆಚ್ಚು ನಾವೆಗಳನ್ನು ತರಿಸಿಕೊಂಡಿದ್ದಾನೆ. ಹಾಗಾಗಿ...

ಸಿದ್ಧಾಂತಿ : ಏನು ಶಬಲೆ? ಅರ್ಧ ವಾಕ್ಯಕ್ಕೇ ಮಾತು ನಿಲ್ಲಿಸಿದೆ?

ಶಬಲೆ : ನನ್ನನ್ನು ಕ್ಷಮಿಸಬೇಕು ಮಹಾರಾಣಿ. ಅವರು ಸುಮಾರು ನೂರಾ ಮೂವತ್ತು ಹಡಗುಗಳನ್ನು ಸಜ್ಜುಗೊಳಿಸಿದ್ದಾರೆ. ವಿಶೇಷ ತರಬೇತಿ ಪಡೆದ ನಾವಿಕ ಸೈನ್ಯವನ್ನು ಪೋರ್ಚುಗಲ್ಲಿನಿಂದ ತರಿಸಿದ್ದಾರೆ. ಹಾಗಾಗಿ ಈ ಸಲ ಸಮುದ್ರಯುದ್ಧದಲ್ಲಿ ಅವರನ್ನು ಗೆಲ್ಲುವುದು ಕಷ್ಟಸಾಧ್ಯ.

ಮಹಾರಾಣಿ : ಶಬಲೆ, ನಿನ್ನ ಬಾಯಲ್ಲಿ ಸೋಲಿನ ಮಾತು, ಏನಾಯಿತು ನಿನಗೆ?

ಶಬಲೆ : ಅವರ ಸಿದ್ಧತೆ ಹಾಗಿದೆ, ಮಹಾರಾಣಿ. ಒಂದು ವಾರ ಕಾಲ ಅವರ ಬಂದರು ಕಟ್ಟೆಗಳಲ್ಲಿ ರಹಸ್ಯವಾಗಿ ಸಂಚರಿಸಿ ಮಾಹಿತಿ ಸಂಗ್ರಹಿಸಿದ್ದೇನೆ. ಈ ಸಲ ತಾವೇನಾದರೂ ವಿಶೇಷ ಪ್ರತಿತಂತ್ರ ಹೂಡಬೇಕು.

ಭೈರವ ನಾಯಕ : ಶಬಲೆ ಅವರ ಹಡಗುಗಳ ಸಂಖ್ಯೆ ನೋಡಿ ಹೆದರಿದಂತಿದೆ ಮಹಾರಾಣಿ. ಅವರೊಮ್ಮೆ ದಾಳಿ ಮಾಡಲಿ. ನಂತರ ತಿಳಿಯುತ್ತದೆ, ಪರಂಗಿಗಳ ಪರಾಕ್ರಮ.

ಸಿದ್ಧಾಂತಿ : ಭೈರವ ನಾಯಕರೇ, ವಿಷಯ ಅಷ್ಟು ಸರಳವಲ್ಲ. ಶಬಲೆಯ ಮಾತು ಸರಿ ಇದೆ. ಯಾವತ್ತೂ ಮೊಸಳೆಯನ್ನು ನೀರಿನಲ್ಲಿ ಸೋಲಿಸುವುದು ಕಷ್ಟ. ಅದನ್ನು ನೀರಿನಿಂದ ಹೊರಗೆಳೆದು ಸದೆಬಡಿಯಬೇಕು.

ಮಹಾರಾಣಿ : ಅರ್ಥವಾಯಿತು ಮಹಾಮಂತ್ರಿಗಳೇ, ಈ ಬಾರಿ ನಮ್ಮ ಯುದ್ಧತಂತ್ರ ಬದಲಾಗಬೇಕು. ಮೊಸಳೆಯನ್ನು ನೀರಿನಿಂದ ಹೊರಗೆಳೆದು ಸೋಲಿಸಬೇಕು. ಸರಿ, ಇಲ್ಲಿಗೆ ಸಭೆಯನ್ನು ಮುಗಿಸೋಣ. ಭೈರವ ನಾಯಕರೇ, ನೀವು, ಶಬಲೆ ಮತ್ತು ಸತ್ರಾಜಿತ ಬೆಳಿಗ್ಗೆ ನನ್ನನ್ನು ಭೇಟಿ ಮಾಡಿ.

(ರಾಣಿ ಎದ್ದು ನಿಲ್ಲುತ್ತಿದ್ದಂತೆ ಸ್ತುತಿಪಾಠಕ ಮತ್ತೊಮ್ಮೆ ಜಯಘೋಷ ಮಾಡುತ್ತಾನೆ)

## ದೃಶ್ಯ–೨

(ಶಿಬಿರದಲ್ಲಿ ಮೂರು ಕುರ್ಚಿಗಳು. ಮಧ್ಯದ ಕುರ್ಚಿಯಲ್ಲಿ ಅಟಾಯಿಡೆ ಕುಳಿತಿದ್ದರೆ ಅಕ್ಕಪಕ್ಕದಲ್ಲಿ ಕ್ಯಾಪ್ಟನ್ ಡಿಸಿಲ್ವ ಮತ್ತು ಕ್ಯಾಪ್ಟನ್ ಮೆಂಜೆಸ್. ಭಟನೊಬ್ಬ ಬಂದು ನಮಸ್ಕರಿಸಿ ಪತ್ರವನ್ನು ಕೊಟ್ಟು ಹಿಂದಿರುಗುತ್ತಾನೆ)

©KTBS Not to be republished




| | | |
|---|---|---|
| ಅಟಾಯಿಡೆ | : | ಏನು ಬರೆದಿದ್ದಾಳೆ, ಆ ಹೆಂಗಸು? ಸಾರಾಂಶ ಹೇಳಿ |
| ದುಭಾಷಿ | : | ನಿಮ್ಮ ಯಾವುದೇ ಕರಾರಿಗೂ ನಮ್ಮ ಒಪ್ಪಿಗೆಯಿಲ್ಲ. ಮುಸಲ್ಮಾನರೊಡನೆ ವ್ಯಾಪಾರ ಮಾಡಲು ನಮಗೆ ನಿಮ್ಮ ಒಪ್ಪಿಗೆ ಬೇಕಿಲ್ಲ. ನಮ್ಮ ಪ್ರಜೆಯಾದ ರೊಜಾರಿಯೋನನ್ನು ನಿಮಗೆ ಒಪ್ಪಿಸುವುದಿಲ್ಲ. ಇನ್ನು ನೀವು ಕೊಟ್ಟ ಬಿರುದು? ಬಿರುದನ್ನು ಕೊಡಿರೆಂದು ನಾವೇನು ನಿಮ್ಮ ಬಳಿ ಬಂದು ಕೇಳಿರಲಿಲ್ಲ. ಇದೋ, ಹಿಂದಿರುಗಿಸುತ್ತಿದ್ದೇನೆ ನಿಮ್ಮ ಬಿರುದಿನ ಪತ್ರವನ್ನು. ನಿಮ್ಮಲ್ಲೇ ಇಟ್ಟುಕೊಳ್ಳಿ. ನೆನಪಿಟ್ಟುಕೊಳ್ಳಿ, ಕಪ್ಪ ಕೊಡಲು ಇದು ನಿಮ್ಮ ಅಪ್ಪನ ನೆಲವಲ್ಲ. ಇನ್ನು ನಿಮ್ಮ ಇಚ್ಛೆಯಂತೆ ನಮ್ಮನ್ನು ದಂಡಿಸಲು ನೀವು ಸ್ವತಂತ್ರರು. ನಿಮ್ಮ ಹುಸಿ ಬೆದರಿಕೆಗೆ ನಾವು ಅಂಜುವವರಲ್ಲ. |
| ಅಟಾಯಿಡೆ | : | ಏನು ಆಕೆ ಬೊಗಳಿದ್ದು? ನಿಮ್ಮ ಅಪ್ಪನ ನೆಲ ಅಲ್ಲ. ಹಾಗೆಂದರೆ..? |
| ಡಿಸಿಲ್ವ | : | ಕಪ್ಪ ಕೊಡಲು ಇದು ನಿಮ್ಮ ಅಪ್ಪನ ನೆಲ ಅಲ್ಲ ಅಂದರೆ ಈ ನೆಲ ನಿಮ್ಮ ತಂದೆಗೆ ಸೇರಿದ್ದಲ್ಲ, ನಮ್ಮದು. ಹಾಗಾಗಿ ನಾವು ಕಪ್ಪ ಕೊಡುವುದಿಲ್ಲ ಎಂದು |

ಅರ್ಥ. ಸರ್, ಅವಳು ನಮ್ಮ ಯಾವುದೇ ಕರಾರನ್ನೂ ಒಪ್ಪಿಲ್ಲ. ಹಾಗಾಗಿ ದಾಳಿ ಮಾಡುವುದು ಅನಿವಾರ್ಯ.

ಅಟಾಯಿಡೆ : ಆದಷ್ಟು ಬೇಗ ಹೊನ್ನಾವರದ ಮೇಲೆ ದಾಳಿ ಮಾಡಬೇಕು. ಈಗ ನಾವೆಲ್ಲಿದ್ದೇವೆ?

ಮೆಂಜಿಸ್ : ಇದು ಅಂಜುದೀವ್. ಇಲ್ಲಿಂದ ಹೊನ್ನಾವರಕ್ಕೆ ಎರಡು ದಿನದ ಪ್ರಯಾಣ.

ಅಟಾಯಿಡೆ : ಒಳ್ಳೆಯದು. ಈ ಸಲ ಅವಳಿಗೆ ನಾವು ಬುದ್ಧಿ ಕಲಿಸಲೇಬೇಕು. ನಮ್ಮ ನಾವೆಗಳನ್ನು ನಾಳೆ ಬೆಳಿಗ್ಗೆಯೇ ಹೊರಡಿಸಿಬಿಡಿ.

(ಹಿನ್ನೆಲೆಯಲ್ಲಿ "ಸ್ಯಾಂಟಿಯಾಗೋ" ಎಂಬ ರಣಘೋಷ)

## ದೃಶ್ಯ–೩

(ಮಂತ್ರಾಲೋಚನೆ ಕೊಠಡಿ. ಶಬಲೆ, ಸತ್ರಾಜಿತ, ಭೈರವನಾಯಕ, ಕಂಠಪ್ಪನಾಯಕ)

ಶಬಲೆ : ಮಹಾರಾಣಿ, ಇಂದು ಬೆಳಿಗ್ಗೆ ಪರಂಗಿ ನಾವೆಗಳು ಅಂಜುದ್ವೀಪವನ್ನು ಬಿಡುತ್ತಿವೆ. ಒಟ್ಟು ನೂರಾಮೂವತ್ತು ನಾವೆಗಳು. ಎರಡೂವರೆ ಸಾವಿರ ಶಸ್ತ್ರಸಜ್ಜಿತ ಯೋಧರು. ಅರ್ಧದಷ್ಟು ಯೋಧರು ಕುದುರೆಗಳ ಮೇಲೆ ಬರುತ್ತಿದ್ದಾರೆ. ಅವರು ಈ ಸಲ ಸಮುದ್ರಯುದ್ಧದ ಜೊತೆಗೆ ಭೂಯುದ್ಧಕ್ಕೂ ಸಿದ್ಧರಾಗಿ ಬರುತ್ತಿದ್ದಾರೆ. ನಮ್ಮ ಹಡಗುಕಟ್ಟೆ ಅಧಿಕಾರಿಗಳಿಗೆ ಗೊಂದಲ ಮೂಡಿಸಲು, ಮುಂದಿನ ಕೆಲವು ನಾವೆಗಳಿಗೆ ಪರ್ಶಿಯನ್ ಧ್ವಜ ಕಟ್ಟಿದ್ದಾರೆ. ಕುದುರೆ ಸವಾರರೂ ಬೇರೆ ಬೇರೆ ವೇಷ ತೊಟ್ಟು ಬರುತ್ತಿದ್ದಾರೆ.

ಭೈರವನಾಯಕ : ಮಹಾರಾಣಿ. ನಿಮ್ಮ ಅಪ್ಪಣೆಯಂತೆ ಈಗಾಗಲೇ ಕಾರವಾರ, ಅವರ್ಸಿ, ಅಂಕೋಲಗಳ ಕೊತವಾಲರಿಗೆ ಸೇತುವೆಗಳನ್ನು ಬೀಳಿಸಲು ಸೂಚನೆ ರವಾನಿಸಲಾಗಿದೆ. ಈಗಿನ್ನೂ ಕಾರ್ತೀಕ ಮಾಸ. ಕಾಳಿ, ಚಾಂಡಿಯಾ, ಗಂಗಾವಳಿ, ಅಘನಾಶಿನಿಗಳಲ್ಲಿ ಸಾಕಷ್ಟು ನೀರು ಹರಿಯುತ್ತಿದೆ. ಸೇತುವೆ ತುಂಡಾದರೆ ಕುದುರೆ ಸವಾರರು ಸುಲಭಕ್ಕೆ ದಾಟಿ ಬರಲಾಗದು. ಅವರು ಒಬ್ಬೊಬ್ಬರಾಗಿ ತೆಪ್ಪದ ಮೂಲಕ ಹೊಳೆ ದಾಟಿದರೆ ನಮ್ಮ ಸೈನಿಕರು, ಹೊಳೆ ದಾಟುತ್ತಿದ್ದಂತೆ ಅವರನ್ನು ಬಂಧಿಸುತ್ತಾರೆ.

ಮಹಾರಾಣಿ : ಒಳ್ಳೆಯದು. ಕಂಠಪ್ಪನಾಯಕರೇ, ನೀವು ಹೊನ್ನಾವರ ಕೋಟೆಯನ್ನು ಸಂಪೂರ್ಣ ತೆರವುಗೊಳಿಸಿ, ಒಳಗಿನಿಂದ ಬಾಗಿಲನ್ನು ಭದ್ರಪಡಿಸಿ, ಹಗ್ಗದ ಮೂಲಕ ಹೊರಬನ್ನಿರಿ. ಹೊರಗೆ ನಿಮ್ಮ ಶಸ್ತ್ರಸಜ್ಜಿತ ಸೈನಿಕರ ಮೂಲಕ ಪರಂಗಿಗಳು ಮೇಲೆ ಬರದಂತೆ ಸಾಧ್ಯವಾದ ಮಟ್ಟಿಗೆ ತಡೆಯಿರಿ. ಅವರ ಫಿರಂಗಿಗಳಿಗೆ ನಮ್ಮವರು ಸಿಗದಂತೆ ಎಚ್ಚರವಹಿಸಿ. ನಾಲ್ಕೈದು ದಿನ

©KTBS Not to be republished

ಪ್ರಯತ್ನಿಸಿದ ನಂತರ ಅವರು ಹೇಗಾದರೂ ಮಾಡಿ ಮೇಲೆ ಬಂದಾರು. ಬಂದವರ ವಿರುದ್ಧ ಹೋರಾಡುತ್ತ ಮೆಲ್ಲಗೆ ಪಲಾಯನ ಮಾಡಿಬಿಡಿ. ಭೈರವನಾಯಕರೇ ನೀವೂ ಮೊದಲ ದಿನವೇ ಬಸವರಾಜ ದುರ್ಗದಿಂದ ಹಿಮ್ಮೆಟ್ಟಬೇಕು.

ಭೈರವನಾಯಕ : ಮಹಾರಾಣಿ, ನಮ್ಮ ಯೋಧರು ಶತ್ರುಗಳಿಗೆ ಬೆನ್ನು ತೋರಿಸಬೇಕೇ?

ಮಹಾರಾಣಿ : ನಾಯಕರೇ, ಸೈನಿಕರಿಗೆ ಹೇಳಿ, ಇದು ಯುದ್ಧತಂತ್ರ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಕುತಂತ್ರವನ್ನು ತಂತ್ರಗಾರಿಕೆಯಿಂದಲೇ ಮಣಿಸಬೇಕು. ನಮ್ಮ ನೆರವಿಗೆ ಬರುತ್ತಿರುವ ಬಿಜಾಪುರದ ಸೈನ್ಯ ಮತ್ತು ಕೇರಳದ ಜಾಮೋರಿನ್ನರ ನಾವಿಕದಳ ಇಲ್ಲಿಗೆ ತಲುಪಲು ಸ್ವಲ್ಪ ಸಮಯ ಬೇಕು. ಅಲ್ಲಿಯವರೆಗೆ ನಾವು ಈ ಪರಂಗಿಗಳನ್ನು ತಡೆಯಬೇಕು. ಮುಂದೆ ಎಲ್ಲರೂ ಒಂದಾಗಿ ಅವರನ್ನು ಬೆನ್ನಟ್ಟಿಹೋಗಿ ಗೋವೆಯನ್ನು ಪರಂಗಿಗಳಿಂದ ಮುಕ್ತಗೊಳಿಸಬೇಕು.

ಶಬಲೆ : ಮಹಾರಾಣಿ, ಅವರ ಗುರಿ ರೊಜಾರಿಯೋನನ್ನು ಹೊತ್ತೊಯ್ಯುವುದು ಮತ್ತು ನಿಮ್ಮನ್ನು ಬಂಧಿಸುವುದು.

ಮಹಾರಾಣಿ : ಬಂಧಿಸಲಿ ಶಬಲೆ. ಈ ಸಲ ಅಟಾಯಿಡೆಯ ಅಟಾಟೋಪವನ್ನು ಪರೀಕ್ಷಿಸಲೆಂದೇ ನಾನು ಈ ತಂತ್ರಯುದ್ಧದ ಹಾದಿ ಹಿಡಿದಿರುವುದು. ಅವನೊಬ್ಬ ರಣಕೋವಿದನಂತೆ. ಅಪ್ರತಿಮ ವೀರನಂತೆ. ಈ ಹಳ್ಳಿಯ ಹೆಣ್ಣುಮಗಳನ್ನು ಅದು ಹೇಗೆ ಬಂಧಿಸಿ ಕರೆದೊಯ್ಯುವನೆಂದು ನೋಡಲು ನಾನೂ ಕಾಯುತ್ತಿದ್ದೇನೆ.

©KTBS Not to be republished

## ದೃಶ್ಯ-೪

(ಹೊನ್ನಾವರದ ಕೋಟೆಯ ಒಳಭಾಗ ಸಂಪೂರ್ಣ ಬರಿದಾಗಿದೆ. ಮುರಿದು ಬಿದ್ದ ಒಂದೆರಡು ಫಿರಂಗಿ ತುಂಡುಗಳು. ದೊಡ್ಡದಾದ ಒಂದು ಕೊಪ್ಪರಿಗೆ, ಚದುರಿಬಿದ್ದ ತಟ್ಟಿ ಬುಟ್ಟಿಗಳು ಕಾಣುತ್ತಿವೆ)

ಕ್ಯಾಪ್ಟನ್ ಡಿಸಿಲ್ವ : ಗವರ್ನರ್ ಸರ್, ಆ ದುಷ್ಟ ಹೆಂಗಸು ಮೊದಲ ದಿನ ಬಸವರಾಜದುರ್ಗದಲ್ಲಿ ವಂಚಿಸಿದಂತೆ ಈ ಹೊನ್ನಾವರ ಕೋಟೆಯಲ್ಲಿಯೂ ನಮ್ಮನ್ನು ಮೋಸಗೊಳಿಸಿದ್ದಾಳೆ. ಇದನ್ನು ಮೊದಲೇ ತೆರವುಗೊಳಿಸಿ, ಹೊರಗೆ ನಿಂತು ಹೋರಾಡುವವರಂತೆ ನಾಟಕ ಮಾಡಿ ಐದು ದಿನ ನಮಗೆ ಮೇಲೆ ಬರಲು ಬಿಡದೆ ಮೋಸ ಮಾಡಿದ್ದಾಳೆ.

ಅಟಾಯಿಡೆ : ಆ ದುಷ್ಟ ಹೆಂಗಸಿಗೆ ಬುದ್ಧಿ ಕಲಿಸಬೇಕು. ಇಡೀ ಹೊನ್ನಾವರ ಪಟ್ಟಣವನ್ನು ಸುಟ್ಟು ಬಿಡಿ. ಏನನ್ನೂ ಬಿಡಬೇಡಿ. ಮನೆ, ಕೊಟ್ಟಿಗೆ, ಅಂಗಡಿ, ದೇವಾಲಯ ಮಸೀದಿ, ಬಸದಿ ಎಲ್ಲವನ್ನೂ ಸುಟ್ಟುಬಿಡಿ.

ಮೆಂಜಿಸ್ : ಹೊನ್ನಾವರವನ್ನು ಸುಟ್ಟರೆ ನಮಗೆ ರೊಜಾರಿಯೋ ಮತ್ತು ರಾಣಿ ಸಿಗುವುದು ಹೇಗೆ?

ಅಟಾಯಿಡೆ : ಆಕೆ ಹೆದರಿ ಓಡಿ ಹೋಗಿದ್ದಾಳೆ. ನಾಳೆ ಅವಳನ್ನು ಬೆನ್ನಟ್ಟಿ ಎಲ್ಲಿದ್ದರೂ ಹಿಡಿದು ದಂಡಿಸೋಣ. ಇವತ್ತು ನಾವು ಈ ಕೋಟೆಯಲ್ಲೇ ಉಳಿದು ಹಬ್ಬ ಮಾಡೋಣ. ಕುಡಿದು ತಿಂದು ಕುಣಿದು ಕುಪ್ಪಳಿಸೋಣ. ಆ ದುಭಾಷಿಯನ್ನು ಕರೆಯಿರಿ. ಅವಳಿಗೆ ಎಚ್ಚರಿಕೆಯ ಪತ್ರ ಕಳಿಸೋಣ.

ದುಭಾಷಿ : ಸರ್, ಏನು ಅಪ್ಪಣೆ?

ಅಟಾಯಿಡೆ : ಆ ರಾಣಿಗೆ ಒಂದು ಪತ್ರ ಬರೆಯಬೇಕು.

ಅಂಜುಬುರುಕಳಂತೆ ಹೆದರಿ ಪಲಾಯನ ಮಾಡಿದ ನಿನ್ನ ಪರಿಸ್ಥಿತಿ ನಮಗೆ ನಗು ತರಿಸುತ್ತಿದೆ. ನಿಮ್ಮ ಹೊನ್ನಾವರ ಕೋಟೆ ಈಗ ನಮ್ಮ ವಶವಾಗಿದೆ. ನೀನು ಅಂಜುಬುರುಕಿ. ನಮಗೆ ಹೆದರಿ ಓಡಿ ಹೋಗಿರುವೆ. ನಿನಗೆ ಹೊನ್ನಾವರ ಬೇಕಿದ್ದರೆ ನಮಗೆ ಮೂರು ಹಡಗು ಕಾಳುಮೆಣಸು ದಂಡಕೊಡಬೇಕು. ರೊಜಾರಿಯೋನನ್ನು ಕರೆತಂದು ನಮಗೆ ಒಪ್ಪಿಸಬೇಕು. ನೀನು ನಮ್ಮೆದುರು ಬಂದು ಕ್ಷಮೆ ಕೇಳಿದರೆ ನಿನಗೆ ನಿನ್ನ ರಾಜ್ಯ ಮತ್ತು ಬಿರುದನ್ನು ಹಿಂದಕ್ಕೆ ಕೊಡುತ್ತೇವೆ. ಇಲ್ಲದಿದ್ದರೆ ಹೊನ್ನಾವರವನ್ನು ಸುಟ್ಟುಹಾಕುತ್ತೇವೆ, ಎಚ್ಚರಿಕೆ.

ಗೋವೆಯ ಗವರ್ನರ್ ಲೂಯಿಸ್ ಅಟಾಯಿಡೆ

ಈ ಪತ್ರವನ್ನು ಇಲ್ಲಿ  ನಮಗೆ ಸಿಕ್ಕಿಬಿದ್ದಿರುವ ಸೈನಿಕನ ಮೂಲಕ ಆಕೆಗೆ ಕಳುಹಿಸಿ ಕೊಡು.

(ಆತ ಸಹಿ ಹಾಕಿ ಕೊಟ್ಟ ಪತ್ರವನ್ನು ದುಭಾಷಿ ತೆಗೆದುಕೊಂಡು ಹೋಗುವನು)

ಡಿಸಿಲ್ವ : ಸರ್, ನಾಳೆ ನವೆಂಬರ್ ಇಪ್ಪತ್ತೈದು. ಸೈಂಟ್ ಕ್ಯಾಥರೀನ್ ಉತ್ಸವ. ನಾವು ಈ ಕೋಟೆಯೊಳಗೇ ಉತ್ಸವವನ್ನು ಆಚರಿಸೋಣ. ನಮ್ಮ ಲೆಫ್ಟಿನೆಂಟ್ ಜಾರ್ಜ್ ಡೇ ಮೌರಾನನ್ನು ಹೊನ್ನಾವರ ಕೋಟೆಯ ಕ್ಯಾಪ್ಟನ್ ಆಗಿ ನೇಮಿಸೋಣ.

ಮೆಂಜಿಸ್ : ಸ್ಯಾಂಟಿಯಾಗೋ

(ಎಲ್ಲರೂ 'ಸ್ಯಾಂಟಿಯಾಗೋ' ಎಂದು ಜಯಕಾರ ಮಾಡುತ್ತಾರೆ.)

(ಅಷ್ಟು ಹೊತ್ತಿಗೆ ಸರಿಯಾಗಿ ಕಂಠಪ್ಪನಾಯಕ ಬಿಳಿಯ ಬಾವುಟವನ್ನು ಹಿಡಿದು ತಲೆಬಗ್ಗಿಸಿ ಬರುತ್ತಾನೆ. ಪರಂಗಿ ಯೋಧರು ಮತ್ತು ಅಧಿಕಾರಿಗಳು ಅವನನ್ನು ನೋಡಿ ಹಾಸ್ಯ ಮಾಡಿಕೊಂಡು ನಗುತ್ತಾರೆ. ಅವನೊಡನೆ ಚೇಷ್ಟೆ ಮಾಡುತ್ತಾರೆ. ನಾಯಕ ಎಲ್ಲವನ್ನೂ ಸಹಿಸಿಕೊಂಡು ಮೌನವಾಗಿ ಮುಂದುವರಿದು ಕ್ಯಾಪ್ಟನ್ ಡಿಸಿಲ್ವಾ ಬಳಿ ಮೆಲುದನಿಯಲ್ಲಿ 'ಮಹಾರಾಣಿಯವರ ಪತ್ರ' ಎಂದು ಹೇಳಿ ಪತ್ರವನ್ನು ಕೊಡುತ್ತಾನೆ)

©KTBS Not to be republished

| | | |
|---|---|---|
| ಡಿಸಿಲ್ವ | : | ಗವರ್ನರ್ ಸರ್, ಮಹಾರಾಣಿ ಚೆನ್ನಭೈರಾದೇವಿ ಅಮ್ಮನವರು ಸಾಮ್ರಾಜ್ಯದ ಭಿಕ್ಷೆ ಬೇಡುವ ಪತ್ರ. ರೈನಾ ದ ಪೆಮೆಂಟಾ... ನಮಗೆ ಹೆದರಿ ಓಡಿಹೋದ ಕರಿಮೆಣಸಿನ ರಾಣಿ... ಓಹ್ಹೋಹ್ಹೋ (ನಗುವನು) |
| ಅಟಾಯಿಡೆ | : | ಮೊದಲು ಪತ್ರ ಓದಿ ಆನಂದಿಸೋಣ. ಇದು ನಮಗೆ ಬಹಳ ಸಂತೋಷದ ಸಮಯ. |
| ಮೆಂಜಿಸ್ | : | (ಪತ್ರವನ್ನು ಡಿಸಿಲ್ವ ಕೈಯಿಂದ ಕಿತ್ತುಕೊಂಡು) ಇದನ್ನು ಓದುವ ಖುಷಿ ನನ್ನದು. (ಓದುವನು) |

"ಗೆದ್ದೆನೆಂದು ಬೀಗುತ್ತಿರುವ ಶತಮೂರ್ಖ ಮಿಸ್ಟರ್ ಲೂಯಿಸ್ ಅಟಾಯಿಡೇ,

ನೀನು ಹೊನ್ನಾವರಕ್ಕೆ ದಾಳಿ ಮಾಡಿದ್ದು ರೊಜಾರಿಯೋನನ್ನು ಹೊತ್ತು ಒಯ್ಯಲು ಮತ್ತು ನನ್ನನ್ನು ಬಂಧಿಸಲು ತಾನೆ? ಕಾವಲಿಲ್ಲದೆ ಬರಿದಾದ ಕೋಟೆಯೊಳಗೆ ಸೇರಿಕೊಂಡು ಗೆದ್ದೆನೆಂದು ಬೀಗುವುದು ಪರಾಕ್ರಮವಲ್ಲ. ನೀನೇನು ಗೆದ್ದೆ ಮಣ್ಣು? ಹೊನ್ನಾವರವನ್ನು ಸುಡುವೆನೆಂಬ ಅಹಂಕಾರವೇ? ಇಡೀ ಹೊನ್ನಾವರ ಬರಿದಾಗಿದೆ. ಬೇಕಿದ್ದರೆ ಕೆಲವು ಮನೆ, ದೇವಾಲಯ, ಬಸದಿ, ಮಸೀದಿಗಳಿಗೆ ಬೆಂಕಿಹಚ್ಚು. ಹೇಗೂ ಪೋರ್ಚುಗೀಸರೆಂದರೆ ಬೆಂಕಿಹಚ್ಚುವ ಪುಕ್ಕಲುಶೂರರೆಂದು ನಮ್ಮವರಿಗೂ ಗೊತ್ತು.

ನಿನಗೆ ರೊಜಾರಿಯೋ ಬೇಕಿದ್ದರೆ, ಗೇರುಸೊಪ್ಪೆ ರಾಣಿಯನ್ನು ಸೆರೆ ಹಿಡಿಯಬೇಕೆಂದಿದ್ದರೆ, ಕಾಳು ಮೆಣಸಿನ ಸಂಗ್ರಹ ಮತ್ತು ಸಂಪತ್ತನ್ನು ದೋಚಬೇಕೆಂದಿದ್ದರೆ ಕಾನೂರು ಕೋಟೆಗೆ ಬಾ. ನಿನ್ನನ್ನು ಎದುರುಗೊಳ್ಳಲು ಕಾದಿದ್ದೇನೆ. ಒಂದು ವಿಚಾರ ಗಮನದಲ್ಲಿರಲಿ, ನಮ್ಮ ರಾಯಭಾರಿಗೇನಾದರೂ ಅಲ್ಪಸ್ವಲ್ಪ ಅಪಾಯವಾದರೂ ನಿನ್ನ ತಲೆ ಉಳಿಯುವುದಿಲ್ಲ, ಎಚ್ಚರಿಕೆ!

| | | |
|---|---|---|
| ಅಟಾಯಿಡೆ | : | (ಕೋಪದಿಂದ ಸಿಡಿದೆದ್ದು) ಅವಳು ದುಷ್ಟ ಹೆಂಗಸು. ರಾಕ್ಷಸಿ. ಮಾಟಗಾತಿ. ನಾನು ಅವಳನ್ನು ಸುಮ್ಮನೆ ಬಿಡುವುದಿಲ್ಲ. ಈ ರಾಯಭಾರಿಯನ್ನು ಸುಟ್ಟು ಬಿಡುತ್ತೇನೆ (ಎಂದು ತನ್ನ ಪಿಸ್ತೂಲನ್ನು ತೆಗೆಯಲು ಹೊರಡುತ್ತಾನೆ. ಕಂಠಪ್ಪನಾಯಕ ಅಂಜದೆ ನೆಟ್ಟಗೆ ನಿಂತಿರುತ್ತಾನೆ. ಮೆಂಜಿಸ್, ಡಿಸಿಲ್ವ ಇಬ್ಬರೂ ಅಟಾಯಿಡೆಯನ್ನು ತಡೆದು) |
| ಡಿಸಿಲ್ವ | : | ಬೇಡ, ಗವರ್ನರ್ ಸರ್. ಬಿಳಿ ಬಾವುಟ ಹಿಡಿದು ಬಂದ ರಾಯಭಾರಿಯನ್ನು ಕೊಲ್ಲಬಾರದು. ಬೇಕಾದರೆ ಬಂಧಿಸೋಣ. ನಾಳೆ ನಮಗೆ ಕಾನೂರು ಕೋಟೆಗೆ ದಾರಿ ತೋರಿಸಲು ಬೇಕಾಗುತ್ತದೆ. |
| ಅಟಾಯಿಡೆ | : | ಹೌದು. ನಾಳೆಯೇ ಆ ರಾಣಿಯನ್ನು ಬಂಧಿಸೋಣ. ಇವನನ್ನು ನನ್ನ ಕಣ್ಣೆದುರಿನಿಂದ ಆಚೆ ಕರೆದೊಯ್ಯಿರಿ. |

©KTBS Not to be republished

## ದೃಶ್ಯ-೫

(ಪಶ್ಚಿಮಘಟ್ಟದ ತುಟ್ಟತುದಿಯಲ್ಲಿರುವ ಕಾನೂರು ಕೋಟೆಗೆ ಹೋಗುವ ದಾರಿಯಲ್ಲಿರುವ
ದಟ್ಟ ಅರಣ್ಯ. ಅಟಾಯಿಡೆ, ಮೆಂಜಿಸ್, ಡಿಸಿಲ್ವಾ,
ಕೆಲವು ಯೋಧರು ಮತ್ತು ಕಂಠಪ್ಪನಾಯಕ ಘಟ್ಟವನ್ನು ಹತ್ತುತ್ತಿದ್ದಾರೆ)

ಮೆಂಜಿಸ್ : ಕಂಠಪ್ಪ, ನೀನು ಕರೆದೊಯ್ಯುತ್ತಿರುವ ಮಾರ್ಗ ಸರಿ ಇದೆ ತಾನೆ? ನನಗೇಕೋ ನಿನ್ನ ಮೇಲೆ ಸಂಶಯ ಬರುತ್ತಿದೆ.

ಕಂಠಪ್ಪ : ನನಗೆ ಗೊತ್ತು, ಕ್ಯಾಪ್ಟನ್. ನಾನೇನಾದರೂ ತಪ್ಪುದಾರಿಯಲ್ಲಿ ಕರೆದೊಯ್ದರೆ ನನ್ನ ಪ್ರಾಣಕ್ಕೇ ಸಂಚಕಾರ. ನಾನೇಕೆ ಹಾಗೆ ಮಾಡಲಿ? ಇದು ಕಾನೂರು ಕೋಟೆಯ ದಾರಿ. ಇನ್ನೆರಡು ಮೈಲು ಹತ್ತಿದರಾಯಿತು ಅಷ್ಟೆ.

ಮೆಂಜಿಸ್ : ಇನ್ನೂ ಎರಡು ಮೈಲು? ಬಲು ಕಷ್ಟದ ದಾರಿ.

ಡಿಸಿಲ್ವ : ನಿಮ್ಮ ರಾಣಿ ಈ ದಟ್ಟಕಾಡಿನ ನಡುವೆ ಯಾಕೆ ಕೋಟೆ ಕಟ್ಟಿಕೊಂಡಿದ್ದಾಳೆ. ಅವಳಿಗೆ ಬುದ್ಧಿ ಇಲ್ಲವೇ?

ಕಂಠಪ್ಪ : ನನಗದು ಗೊತ್ತಿಲ್ಲ. ಆದರೆ ಅದು ಸುಭದ್ರ ಕೋಟೆ. ಶತ್ರುಗಳು ಸುಲಭಕ್ಕೆ ಗೆಲ್ಲಲು ಸಾಧ್ಯವಾಗದ ಕೋಟೆ. ನಮ್ಮ ರಾಜ್ಯದ ಸಂಪತ್ತನ್ನು ಅಡಗಿಸಿಟ್ಟಿರುವುದು ಅದೇ ಕೋಟೆಯಲ್ಲಿ. ಅಲ್ಲಿ ಅಪಾರ ಪ್ರಮಾಣದ ಕಾಳುಮೆಣಸಿನ ಸಂಗ್ರಹವೂ ಇದೆ.

ಅಟಾಯಿಡೆ : ವೆರಿಗುಡ್. ಅಂದರೆ ನಮಗೆ ರಾಣಿಯ ಜೊತೆ ಸಂಪತ್ತಿನ ಉಡುಗೊರೆಯೂ ದೊರೆಯುತ್ತದೆ. ಒಳ್ಳೆಯದಾಯಿತು.

(ಯಾರೋ ನರಳುತ್ತ "ಸಾರ್.." ಎಂದು ಕರೆಯುವ ಧ್ವನಿ ಕೇಳಿಸುತ್ತದೆ)

ಅಟಾಯಿಡೆ : ಮೆಂಜಿಸ್, ಅದ್ಯಾರೋ ಸರ್ ಎಂದು ನಮ್ಮನ್ನು ಕರೆಯುತ್ತಿರುವಂತಿದೆ, ನೋಡಿ.

(ಅವನು ಮಾತು ಮುಗಿಸುವ ಮೊದಲೇ ಇಬ್ಬರು ಯೋಧರು ಹೆದರಿ
ನಡುಗುತ್ತ, ನರಳುತ್ತ ಬರುವರು. ಅವರ ಸಮವಸ್ತ್ರವೆಲ್ಲ ಹರಿದು ಹೋಗಿದೆ)

ಯೋಧ ೧ : ಕ್ಯಾಪ್ಟನ್, ಅವರು ನಮ್ಮವರನ್ನು ಬಂಧಿಸಿದರು. ನಮ್ಮ ಮೇಲೆ ಮರ ಬೀಳಿಸಿದರು.

ಡಿಸಿಲ್ವ : ಯಾರು?

ಯೋಧ ೧ : ಕಾಡುಜನ. ಕಪ್ಪಗೆ ರಾಕ್ಷಸರ ತರ ಕೋಡು ಇರುವವರು. ದೂರದಿಂದ ನಮ್ಮ ಮೇಲೆ ಕೋಲು ಕಟ್ಟಿಗೆ ಎಸೆದರು. ಬಳ್ಳಿಯ ಮೇಲೆ ಸುಯ್ಯನೆ ಬಂದು ನಮ್ಮ ಯೋಧರ ಕೋವಿಯನ್ನು ಹೊತ್ತೊಯ್ದರು. ನಮ್ಮನ್ನು ಒದ್ದು ಬೀಳಿಸಿದರು.

©KTBS Not to be republished

| | | |
|---|---|---|
| ಯೋಧ ೨ | : | ತಾಕಿದರೆ ಮೈ ತುರಿಸುವ ಗಿಡವನ್ನು ಅವರು ನಮ್ಮ ಮೇಲೆ ಎಸೆದರು. ಬೊಬ್ಬೆ ಬರಿಸುವ ರಸ ಸುರಿದರು. ಹಾವು ಚೇಳು ಎಸೆದರು. ನಮ್ಮವರೆಲ್ಲ ಹೆದರಿ ದಿಕ್ಕಪಾಲಾಗಿ ಓಡಿಹೋದರು. |
| | | (ಅಷ್ಟರಲ್ಲಿ ಇನ್ನಿಬ್ಬರು ಓಡಿ ಬರುತ್ತಾರೆ) |
| ಒಬ್ಬ | : | ಹುಲಿ ಕರಡಿಗಳು ಬಂದು ನಮ್ಮವರನ್ನು ಎಳೆದುಕೊಂಡು ಹೋದವು. ದೊಡ್ಡ ಹೆಬ್ಬಾವು ಇಬ್ಬಿಬ್ಬರನ್ನು ಒಟ್ಟಿಗೇ ಸುತ್ತಿಕೊಂಡಿತು. ಕ್ಯಾಪ್ಟನ್ ಪೌಲೋರ ಮುಖಕ್ಕೆ ಒಬ್ಬ ಅದೇನೋ ರಸ ಎರಚಿದ. ಮುಖವೆಲ್ಲ ಸುಟ್ಟು ಅವರು ಬಿದ್ದು ಒದ್ದಾಡುತ್ತಿದ್ದಾರೆ. |
| ಇನ್ನೊಬ್ಬ | : | ಮರವನ್ನು ಮೊದಲೇ ಕಡಿದು ಹಗ್ಗ ಹಿಡಿದು ನಿಂತಿರುತ್ತಾರೆ. ನಾವು ಹೋಗುತ್ತಿದ್ದಂತೆ ನಮ್ಮ ಮೇಲೆ ಬೀಳಿಸುತ್ತಾರೆ. ನಮ್ಮ ನೂರಾರು ಯೋಧರು ಈಗ ಕಣ್ಮರೆಯಾಗಿದ್ದಾರೆ. ಗುಂಡಿತೋಡಿ ಹುಲ್ಲು ಮುಚ್ಚಿರುತ್ತಾರೆ. ನಾವು ಹೋಗುತ್ತಿದ್ದಂತೆ ಗುಂಡಿಗೆ ಬೀಳುತ್ತೇವೆ. |
| ಒಬ್ಬ | : | ನಮ್ಮ ಕುಡಿಯುವ ನೀರಿನ ಬಿಂದಿಗೆ ಉರುಳಿಸಿ ಕುಡಿಯಲು ನೀರಿಲ್ಲದಂತೆ ಮಾಡಿದ್ದಾರೆ. ಆಹಾರದ ಪೊಟ್ಟಣವನ್ನು ಕದ್ದಿದ್ದಾರೆ. ನಮ್ಮವರು ಹಸಿವಿನಿಂದ ಕಂಗಾಲಾಗಿದ್ದಾರೆ. |
| ಅಟಾಯಿಡೆ | : | ಕ್ಯಾಪ್ಟನ್ಸ್, ಇದೇನು ನಡೆಯುತ್ತಿದೆ? ಮೊದಲು ಈ ಮನುಷ್ಯನನ್ನು ವಿಚಾರಿಸಿಕೊಳ್ಳಬೇಕು. (ಎಂದು ಸಿಟ್ಟಿನಲ್ಲಿ ಆತ ತಿರುಗಿ ನೋಡುವ ಹೊತ್ತಿಗೆ ಕಂಠಪ್ಪನಾಯಕ ಕಣ್ಮರೆಯಾಗಿದ್ದಾನೆ) |
| ಡಿಸಿಲ್ವ | : | ಗವರ್ನರ್ ಸರ್, ಈ ಕಡೆ ಬನ್ನೀ.. (ಆತ ಕಿರಚುತ್ತ ಬಂದು ಅಟಾಯಿಡೆಯನ್ನು ತನ್ನತ್ತ ಎಳೆದುಕೊಳ್ಳುವನು. ಅಷ್ಟರಲ್ಲಿ ದೊಡ್ಡದೊಂದು ಉರುಳುಗಲ್ಲು ಅವನ ಪಕ್ಕದಲ್ಲೇ ಉರುಳಿಕೊಂಡು ಹೋಗುವುದು. ಅವರು ಬಚಾವಾದೆವೆಂದು ನಿಟ್ಟುಸಿರಿಡುವಷ್ಟರಲ್ಲಿ ಮತ್ತೊಂದು ಕಲ್ಲು ಅವರ ನಡುವೆ ಉರುಳಿಕೊಂಡು ಹೋಗುವುದು. ಅಟಾಯಿಡೆ ಹೆದರಿ, 'ನೀರು... ನೀರು' ಎಂದು ಬೊಬ್ಬೆ ಹಾಕುವನು. ನೀರು ಹಿಡಿದು ಬರುತ್ತಿದ್ದ ಅವರ ಯೋಧ ಅಲ್ಲಿ ಇರಲಿಲ್ಲ. ಅಷ್ಟರಲ್ಲಿ ಗೇರುಸೊಪ್ಪೆಯ ಯೋಧನೊಬ್ಬ ನೀರಿನ ಮಡಕೆ ಹಿಡಿದು ಬರುವನು. ಪರಂಗಿ ಯೋಧನೊಬ್ಬ 'ಕುಡಿಯಬೇಡಿ, ಅದು ನೀರಲ್ಲ' ಎಂದು ಅರಚುವನು. ಮೆಂಜಿಸ್ ಕೋಪದಿಂದ, ನೀರಿನ ಮಡಕೆ ತಂದವನನ್ನು ಹಿಡಿದು ಕತ್ತಿ ಹಿರಿಯುತ್ತಿದ್ದಂತೆ ಆತ 'ಸರ್ ನಾನು ಫಿಲಿಪ್. ನಿಮ್ಮವನು. ನನ್ನ ಯೂನಿಫಾರಮ್ ಕಿತ್ತುಕೊಂಡು ಈ ವೇಷ ತೊಡಿಸಿದರು' ಎಂದು ಗೋಗರೆಯುವನು) |

©KTBS Not to be republished

ಅಟಾಯಿಡೆ : ಏನು ನಡೆಯುತ್ತಿದೆ ಇಲ್ಲಿ? ಏನಿದು ಮೋಸ, ವಂಚನೆ. ದರಿದ್ರ ಹೆಂಗಸು. ಮಾಟಗಾತಿ ಆಕೆ.

(ಅಷ್ಟರಲ್ಲಿ ಮರದ ಹಿಂದಿನಿಂದ ಧ್ವನಿಯೊಂದು ಕೇಳಿ ಬರುತ್ತದೆ)

ಧ್ವನಿ : ಶತಮೂರ್ಖ ಲೂಯಿಸ್ ಅಟಾಯಿಡೆ, ಯೋಚಿಸು... ಯಾರು ಮೋಸಗಾರರು? ಯಾರು ವಂಚಕರು? ಇದು ನಮ್ಮ ಮಣ್ಣು, ನಮ್ಮ ಕಾಡು, ನಮ್ಮ ನೆಲ. ಇಲ್ಲಿಗೆ ಹೊಂಚು ಹಾಕಿ ಬಂದ ವಂಚಕರು ನೀವು. ಏನು, ನಮ್ಮ ರಾಣಿಯನ್ನು ಬಂಧಿಸಿ ಕೊಂಡೊಯ್ಯುವೆಯಾ? ಬಾ.. ಮೊದಲು ಕಾನೂರು ಕೋಟೆಗೆ ಹತ್ತಿ ಬಾ. ನಿನ್ನ ಆತಿಥ್ಯಕ್ಕಾಗಿ ಸಿದ್ಧಳಾಗಿ ಕಾಯುತ್ತಿದ್ದಾಳೆ ನಮ್ಮ ರಾಣಿ. ಮಿಸ್ಟರ್ ಅಟಾಯಿಡೇ, ಖಂಡಾಂತರಗಳನ್ನು ದಾಟಿ ಬಂದ ನಿನ್ನ ಕೆಚ್ಚು ಎಲ್ಲಿ ಹೋಯಿತು? ನಿನ್ನೆ ರಾಯಭಾರಿ ಕಂಠಪ್ಪನನ್ನು ಕೊಲ್ಲಲು ಹೊರಟ ನಿನ್ನ ಬಂದೂಕು ಈಗೇಕೆ ಸುಮ್ಮನಾಯಿತು? ಪೋರ್ಚುಗೀಸರೆಂದರೆ ಪ್ರಪಂಚವನ್ನು ಆಳಲು ಹುಟ್ಟಿದವರು ಎನ್ನುತ್ತಿದ್ದ ನಿನ್ನ ಅಟಾಟೋಪ ಈಗೆಲ್ಲಿ ಹೋಯಿತು? ಕಡಲು ನಿನಗೆ ಆಟದ ಮೈದಾನವಾದರೆ ಕಾಡು ನಮಗೆ ಆಡುಂಬೊಲ. ನೆನಪಿಟ್ಟುಕೋ, ಮೂರ್ಖ

ಡಿಸಿಲ್ವ : ಯಾರೋ ನೀನು, ಫೂಲ್? ಮರೆಯಲ್ಲಿ ನಿಂತು ಗೆದ್ದೆನೆಂದು ಬೊಬ್ಬಿರಿಯಬೇಡ. ಇಲ್ಲಿಂದ ಹಿಂದಿರುಗಿದ ಮೇಲೆ...

ಧ್ವನಿ : ಹಹ್ಹಹ್ಹ... ಹಿಂದಿರುಗಿದರೆ ತಾನೆ ನಿನ್ನ ಅಟಾಟೋಪ? ಅದು ಹೇಗೆ ಹಿಂದಿರುಗುವೆ? ದಾರಿ ಎಲ್ಲಿದೆ?

(ಅವನು ಹಾಗೆ ಹೇಳುತ್ತಿದ್ದಂತೆಯೇ ದೊಡ್ಡದಾದ ಮರವೊಂದು ಅವರ ದಾರಿಗೆ ಅಡ್ಡವಾಗಿ ಉರುಳಿ ಬೀಳುತ್ತದೆ. ಅವರು ಇತ್ತ ಓಡುತ್ತಿದ್ದಂತೆ ಅಲ್ಲಿ ನಾಲ್ಕಾರು ಕಲ್ಲುಗಳು ರಭಸದಿಂದ ಉರುಳಿ ಬರುತ್ತದೆ. ಅವರು ಹೆದರಿ ಕಂಗಾಲಾಗುತ್ತಾರೆ)

ಧ್ವನಿ : ನಿನ್ನ ಸುತ್ತ ನಾವೆಷ್ಟು ಮಂದಿ ಇದ್ದೇವೆಂದು ಗೊತ್ತೇನು? ಮರದ ಮೇಲೆ ನೋಡು. ನಿನ್ನ ಬೆನ್ನ ಹಿಂದೆ ನೋಡು, ಎದುರು ನೋಡು, ಮುಂದೆ ನೋಡು. ಈಗಾಗಲೇ ನಿಮ್ಮ ಇನ್ನೂರಕ್ಕೂ ಹೆಚ್ಚು ಯೋಧರು ನಮ್ಮ ವಶದಲ್ಲಿದ್ದಾರೆ. ಆದರೆ ಒಬ್ಬರೂ ಸತ್ತಿಲ್ಲ. ನಾವು ನಿಮ್ಮಂತೆ ಕೊಲೆಗಡುಕರಲ್ಲ. ಶಾಂತಿಪ್ರಿಯರು. ಅಹಿಂಸೆ ನಮ್ಮ ಧರ್ಮ. ಈಗಲೂ ರಾಣಿಗೆ ಶರಣಾದೆವೆಂದು ಹೇಳಿದರೆ ನಿಮಗೆ ಅನ್ನ ನೀರು ಕೊಟ್ಟು ಗೌರವದಿಂದ ಹಿಂದೆ ಕಳಿಸುತ್ತೇವೆ. ಆದರೆ ಒಂದು ಕರಾರು. ಇನ್ನು ಮುಂದೆ ಹೊನ್ನಾವರದ ದಿಕ್ಕಿಗೆ ತಲೆಯಿಟ್ಟೂ ಮಲಗಬಾರದು..

©KTBS Not to be republished

(ಅಟಾಯಿಡೆ, ಮೆಂಜಿಸ್ ಮತ್ತು ಡಿಸಿಲ್ವ ಒಟ್ಟಾಗಿ ಮಾತನಾಡಿಕೊಳ್ಳುತ್ತಾರೆ. ಅಟಾಯಿಡೆಯಂತೂ ಹೆದರಿ ಕಂಗೆಟ್ಟಿದ್ದಾನೆ. ಸೊಂಡಿಲೊಳಗೆ ಇರುವೆ ಹೊಕ್ಕ ಆನೆಯಂತೆ ಚಡಪಡಿಸುತ್ತಿದ್ದಾನೆ.)

ಡಿಸಿಲ್ವ : ಸರಿ. ಶರಣಾಗಿದ್ದೇವೆ. ದಯವಿಟ್ಟು ನಮಗೆ ದ್ರೋಹ ಮಾಡಿದ ರೊಜಾರಿಯೋನನ್ನು ನಮಗೊಪ್ಪಿಸಿ..

ಧ್ವನಿ : ಮತ್ತೆ ಬುದ್ಧಿವಂತಿಕೆಯ ಪ್ರದರ್ಶನ! ಮೂರ್ಖ, ಆತ ನಮ್ಮ ನೆಲದ ಜೀವ. ಜೀವ ಕಾರುಣ್ಯ ನಮ್ಮ ಧರ್ಮ. ನಿಮ್ಮನ್ನು ನಂಬಿ ಅವನನ್ನು ನಿಮಗೊಪ್ಪಿಸಿದರೆ ನೀವು ಅವನನ್ನು ಉಳಿಸುವಿರೇನು? ತಲೆಹರಟೆ ಬೇಡ. ಮರುಮಾತನಾಡದೆ ತಲೆ ತಗ್ಗಿಸಿ ಹಿಂದಿರುಗಿದರೆ ಸರಿ. ಇಲ್ಲದಿದ್ದರೆ ನಿಮ್ಮನ್ನು ಬಂಧಿಸಿ ಕಾನೂರುಕೋಟೆಯ ಸೆರೆಮನೆಗೆ ದೂಡುತ್ತೇವೆ. ಏನು ಹೇಳುತ್ತೀರಿ?

ಮೆಂಜಿಸ್ : ಬೇಡ. ಹಿಂದಿರುಗುತ್ತೇವೆ.

ಧ್ವನಿ : ಮತ್ತೆ ನೀಚ ಕಾರ್ಯಕ್ಕೆ ಮುಂದಡಿಯಿಟ್ಟರೆ ತಲೆ ತೆಗೆಯುತ್ತೇವೆ, ಜೋಕೆ.

(ಸುತ್ತ ಹತ್ತೆಂಟು ಜನ ಬರುತ್ತಾರೆ. ನೀರು ಆಹಾರ ತರುತ್ತಾರೆ. ಬಂದವರು ಇವರನ್ನು ಕುಳ್ಳಿರಿಸಿ ಮೊದಲು ನೀರು, ನಂತರ ಊಟ ಕೊಡುತ್ತಾರೆ)

('ಕಾಳುಮೆಣಸಿನ ರಾಣಿ ಚೆನ್ನಭೈರಾದೇವಿಗೆ.. ಜಯವಾಗಲಿ... ಜಯವಾಗಲಿ..' ಜಯಘೋಷವು ಇಡೀ ಅರಣ್ಯದಲ್ಲಿ ಪ್ರತಿಧ್ವನಿಸುತ್ತದೆ)

(ತೆರೆ)

©KTBS Not to be republished

## ಕೃತಿಕಾರರ ಪರಿಚಯ



**ಡಾ ಗಜಾನನ ಶರ್ಮ (೧೯೫೪) ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನವರು.** ನಟ, ನಿರ್ದೇಶಕ ಮತ್ತು ನಾಟಕಕಾರರಾದ ಗಜಾನನ ಶರ್ಮರು, **ಗೊಂಬೆ ರಾವಣ, ಜುಗ್ಗಪ್ಪಯ್ಯನ ತಿಪ್ಪರಲಾಗ** ಮುಂತಾದ ಮಕ್ಕಳ ನಾಟಕಗಳನ್ನೂ, **ಬೆಳ್ಳಿ ಬೆಳಕಿನ ಹಿಂದೆ, ದ್ವಂದ್ವ ದ್ವಾಪರ, ಕನ್ನಂಬಾಡಿಯ ಕಟ್ಟದಿದ್ದರೆ** ಮುಂತಾದ ದೊಡ್ಡವರ ನಾಟಕಗಳನ್ನೂ ರಚಿಸಿದ್ದಾರೆ. ಗರ್ತಿಕೆರೆ ರಾಘಣ್ಣನವರ ಜೀವನ ಕಥನ, **"ಕಾಡು ಕಣಿವೆಯ ಹಾಡು ಹಕ್ಕಿ– ಗರ್ತಿಕೆರೆ ರಾಘಣ್ಣ"** ಕೃತಿಗೆ ಇವರು ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದಿದ್ದಾರೆ. **ಪುನರ್ವಸು** ಮತ್ತು **ರಾಣಿ ಚೆನ್ನಭೈರಾದೇವಿ** ಇವರ ಪ್ರಮುಖ ಕಾದಂಬರಿಗಳು. ಇವರು ತಮ್ಮ ರಂಗಭೂಮಿಯ ಸೇವೆಗಾಗಿ ನಾಟಕ ಅಕಾಡೆಮಿಯ ಪ್ರಶಸ್ತಿಯನ್ನೂ ಪಡೆದಿದ್ದಾರೆ.

## ನಾಟಕದ ಆಶಯ

ಸ್ವಾಭಿಮಾನ ಮತ್ತು ಕೆಚ್ಚಿನ ಜೊತೆಗೆ ಚಾಣಾಕ್ಷತೆಯೂ ಸೇರಿಕೊಂಡರೆ ಎಂಥ ಸಮಸ್ಯೆಯನ್ನಾದರೂ ಗೆಲ್ಲಬಹುದು ಎನ್ನುವುದನ್ನು ಈ ನಾಟಕ ತಿಳಿಸಿಕೊಡುತ್ತದೆ. ಪೋರ್ಚುಗೀಸರಂತಹ ಬಲಿಷ್ಠ ಶತ್ರುವನ್ನು ಕೂಡ ಚೆನ್ನಭೈರಾದೇವಿ ಶರಣಾಗತರಾಗುವಂತೆ ಮಾಡುವುದು ಅವಳ ಬುದ್ಧಿಮತ್ತೆಯನ್ನು ಸೂಚಿಸುತ್ತದೆ. ವಿರೋಧಿಗಳನ್ನು ಅನಗತ್ಯವಾಗಿ ಕೊಲ್ಲದೇ ಜೀವ ಉಳಿಸುವ ಒಳ್ಳೆಯತನ, ತನ್ನ ಪ್ರಜೆಗಳ ರಕ್ಷಣೆಯ ಜೊತೆಗೆ ಶತ್ರುವನ್ನು ಮಟ್ಟಹಾಕುವ ಧೈರ್ಯವನ್ನೂ ಹೊಂದಿರುವ ರಾಣಿಯ ನಿಲುವನ್ನು ಈ ನಾಟಕ ವಿವರಿಸುತ್ತದೆ. ಇದೆಲ್ಲದರ ಜೊತೆ ಜೊತೆಗೆ ಆ ಕಾಲಘಟ್ಟದಲ್ಲಿ ಕರ್ನಾಟಕದ ಕರಾವಳಿಯ, ಮಲೆನಾಡಿನ ಜೀವನಶೈಲಿಯ ಬಗ್ಗೆ ಕೂಡ ಈ ನಾಟಕದಲ್ಲಿ  ವಿವರಣೆಗಳಿವೆ.

## ಪದಗಳ ಅರ್ಥ

ಸುಭಿಕ್ಷ – ದವಸಧಾನ್ಯಗಳ ಸಮೃದ್ಧಿ

ಉದ್ಧಟತನ – ಅಹಂಕಾರ

ಹೆಂಬೇಡಿ – ಹೆದರುಪುಕ್ಕಲ

ಗಡವು – ವಾಯಿದೆ, ಅವಧಿ, ಸಮಯ

ಹುಸಿ – ಸುಳ್ಳು

ಅಟಾಟೋಪ – ಥಳುಕುಬಳುಕು, ಆಡಂಬರ

ಕೆಚ್ಚು – ಧೈರ್ಯ

ಆಡುಂಬೊಲ – ಆಟದ ಮೈದಾನ

©KTBS Not to be republished

## ಅಭ್ಯಾಸ

**ಅ) ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಚೆನ್ನಭೈರಾದೇವಿಯ ಆಡಳಿತವಿದ್ದ ಪ್ರಾಂತ್ಯಗಳು ಯಾವುವು?

೨. ಚೆನ್ನಭೈರಾದೇವಿಗೆ ಉದ್ಧಟತನದ ಪತ್ರ ಬರೆದವನು ಯಾರು?

೩. ಪೋರ್ಚುಗೀಸರು ಚೆನ್ನಭೈರಾದೇವಿಗೆ ನೀಡಿದ್ದ ಬಿರುದು ಏನು?

೪. ಪೋರ್ಚುಗೀಸರು ಹಡಗಿನ ಮೂಲಕ ಎಲ್ಲಿಗೆ ದಾಳಿ ಮಾಡಲು ಸಜ್ಜಾಗಿದ್ದರು?

೫. ಚೆನ್ನಭೈರಾದೇವಿಯ ರಾಯಭಾರಿಯ ಹೆಸರೇನು?

೬. ಚೆನ್ನಭೈರಾದೇವಿಯು ಕಾಡಿನ ಮಧ್ಯ ಕಟ್ಟಿದ ಕೋಟೆಯ ಹೆಸರೇನು?

ಆ) ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಸಮುದ್ರಯುದ್ಧದಲ್ಲಿ ಪೋರ್ಚುಗೀಸರನ್ನು ಗೆಲ್ಲುವುದು ಯಾಕೆ ಕಷ್ಟಸಾಧ್ಯ?

೨. ಚೆನ್ನಭೈರಾದೇವಿಗೆ ಬುದ್ಧಿ ಕಲಿಸಬೇಕೆಂದು ಪೋರ್ಚುಗೀಸರು ಹೊನ್ನಾವರವನ್ನು ಏನು ಮಾಡಲು ಹೊರಟಿದ್ದರು?

೩. ಚೆನ್ನಭೈರಾದೇವಿ ದಟ್ಟಕಾಡಿನ ಮಧ್ಯ ಏಕೆ ಕೋಟೆ ಕಟ್ಟಿಕೊಂಡಿದ್ದಳು?

೪. ಪೋರ್ಚುಗೀಸರು ಯುದ್ಧಕ್ಕೆ ಸಿದ್ಧವಾಗಿದ್ದ ಎರಡು ಉದ್ದೇಶಗಳು ಯಾವುವು?

ಇ) ಏಳೆಂಟು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಪೋರ್ಚುಗೀಸ್ ಗವರ್ನರ್ ಚೆನ್ನಭೈರಾದೇವಿಗೆ ಬರೆದ ಪತ್ರವನ್ನು ವಿವರಿಸಿ.

೨. ಕಾನೂರು ಕೋಟೆಯ ದಾರಿಯಲ್ಲಿ ಚೆನ್ನಭೈರಾದೇವಿಯ ಸೈನಿಕರು ಪೋರ್ಚುಗೀಸರ ಮೇಲೆ ದಾಳಿ ಮಾಡಿದ ರೀತಿಯನ್ನು ವಿವರಿಸಿ.

೩. ಮರದ ಹಿಂದಿನ ಧ್ವನಿಯು ಲೂಯಿಸ್ ಅಟಾಯಿಡೆಯನ್ನು ಹೇಗೆ ಎಚ್ಚರಿಸಿತು?

ಈ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. ನಮ್ಮ ನೆಲದ ನಾವಿಕ ರೊಜಾರಿಯೋನನ್ನು ಅವರಿಗೊಪ್ಪಿಸಲು ನಾವೇನು ಹೆಂಬೇಡಿಗಳಲ್ಲ.

೨. ಈ ಸಲ ಸಮುದ್ರಯುದ್ಧದಲ್ಲಿ ಅವರನ್ನು ಗೆಲ್ಲುವುದು ಕಷ್ಟಸಾಧ್ಯ.

೩. ಆದಷ್ಟು ಬೇಗ ಹೊನ್ನಾವರದ ಮೇಲೆ ದಾಳಿ ಮಾಡಬೇಕು.

೪. ಮಹಾರಾಣಿ, ನಮ್ಮ ಯೋಧರು ಶತ್ರುಗಳಿಗೆ ಬೆನ್ನು ತೋರಿಸಬೇಕೇ?

೫. ಕುತಂತ್ರವನ್ನು ತಂತ್ರಗಾರಿಕೆಯಿಂದಲೇ ಮಣಿಸಬೇಕು.

ಉ) ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧. ಚೆನ್ನಭೈರಾದೇವಿ ಗೇರುಸೊಪ್ಪೆ ಮತ್ತು ____________ ಜೋಡಿ ಸಾಮ್ರಾಜ್ಯಗಳ ಪಟ್ಟದ ರಾಣಿ.
(ಹೊನ್ನಾವರ, ಅಂಜುದ್ವೀಪ, ಹಾಡುವಳ್ಳಿ, ಕಾನೂರು)

೨. ಗೋವಾದ ಪೋರ್ಚುಗೀಸ್ ಗವರ್ನರ್ ____________
(ಲೂಯಿಸ್ ಅಟಾಯಿಡೆ, ರೊಜಾರಿಯೋ, ಡಿಸಿಲ್ವ, ಮೆಂಜಿಸ್)

೩. ಚೆನ್ನಭೈರಾದೇವಿಯ ಹೊನ್ನಾವರದ ನಾವಿಕ ಪಡೆಯ ಸರದಾರ ____________
(ರೊಜಾರಿಯೋ, ಕಂಠಪ್ಪ ನಾಯಕ, ಶಬಲೆ, ಭೈರವ ನಾಯಕ)

©KTBS Not to be republished

೪. ಪೋರ್ಚುಗೀಸರು ಸಜ್ಜುಗೊಳಿಸಿದ ಹಡಗುಗಳ ಸಂಖ್ಯೆ __________ .
(೨೫೦, ೧೩೦, ೧೦೦, ೩೨೫)

೫. ಪೋರ್ಚುಗೀಸರು __________ ನಗರವನ್ನು ಸುಟ್ಟುಹಾಕಲು ನಿರ್ಧರಿಸಿದರು.
(ಹಾಡುವಳ್ಳಿ, ಹೊನ್ನಾವರ, ಕಾನೂರು, ಗೇರುಸೊಪ್ಪೆ)

## ಭಾಷೆಯ ಸೊಬಗು

ಅ ಮತ್ತು ಹ ಎಂಬ ಅಕ್ಷರಗಳು ಒಂದೇ ರೀತಿಯ ಧ್ವನಿಯನ್ನು ಮಾಡಿದರೂ ಅವೆರಡರಲ್ಲೂ ವ್ಯತ್ಯಾಸವಿದೆ. ಅ ಎಂಬುದು ಸ್ವರಾಕ್ಷರ. ಹ ಎಂಬುದು ಅವರ್ಗೀಯ ವ್ಯಂಜನ. ಯಾವ ಅಕ್ಷರವನ್ನು ಎಲ್ಲಿ ಬಳಸಬೇಕೆಂಬ ಎಚ್ಚರ ನಮಗಿರಬೇಕು.

ಹುಚ್ಚನು ಉಚ್ಚ ಕಂಠದಲ್ಲಿ ಕೂಗಿದನು – ಈ ವಾಕ್ಯವನ್ನು ನೋಡಿರಿ. ಹುಚ್ಚ ಎಂದರೆ ಮತಿ ಇಲ್ಲದವನು ಎಂದು ಅರ್ಥ. ಉಚ್ಚ ಎಂದರೆ ಎತ್ತರಿಸಿದ ಎಂದು ಅರ್ಥ. ಹುಚ್ಚ ಕಂಠದಲ್ಲಿ ಕೂಗಿದನು ಎಂದರೆ ಆ ವಾಕ್ಯಕ್ಕೆ ಅರ್ಥವಿಲ್ಲ. ಹಾಗೆಯೇ ಉಚ್ಚನು ಕೂಗಿದನು ಎಂದರೆ "ಉಚ್ಚ" ಎಂಬ ಹೆಸರಿನ ವ್ಯಕ್ತಿ ಕೂಗಿದನು ಎಂದಾಗುತ್ತದೆ.

**ಕೆಳಗಿನ ವಾಕ್ಯಗಳನ್ನು ಗಟ್ಟಿಯಾಗಿ ಓದಿರಿ ಮತ್ತು ತಪ್ಪಿದ್ದಲ್ಲಿ ಸರಿಪಡಿಸಿರಿ:**

(೧) ನಿನ್ನ ಹುಚ್ಚಾರ ಸರಿ ಇಲ್ಲ.

(೨) ಬೆಂಗಳೂರಿಂದ ಹೊರಟು ಆಸನ ಮುಟ್ಟಿದಾಗ ಸಂಜೆಯಾಗಿತ್ತು.

(೩) ತೋಟಕ್ಕೆ ಬೆಂಕಿ ಬಿದ್ದಾಗ ಎಲ್ಲರೂ ಆಹಾಕಾರ ಮಾಡಿದರು.

©KTBS
Not to be republished

## ಸೈದ್ಧಾಂತಿಕ ಭಾಷಾಭ್ಯಾಸ

**ಕಾಲಗಳು :**

ನಮೂದಿತ ವಾಕ್ಯಗಳನ್ನು ಗಮನಿಸಿ:

– ಅವನು ಶಾಲೆಗೆ **ಹೋಗುತ್ತಾನೆ.**
– ಅವನು ಶಾಲೆಗೆ **ಹೋದನು.**
– ಅವನು ಶಾಲೆಗೆ **ಹೋಗುವನು.**

ಮೂರೂ ವಾಕ್ಯಗಳಲ್ಲಿ **ಹೋಗು** ಎಂಬ ಪದ **ಧಾತು**ವಾಗಿದ್ದು ಇದರ ಜತೆಗೆ ಮೊದಲ ವಾಕ್ಯದಲ್ಲಿ **–ಉತ್ತ** ಎರಡನೆಯ ವಾಕ್ಯದಲ್ಲಿ **–ದ** ಹಾಗೂ ಮೂರನೆಯ ವಾಕ್ಯದಲ್ಲಿ **–ವ** ಎಂಬ ಪ್ರತ್ಯಯ ಇರುವುದನ್ನು ಗಮನಿಸಬಹುದು. ಇವುಗಳಲ್ಲಿ **–ಉತ್ತ** ಎಂಬುದು **ವರ್ತಮಾನಕಾಲ**ವನ್ನೂ **–ದ** ಎಂಬುದು **ಭೂತಕಾಲ**ವನ್ನೂ **–ವ** ಎಂಬುದು **ಭವಿಷ್ಯತ್‌ಕಾಲ**ವನ್ನೂ ಸೂಚಿಸುವ ಪ್ರತ್ಯಯಗಳಾಗಿರುವುದರಿಂದ

ಮೊದಲ ವಾಕ್ಯ **ವರ್ತಮಾನಕಾಲ**ದಲ್ಲೂ ಎರಡನೆಯ ವಾಕ್ಯ **ಭೂತಕಾಲ**ದಲ್ಲೂ ಮೂರನೆಯ ವಾಕ್ಯ **ಭವಿಷ್ಯತ್‌ಕಾಲ**ದಲ್ಲೂ ಇವೆ ಎಂದು ತಿಳಿಯಬೇಕು. ಧಾತುಗಳಿಗೆ ಕಾಲಸೂಚಕ ಪ್ರತ್ಯಯ ಸೇರುವುದರ ಜತೆಗೆ **–ಆನೆ –ಅನು –ಉದು –ಎನು** ಇತ್ಯಾದಿ **ಆಖ್ಯಾತಪ್ರತ್ಯಯ**ಗಳು ಸೇರುತ್ತವೆ. ಈ ಪ್ರತ್ಯಯಗಳು **ಪುರುಷಾರ್ಥಕ ಸರ್ವನಾಮ, ಲಿಂಗ ಮತ್ತು ವಚನ**ಗಳಿಗನುಗುಣವಾಗಿ ಬೇರೆಬೇರೆ ಆಗಿರುವುದನ್ನು **ತಿನ್ನು** ಎಂಬ ಧಾತುವಿನ ಆಧಾರದಿಂದ ಗಮನಿಸಬಹುದು.

**೧. ವರ್ತಮಾನಕಾಲ**

| **ಪುರುಷವಾಚಕ** | **ಲಿಂಗ** | **ಧಾತು** | **ಕಾಲಸೂಚಕ ಪ್ರತ್ಯಯ** | **ಆಖ್ಯಾತಪ್ರತ್ಯಯ ಏಕ/ಬಹು** | **ಏಕವಚನ** | **ಬಹುವಚನ** |
|---|---|---|---|---|---|---|
| **ಉತ್ತಮ ಪುರುಷ** | ಪು/ಸ್ತ್ರೀ | ತಿನ್ನು | –ಉತ್ತ | –ಏನೆ/ಏವೆ | ತಿನ್ನುತ್ತೇನೆ | ತಿನ್ನುತ್ತೇವೆ |
| **ಮಧ್ಯಮ ಪುರುಷ** | ಪು/ಸ್ತ್ರೀ | ತಿನ್ನು | –ಉತ್ತ | –ಇ/ಈರಿ | ತಿನ್ನುತ್ತಿ | ತಿನ್ನುತ್ತೀರಿ |
| **ಪ್ರಥಮ ಪುರುಷ** | ಪುಲ್ಲಿಂಗ | ತಿನ್ನು | –ಉತ್ತ | –ಆನೆ/ಆರೆ | ತಿನ್ನುತ್ತಾನೆ | ತಿನ್ನುತ್ತಾರೆ |
| **ಪ್ರಥಮ ಪುರುಷ** | ಸ್ತ್ರೀಲಿಂಗ | ತಿನ್ನು | –ಉತ್ತ | –ಆಳೆ/ಆರೆ | ತಿನ್ನುತ್ತಾಳೆ | ತಿನ್ನುತ್ತಾರೆ |
| **ಪ್ರಥಮ ಪುರುಷ** | ನಪುಂಸಕ ಲಿಂಗ | ತಿನ್ನು | –ಉತ್ತ | –ಅದೆ/ಅವೆ | ತಿನ್ನುತ್ತದೆ | ತಿನ್ನುತ್ತವೆ |

©KTBS Not to be republished

**೨. ಭೂತಕಾಲ**

| **ಪುರುಷವಾಚಕ** | **ಲಿಂಗ** | **ಧಾತು** | **ಕಾಲಸೂಚಕ ಪ್ರತ್ಯಯ** | **ಆಖ್ಯಾತಪ್ರತ್ಯಯ ಏಕ/ಬಹು** | **ಏಕವಚನ** | **ಬಹುವಚನ** |
|---|---|---|---|---|---|---|
| **ಉತ್ತಮ ಪುರುಷ** | ಪು/ಸ್ತ್ರೀ | ತಿನ್ನು | –ದ | –ಎನು/ಎವು | ತಿಂದೆನು | ತಿಂದೆವು |
| **ಮಧ್ಯಮ ಪುರುಷ** | ಪು/ಸ್ತ್ರೀ | ತಿನ್ನು | –ದ | –ಎ/ಇರಿ | ತಿಂದೆ | ತಿಂದಿರಿ |
| **ಪ್ರಥಮ ಪುರುಷ** | ಪುಲ್ಲಿಂಗ | ತಿನ್ನು | –ದ | –ಅನು/ಅರು | ತಿಂದನು | ತಿಂದರು |
| **ಪ್ರಥಮ ಪುರುಷ** | ಸ್ತ್ರೀಲಿಂಗ | ತಿನ್ನು | –ದ | –ಅಳು/ಅರು | ತಿಂದಳು | ತಿಂದರು |
| **ಪ್ರಥಮ ಪುರುಷ** | ನಪುಂಸಕ ಲಿಂಗ | ತಿನ್ನು | –ದ | –ಉದು/ಅವು/ ಇತು | ತಿಂದುದು/ ತಿಂದಿತು | ತಿಂದವು |

೩. ಭವಿಷ್ಯತ್‌ಕಾಲ

| ಪುರುಷವಾಚಕ | ಲಿಂಗ | ಧಾತು | ಕಾಲಸೂಚಕ ಪ್ರತ್ಯಯ | ಆಖ್ಯಾತಪ್ರತ್ಯಯ ಏಕ/ಬಹು | ಏಕವಚನ | ಬಹುವಚನ |
|---|---|---|---|---|---|---|
| **ಉತ್ತಮ ಪುರುಷ** | ಪು/ಸ್ತ್ರೀ | ತಿನ್ನು | –ವ | –ಎನು/ಎವು | ತಿನ್ನುವೆನು | ತಿನ್ನುವೆವು |
| **ಮಧ್ಯಮ ಪುರುಷ** | ಪು/ಸ್ತ್ರೀ | ತಿನ್ನು | –ವ | –ಎ/ಇರಿ | ತಿನ್ನುವೆ | ತಿನ್ನುವಿರಿ |
| **ಪ್ರಥಮ ಪುರುಷ** | ಪುಲ್ಲಿಂಗ | ತಿನ್ನು | –ವ | –ಅನು/ಅರು | ತಿನ್ನುವನು | ತಿನ್ನುವರು |
| **ಪ್ರಥಮ ಪುರುಷ** | ಸ್ತ್ರೀಲಿಂಗ | ತಿನ್ನು | –ವ | –ಅಳು/ಅರು | ತಿನ್ನುವಳು | ತಿನ್ನುವರು |
| **ಪ್ರಥಮ ಪುರುಷ** | ನಪುಂಸಕ ಲಿಂಗ | ತಿನ್ನು | –ವ | –ಉದು/ಉವು | ತಿನ್ನುವುದು | ತಿನ್ನುವುವು |

**ಕಾಲಪಲ್ಲಟ**

ಒಂದು ಕಾಲದ ಕ್ರಿಯೆಯನ್ನು ಇನ್ನೊಂದು ಕಾಲದ ಕ್ರಿಯಾರೂಪದಿಂದ ಹೇಳುವುದೇ **ಕಾಲಪಲ್ಲಟ.** ಹೀಗೆ ಕಾಲಪಲ್ಲಟವಾಗುವಾಗ ಭವಿಷ್ಯತ್ ಕಾಲದ ಕ್ರಿಯಾಪದಗಳು ವರ್ತಮಾನ ಕಾಲದಲ್ಲೂ ವರ್ತಮಾನದ ಕಾಲದ ಕ್ರಿಯಾಪದಗಳು ಭವಿಷ್ಯತ್ ಕಾಲದಲ್ಲೂ ಪ್ರಯೋಗವಾಗುವುವು.

**ಉದಾ.:** ೧. ವರ್ತಮಾನಕಾಲವು ಭವಿಷ್ಯತ್‌ಕಾಲದಲ್ಲಿ

– **ಅವನು ಒಳಗೆ ಊಟ ಮಾಡುವನು** (ಊಟ ಮಾಡುತ್ತಾನೆ ಎಂದಾಗಬೇಕು)

– **ಅವಳು ಒಳಗೆ ಅಡುಗೆ ಮಾಡುವಳು** (ಅಡುಗೆ ಮಾಡುತ್ತಾಳೆ ಎಂದಾಗಬೇಕು)

**ಉದಾ.:** ೨. ಭವಿಷ್ಯತ್‌ಕಾಲವು ವರ್ತಮಾನಕಾಲದಲ್ಲಿ

– **ಅವನು ನಾಳೆ ಹೋಗುತ್ತಾನೆ** (ಹೋಗುವನು ಎಂದಾಗಬೇಕು)

– **ನಾನು ಮುಂದಿನ ತಿಂಗಳು ಬರುತ್ತೇನೆ** (ಬರುವೆನು ಎಂದಾಗಬೇಕು)

©KTBS Not to be republished

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧. ಕ್ರಿಯಾಪದ ಎಂದರೇನು?

೨. ಕ್ರಿಯಾಪ್ರಕೃತಿ ಎಂದರೇನು? ಉದಾಹರಣೆ ಕೊಡಿ.

೩. ಸಕರ್ಮಕ ಧಾತುವನ್ನು ಉದಾಹರಣೆ ಸಹಿತ ವಿವರಿಸಿ.

೪. ಅಕರ್ಮಕ ಧಾತುಗಳಿಗೆ ಐದು ನಿದರ್ಶನ ಕೊಡಿ.

೫. ಹಳಗನ್ನಡ ವಿಭಕ್ತಿ ಪ್ರತ್ಯಯಗಳಾವುವು?

೬. ವಿಭಕ್ತಿ ಪಲ್ಲಟ ಎಂದರೇನು?

**ಆ)	ಕೊಟ್ಟಿರುವ ವಾಕ್ಯಗಳಲ್ಲಿ ಸಕರ್ಮಕ ಮತ್ತು ಅಕರ್ಮಕ ಧಾತುಗಳನ್ನು ಗುರುತಿಸಿ ಬರೆಯಿರಿ**

೧. ವಿದ್ಯಾರ್ಥಿನಿಯರು ಆಟವನ್ನು ಆಡಿದರು.

೨. ಗಾಳಿಯು ಬೀಸುತ್ತಿದೆ.

೩. ಹಕ್ಕಿಗಳು ಚಿಲಿಪಿಲಿಗುಟ್ಟಿದವು.

೪. ರೈತನು ಹೊಲವನ್ನು ಉಳುತ್ತಾನೆ.

**ಇ)	ಕೊಟ್ಟಿರುವ ಗಾದೆಗಳ ಅರ್ಥವನ್ನು ವಿವರಿಸಿ ಬರೆಯಿರಿ.**

೧. ಆರೋಗ್ಯವೇ ಭಾಗ್ಯ.

೨. ಕೊಟ್ಟಿದ್ದು ತನಗೆ; ಬಚ್ಚಿಟ್ಟಿದ್ದು ಪರರಿಗೆ.

## ಪೂರಕ ಓದು

ಕಿತ್ತೂರು ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ರಾಣಿ ಅಬ್ಬಕ್ಕ, ಒನಕೆ ಓಬವ್ವ, – ಕರ್ನಾಟಕದ ಈ ವೀರ ಮಹಿಳೆಯರ ಜೀವನ ಕಥೆಗಳನ್ನು ಸಂಗ್ರಹಿಸಿ ಓದಿರಿ.

©KTBS Not to be republished

# ೮. ಹರಲೀಲೆ

J6A6D8

**ಹರಿಹರ –**

**ಪ್ರವೇಶ:** ಕವಿ ಹರಿಹರನು ನಿರ್ಮಿಸಿರುವ ಶಿವಗಣಪ್ರಪಂಚ ವಿಶಾಲವೂ ವೈವಿಧ್ಯಮಯವೂ ಆಗಿದೆ. ಶರಣರಲ್ಲಿ ಮುಗ್ಧರು, ಕವಿಗಳು, ವಿವಿಧ ವೃತ್ತಿಯವರು, ಜನಸಾಮಾನ್ಯರು ಇದ್ದಾರೆ. ಬಗೆಬಗೆಯಾಗಿ ದೇವಲೋಕ ಪ್ರವೇಶಿಸಿದವರಿದ್ದಾರೆ. ಮಾನವೀಯ ಪ್ರವೃತ್ತಿಗಳನ್ನು ಆಧ್ಯಾತ್ಮಿಕಕ್ಕೆ ತಿರುಗಿಸಿದ ದೃಷ್ಟಿ ಅವರಿಗೆಲ್ಲ ಸಾಮಾನ್ಯ ಅಂಶ. ಶಿವಶರಣರ ಬಾಳನ್ನು ಕವಿ ಉತ್ಸಾಹದಿಂದ ತಲ್ಲೀನತೆಯಿಂದ ವರ್ಣಿಸಿದ್ದಾನೆ. ಅವುಗಳಲ್ಲಿಯ ದರ್ಶನ ಮಾನವನ ಬದುಕಿಗೆ ದಾರಿದೀಪ. ಹರಿಹರನ ರಗಳೆಗಳಲ್ಲೆಲ್ಲ ಬಸವರಾಜದೇವರ ರಗಳೆ ಮತ್ತು ನಂಬಿಯಣ್ಣನ ರಗಳೆ ಮಹತ್ತ್ವದ ಕೃತಿಗಳು. ಶಿವನು ವೃದ್ಧವೇಷಧಾರಿಯಾಗಿ ಬಂದು ತನ್ನ ಭಕ್ತನಾದ ನಂಬಿಯಣ್ಣನನ್ನು ಇಕ್ಕಟ್ಟಿಗೆ ಸಿಲುಕಿಸಿದ ಕಥಾ ಸಂದರ್ಭ ಇಲ್ಲಿಯದು.

©KTBS
Not to be republished

ಇಂತು ಮಣಮಂದ ಪುತ್ತೂರ್ಗೆ ನಡೆವುತ್ತಮಿರೆ
ಮುಂತೊರ್ವನೆಯ್ತಂದು ಬಿನ್ನಪವೆನುತ್ತಮಿರೆ।
ದೇವ ಲಗ್ನದ ಮುಹೂರ್ತಂ ಬರಂ ಬನದೊಳಗೆ
ದೇವ ಸುಖದಿಂದಿರ್ಪುದೀವೂರ ಬನದೊಳಗೆ।
ಎನೆ ತಿರುಗಿ ನಡೆದುದಾ ವನದತ್ತ ಮುಂತಾಗಿ
ತನತನಗೆ ಮುಯ್ಯಾನುತಾನಂದಮಯರಾಗಿ।
ಬಂದು ಬನಮಂ ಪೊಕ್ಕು ಮಿಕ್ಕು ಸಂತೋಷದಿಂ

ಮುಂದೆ ಸಿಂಹಾಸನವನಿಕ್ಕಲು ವಿಲಾಸದಿಂ–।
ದೆಸೆಯೆ ಕುಳ್ಳಿರ್ದನಾ ಸುಕುಮಾರ ಸೌಂದರಂ
ವಸುಧೆಗೊಪ್ಪುವ ಮರ್ತ್ಯಮಂಡಲಪುರಂದರಂ।

ಮುಗಿದಿರ್ದ ನೈದಿಲುಗೊಳಂಗಳಂ ನೋಡುತುಂ
ಮಿಗೆ ಬಳಲುವಾ ಚಕೋರಂಗಳಂ ಕಾಣುತುಂ।
ರಸಫಳಂಗಳನಜಿಸುತಿರ್ಪ ಶುಕನಿಕರಮಂ
ಪೊಸಪೂವನೆಳಸಿರ್ಪ ಮಧುಕರಪ್ರಕರಮಂ।

ನೋಡುತುಂ ಕೊಂಡಾಡುತಿರ್ದನಾ ವನದೊಳಗೆ
ಆಡಿಸುತೆ ಪಾಡಿಸುತಮಿರ್ದನಾ ವನದೊಳಗೆ।
ಇಂತು ಮುದದಿಂ ನಲಿವುತರಸುಮಗನೊಪ್ಪಿದಂ
ಸಂತತಂ ವನದೊಳಗೆ ಸುಕುಮಾರನೊಪ್ಪಿದಂ।



©KTBS
Not to be republished

ವಿವಾಹತತ್ಪರನಾಗಿ ನಂಬಿಯಣ್ಣಂ ವನದೊಳಗಿರಲಿತ್ತಲು ಕೈಲಾಸಪುರದರಮನೆಯಲಪರಿಮಿತ ಪರಿವಾರನಾಗಿ ವಿರೂಪಾಕ್ಷನಿರ್ದು ಗಿರಿಜೆಗಿಂತೆಂದಂ – ದೇವಿ, ಕೇಳೌ, ನಮ್ಮ ಪುತ್ರಂ ಪುಷ್ಪದತ್ತಂ ನರಲೋಕದೊಳ್ ಪುಟ್ಟಿ, ನಂಬಿಯೆಂಬ ನಾಮವಾಗಿ, ಸಂಸಾರದಿಂ ಕೆಟ್ಟು ಪೋಗಲನುವಾಗಿರ್ದಪಂ. ಆತಂಗೆ ಮುನ್ನಿತ್ತ ನಂಬುಗೆಯ ಬೆಂಬಳಿಗೊಂಡು ಪೋಗಿ, ಮರ್ತ್ಯದೊಳ್ ತೊತ್ತುಗೊಂಡು ಆವು ಕಳುಪಿದ ನಿಮ್ಮಿರ್ಬರು ರುದ್ರಕನ್ನಿಕೆಯರು ಚೋಳದೇಶದ ತಿರುವಾರೂರೊಳಂ, ತಿರುವತ್ತಿಯೂರೊಳಂ ಪರವೆ ಸಂಕಿಲಿಗಳೆಂಬ ನಾಮದಿಂ ಜನಿಯಿಸಿರ್ದಪರವಂದಿರನಾತನೊಳ್ ನೆರಪಿ, ಸಕಲಸುಖಮಂ ಪೂಜೆಯಾಗಿ ಕೈಕೊಂಡು, ಬರ್ಪನೆನಲ್ ಆನುಂ ನಿಮ್ಮೊಡನೆ ನೋಡುತ್ತುಂ ಬಂದಪೆನೆಂದು ದೇವಿಯರ್ ಬಿನ್ನೈಸೆ, ನೀನತ್ಯಂತಕರುಣಿ ನಾಂ ಮಾಳ್ಪುದತಿನಿಷ್ಠುರಚರಿತ್ರಂ. ಆದೊಡಂ ನೀಂ ಬಂದು, ಆನಾವೂರೊಳಿರ್ದನೆನಲಲ್ಲಿಯ ದೇವಾಲಯದೊಳಿರುತೆ ಬರ್ಪುದೆಂದು ಕರುಣಿಸಿ, ವಿಚಿತ್ರಂ ಮತ್ತಂ ದೇವಿಯರ್ ನೋಡನೋಡಲೊರ್ವ ಶತವೃದ್ಧನಾಗಿ ನಿಂದಿರ್ದನೆಂತೆಂದೊಡೆ–

ಆಪಾದಮಸ್ತಕಪರ್ಯಂತರವುದ್ಧೂಳಿಸಿದ ವಿಭೂತಿಯ ತಲೆಯುಂ ಮಯ್ಯುಂ ನರೆತೆರೆಗಳಾಗೆ ಜೆಡೆಯ ಚಂದ್ರಕಳೆ ಕೊಡೆಯಾಗೆ, ಪಿಡಿದ ತ್ರಿಶೂಲಂ ಕೊಡೆಯ ಕಾವಾಗೆ, ಖಟ್ವಾಂಗಂ ಯಷ್ಟಿಯಾಗೆ, ಆಭರಣದೊಳೊಂದು ಸರ್ಪಂ ಪ್ರಮಾಣಪತ್ರಮಾಗೆ, ಕಮಲಜಶಿರಂ ಕಮಂಡಲಮಾಗೆ, ಪುಲಿದೊವಲ್ ಗಜಚರ್ಮಂ ಉಟ್ಟ ಹೊದೆದ ವೇಷ್ಟಿಗಳಾಗೆ, ಮೆಟ್ಟಿದ ನಾಗಾಸುರಂ ಪಾದರಕ್ಷೆಗಳಾಗೆ ಕಟ್ಟಿದ ಶಿರೋಮಾಲೆ ಜಪಮಾಲೆಯಾಗೆ, ಮಹಾವೃದ್ಧನಾಗಿ ಕೈಲಾಸದಿಂ ಚೋಳದೇಶದ ಮಣಮಂದಪುತ್ತೂರ ಮದುವೆಯ ಚಪ್ಪರದ ಮುಂದಿಳಿಹಿದಂತಿರ್ದಂ. ಕಯ್ಯ ಕೊಡೆಯಿಂ, ಮಯ್ಯತೆರೆಯಿಂ. ಜೋಲ್ವಪುರ್ವಿಂ, ನೇಲ್ವ ತೋಳತೊವಲಿಂ, ಇಟ್ಟ ವಿಭೂತಿಯಿಂ, ಊಜಿದ ಯಷ್ಟಿಯ ಕೋಲಿಂ, ಪಿಡಿದ ಕಮಂಡಲದಿಂಯಿಳಿದ ಬೆಳುಗಡ್ಡದಿಂ, ನಡುಗುವ ನರೆದಲೆಯಿಂ, ನರೆತು ಸಡಿಲ್ವ ಸರ್ವಾಂಗದಿಂ, ಪುಣ್ಯಂ ಪಣ್ಣಾದಂತೆ ಒಮ್ಮೊಮ್ಮೆ ಕೆಮ್ಮುತ್ತೊಮ್ಮೊಮ್ಮೆ ಗೊಹೆಗೊಹೆಗುಟ್ಟುತುಂ ಶಿಥಿಲಾಕ್ಷರಂಗಳಿಂ ನಮಃಶಿವಾಯ ನಮಃಶಿವಾಯ

ಯೆನುತ್ತೆನಲಾಱದಂತೆ ನಡುಗುತ್ತುಂ ಪೊಱಗೆ ನೆರೆದ ನೆರವಿಗಳೆಲ್ಲಂ ನೋಡುತ್ತಿರಲು ಮೆಲ್ಲಮೆಲ್ಲನೆ ಚಪ್ಪರದ ಬಾಗಿಲ್ಗೆ ಬಂದೊಡವರ್ ಪೊಗಲೀಯದಿರ್ದೊಡೆ ಅವಂದಿರಱೆಯದಂತೆ ಪೊಗುತಪ್ಪಾಗಳ್-

ವಿವಾಹಮಂಟಪಮಂ ಪೊಗುತಿರ್ಪ್ಪ ತಮ್ಮನಾರುವಱೆಯದೆ, ಕಾಣದೆ, ಲೆಕ್ಕಿಸದೆ ಸಂಭ್ರಮದೊಳಿರೆ, ಮೆಲ್ಲಮೆಲ್ಲನೆಲ್ಲವ ನೋಡುತುಂ, ಮನದೊಳ್ ನಗುತುಂ, ಕೋಲನೂಱುತೆ ಕೆಮ್ಮಿ ಕೆಮ್ಮುತ್ತೆ, ಸಾಲ್ಗೊಂಡಿರ್ದ ತುಪ್ಪದ ಕೊಡಂಗಳೊಳ್ ನಾಲ್ಕೆರಡನೆಡಹಿ ನಮಃಶಿವಾಯಯೆಂಬ ವೃದ್ಧಧ್ವನಿ ಪುಟ್ಟೆ ಕೊಡಂಗಳೊಳ್ ಮೇಲೊಡೆಬಿಳ್ದುಕುಳ್ಳಿರ್ದರ ಮುಖದೊಳಂ, ಕಣ್ಣೊಳಂ, ಮಯ್ಯೊಳಂ ತುಪ್ಪಂ ಚೆಲ್ಲೆ ಎಲ್ಲರೆರ್ದುಮಲ್ಲಳಿಗೊಂಡು ಘೊಳ್ಳೆಂದು ಬಿಳ್ದ ವೃದ್ಧಮಾಹೇಶ್ವರನಂ ಮುತ್ತಿಕೊಂಡೆತ್ತಲನುವಾಗಿ ಮೆಲ್ಲನೆ ನೆಗಪಿ ನಿಂದಿರಿಸಲ್ ಒಂದೆರಡಡಿಯಿಟ್ಟು ದಡದಡಸಿ ನೋಡುವ ಜನವೆಲ್ಲಂ ಎಲೆಲೆ ವೃದ್ಧನಾಬಿದ್ದನೆಂಬಲ್ಲಿಂ ಮುನ್ನಂನಿಲಲಾಱದೆ ಹಳಿಲನೆ ಘಳಿಗೆವಟ್ಟಲ ಮೇಲೆ ಬೀಳೆ ಕಳಸಿಗೆಯೊಡೆದು ಘಳಿಗೆವಟ್ಟಲು ಮುಱಿದು ತಂಡುಲಂ ಚೆಲ್ಲಿ ಜೋಯಿಸರೆಲ್ಲಂ ಕೆದಱಿಪೋಗೆ, ಬಿದ್ದೇಳಲಾಱದೆ ಹಮ್ಮೈಸಿದಂತಿರೆ ಪರಿತಂದು ಕಣ್ಣೊಳಂ ಬಾಯೊಳಂ ನೀರಂ ತಳಿದೆಂತಕ್ಕೆಚ್ಚಱಿಸೆ ಎತ್ತುವರ ಕಯ್ಯ ಬಾಯೊಳೆ ಜೀವಂ ಹಿಡಿಯಬಾರದು ಮುಟ್ಟಬಾರದು ನೋಡಬಾರದು ನುಡಿಸಲರಿದು ಪಿಡಿದು ಬಿಟ್ಟಡೆ ತುಪ್ಪದ ಕೊಡನ ಮೇಲಲ್ಲದೆ ಬೀಳಂ. ಈ ವೃದ್ಧಬ್ರಾಹ್ಮಣನನೀ ಮುಪ್ಪಿನ ಮರುಳನನೀ ಗೌತಮನ ಗೋವನೀ ಬ್ರಹ್ಮೇತಿಕಾಱನನಾರ್ ಪೊಗಿಸಿದರಾರ್ ತಂದರ್. ಇದೆ ಅವಶಕುನವಿನ್ನೇನೀ ಮದುವೆ ಹಸನಾಗದೆನುತ್ತೆಲ್ಲರುಂ ಮೆಲ್ಲನೆ ಕಯ್ಯುಮಂ ಕಾಲುಮಂ ಪಿಡಿದೆತ್ತಿಕೊಂಡು ಪೋಗಿ ತಮ್ಮಾಯುಷ್ಯ ಭಾಷೆಗಳಂ ಪೊಱಗಿಡುವಂತೆ ಚಪ್ಪರದವೊಱಗೆ ಮೆಲ್ಲನಿಳುಪಿ ಈತನಂ ಪೊಗಲೀಯದಿರೀವೃದ್ಧನಂ ಪೊಗಿಸದಿರೆಂದು ಬಾಗಿಲವನನದುಹುತ್ತೆ ಕದವನಿಕ್ಕಿ ಒಳಗಂ ಪೊಗುವೈಸಕ್ಕೆ ಅವರಿಂ ಮುನ್ನವೆಯ್ತಂದೊಳಗಂ ಪೊಕ್ಕು ತೋರಣದ ತಳಿರಂ ಪಱಿದು ಶಿವದಿಡುತ್ತಿರಲ್ ಅವರ್ ಕಂಡು ಬೆಱಗಾಗಿ ಈಗಳಿಂತು ಪೊಱಗಿರಿಸಲಾಗಳಂತೆ ಬಂದು ಮುಂದಿರ್ದಪನೀ ವೃದ್ಧಂ ಕಿಱುಕುಳನಲ್ಲ ಕಾರಣಿಕನಾಗಲೆವೇಳ್ಕುಮೆಂದು ನೋಡುತಿರ್ದರ್.

©KTBS Not to be republished

## ಪದ ವಿಂಗಡಣೆ

ಇಂತು ಮಣಮಂದ ಪುತ್ತೂರ್ಗೆ ನಡೆವುತ್ತುಮ್ +ಇರೆ ಮುಂತೆ + ಒರ್ವನ್ + ಎಯ್ತಂದು ಬಿನ್ನಪ + ಎನುತ್ತಮ್ + ಇರೆ ದೇವ ಲಗ್ನದ ಮುಹೂರ್ತಂ ಬರಂ ಬನದ + ಒಳಗೆ ದೇವ ಸುಖದಿಂದ + ಇರ್ಪುದು ಈ + ಊರ ಬನದ + ಒಳಗೆ ಎನೆ ತಿರುಗಿ ನಡೆದುದು + ಆ ವನದತ್ತ ಮುಂತಾಗಿ ತನತನಗೆ ಮುಯ್ಯಾನುತ + ಆನಂದ ಮಯರ್ + ಆಗಿ ಬಂದು ಬನಮಂ ಪೊಕ್ಕು ಮಿಕ್ಕು ಸಂತೋಷದಿಂ ಮುಂದೆ ಸಿಂಹಾಸನವನು + ಇಕ್ಕಲು ವಿಲಾಸದಿಂದ+ ಎಸೆಯೆ ಕುಳ್ಳಿರ್ದನು + ಆ ಸುಕುಮಾರ ಸೌಂದರಂ ವಸುಧೆಗೆ + ಒಪ್ಪುವ ಮರ್ತ್ಯಮಂಡಲ ಪುರಂದರಂ ಮುಗಿದು + ಇರ್ದ ನೈದಿಲು + ಕೊಳಂಗಳಂ ನೋಡುತುಂ ಮಿಗೆ ಬಳಲುವ + ಆ ಚಕೋರಂಗಳಂ ಕಾಣುತುಂ ರಸಫಳಂಗಳನ್ + ಅಱ[ರ]ುತ + ಇರ್ಪ ಶುಕನಿಕರಮಂ ಪೊಸಪೂವನ್ + ಎಳಸಿರ್ಪ ಮಧುಕರ ಪ್ರಕರಮಮ್ ನೋಡುತುಂ ಕೊಂಡಾಡುತ + ಇರ್ದನ್ + ಆ ವನದೊಳಗೆ ಆಡಿಸುತೆ ಪಾಡಿಸುತಮ್ + ಇರ್ದನ್ + ಆ ವನದೊಳಗೆ ಇಂತು ಮುದದಿಂ ನಲಿವುತ + ಅರಸು ಮಗನ್ + ಒಪ್ಪಿದಂ ಸಂತತಂ ವನದೊಳಗೆ ಸುಕುಮಾರನ್ + ಒಪ್ಪಿದಂ

ವಿವಾಹ ತತ್ + ಪರನಾಗಿ ನಂಬಿಯಣ್ಣಂ ವನದ + ಒಳಗೆ + ಇರಲ್ + ಇತ್ತಲು ಕೈಲಾಸಪುರದ+ ಅರಮನೆಯಲ್ + ಅಪರಿಮಿತ ಪರಿವಾರನಾಗಿ ವಿರೂಪಾಕ್ಷನ್ + ಇರ್ದು ಗಿರಿಜೆಗೆ + ಇಂತು + ಎಂದಂ ದೇವಿ ಕೇಳೌ ನಮ್ಮ ಪುತ್ರಂ ಪುಷ್ಪದತ್ತಂ ನರಲೋಕದೊಳ್ ಪುಟ್ಟಿ ನಂಬಿ + ಎಂಬ ನಾಮವಾಗಿ ಸಂಸಾರದಿಂ ಕೆಟ್ಟುಪೋಗಲ್ ಅನುವಾಗಿ + ಇರ್ದಪಂ ಆತಂಗೆ ಮುನ್ನ + ಇತ್ತ ನಂಬುಗೆಯ ಬೆನ್ + ಬಳಿ + ಕೊಂಡು ಪೋಗಿ ಮರ್ತ್ಯದೊಳ್ ತೊತ್ತು + ಕೊಂಡು ಆವು ಕಳುಪಿದ ನಿಮ್ಮ + ಇರ್ಬರು ರುದ್ರಕನ್ನಿಕೆಯರು ಚೋಳದೇಶದ ತಿರುವಾರೂರ್ + ಒಳಂ ತಿರುವತ್ತಿ + ಊರೊಳಂ ಪರವೆ ಸಂಕಿಲಿಗಳ್+ ಎಂಬ ನಾಮದಿಂ ಜನಿಯಿಸಿ + ಇರ್ದಪರ್ + ಅವಂದಿರನ್ + ಆತನೊಳ್ ನೆರಪಿ ಸಕಲ ಸುಖಮಂ ಪೂಜೆ + ಆಗಿ ಕೈಕೊಂಡು ಬರ್ಪೆನ್ + ಎನಲ್ ಆನುಂ ನಿಮ್ಮ + ಒಡನೆ ನೋಡುತ್ತುಂ ಬಂದಪೆನ್ + ಎಂದು ದೇವಿಯರ್ ಬಿನ್ನೈಸೆ ನೀನ್ + ಅತ್ಯಂತ ಕರುಣಿ. ನಾಂ ಮಾಳ್ಪುದು + ಅತಿ + ನಿಷ್ಠುರ ಚರಿತ್ರಂ ಆದೊಡಂ ನೀಂ ಬಂದು ಆನ್ + ಆವ + ಊರೊಳ್ + ಇರ್ದೆನ್ + ಎನಲ್ + ಅಲ್ಲಿಯ ದೇವಾಲಯದೊಳ್ + ಇರುತೆ ಬರ್ಪುದು + ಎಂದು ಕರುಣಿಸಿ ವಿಚಿತ್ರಂ ಮತ್ತಂ ದೇವಿಯರ್ ನೋಡನೋಡಲ್ + ಓರ್ವ ಶತವೃದ್ಧನ್ + ಆಗಿ ನಿಂದು + ಇರ್ದನ್ + ಎಂತು + ಎಂದೊಡೆ.

ಆಪಾದಮಸ್ತಕ ಪರ್ಯಂತರ + ಉದ್ಧೂಳಿಸಿದ ವಿಭೂತಿಯ ತಲೆಯುಂ ಮಯ್ಯುಂ ನರೆತೆರೆಗಳ್ + ಆಗೆ ಜೆಡೆಯ + ಚಂದ್ರಕಳೆ ಕೊಡೆಯಾಗೆ ಪಿಡಿದ ತ್ರಿಶೂಲಂ ಕೊಡೆಯ ಕಾವಾಗೆ ಖಟ್ವಾಂಗಂ ಯಷ್ಟಿಯಾಗೆ ಆಭರಣದೊಳ್ + ಒಂದು ಸರ್ಪಂ ಪ್ರಮಾಣ ಪತ್ರಂ + ಆಗೆ ಕಮಲಜ ಶಿರಂ ಕಮಂಡಲಮ್ + ಆಗೆ ಪುಲಿ + ತೊವಲ್ ಗಜಚರ್ಮಂ ಉಟ್ಟ ಹೊದೆದ ವೇಷ್ಟಿಗಳ್ + ಆಗೆ ಮೆಟ್ಟಿದ ನಾಗಾಸುರಂ ಪಾದರಕ್ಷೆಗಳ್ + ಆಗೆ ಕಟ್ಟಿದ ಶಿರೋಮಾಲೆ ಜಪಮಾಲೆಯಾಗೆ ಮಹಾವೃದ್ಧನ್ + ಆಗಿ ಕೈಲಾಸದಿಂ ಚೋಳದೇಶದ ಮಣಮಂದಪುತ್ತೂರ ಮದುವೆಯ ಚಪ್ಪರದ ಮುಂದೆ+ಇಳಿಹಿದಂತೆ ಇರ್ದಂ. ಕಯ್ಯ ಕೊಡೆಯಿಂ ಮಯ್ಯತೆರೆಯಿಂ ಜೋಲ್ವ ಪುರ್ವಿಂ ನೇಲ್ವ ತೋಳ ತೊವಲಿಂ ಇಟ್ಟ ವಿಭೂತಿಯಿಂ ಊಱೆ[ರಿ]ದ ಯಷ್ಟಿಯ ಕೋಲಿಂ ಪಿಡಿದ ಕಮಂಡಲದಿಂ + ಇಳಿದ ಬೆಳು + ಗಡ್ಡದಿಂ ನಡುಗುವ ನರೆ+ ತಲೆಯಿಂ ನರೆತು ಸಡಿಲ್ವ ಸರ್ವ+ಅಂಗದಿಂ ಪುಣ್ಯಂ ಪಣ್ಣು + ಆದಂತೆ ಒಮ್ಮೆ + ಒಮ್ಮೆ ಕೆಮ್ಮು + ಒಮ್ಮೆ + ಒಮ್ಮೆ ಗೊಹೆಗೊಹೆ ಗುಟ್ಟುತುಂ ಶಿಥಿಲ + ಅಕ್ಷರಂಗಳಿಂ ನಮಃಶಿವಾಯ ನಮಃಶಿವಾಯ + ಎನುತ್ತ + ಎನಲ್ + ಆಱ[ರ]ದಂತೆ ನಡುಗುತ್ತುಂ ಹೊಱ[ರ]ಗೆ ನೆರೆದ ನೆರವಿಗಳ್ + ಎಲ್ಲಂ ನೋಡುತ್ತಿರಲು ಮೆಲ್ಲಮೆಲ್ಲನೆ ಚಪ್ಪರದ ಬಾಗಿಲ್ಗೆ ಬಂದೊಡೆ + ಅವರ್ ಪೊಗಲ್ + ಈಯದೆ + ಇರ್ದೊಡೆ ಅವಂದಿರ್ + ಅಱೆ[ರಿ]ಯದಂತೆ + ಪೊಗುತಪ್ಪ + ಆಗಳ್.

ವಿವಾಹಮಂಟಪಮಂ + ಪೊಗುತ+ಇರ್ಪ ತಮ್ಮನ್ + ಆರು + ಅಱೆ[ರಿ]ಯದೆ ಕಾಣದೆ ಲೆಕ್ಕಿಸದೆ ಸಂಭ್ರಮದೊಳ್+ಇರೆ ಮೆಲ್ಲಮೆಲ್ಲನೆ + ಎಲ್ಲವ ನೋಡುತುಂ ಮನದೊಳ್ ನಗುತುಂ ಕೋಲನ್ + ಊಱು[ರು]ತೆ ಕೆಮ್ಮಿಕೆಮ್ಮುತ್ತೆ ಸಾಲ್ + ಕೊಂಡು + ಇರ್ದ ತುಪ್ಪದ ಕೊಡಂಗಳೊಳ್

©KTBS Not to be republished

ನಾಲ್ಕು + ಎರಡನ್ + ಎಡಹಿ ನಮಃಶಿವಾಯ+ಎಂಬ ವೃದ್ಧಧ್ವನಿ ಪುಟ್ಟೆ ಕೊಡಂಗಳೊಳ್ ಮೇಲ್ + ಒಡೆಬಿಳ್ದು ಕುಳ್ಳಿರ್ದರ ಮುಖದೊಳಂ ಕಣ್ಣೊಳಂ ಮಯ್ಯೊಳಂ ತುಪ್ಪಂ ಚೆಲ್ಲೆ ಎಲ್ಲರ್ + ಎರ್ದು + ಮಲ್ಲಳಿ + ಕೊಂಡು ಘೊಳ್ಳೆಂದು ಬಿಳ್ದ ವೃದ್ಧ ಮಾಹೇಶ್ವರನಂ ಮುತ್ತಿಕೊಂಡು + ಎತ್ತಲ್ + ಅನುವಾಗಿ ಮೆಲ್ಲನೆ ನೆಗಪಿ ನಿಂದು+ ಇರಿಸಲ್ ಒಂದು + ಎರಡು + ಅಡಿ + ಇಟ್ಟು ದಡದಡಿಸಿ ನೋಡುವ ಜನ + ಎಲ್ಲಂ ಎಲೆ + ಎಲೆ ವೃದ್ಧನಾ + ಬಿದ್ದನ್ + ಎಂಬಲ್ಲಿಂ ಮುನ್ನಂ ನಿಲಲ್ + ಆಱ[ರ]ದೆ ಹಳಿಲ್ + ಎನೆ ಘಳಿಗೆ + ಬಟ್ಟಲ ಮೇಲೆ ಬೀಳೆ ಕಳಸಿಗೆ + ಒಡೆದು ಘಳಿಗೆ + ಬಟ್ಟಲು ಮುಱೆ[ರಿ]ದು ತಂಡುಲಂ ಚೆಲ್ಲಿ ಜೋಯಿಸರ್ + ಎಲ್ಲಂ ಕೆದಱೆ[ರಿ]ಪೋಗೆ ಬಿದ್ದು + ಏಳಲಾಱ[ರ]ದೆ ಹಮ್ಮೈಸಿದಂತೆ + ಇರೆ ಪರಿತಂದು ಕಣ್ಣೊಳಂ ಬಾಯೊಳಂ ನೀರಂ + ತಳಿದು + ಎಂತಕ್ಕೆ + ಎಚ್ಚಱೆ[ರಿ]ಸೆ ಎತ್ತುವರ ಕಯ್ಯ ಬಾಯೊಳೆ ಜೀವಂ ಹಿಡಿಯಬಾರದು ಮುಟ್ಟಬಾರದು ನೋಡಬಾರದು ನುಡಿಸಲ್ + ಅರಿದು ಪಿಡಿದು ಬಿಟ್ಟಡೆ ತುಪ್ಪದ ಕೊಡನ ಮೇಲ್ + ಅಲ್ಲದೆ ಬೀಳಂ– ಈ ವೃದ್ಧ ಬ್ರಾಹ್ಮಣನನ್ + ಈ ಮುಪ್ಪಿನ ಮರುಳನನ್ + ಈ ಗೌತಮನ ಗೋವನ್ + ಈ ಬ್ರಹ್ಮೇತಿಕಾಱ[ರ]ನನ್ + ಆರ್ ಪೊಗಿಸಿದರ್ + ಆರ್ ತಂದರ್–ಇದೆ ಅವಶಕುನ ಇನ್ನು + ಏನ್ + ಈ ಮದುವೆ ಹಸನಾಗದು + ಎನುತ್ತ + ಎಲ್ಲರುಂ ಮೆಲ್ಲನೆ ಕಯ್ಯುಮಂ ಕಾಲುಮಂ ಪಿಡಿದು + ಎತ್ತಿಕೊಂಡು ಪೋಗಿ ತಮ್ಮ + ಆಯುಷ್ಯಭಾಷೆಗಳಂ ಪೊಱ[ರ]ಗೆ + ಇಡುವಂತೆ ಚಪ್ಪರದ ಪೊಱ[ರ]ಗೆ ಮೆಲ್ಲನೆ + ಇಳುಪಿ ಈ ವಿಪ್ರನಂ ಪೊಗಲ್ + ಈಯದಿರಿ + ಈ + ವೃದ್ಧನಂ ಪೊಗಿಸದಿರಿ + ಎಂದು ಬಾಗಿಲ + ಅವನನ್ + ಅದುಹುತ್ತೆ ಕದವನ್ + ಇಕ್ಕಿ ಒಳಗಂ ಪೊಗುವ + ಐಸಕ್ಕೆ ಅವರಿಂ ಮುನ್ನಂ + ಎಯ್ತಂದು + ಒಳಗಂ ಪೊಕ್ಕು ತೋರಣದ ತಳಿರಂ ಪಱೆ[ರಿ]ದು ಶಿವದಿಡುತ್ತ + ಇರಲ್ ಅವರ್ ಕಂಡು ಬೆಱ[ರ] ಗಾಗಿ ಈಗಳ್ + ಇಂತು ಪೊಱ(ರ)ಗೆ ಇರಿಸಲಾಗಳ್ + ಅಂತೆ ಬಂದು ಮುಂದೆ + ಇರ್ದಪನ್ + ಈ ವೃದ್ಧಂ ಕಿರುಕುಳನಲ್ಲ ಕಾರಣಿಕನ್ + ಆಗಲ್ + ವೇಳ್ಕುಂ + ಎಂದು ನೋಡುತ + ಇರ್ದರ್.

## ಪೂರ್ವ ಕಥೆ

ಕೈಲಾಸದಲ್ಲಿರುವ ಉದ್ಯಾನವನದಲ್ಲಿ ಇಬ್ಬರು ರುದ್ರಕನ್ನಿಕೆಯರು ಹೂ ಬಿಡಿಸುತ್ತಿದ್ದರು. ಇದನ್ನು ರುದ್ರಗಣದ ಸದಸ್ಯರಲ್ಲೊಬ್ಬನಾದ ಪುಷ್ಪದತ್ತ ಗಮನಿಸಿ ಅವರನ್ನು ಅನುರಾಗ ಭಾವದಿಂದ ನೋಡಿದನು. ಪುಷ್ಪದತ್ತನನ್ನು ಕಂಡ ರುದ್ರಕನ್ನಿಕೆಯರೂ ಅವನನ್ನು ಅದೇ ಭಾವದಿಂದ ನೋಡುತ್ತಿರುವುದನ್ನು ಶಿವ ಗಮನಿಸಿದ ಮತ್ತು ಅಸಮಾಧಾನ ಹೊಂದಿದ. ಕೈಲಾಸದಲ್ಲಿ ಗಣಗಳು ಇಂತಹ ವಿಕಾರಭಾವನೆಗಳನ್ನು ಹೊಂದಿರುವುದು ಅಪರಾಧ. ಹಾಗಾಗಿ ಶಿವನು ಈ ಮೂವರಿಗೂ ಇಹಲೋಕದಲ್ಲಿ ಮನುಜರಾಗಿ ಹುಟ್ಟಿ ಎಂದು ಶಪಿಸಿದನು. ಇದರಿಂದ ನೊಂದ ಪುಷ್ಪದತ್ತ "ನಿಮ್ಮನ್ನಗಲಿ ನಾನಿರಲಾರೆ, ದಯವಿಟ್ಟು ನನ್ನ ತಪ್ಪನ್ನು ಮನ್ನಿಸಿ" ಎಂದು ಪ್ರಾರ್ಥಿಸಲು, ನೀನು ಈಗ ಭೂಲೋಕದಲ್ಲಿ ಮಾನವನಾಗಿ ಹುಟ್ಟು,

©KTBS Not to be republished

ಆದಷ್ಟು ಬೇಗನೆ ನಿನ್ನನ್ನು ಕೈಲಾಸಕ್ಕೆ ಕರೆಸಿಕೊಳ್ಳುವೆನೆಂದು ಆಶ್ವಾಸನೆ ನೀಡಿದ. ಹೀಗಾಗಿ ಚೋಳದೇಶದ ರಾಜಮನೆತನದಲ್ಲಿ ನಂಬಿಯಣ್ಣನಾಗಿ ಪುಷ್ಪದತ್ತನೂ ಪರವೆ–ಸಂಕಿಲಿಯರಾಗಿ ರುದ್ರಕನ್ನಿಕೆಯರೂ ಹುಟ್ಟಿದರು.

## ಕೃತಿಕಾರರ ಪರಿಚಯ

**ಹರಿಹರನ** ಕಾಲ ಸುಮಾರು ಸಾ.ಶ. ೧೨೦೦. ಈತನ ಸ್ಥಳ **ಹಂಪೆ. ಹಂಪೆಯ ವಿರೂಪಾಕ್ಷ** ಈತನ **ಆರಾಧ್ಯದೈವ.** ಕನ್ನಡ ಸಾಹಿತ್ಯದಲ್ಲಿ ರಗಳೆ ಕಾವ್ಯಪ್ರಕಾರವನ್ನು ಜೀವಂತಗೊಳಿಸಿದ ಸುಪ್ರಸಿದ್ಧ ಕವಿ. ಹರಿಹರನು **'ಪಂಪಾಶತಕ', 'ರಕ್ಷಾಶತಕ'** ಮತ್ತು **'ಮುಡಿಗೆಯ ಅಷ್ಟಕ'**ಗಳನ್ನು ವೃತ್ತ ಛಂದಸ್ಸಿನಲ್ಲಿ ರಚಿಸಿದ್ದಾನೆ. **ಗಿರಿಜಾಕಲ್ಯಾಣ** ಪ್ರೌಢಚಂಪೂ ಪರಂಪರೆಯಲ್ಲಿ ರಚಿತವಾಗಿರುವ ಕಾವ್ಯ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹತ್ತ್ವದ ಸ್ಥಾನಗಳಿಸಿರುವುದು ರಗಳೆ ಕಾವ್ಯದ ಮೂಲಕ. ಶಿವಶರಣರನ್ನು ಸ್ತುತಿಸಲು ಮಾತ್ರ ಕಾವ್ಯಶಕ್ತಿಯನ್ನು ಬಳಸಬೇಕಲ್ಲದೆ ಮಾನವರಿಗಾಗಿ ಅಲ್ಲವೆಂಬ ಸಂಪ್ರದಾಯವನ್ನು ಕನ್ನಡ ಸಾಹಿತ್ಯದಲ್ಲಿ ರೂಢಿಗೆ ತಂದ. ಕನ್ನಡ ಸಾಹಿತ್ಯದಲ್ಲಿ ಪ್ರಧಾನವಾಗಿದ್ದ ಚಂಪೂಕಾವ್ಯ ಪರಂಪರೆಯನ್ನು ಹಿಂದೆ ಸರಿಸಿ ಶಿವಗಣದ ರಗಳೆಗಳನ್ನು ರಚಿಸುವ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದನು. ಪಾದಗಳ ನಿರ್ಬಂಧವಿಲ್ಲದ ಈ ರಗಳೆಗಳಲ್ಲಿ ಕಥಾನಿರೂಪಣೆ ನಿರರ್ಗಳವಾಗಿ ಸಾಗುತ್ತದೆ. **'ರಗಳೆ ಕವಿ'**ಯೆಂದೇ ಪ್ರಸಿದ್ಧನಾಗಿರುವ ಈತನ ಕೃತಿಗಳಲ್ಲಿ ಕೆಲವು ಸ್ಥಲಗಳು ಪೂರ್ತಿಯಾಗಿ ಗದ್ಯದಲ್ಲಿದ್ದು ಭಕ್ತಿಭಾವ ಉತ್ಕಟವಾಗಿ ಮೂಡಿಬಂದಿವೆ.

**ಹರಿಹರನ ನಂಬಿಯಣ್ಣನರಗಳೆ**ಯಿಂದ **ಹರಲೀಲೆ** ಪಾಠವನ್ನು ಆಯ್ದುಕೊಂಡಿದೆ. ಈ ಕೃತಿಯನ್ನು **ತೀ.ನಂ. ಶ್ರೀಕಂಠಯ್ಯ**ನವರು ಸಂಪಾದಿಸಿದ್ದು ಮೈಸೂರಿನ ಕಾವ್ಯಾಲಯ ಪ್ರಕಾಶನವು ಹೊರತಂದಿದೆ.

* * * *

©KTBS Not to be republished

## ಆಶಯ ಭಾವ

ವೃದ್ಧಮಾಹೇಶ್ವರ ಸ್ಥಲದ ವೃದ್ಧನ ವರ್ಣನೆ, ನಡೆನುಡಿ, ಹಾವಭಾವಗಳು ಸಹೃದಯನ ಮನಸ್ಸಿಗೆ ಮುದ ನೀಡುತ್ತವೆ. ತನ್ನ ಅಭಿನಯಚಾತುರ್ಯ ಹಾಗೂ ನಟನಾ ಸಾಮರ್ಥ್ಯವನ್ನು ನೋಡಲು ಜಗನ್ಮಾತೆಯಾದ ಗಿರಿಜೆ ಊರ ಮುಂದಿನ ಮಂದಿರದಲ್ಲಿ ನೆಲೆಸಿರುವುದನ್ನರಿತ ನಟವರ ಗಂಗಾಧರ, ಭಕ್ತ ಉದ್ಧಾರಕ ಸೊಗಸಾದ ನಟನೆಯನ್ನು ಮಾಡುತ್ತಾನೆ. ಹರಿಹರನ ಕೈಯಲ್ಲಿ ಪದಗಳು ಅದೆಷ್ಟು ಚೆನ್ನಾಗಿ ನರ್ತಿಸುತ್ತವೆ ಎಂಬುದನ್ನರಿಯಲು ಇಡೀ ಕಾವ್ಯವನ್ನು ಮೆಲುಕು ಹಾಕಬೇಕು. ಶಿವನೃತ್ಯವನ್ನು ನೋಡಿದ ಶರಣರು ಮತ್ತೊಮ್ಮೆ ಕಾಣಲು ಕಾತರಿಸುವಂತೆ ಇಡೀ ಕಾವ್ಯವನ್ನು ಮತ್ತೊಮ್ಮೆ ಮಗದೊಮ್ಮೆ ಓದಬೇಕೆನಿಸುತ್ತದೆ. ನಂಬಿಯಣ್ಣನ ರಗಳೆಯಲ್ಲಿನ **ವೃದ್ಧಮಾಹೇಶ್ವರ**ನ ಅಭಿನಯ ಸಹೃದಯರಲ್ಲಿ ಹಾಸ್ಯದ ಹೊನಲನ್ನು ಹರಿಸುತ್ತದೆ.

* * * *

# ಪದಗಳ ಅರ್ಥ

ಅರಸು – ಹುಡುಕು
ಅವಂದಿರ್ – ಅವರು
ಅದುಹು – ಸಂಶಯ ಪಡು
ಆವು – ನಾವು
ಆಪಾದ ಮಸ್ತಕ ಪರ್ಯಂತರ – ಪಾದದಿಂದ ತಲೆಯವರೆಗೆ
ಅನುವಾಗು – ಸಿದ್ಧನಾಗು
ಅಪರಿಮಿತ – ಪರಿಮಿತವಲ್ಲದ, ಮಿತಿಯಿಲ್ಲದ.
ಇರೆ – ಇರಲು
ಈಯದೆ – ಬಿಡದೆ
ಉದ್ಧೂಳಿಸು – ಲೇಪಿಸು
ಎಯ್ತಂದು – ಬಂದು
ಎಳಸಿರ್ಪ – ಸುತ್ತುವರಿದಿರುವ
ಐಸಕ್ಕೆ – ಅಷ್ಟಕ್ಕೆ, ಅಷ್ಟು ಹೊತ್ತಿಗೆ.
ಒರ್ವನೆ – ಒಬ್ಬನೆ
ಕಮಲಜ – ಬ್ರಹ್ಮ
ಕಾರಣಿಕ – ಅಸಾಧಾರಣ ಪುರುಷ
ಖಟ್ವಾಂಗ – ತುದಿಯಲ್ಲಿ ತಲೆಬುರುಡೆಯುಳ್ಳ ಶಿವನ ಗದೆ
ಗಜ – ಆನೆ
ಗೊಹೆಗೊಹೆಗುಟ್ಟು – ಗೊರ್‌ಗೊರ್ ಎಂದು ಶಬ್ದಮಾಡು
ಗೌತಮನ ಗೋವು – ಬಡಕಲಾದ ಗೋವು
ಘಳಿಗೆವಟ್ಟಲು – ಘಳಿಗೆಯನ್ನು ಸೂಚಿಸುವ ಬಟ್ಟಲು
ಚರಿತ್ರಂ – ಕೆಲಸ
ಜೋಲ್ವ – ಸಡಿಲವಾಗಿರುವ
ತತ್ಪರ – ಆಸಕ್ತ
ತಂಡುಲ – ಅಕ್ಕಿ
ತೆರೆ – ಮುಪ್ಪಿನಿಂದಾದ ಸುಕ್ಕುಗಟ್ಟಿದ ಚರ್ಮ
ತೊವಲ್ – ಚರ್ಮ
ತೊತ್ತುಗೊಂಡು – ಸೇವಕನನ್ನಾಗಿ ಮಾಡಿಕೊಂಡು
ನರೆ – ಮುಪ್ಪಿನಿಂದ ಬರುವ ಬಿಳಿಕೂದಲು
ನಿಕರ – ಸಮೂಹ
ನೆರವಿ – ಸೇರಿದ ಜನ
ನೆಗಪಿ – ಎತ್ತಿ
ನೇಲ್ವ – ನೇತಾಡುವ
ಪರಿವಾರ – ಸುತ್ತುಮುತ್ತಲ ಜನ
ಪುರ್ವು – ಹುಬ್ಬು
ಪೊಗಿಸು – ಹೊಕ್ಕಿಸು
ಪೊಗುತಪ್ಪಾಗಳ್ – ಹೊಕ್ಕಿದಾಗ
ಬನ(ದ್ಭ) – ವನ(ತ್ಸ)
ಬಿನ್ನಪ(ದ್ಭ) – ವಿಜ್ಞಾಪನೆ(ತ್ಸ)
ಬಿನ್ನೈಸು – ನಿವೇದಿಸು, ವಿಜ್ಞಾಪಿಸು.
ಬೆಳು – ಬಿಳಿ
ಬೆಂಬಳಿಗೊಂಡು – ಹಿಂಬಾಲಿಸಿ
ಬ್ರಹ್ಮೇತಿಕಾರ – ಬ್ರಾಹ್ಮಣನನ್ನು ಕೊಂದವ
ಮರ್ತ್ಯಮಂಡಲ – ಭೂಲೋಕ;
ಮರ್ತ್ಯ – ಭೂಮಿ
ಮಲ್ಲಳಿಗೊಂಡು – ಗುಂಪುಗೂಡಿ
ಯಷ್ಟಿ – ಊರುಗೋಲು
ವಸುಧೆ – ಭೂಮಿ
ವೇಷ್ಟಿ – ಪಂಚೆ
ಶತವೃದ್ಧ – ನೂರುವರ್ಷ ತುಂಬಿದ ಮುದುಕ
ಶಿವದಿಡು – ಶಿವಾ ಎಂದು ಕೂಗು
ಶುಕ – ಗಿಳಿ
ಶಿಥಿಲಾಕ್ಷರ – ತೊದಲು ಮಾತು
ಹಮ್ಮೈಸು – ಮೈಮರೆ, ಮೂರ್ಛೆಹೋಗು.

©KTBS Not to be republished

## ಟಿಪ್ಪಣಿ

**ವಿರೂಪಾಕ್ಷ** : ಶಿವನ ಮತ್ತೊಂದು ಹೆಸರು. ಹಂಪೆಯಲ್ಲಿರುವ ವಿರೂಪಾಕ್ಷ ಹರಿಹರನ ಆರಾಧ್ಯ ದೈವ.

**ಪುಷ್ಪದತ್ತ** : ನಂಬಿಯಣ್ಣನ ಪೂರ್ವಜನ್ಮದ ಹೆಸರು. ಈತನು ಶರಣ ನಡೆವಳಿಕೆಗೆ ಅಪಚಾರವೆಂಬಂತೆ ರುದ್ರಕನ್ನಿಕೆಯರನ್ನು ಮೋಹದ ದೃಷ್ಟಿಯಿಂದ ನೋಡಿದ್ದರಿಂದ ಮಾನವನಾಗಿ ಭೂಲೋಕದಲ್ಲಿ ಹುಟ್ಟಿ ಕಷ್ಟಕೋಟಲೆಗಳನ್ನು ಅನುಭವಿಸಬೇಕಾಯಿತು.

**ಪರವೆ–ಸಂಕಿಲಿ** : ಇವರಿಬ್ಬರು ಪೂರ್ವಜನ್ಮದಲ್ಲಿ ಕೈಲಾಸದ ರುದ್ರಕನ್ನಿಕೆಯರಾಗಿದ್ದರು. ಅಲ್ಲಿದ್ದ ಇವರ ಮನಸ್ಸು ಮೋಹಕ್ಕೆ ಒಳಗಾದುದರಿಂದ ಮೋಹದ ಮಾಯೆಯನ್ನು ಕಳೆದುಕೊಳ್ಳಲು ಮಾನವರಾಗಿ ಹುಟ್ಟಿರೆಂದು ಶಿವನ ಶಾಪಕ್ಕೆ ಗುರಿಯಾದವರು.

**ಮಣಮಂದಪುತ್ತೂರು** : ಚೋಳ ದೇಶದ ಒಂದು ಗ್ರಾಮ. ಇಲ್ಲಿ ನಂಬಿಯಣ್ಣನ ಮದುವೆಗೆ ಏರ್ಪಾಡು ಮಾಡಲಾಗಿತ್ತು. ವೃದ್ಧ ವೇಷಧಾರಿಯಾಗಿ ಬಂದ ಮಾಹೇಶ್ವರ ವ್ಯವಸ್ಥೆಯನ್ನೆಲ್ಲ ಅವ್ಯವಸ್ಥೆಯನ್ನಾಗಿ ಮಾಡಿದ.

**ಜೋಯಿಸ** : ಜ್ಯೋತಿಶ್ಶಾಸ್ತ್ರ ತಿಳಿದವನು. ಶಾಸ್ತ್ರ ಗ್ರಂಥಗಳನ್ನು ಮನನ ಮಾಡಿಕೊಂಡು ಸಂಪ್ರದಾಯಕ್ಕೆ ಚ್ಯುತಿಬಾರದಂತೆ ಬದುಕನ್ನು ಸಾಗಿಸುವ ಧಾರ್ಮಿಕ ಮುಂದಾಳು.

**ಕಾರಣಿಕ** : ಯಾವುದೋ ಒಂದು ತಪ್ಪಿಗಾಗಿ ಶಿವನ ಅವಕೃಪೆಗೆ ಒಳಗಾಗಿ, ಭೂಲೋಕಕ್ಕೆ ಬಂದು ಅನಂತರ ಕೈಲಾಸದ ಶಿವ ಗಣಪರಿವಾರದಲ್ಲಿ ಸೇರುವವನೇ ಕಾರಣಿಕ, ಅವತಾರ ಪುರುಷ.

**ಘಳಿಗೆವಟ್ಟಲು** : ಘಳಿಗೆ ಬಟ್ಟಲು – ಒಂದು ದಿನಕ್ಕೆ (ರಾತ್ರಿ ಸೇರಿ) ೬೦ ಘಳಿಗೆ. ಒಂದು ಘಳಿಗೆಯನ್ನು ಅಳೆಯಲು ಈ ಬಟ್ಟಲನ್ನು ಬಳಸುತ್ತಿದ್ದರು. ಒಂದು ನಿರ್ದಿಷ್ಟ ಗಾತ್ರದ ಬಟ್ಟಲಿಗೆ ತಳದಲ್ಲಿ ನಿರ್ದಿಷ್ಟ ಗಾತ್ರದ ರಂಧ್ರವನ್ನು ಮಾಡಿ ಇನ್ನೊಂದು (ಅದಕ್ಕಿಂತ ದೊಡ್ಡದು) ಬಟ್ಟಲ ಮೇಲೆ ಇಟ್ಟು ತೂತು ಮಾಡಿರುವ ಬಟ್ಟಲಿಗೆ ನೀರು ತುಂಬಿಸುತ್ತಿದ್ದರು (ಕೆಲವು ಕಡೆ ಮರಳನ್ನು ತುಂಬುತ್ತಿದ್ದರು) ಆ ನೀರು (ಮರಳು) ಪೂರ್ತಿಯಾಗಿ ಕೆಳಗಿರುವ ಬಟ್ಟಲಿಗೆ ಸೋರಿ ಹೋದಾಗ ಒಂದು ಘಳಿಗೆ ಆಯಿತು ಎಂದು ಲೆಕ್ಕಾಚಾರ ಮಾಡಲಾಗುತ್ತಿತ್ತು.

**ಕಮಲಜ** : ಕಮಲ–ತಾವರೆ ಜ–ಜನಿಸಿದವನು. ಕಮಲದಲ್ಲಿ ಜನಿಸಿದವನು, ಬ್ರಹ್ಮ.

**ಬ್ರಹ್ಮೇತಿಕಾಱ[ರ]** : ಬೊಮ್ಮೇತಿಗಾಱ[ರ], ಬ್ರಾಹ್ಮಣ ವಧೆಯನ್ನು ಮಾಡಿದವನು; ಬ್ರಹ್ಮಹತ್ಯಾದೋಷಕ್ಕೆ ಒಳಗಾದವನು.

©KTBS Not to be republished

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ನಂಬಿಯಣ್ಣನ ಪೂರ್ವಜನ್ಮದ ಹೆಸರೇನು?

೨. ಹರಲೀಲೆ ಪಾಠದ ಮೂಲ ಕೃತಿ ಯಾವುದು?

೩. ಹರಲೀಲೆ ಪಾಠದ ಕವಿಯ ಹೆಸರೇನು?

೪. ಗಿರಿಜೆ ಎಲ್ಲಿ ಇರಬೇಕೆಂದು ಶಿವನು ತಿಳಿಸಿದನು?

೫. ಹರಿಹರ ಬರೆದಿರುವ ಎರಡು ಕೃತಿಗಳನ್ನು ಹೆಸರಿಸಿ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ವಿರೂಪಾಕ್ಷನು ಗಿರಿಜೆಗೆ ಏನೆಂದು ಹೇಳಿದನು?

೨. ಚೋಳದೇಶದಲ್ಲಿದ್ದ ಮೂರು ಗ್ರಾಮಗಳನ್ನು ಹೆಸರಿಸಿ.

೩. ವೃದ್ಧಮಾಹೇಶ್ವರನು ಶಿವಮಂತ್ರವನ್ನು ಹೇಳುತ್ತಿದ್ದ ರೀತಿಯನ್ನು ತಿಳಿಸಿ.

೪. ಕೆಳಗೆ ಬಿದ್ದ ವೃದ್ಧನನ್ನು ನೋಡಿ ನೆರೆದಿದ್ದ ಜನ ಏನೆಂದು ಮಾತನಾಡಿಕೊಂಡರು?

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು–ಐದು ವಾಕ್ಯಗಳಲ್ಲಿ ಉತ್ತರಿಸಿ.**

೧. ಶಿವನು ವೃದ್ಧಮಾಹೇಶ್ವರನಾಗಿ ವೇಷಧರಿಸಲು ಕಾರಣವೇನು?

೨. ವೃದ್ಧಮಾಹೇಶ್ವರನನ್ನು ಕವಿ ಹೇಗೆ ವರ್ಣಿಸಿದ್ದಾನೆ?

೩. ಮದುವೆ ಮಂಟಪದಲ್ಲಿ ವೃದ್ಧನು ಮಾಡಿದ ಅವಾಂತರಗಳಾವುವು?

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಸಕಲಸುಖಮಂ ಪೂಜೆಯಾಗಿ ಕೈಕೊಂಡುಬರ್ಪೆನ್"

೨. "ನೀನತ್ಯಂತ ಕರುಣಿ"

೩. "ಪುಣ್ಯಂ ಪಣ್ಣಾದಂತೆ"

೪. "ಈ ವೃದ್ಧಂ ಕಿಱುಕುಳನಲ್ಲ"

**ಉ) ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

೧. ಹರಿಹರನ ಕಾಲ ________
(೧೧೬೦ ೧೩೬೦ ೧೨೦೦ ೧೪೬೦)

೨. ವೃದ್ಧಮಾಹೇಶ್ವರ ________ ಕೊಡದ ಮೇಲೆ ಬಿದ್ದನು
(ಎಣ್ಣೆಯ ಹಾಲಿನ ತುಪ್ಪದ ಮಜ್ಜಿಗೆ)

©KTBS Not to be republished

೩. ಹರಲೀಲೆ ಪಾಠವನ್ನು ____________ ರಗಳೆಯಿಂದ ಆಯ್ದುಕೊಳ್ಳಲಾಗಿದೆ.
(ಬಸವರಾಜ ದೇವರ ರಗಳೆ ನಂಬಿಯಣ್ಣನ ರಗಳೆ ಗುಂಡಯ್ಯನ ರಗಳೆ ಮಹಾದೇವಿಯಕ್ಕನ ರಗಳೆ)

೪. ವೃದ್ಧಮಾಹೇಶ್ವರನು ಕೈಲಾಸದಿಂದ __________ ಗೆ ಬಂದನು.
(ಮಣಮಂದಪುತ್ತೂರು, ತಿರುವಾರೂರು, ತಿರುವತ್ತಿಯೂರು, ಕೈಲಾಸಪುರ)

**ಊ) ಹೊಂದಿಸಿ ಬರೆಯಿರಿ.**

| | **'ಅ' ಪಟ್ಟಿ** | **'ಆ' ಪಟ್ಟಿ** |
|---|---|---|
| ೧. | ಪುಷ್ಪದತ್ತ | ಹಂಪಿ |
| ೨. | ರುದ್ರಕನ್ನಿಕೆಯರು | ಬಾಗಿಲು |
| ೩. | ಚೋಳದೇಶ | ನಂಬಿಯಣ್ಣ |
| ೪. | ಕದ | ಪರವೆ–ಸಂಕಿಲೆ |
| ೫. | ಗಿರಿಜೆ | ಮಣಮಂದಪುತ್ತೂರು |
| | | ಶಿವ |
| | | ಪಾರ್ವತಿ |

©KTBS
Not to be republished

## ಭಾಷೆಯ ಸೊಬಗು

ಎರಡು ದೀರ್ಘಾಕ್ಷರಗಳಿರುವ ಶಬ್ದಗಳು ಬಂದಾಗ ನಾವು ಹೆಚ್ಚಾಗಿ ಒಂದು ಅಕ್ಷರವನ್ನು ಹ್ರಸ್ವವಾಗಿಯೂ ಇನ್ನೊಂದನ್ನು ದೀರ್ಘವಾಗಿಯೂ ಉಚ್ಚರಿಸುತ್ತೇವೆ. ಮನಸ್ಸಿಟ್ಟು ಮಾತುಗಳನ್ನಾಡಿದಾಗ ಈ ತಪ್ಪಿನ ಅರಿವಾದೀತು.

(೧) ಅವನಿಗೆ ಸ್ವಲ್ಪವೂ ಜವಬ್ದಾರಿ ಇಲ್ಲ.

(೨) ಸಂಜೆ ಹೊತ್ತು ಧಾರವಾಹಿ ನೋಡುತ್ತಿದ್ದರೆ ಸಮಯ ಸರಿದದ್ದೇ ಗೊತ್ತಾಗುವುದಿಲ್ಲ.

(೩) ಇಡೀ ದಿನ ಧಾರಕಾರ ಮಳೆ ಬಂತು.

(೪) ಅದು ಮಾಂಸಹಾರದ ಹೊಟೇಲು.

– ಈ ಶಬ್ದಗಳಲ್ಲಿ ತಪ್ಪೆಲ್ಲಿದೆ ಗುರುತಿಸಬಲ್ಲಿರಾ?

ಜವಬ್ದಾರಿ ಅಲ್ಲ, ಜವಾಬ್ದಾರಿ.

ಧಾರವಾಹಿ ಅಲ್ಲ, ಧಾರಾವಾಹಿ.

ಧಾರಕಾರ ಅಲ್ಲ, ಧಾರಾಕಾರ.

ಮಾಂಸಹಾರ ಅಲ್ಲ, ಮಾಂಸಾಹಾರ.

ಇಂಥ ಇನ್ನಷ್ಟು ಶಬ್ದಗಳನ್ನು ಸಂಗ್ರಹಿಸಿ ಬರೆಯಿರಿ.

## ಸೈದ್ಧಾಂತಿಕ ಭಾಷಾಭ್ಯಾಸ

**ಅ. ಕರ್ತರಿ ಮತ್ತು ಕರ್ಮಣಿ ಪ್ರಯೋಗ :**

ಈ ವಾಕ್ಯಗಳನ್ನು ಗಮನಿಸಿ:

| ಗುಂಪು – ೧ | ಗುಂಪು – ೨ |
|---|---|
| – ಅಣ್ಣ ಅನ್ನವನ್ನು ಉಂಡನು. | – ಅಣ್ಣನಿಂದ ಅನ್ನವು ಉಣ್ಣಲ್ಪಟ್ಟಿತು. |
| – ಕೃಷ್ಣ ಕಾಳಿಂಗವನ್ನು ಮರ್ದಿಸಿದನು. | – ಕೃಷ್ಣನಿಂದ ಕಾಳಿಂಗವು ಮರ್ದಿಸಲ್ಪಟ್ಟಿತು. |
| – ಅಕ್ಕ ತಂಗಿಯನ್ನು ಕರೆದಳು. | – ಅಕ್ಕನಿಂದ ತಂಗಿಯು ಕರೆಯಲ್ಪಟ್ಟಳು. |

ಮೊದಲ ಗುಂಪಿನಲ್ಲಿರುವ ಧಾತುಗಳಿಗೆ ಲಿಂಗ ಮತ್ತು **ವಚನವಾಚಕಗಳು** ಸೇರಿ ಪೂರ್ಣ ವಾಕ್ಯವಾಗಿವೆ. ಇವೇ **ಕರ್ತರಿ ಪ್ರಯೋಗ** ವಾಕ್ಯಗಳು.

**ಸೂತ್ರ: ಕ್ರಿಯಾಪದಕ್ಕೆ ಕರ್ತರಿ ಪ್ರಯೋಗದಲ್ಲಿ ಕರ್ತೃವಿನ ಲಿಂಗ, ವಚನಗಳು ಬರುತ್ತವೆ.**

ಎರಡನೆಯ ಗುಂಪಿನಲ್ಲಿರುವ ಧಾತುಗಳಿಗೆ **–ಅಲ್ಪಡು** ಪ್ರತ್ಯಯ ಸೇರಿದೆ.

ಇವೇ **ಕರ್ಮಣಿ ಪ್ರಯೋಗ** ವಾಕ್ಯಗಳು.

**ಸೂತ್ರ: ಧಾತುಗಳಿಗೆ – 'ಅಲ್ಪಡು' ಎಂಬ ಪ್ರತ್ಯಯ ಸೇರಿ ಅದಕ್ಕೆ ಕಾಲಸೂಚಕ ಮತ್ತು ಆಖ್ಯಾತ ಪ್ರತ್ಯಯಗಳು ಸೇರಿದಾಗ ಕರ್ಮಣಿ ಪ್ರಯೋಗದ ವಾಕ್ಯಗಳಾಗುತ್ತವೆ.**

©KTBS
Not to be republished

**ಆ. ನಾನಾ ಕ್ರಿಯಾರ್ಥಕಗಳು**

ಈ ವಾಕ್ಯಗಳನ್ನು ಗಮನಿಸಿ:

– ದೇವರು ನಿಮಗೆ ಒಳ್ಳೆಯದನ್ನು **ಮಾಡಲಿ.**

– ಅವರು ಪಾಠವನ್ನು **ಓದಲಿ.**

– ಭೀಮನಿಗೆ **ಜಯವಾಗಲಿ.**

ಈ ಮೂರು ವಾಕ್ಯಗಳಲ್ಲಿ **ಮಾಡಲಿ, ಓದಲಿ, ಆಗಲಿ** ಎಂಬ ಕ್ರಿಯಾಪದಗಳಿವೆ. **ಮಾಡಲಿ** ಎಂಬಲ್ಲಿ ಹಾರೈಕೆಯೂ **ಓದಲಿ** ಎಂಬಲ್ಲಿ ಸಮ್ಮತಿಯೂ **ಆಗಲಿ** ಎಂಬಲ್ಲಿ ಆಶೀರ್ವಾದವೂ ಇದೆ.

**ಸೂತ್ರ: ಆಶೀರ್ವಾದ, ಅಪ್ಪಣೆ, ಆಜ್ಞೆ, ಹಾರೈಕೆ, ಸಮ್ಮತಿ ಇತ್ಯಾದಿ ವಿಧಿಗಳನ್ನು ಹೊಂದಿರುವ ಕ್ರಿಯಾಪದಗಳೇ ವಿಧ್ಯರ್ಥಕ ಕ್ರಿಯಾಪದಗಳು.**

ಈ ವಾಕ್ಯಗಳನ್ನು ಗಮನಿಸಿ:

– ಕೃಷ್ಣನು ಹಣ್ಣನ್ನು **ತಿನ್ನನು.**

– ಕಮಲೆಯು ಆಟಕ್ಕೆ **ಬಾರಳು.**

ಇಲ್ಲಿ **ತಿನ್ನನು** ಎಂಬ ಕ್ರಿಯಾಪದ **ತಿನ್ನುವುದಿಲ್ಲ** ಎಂಬ ಅರ್ಥವನ್ನೂ **ಬಾರಳು** ಎಂಬ ಕ್ರಿಯಾಪದ **ಬರುವುದಿಲ್ಲ** ಎಂಬ ಅರ್ಥವನ್ನೂ ಸೂಚಿಸುತ್ತವೆ.

**ಸೂತ್ರ: ಕ್ರಿಯೆ ನಡೆಯುವುದಿಲ್ಲ ಎಂಬ ಅರ್ಥವನ್ನು ಸೂಚಿಸುವ ಕ್ರಿಯಾಪದಗಳೇ ನಿಷೇಧಾರ್ಥಕ ಕ್ರಿಯಾಪದಗಳು.**

ಈ ವಾಕ್ಯಗಳನ್ನು ಗಮನಿಸಿ:

– ಅವರು ನಾಳೆ **ಬಂದಾರು.**

– ಚೆಂಡು ಮೇಲಕ್ಕೆ **ಹೋದೀತು.**

ಈ ವಾಕ್ಯಗಳಲ್ಲಿರುವ ಬಂದಾರು, ಹೋದೀತು ಎಂಬ ಕ್ರಿಯಾಪದಗಳು ಸಂಶಯ ಅಥವಾ ಊಹೆಯನ್ನು ಸೂಚಿಸುತ್ತವೆ.

**ಸೂತ್ರ: ಕ್ರಿಯೆ ನಡೆಯುವ ಬಗ್ಗೆ ಸಂಶಯ ಅಥವಾ ಊಹೆಯನ್ನು ವ್ಯಕ್ತಪಡಿಸುವಂತಹ ಪದಗಳೇ ಸಂಭಾವನಾರ್ಥಕ ಕ್ರಿಯಾಪದಗಳು.**

## ರಗಳೆ

**'ರಗಳೆ'** ಎಂಬುದು **'ರಘಟಾ'** ಎಂಬ ಸಂಸ್ಕೃತ ಪದದ ತದ್ಭವರೂಪ. ಕನ್ನಡದಲ್ಲಿ ಸಾಮಾನ್ಯವಾಗಿ **ಉತ್ಸಾಹ, ಮಂದಾನಿಲ** ಮತ್ತು **ಲಲಿತ** ಎಂದು **ಮೂರು ವಿಧದ ರಗಳೆಗಳು** ಪ್ರಸಿದ್ಧವಾಗಿವೆ. 'ರಗಳೆ'ಯಲ್ಲಿ ಇಂತಿಷ್ಟೇ ಸಾಲುಗಳು ಇರಬೇಕೆಂಬ ನಿಯಮವಿಲ್ಲ. ಆದರೆ ಎಲ್ಲಾ ಸಾಲುಗಳು ಸಮಾನವಾದ ಮಾತ್ರಾಗಣದಿಂದ ಕೂಡಿರುತ್ತವೆ. ಎರಡೆರಡು ಸಾಲುಗಳಲ್ಲಿ ಪ್ರಾಸಗಳಿರುತ್ತವೆ.

©KTBS Not to be republished

**ಉತ್ಸಾಹ ರಗಳೆ :**

| | | | |
|---|---|---|---|
| ೩ | ೩ | ೩ | ೩ |
| ∪∪∪ | _∪ | _∪ | _∪ |
| ಕುಳಿರ್ವ | ಪೂಗೊ | ಳಂಗ | ಳಲ್ಲಿ |
| ೩ | ೩ | ೩ | ೩ |
| ∪∪∪ | _∪ | _∪ | _∪ |
| ತಳಿರ | ಕಾವ | ಣಂಗ | ಳಲ್ಲಿ |
| ೩ | ೩ | ೩ | ೩ |
| _∪ | _∪ | _∪ | _∪ |
| ತುಂಬಿ | ವಿಂಡಿ | ನಂತೆ | ಪಾಡಿ |
| ೩ | ೩ | ೩ | ೩ |
| _∪ | _∪ | _∪ | _∪ |
| ಜಕ್ಕ | ವಕ್ಕಿ | ಯಂತೆ | ಕೂಡಿ |

ಈ ರಗಳೆಯಲ್ಲಿ ಪ್ರತಿ ಸಾಲಿನಲ್ಲೂ ಮೂರು ಮಾತ್ರೆಗಳ ನಾಲ್ಕು ಗಣಗಳುಂಟು ಮೊದಲೆರಡು ಸಾಲುಗಳಲ್ಲಿ ಆದಿ ಮತ್ತು ಅಂತ್ಯಪ್ರಾಸಗಳೂ ಮತ್ತೆರಡು ಸಾಲುಗಳಲ್ಲಿ ಅಂತ್ಯಪ್ರಾಸವೂ ಇರುವುದನ್ನು ಗಮನಿಸಬಹುದು.

**ಸೂತ್ರ : ಎರಡೆರಡು ಸಾಲುಗಳಲ್ಲಿ ಪ್ರಾಸ ನಿಯಮವನ್ನಿಟ್ಟುಕೊಂಡು ಪ್ರತಿಪಾದದಲ್ಲೂ ಮೂರು ಮಾತ್ರೆಗಳ ನಾಲ್ಕುಗಣಗಳಿದ್ದು ಸಾಲುಗಳ ಸಂಖ್ಯಾನಿಯಮವಿಲ್ಲದೆ ಇರುವ ಪದ್ಯ ಜಾತಿಯೇ ಉತ್ಸಾಹ ರಗಳೆಯೆನಿಸುವುದು.**

**ಶಿಥಿಲದ್ವಿತ್ವ :** ಒಂದು ಅಕ್ಷರವು ಸಂಯುಕ್ತಾಕ್ಷರವಾಗಿದ್ದರೆ (ಒತ್ತಕ್ಷರ) ಆ ಅಕ್ಷರವನ್ನು ತೇಲಿಸಿ ಉಚ್ಚರಿಸಿದಾಗ ಅಲ್ಲಿರುವ ಒತ್ತು ಶಿಥಿಲವಾಗುತ್ತದೆ ಇಂತಹ ಅಕ್ಷರವನ್ನೇ ಶಿಥಿಲದ್ವಿತ್ವಾಕ್ಷರ ಎಂದು ಕರೆಯುವುದು. ಮೇಲಿನ ಪದ್ಯದ ಮೊದಲ ಸಾಲಿನ ಮೊದಲ ಪದವಾದ 'ಕುಳಿರ್ವ' ಎಂಬಲ್ಲಿ 'ರ್ವ' ಎಂಬುದು ಒತ್ತಕ್ಷರವಾಗಿದೆ (ದ್ವಿತ್ವಾಕ್ಷರ). ನಿಯಮಾನುಸಾರ ಅದರ ಹಿಂದಿನ ಅಕ್ಷರ 'ಳಿ' ಎಂಬುದು ಗುರು ಎನಿಸಿಕೊಳ್ಳುತ್ತದೆ. ಆದರೆ ಇಲ್ಲಿರುವ 'ರ್ವ' ಅಕ್ಷರ ಶಿಥಿಲದ್ವಿತ್ವಾಕ್ಷರವಾದ ಕಾರಣ ಅಂದರೆ 'ರ್ವ' ಎಂಬ ಅಕ್ಷರವನ್ನು ತೇಲಿಸಿ ಉಚ್ಚರಿಸುವುದರಿಂದ ಇಲ್ಲಿ ಶಿಥಿಲದ್ವಿತ್ವ ಉಂಟಾಗಿ 'ಳಿ' ಎಂಬ ಅಕ್ಷರವು ಲಘು ಎನಿಸಿಕೊಳ್ಳುತ್ತದೆ.

**ಮಂದಾನಿಲ ರಗಳೆ :**

ೞ ೞ ೞ ೞ
–⏑⏑ | – – | ⏑⏑ ⏑⏑ | – –
ಆಡುವ | ಗುಂಡ | ಯ್ಯನ ಹೊಸ | ನೃತ್ಯಂ

ೞ ೞ ೞ ೞ
– ⏑⏑ | ⏑⏑ – | – ⏑⏑ | – –
ನೋಡುವ | ಶಿವನಂ | ಮುಟ್ಟಿತು | ಸತ್ಯಂ

ೞ ೞ ೞ ೞ
⏑⏑ – | – – | – – | – –
ಸುಖದಾ | ಟಂತ | ನ್ನಂಬೆಂ | ಬತ್ತಲ್

ೞ ೞ ೞ ೞ
⏑⏑ ⏑⏑ | – – | ⏑⏑ – | – –
ಸುಖ ಮುಖ | ದಿಂದಂ | ಮನಮಂ | ಸುತ್ತಲ್

ಈ ಪದ್ಯಭಾಗದಲ್ಲಿ ಪ್ರತಿಯೊಂದು ಪಾದದಲ್ಲೂ ನಾಲ್ಕು ಮಾತ್ರೆಗಳ ನಾಲ್ಕು ಗಣಗಳಿವೆ. ಮೊದಲೆರಡು ಸಾಲುಗಳಲ್ಲಿ 'ಡ್' ಎಂಬ ಪ್ರಾಸಾಕ್ಷರವೂ ಮತ್ತೆರಡು ಸಾಲುಗಳಲ್ಲಿ 'ಖ್' ಎಂಬ ಪ್ರಾಸಾಕ್ಷರವೂ ಆದಿಪ್ರಾಸವಾಗಿ ಬಂದಿವೆ. ಅದೇ ರೀತಿ ಎರಡೆರಡು ಸಾಲುಗಳಲ್ಲಿ ಅಂತ್ಯಪ್ರಾಸವೂ ಇದೆ.

**ಸೂತ್ರ : ನಾಲ್ಕು ಮಾತ್ರೆಗಳ ನಾಲ್ಕು ಗಣಗಳು ಪ್ರತಿ ಪಾದದಲ್ಲೂ ಬಂದು ಎರಡೆರಡು ಸಾಲುಗಳಿಗೆ ಪ್ರಾಸನಿಯಮವಿರುವ ಪದ್ಯಜಾತಿಗೆ ಮಂದಾನಿಲ ರಗಳೆಯೆನ್ನುವರು.**

©KTBS Not to be republished

**ಲಲಿತರಗಳೆ :**

| ೫ | ೫ | ೫ | ೫ |
|---|---|---|---|
| ∪∪∪∪∪ | ∪∪∪∪∪ | ∪∪∪∪∪ | — ∪∪∪ |
| ಅಳಿಯೆರಗ | ದನಿಲನಲು | ಗದ ರವಿ ಕ | ರಂ ಪುಗದ |
| ೫ | ೫ | ೫ | ೫ |
| ∪∪ — ∪ | ∪∪—∪ | ∪∪∪∪∪ | ∪∪∪∪∪ |
| ಸುಳಿಗೊಂಡು | ದಳವೇರಿ | ಹೆಸರಳಿದ | ಬೆಳಪುಳಿದ |
| ೫ | ೫ | ೫ | ೫ |
| ∪∪∪∪∪ | — ∪ — | ∪ ∪ —∪ | — — ∪ |
| ಸುರುಚಿರಮೆ | ನಿಪ್ಪಮೀ | ಸಲಮೊಗ್ಗೆ | ಯಂಕೊಂಡು |
| ೫ | ೫ | ೫ | ೫ |
| ∪∪—∪ | — ∪∪∪ | ∪∪∪ ∪∪ | — — ∪ |
| ಇರವಂತಿ | ಯೊಳ್ಮೆರೆವ | ಬಿರಿಮುಗುಳ್ಗೆ | ಳಂಕೊಂಡು |

ಇಲ್ಲಿಯೂ ಕೊನೆಯ ಸಾಲಿನಲ್ಲಿ 'ಳ್ಗ' ಎಂಬುದು ದ್ವಿತ್ವಾಕ್ಷರ (ಒತ್ತಕ್ಷರ) ಆಗಿದ್ದರು ಇಲ್ಲಿ ಶಿಥಿಲದ್ವಿತ್ವ ಇರುವುದರಿಂದಾಗಿ ಅದರ ಹಿಂದಿನ ಅಕ್ಷರ 'ಗು' ಎಂಬುದು ಲಘುವಾಯಿತು.

ಈ ಪದ್ಯದ ಪ್ರತಿಯೊಂದು ಸಾಲಿನಲ್ಲಿಯೂ ಐದು ಮಾತ್ರೆಗಳ ನಾಲ್ಕು ಗಣಗಳಿವೆ. ಎರಡೆರಡು ಸಾಲುಗಳಲ್ಲಿ ಪ್ರಾಸವಿದೆ.

**ಸೂತ್ರ : ಪ್ರತಿ ಪಾದದಲ್ಲೂ ಐದೈದು ಮಾತ್ರೆಗಳ ನಾಲ್ಕು ಗಣಗಳಿದ್ದು ಎರಡೆರಡು ಸಾಲುಗಳಲ್ಲಿ ಪ್ರಾಸಗಳಿರುವಂತೆ ರಚಿಸಲ್ಪಟ್ಟ ರಗಳೆಯೇ ಲಲಿತರಗಳೆ.**

©KTBS Not to be republished

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಕರ್ತರಿ ಪ್ರಯೋಗ ವಾಕ್ಯದ ವಿಶೇಷತೆಯನ್ನು ತಿಳಿಸಿ.

೨. ವಿಧ್ಯರ್ಥಕ ಕ್ರಿಯಾಪದ ಎಂದರೇನು? ಎರಡು ಉದಾಹರಣೆ ಕೊಡಿ.

೩. ಸಂಭಾವನಾರ್ಥಕ ಕ್ರಿಯಾಪದವನ್ನು ಸೂತ್ರ ಸಹಿತ ವಿವರಿಸಿ.

**ಆ) ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

೧. 'ದೇವರು ಎಲ್ಲರಿಗೂ ಒಳ್ಳೆಯದನ್ನೇ ಉಂಟುಮಾಡಲಿ' – ಈ ವಾಕ್ಯದಲ್ಲಿರುವ ಕ್ರಿಯಾಪದ.

ಅ) ದೇವರು ಆ) ಎಲ್ಲರಿಗೂ ಇ) ಒಳ್ಳೆಯದನ್ನೆ ಈ) ಉಂಟುಮಾಡಲಿ

೨. ಈ ಪದವು ನಿಷೇಧಾರ್ಥಕ ಕ್ರಿಯಾಪದಕ್ಕೆ ಉದಾಹರಣೆ ____________

ಅ) ತಿನ್ನನು ಆ) ತಿನ್ನಲಿ ಇ) ತಿಂದಾನು ಈ) ತಿನ್ನುತ್ತಾನೆ

೩. ಇದು ಈ ಗುಂಪಿಗೆ ಸೇರದ ಪದವಾಗಿದೆ ________

ಅ) ಉತ್ಸಾಹ ಆ) ಉಪಮಾ ಇ) ಮಂದಾನಿಲ ಈ) ಲಲಿತ

೪. 'ಎಳಸಿರ್ಪ' ಈ ಪದದ ಅರ್ಥ ________

ಅ) ಎಳೆಯದಾಗಿರುವ ಆ) ಮಿತಿಯಿಲ್ಲದ ಇ) ರುಚಿಯಾದ ಈ)ಸುತ್ತುವರಿದಿರುವ

**ಇ) ಈ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಮಾಡಿ, ಛಂದಸ್ಸಿನ ಹೆಸರು ಬರೆದು, ಲಕ್ಷಣ ಬರೆಯಿರಿ.**

ರಸಫಳಂಗಳನಱಸುತಿರ್ಪ ಶುಕನಿಕರಮಂ

ಪೊಸ ಪೂವನೆಳಸಿರ್ಪ ಮಧುಕರ ಪ್ರಕರಮಂ

**ಈ) ಕೊಟ್ಟಿರುವ ವಿಷಯಗಳನ್ನು ಕುರಿತು ಪ್ರಬಂಧ ಬರೆಯಿರಿ.**

೧. ರಾಷ್ಟ್ರೀಯ ಹಬ್ಬಗಳ ಮಹತ್ತ್ವ ೨. ರಾಷ್ಟ್ರೀಯ ಭಾವೈಕ್ಯ

## ಪೂರಕ ಓದು

ಅ) ಹರಿಹರನ ಬಸವರಾಜದೇವರ ರಗಳೆ ಮತ್ತು ನಂಬಿಯಣ್ಣನ ರಗಳೆಯ ಹೊಸಗನ್ನಡ ಅನುವಾದವನ್ನು ಸಂಗ್ರಹಿಸಿ ಓದಿ.

©KTBS Not to be republished

**ಪದ್ಯ ಭಾಗ**

# ೯. ಹೊಸಹಾಡು

**ಕಯ್ಯಾರ ಕಿಞ್ಞಣ್ಣ ರೈ–**

**ಪ್ರವೇಶ :** ಹಾಡು ಪ್ರಕೃತಿಯ ಅವಿಭಾಜ್ಯ ಅಂಗ. ಪ್ರಕೃತಿಯ ಕಣಕಣದಲ್ಲೂ ಹಾಡು ತುಂಬಿದೆ. ಇದು ಭಾವನೆಗಳ ಅಭಿವ್ಯಕ್ತಿಗೆ ಸುಂದರ ಮಾಧ್ಯಮ. ಅಲ್ಲದೆ ಜೀವನಕ್ಕೆ ಸ್ಫೂರ್ತಿ. ಇದಕ್ಕೆ ಯಾವುದೇ ಸೀಮಿತತೆ ಇಲ್ಲ. ಅಲ್ಲದೆ ಜಾತಿ, ಕುಲ, ಧರ್ಮ, ಲೋಕ, ಯುಗ–ಇವನ್ನೆಲ್ಲಾ ಮೀರಿ ನಿಲ್ಲುವಂಥದ್ದು. ಯುದ್ಧ–ಕ್ರಾಂತಿಯ ಸಂದರ್ಭದಲ್ಲಿ ಹೋರಾಟಕ್ಕೆ ಹಾಡು. ಸ್ಫೂರ್ತಿಯಾಗಿ ನಿಂತ ಎಷ್ಟೋ ಉದಾಹರಣೆಗಳನ್ನು ಇತಿಹಾಸದಲ್ಲಿ ಕಾಣುತ್ತೇವೆ. ಬದುಕನ್ನು ನಿತ್ಯನೂತನವಾಗಿಸುವ, ಹೊಸಚೈತನ್ಯ ಮೂಡಿಸುವ, ಶಕ್ತಿ ತುಂಬುವ, ಜಗತ್ತನ್ನೇ ಬೆಳಗಿಸುವ, ಬದುಕಿನ ಗತಿಯನ್ನೇ ಬದಲಿಸುವ ಶಕ್ತಿ ಈ ಹಾಡಿಗೆ ಇದೆ.

©KTBS Not to be republished

ನವಭಾವ–ನವಜೀವ–ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು;
ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ
ವೀರಧ್ವನಿಯೇರಬೇಕು; ॥ ೧ ॥

ಜಾತಿ–ಕುಲ–ಮತ–ಧರ್ಮ ಪಾಶಗಳ ಕಡಿದೊಗೆದು
ಎದೆಹಿಗ್ಗಿ ಹಾಡಬೇಕು;
ಯುಗಯುಗಗಳಾಚೆಯಲಿ ಲೋಕಲೋಕಾಂತದಲಿ
ಆ ಹಾಡು ಗುಡುಗಬೇಕು; ॥ ೨ ॥

ಉನ್ನತೋನ್ನತ ಘನ ಹಿಮಾದ್ರಿ ಶಿಖರವನೇರಿ
ಹಾಡಲ್ಲಿ ಹಾಡಬೇಕು;
ಹಾಡು ನುಡಿಗುಂಡುಗಳು ಹಾರಿ ದಶದಿಕ್ಕಿನಲಿ
ಭಯದ ಬೆನ್ನಟ್ಟಬೇಕು; ॥ ೩ ॥

ಗಂಡೆದೆಯ ಗರ್ಜನೆಗೆ ಮೂವತ್ತು ಮೂಕೋಟಿ
ಕಲಕಂಠ ಬೆರೆಸಬೇಕು;
ಭೂಮ್ಯಂತರಾಳದಲಿ ನಭಚಕ್ರಗೋಳದಲಿ
ಮಾರ್ದನಿಗಳೇಳಬೇಕು; ॥ ೪ ॥

ಜಡನಿದ್ರೆ ಸಿಡಿದೆದ್ದು ವೀರಾಟ್ಟಹಾಸದಲಿ
ಬಾನು ಬುವಿ ಬೆಳಗಬೇಕು;
ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ
ಕ್ರಾಂತಿಕಿಡಿ ಕೆರಳಬೇಕು; ॥ ೫ ॥

ಜಯಜನನಿ ಶಿರವೆತ್ತಿ ವೀರಭರವಸೆಯಿಂದ
ಹೊಸಹಾಡ ಕೇಳಿ ನೋಡು;
ಇದೋ ಮೊದಲು ಮುನ್ನಿಲ್ಲ–ಮುಗಿದುದಂದಿನ ಪಾಡು
ಹೊಸತಿಂದು ಹೊಸತು ಹಾಡು; ॥ ೬ ॥

## ಕೃತಿಕಾರರ ಪರಿಚಯ



**ಕಯ್ಯಾರ ಕಿಞ್ಞಣ್ಣ ರೈ** ಅವರು **(ಸಾ.ಶ. ೧೯೧೫) ಕಾಸರಗೋಡು ಜಿಲ್ಲೆಯ ಕಯ್ಯಾರ ಗ್ರಾಮ**ದವರು. ಶಿಕ್ಷಕ, ಸಾಹಿತಿ, ಪತ್ರಿಕೋದ್ಯಮಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿ ಹಲವಾರು ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದಾರೆ. **ಶ್ರೀಮುಖ, ಐಕ್ಯಗಾನ, ಪುನರ್ನವ ಚೇತನ ಮತ್ತು ಕೊರಗ, ಗಂಧವತಿ** – ಕವನ ಸಂಕಲನಗಳನ್ನು, **ವಿರಾಗಿಣಿ** ನಾಟಕವನ್ನು ರಚಿಸಿದ್ದಾರೆ. **ಅನ್ನದೇವರು ಮತ್ತು ಇತರ ಕತೆಗಳು** ಸಣ್ಣಕಥಾ ಸಂಕಲನ, **ರತ್ನಾಕರ, ಪರಶುರಾಮ, ಎ. ಬಿ. ಶೆಟ್ಟಿ** – ಜೀವನ ಚರಿತ್ರೆ, **ದುಡಿತವೇ ನನ್ನ ದೇವರು**– ಆತ್ಮಕಥೆ, **ಗೋವಿಂದ ಪೈ** – ಸ್ಮೃತಿ ಕೃತಿ, **ಸಾಹಿತ್ಯ ದೃಷ್ಟಿ** – ವಿಮರ್ಶಾ ಕೃತಿ, **ಪಂಚಮಿ** – ಅನುವಾದ ಕೃತಿ.

ಇವರಿಗೆ ೧೯೬೯ರಲ್ಲಿ **ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ**, ೨೦೦೫ರಲ್ಲಿ **ಆಳ್ವಾಸ್ ನುಡಿಸಿರಿ ಪ್ರಶಸ್ತಿ**, ೨೦೦೬ರಲ್ಲಿ **ನಾಡೋಜ ಪ್ರಶಸ್ತಿ** ಸೇರಿದಂತೆ ಹಲವು ಪ್ರಶಸ್ತಿ ಗೌರವಗಳು ಲಭಿಸಿವೆ. ಇವರು ಮಂಗಳೂರಿನಲ್ಲಿ ನಡೆದ ಅರುವತ್ತಾರನೆಯ ಅಖಿಲ ಭಾರತ ಕನ್ನಡಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪ್ರಸ್ತುತ ಪದ್ಯವನ್ನು **ಕಯ್ಯಾರ ಕಿಞ್ಞಣ್ಣ ರೈ** ಅವರು ಸಂಪಾದಿಸಿರುವ **ಶತಮಾನದ ಗಾನ** ಕವನಸಂಕಲನ (ಪುಟ. ೧೮–೨೦)ದಿಂದ ಆಯ್ದು ಸಂಪಾದಿಸಿ ನಿಗದಿಪಡಿಸಿದೆ.

## ಆಶಯ ಭಾವ

ಬದುಕಿಗೆ ಹೊಸ ತಿರುವನ್ನು ನೀಡಬಲ್ಲ, ಹೊಸ ಆಶಯವನ್ನು, ಜೀವನದ ಗತಿಯನ್ನು ಬದಲಿಸಿ ಹೊಸ ಹುರುಪನ್ನು ತುಂಬಬಲ್ಲ, ಹಳೆಯ ಮೌಢ್ಯವನ್ನು ಕಡಿದೊಗೆದು ಹೊಸ ಭಾವನೆಗಳನ್ನು ಸೃಜಿಸಬಲ್ಲ ಹೊಸ ಹಾಡನ್ನು ಹಾಡಬೇಕು. ಆ ಹಾಡು ಎಲ್ಲರಲ್ಲೂ ಕ್ರಾಂತಿಯನ್ನುಂಟು ಮಾಡಬೇಕು. ಅದರ ಮಾರ್ದನಿಗಳು ಭೂಮಿ–ಆಕಾಶದಲ್ಲಿ ತುಂಬಬೇಕು. ಎಲ್ಲ ಕೀಳರಿಮೆಗಳನ್ನು ಕಡಿದೊಗೆದು, ಹೊಸ ಹುರುಪನ್ನು ತುಂಬುವ ಹಾಡು ಇದಾಗಿದೆ. ಇಂತಹ ಸ್ಫೂರ್ತಿಯ ಚಿಲುಮೆಯಾಗುವ ಹಾಡನ್ನು ಹಾಡಬೇಕು, ಅದು ನಿತ್ಯ ನೂತನವಾಗಿರಬೇಕೆಂಬುದು ಪದ್ಯದ ಆಶಯವಾಗಿದೆ.

©KTBS Not to be republished

## ಪದಗಳ ಅರ್ಥ

ಕಲಕಂಠ – ಇಂಪಾದ ಧ್ವನಿ

ತೀವ್ರ – ಹರಿತ, ರಭಸ

ಪದತಳ – ಕಾಲಿನ ಕೆಳಗೆ

ಮಸಗು – ಹರಡು

ಲೋಕಾಂತ – ಲೋಕಗಳನ್ನು ಮೀರಿದ

ತೆರೆ – ತರಂಗ, ಅಲೆ

ನಭ – ಆಕಾಶ

ಬೆನ್ನಟ್ಟು – ಓಡಿಸಿಕೊಂಡು ಹೋಗು

ಮಾರ್ದನಿ – ಪ್ರತಿಧ್ವನಿ

ಹಿಮಾದ್ರಿ – ಹಿಮಪರ್ವತ

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಕವಿ ಎಂತಹ ಹಾಡು ಹಾಡಬೇಕೆಂದು ಬಯಸುವರು?

೨. ವೀರಧ್ವನಿ ಹೇಗೆ ಏರಬೇಕು?

೩. ಕಡಿದೊಗೆಯಬೇಕಾದ ಪಾಶಗಳು ಯಾವುವು?

೪. ಹಾಡು ನುಡಿಗುಂಡುಗಳು ಯಾವುದರ ಬೆನ್ನಟ್ಟಬೇಕು?

೫. ಬಾನು ಬುವಿ ಯಾವುದರಿಂದ ಬೆಳಗಬೇಕು?

©KTBS
Not to be republished

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿ.**

೧. ಕವಿ ಎಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಬಯಸುತ್ತಾರೆ?

೨. ಕವಿ ಎಂತಹ ಹಾಡು ಗುಡುಗಬೇಕು ಎಂದು ಆಶಿಸುತ್ತಾರೆ?

೩. ಈ ಹಾಡು ಹೊಸತು ಎಂದು ಕವಿ ಹೇಳಲು ಕಾರಣವೇನು?

**ಇ) ಕೊಟ್ಟಿರುವ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಹೊಸಹಾಡು ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ ವೀರಧ್ವನಿಯೇರಬೇಕು"

೨. "ಯುಗಯುಗಗಳಾಚೆಯಲಿ ಲೋಕಲೋಕಾಂತದಲಿ ಆ ಹಾಡು ಗುಡುಗಬೇಕು"

೩. "ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ ಬಾನು ಬುವಿ ಬೆಳಗಬೇಕು"

೪. "ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"
೫. "ಇದೋ ಮೊದಲು ಮುನ್ನಿಲ್ಲ-ಮುಗಿದುದಂದಿನ ಪಾಡು ಹೊಸತಿಂದು ಹೊಸತು ಹಾಡು"

**ಉ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

೧. ಧ್ವನಿ : ದನಿ :: ಯುಗ : ________

೨. ಲೋಕಾಂತರ : ಸವರ್ಣದೀರ್ಘ ಸಂಧಿ :: ಉನ್ನತೋನ್ನತ : ________

೩. ಬಾನು : ಆಕಾಶ :: ಭಾನು : ________

**ಊ) ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

೧. 'ಹೊಸಹಾಡು' ಪದ್ಯದ ಆಕರ ಗ್ರಂಥ ________

(ಪುನರ್ನವ, ಚೇತನ, ಕೊರಗ, ಶತಮಾನದಗಾನ)

೨. 'ಹೊಸಹಾಡು' ಪದ್ಯದ ಕವಿ ________

(ಗೋಪಾಲಕೃಷ್ಣ ಅಡಿಗ, ಕಯ್ಯಾರ ಕಿಞ್ಞಣ್ಣ ರೈ, ದ.ರಾ. ಬೇಂದ್ರೆ, ಜಿ. ಎಸ್. ಶಿವರುದ್ರಪ್ಪ)

೩. ಉನ್ನತೋನ್ನತ ________ ಶಿಖರವನೇರಿ ಹಾಡಲ್ಲಿ ಹಾಡಬೇಕು.

(ಹಿಮಾಲಯ, ಘನಹಿಮಾದ್ರಿ, ಸಹ್ಯಾದ್ರಿ, ವಿಂಧ್ಯಾ)

೪. ________ ಧರ್ಮಪಾಶಗಳ ಕಡಿದೊಗೆದು ಎದೆಹಿಗ್ಗಿ ಹಾಡಬೇಕು.

(ಜಾತಿ-ಕುಲ-ಮತ, ಮೇಲು-ಕೀಳು, ಬಡವ-ಬಲ್ಲಿದ, ಹಳ್ಳಿ-ಪಟ್ಟಣ)

©KTBS Not to be republished

## ಭಾಷೆಯ ಸೊಬಗು

(೧) ಅರ್ಜುನನು ತದೇಕದೃಷ್ಠಿಯಿಂದ ಹಕ್ಕಿಯನ್ನು ನೋಡುತ್ತ ಬಾಣ ಹೂಡಿದನು.

(೨) ಸಂಗೊಳ್ಳಿ ರಾಯಣ್ಣನ ಸ್ವಾಮಿನಿಷ್ಟೆ ಪ್ರಶ್ನಾತೀತವಾದುದು.

(೩) ಆ ಬಡವನು ಕುಷ್ಟರೋಗದಿಂದ ಬಳಲುತ್ತಿದ್ದನು.

– ಈ ವಾಕ್ಯಗಳನ್ನು ಓದಿ. ಇವುಗಳಲ್ಲಿ ಮೇಲ್ನೋಟಕ್ಕೆ ತಪ್ಪುಗಳೇನಾದರೂ ಕಂಡವೆ? ಕಂಡವಾದರೆ ನಿಮ್ಮ ಕನ್ನಡ ಭಾಷೆಯ ಜ್ಞಾನ ಚೆನ್ನಾಗಿದೆ ಎಂದು ಅರ್ಥ.

ದೃಷ್ಟಿ ಎಂಬ ಶಬ್ದರೂಪವು ಸರಿಯಾದುದು. ದೃಷ್ಠಿ ಎಂಬುದು ತಪ್ಪು ಪ್ರಯೋಗ.

ಹಾಗೆಯೇ, ನಿಷ್ಠೆ ಎಂಬುದು ಸರಿ ರೂಪ. ನಿಷ್ಟೆ ತಪ್ಪು.

ಕುಷ್ಠ ಎಂಬುದು ಒಂದು ರೋಗದ ಹೆಸರು. ಅದನ್ನು ಕುಷ್ಟ ಎಂದು ಬರೆಯಬಾರದು.

ಈ ಕೆಳಗಿನ ಶಬ್ದಗಳಲ್ಲಿ ಸರಿ ರೂಪ ಯಾವುದು ಪತ್ತೆಹಚ್ಚಿ:

ಕ್ಲಿಷ್ಟ / ಕ್ಲಿಷ್ಠ

ನಿಕೃಷ್ಠ / ನಿಕೃಷ್ಟ

ಉತ್ಕೃಷ್ಠ / ಉತ್ಕೃಷ್ಟ

ನಿರ್ದಿಷ್ಟ / ನಿರ್ದಿಷ್ಠ

ಗರಿಷ್ಠ / ಗರಿಷ್ಟ

## ಸೈದ್ಧಾಂತಿಕ ಭಾಷಾಭ್ಯಾಸ

### ಅಲಂಕಾರಗಳು

### (ಪುನರಾವರ್ತನೆ)

ಈಗಾಗಲೇ ೮ನೆಯ ತರಗತಿಯಲ್ಲಿ ಶಬ್ದಾಲಂಕಾರಗಳು, ಅದರ ವಿಧಗಳು, ಅರ್ಥಾಲಂಕಾರಗಳು, ಅದರ ವಿಧಗಳ ಬಗ್ಗೆ ತಿಳಿದುಕೊಳ್ಳಲಾಗಿದೆ. ಪ್ರಸ್ತುತ ಅರ್ಥಾಲಂಕಾರದಲ್ಲಿನ ಉಪಮಾಲಂಕಾರದ ಬಗ್ಗೆ ಸ್ಮರಿಸೋಣ.

©KTBS Not to be republished

**ಅ) ಉಪಮಾಲಂಕಾರ**

ಎರಡು ವಸ್ತುಗಳಲ್ಲಿ ಪರಸ್ಪರ ಇರುವ ಹೋಲಿಕೆಯನ್ನು ವರ್ಣಿಸುವುದೇ ಉಪಮಾಲಂಕಾರವೆನಿಸುತ್ತದೆ. ಉಪಮಾಲಂಕಾರದಲ್ಲಿ ಉಪಮೇಯ, ಉಪಮಾನ, ಸಾಧಾರಣ ಧರ್ಮ ಮತ್ತು ವಾಚಕ ಶಬ್ದಗಳೆಂಬ ನಾಲ್ಕು ಅಂಶಗಳಿರಬೇಕು. ಈ ನಾಲ್ಕು ಅಂಶಗಳೂ ಇರುವ ಅಲಂಕಾರವನ್ನು ಪೂರ್ಣೋಪಮಾಲಂಕಾರವೆನ್ನುತ್ತಾರೆ. ಈ ನಾಲ್ಕು ಅಂಶಗಳಲ್ಲಿ ಒಂದೆರಡು ಅಂಶಗಳು ಇಲ್ಲದಿದ್ದರೆ ಅಂತಹವನ್ನು ಲುಪ್ತೋಪಮಾಲಂಕಾರವೆನ್ನುತ್ತಾರೆ.

**ಉದಾ: ಅ) ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು.**

ಉಪಮೇಯ: ಗೀಜಗನ ಗೂಡುಗಳು

ಉಪಮಾನ: ತೊಟ್ಟಿಲು

ಉಪಮಾವಾಚಕ: ಅಂತೆ

ಸಮಾನಧರ್ಮ: ತೂಗಾಡುವುದು

ಸಮನ್ವಯ : ಉಪಮೇಯವಾದ ಗೀಜಗನ ಗೂಡುಗಳನ್ನು ಉಪಮಾನವಾದ ತೊಟ್ಟಿಲಿಗೆ ಹೋಲಿಸಿ ವರ್ಣಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವನ್ನು

'ತೂಗಾಡುವುದು' ಎಂಬ ಸಮಾನ ಧರ್ಮವನ್ನು ಮೀರಿ ನಾಲ್ಕು ಅಂಶಗಳನ್ನು ತಿಳಿಸಿರುವುದರಿಂದ ಇದು ಪೂರ್ಣೋಪಮಾಲಂಕಾರ.

ಅಲಂಕಾರ: ಉಪಮಾಲಂಕಾರ

## ಭಾಷಾ ಚಟುವಟಿಕೆ

**ಅ)** ಅಲಂಕಾರದ ಎರಡು ವಿಧಗಳನ್ನು ಹೆಸರಿಸಿ.

**ಆ)** **"ಬಾನಿನಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು"** – ಇಲ್ಲಿರುವ ಅಲಂಕಾರವನ್ನು ಗುರುತಿಸಿ, ಲಕ್ಷಣದೊಂದಿಗೆ ಸಮನ್ವಯಗೊಳಿಸಿ.

ಇ) **ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ.**

೧. ನವಭಾವ ______________________

______________________

______________________

ವೀರಧ್ವನಿಯೇರಬೇಕು; ॥ ೧ ॥

೨. ಜಾತಿ–ಕುಲ ______________________

______________________

______________________

______________________ ಗುಡುಗಬೇಕು. ॥ ೨ ॥

೩. ಉನ್ನತೋನ್ನತ ______________________

______________________

______________________

______________________ ಬೆನ್ನಟ್ಟಬೇಕು. ॥ ೩ ॥

**ಈ)** **ಹೊಸಹಾಡು ಗೀತೆಯನ್ನು ಸಾಮೂಹಿಕವಾಗಿ ಹಾಡಿ.**

## ಪೂರಕ ಓದು

**ಅ.** **ಕಯ್ಯಾರ ಕಿಞ್ಞಣ್ಣ ರೈ** ಅವರ ಕವನ ಸಂಕಲನಗಳನ್ನು ಓದಿ

©KTBS Not to be republished

# ೧೦. ಪಾರಿವಾಳ

E1G5T2

ಸು. ರಂ. ಎಕ್ಕುಂಡಿ–

**ಪ್ರವೇಶ :** ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ 'ಕವನಗಳು' ಸಹೃದಯರನ್ನು ರಂಜಿಸುತ್ತದೆ. ಅದರಲ್ಲಿ 'ಕಥನ ಕವನಗಳು' ತುಂಬ ಮಹತ್ತ್ವದ್ದಾಗಿವೆ. ಕವನದ ಮುಖಾಂತರವೇ ಒಂದು ಘಟನೆಯನ್ನೊ, ಒಂದು ಕಥೆಯನ್ನೊ ಓದುಗರಿಗೆ ಕುತೂಹಲ ಮೂಡುವಂತೆ ಬೆಳೆಸುತ್ತಾ ಹೋಗಿ, ಒಂದು ಉತ್ತಮ ಅಂತ್ಯವನ್ನು ಕಾಣಿಸಿ, ಕೊನೆಯಲ್ಲಿ ಒಂದು ಒಳ್ಳೆಯ ಸಂದೇಶವನ್ನೊ, ಅನುಭವದ ನುಡಿ ಮುತ್ತನ್ನೊ ನೀಡುವುದು ಕಥನ ಕವನಗಳ ಲಕ್ಷಣವಾಗಿದೆ. ಸು. ರಂ. ಎಕ್ಕುಂಡಿ ಅವರು ಕಥನ ಕವನಗಳನ್ನು ರಚಿಸುವಲ್ಲಿ ಯಶಸ್ವಿಯಾದ ಕವಿಗಳಾಗಿ ಪ್ರಸಿದ್ಧರಾಗಿದ್ದಾರೆ.

ದಟ್ಟ ಕಾಡಿನಲೊಂದು ಹೆಮ್ಮರದ ಹೊದರಿನಲಿ
ಇರುತಿತ್ತು ಪುಟ್ಟ ಸಂಸಾರ ಹೂಡಿ
ಮುದ್ದು ಬಿಳಿ ಪಾರಿವಾಳಗಳ ಜೋಡಿ ॥೧॥

ಹಗಲಿರುಳು ಜೊತೆಗೂಡಿ ಬಾಳಿದವು ಈ ಜೋಡಿ
ಎಂದಿಗೂ ಅಗಲಿರವು ಒಂದನೊಂದು
ಹಿಗ್ಗು ತುಂಬಿತು ಹೊದರಿನಲ್ಲಿ ಬಂದು ॥೨॥

ಇಟ್ಟ ಮೊಟ್ಟೆಯನೊಡೆದು ಹಿಗ್ಗಿತಿವುಗಳ ಪ್ರೀತಿ
ಮುದ್ದು ಮರಿಗಳ ಮಧುರ ಸದ್ದು ಕೇಳಿ
ದಿನಕಳೆದವಾನಂದದಿಂದ ಬಾಳಿ ॥೩॥

ಬೇಡನೊಬ್ಬನು ಬಂದು ಬಲೆಯ ಹರಡಿದನೊಮ್ಮೆ
ಪುಟ್ಟ ಮರಿಗಳು ಹಾರಿ ಸಿಲುಕಿ ಸೆರೆಗೆ
ಚೀತ್ಕರಿಸತೊಡಗಿದವು ಬರಲು ಹೊರಗೆ ॥೪॥

ಕಂಡು ಪಾರಿವಾಳಗಳ ಪಾಡು ತಾಯಿ ಧುಮುಕಿತು ಬಲೆಗೆ
ಹೆಂಡತಿಯನಗಲಿರದ ಗಂಡು ಹಕ್ಕಿ
ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ ॥೫॥

©KTBS Not to be republished

ಕುರುಡು ವಾತ್ಸಲ್ಯದಲಿ ಕಳೆದುಕೊಂಡು ವಿವೇಕ
ಬಲೆಗೆ ನುಗ್ಗಿದ ಪಾರಿವಾಳ ಹಿಂಡು
ಹಸಿದ ಬೇಡನು ನಡೆದ ಹೊತ್ತುಕೊಂಡು ॥೬॥

ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ
ವ್ಯಾಮೋಹವನು ತೊರೆದು ಬಾಳಬೇಕು
ಏನು ಬಂದರು ಕೂಡ ತಾಳಬೇಕು ॥೭॥

## ಕೃತಿಕಾರರ ಪರಿಚಯ



**ಸು. ರಂ. ಎಕ್ಕುಂಡಿ** ಇವರ ಪೂರ್ಣ ಹೆಸರು **ಸುಬ್ಬಣ್ಣ ರಂಗಣ್ಣ ಎಕ್ಕುಂಡಿ.** ಇವರು ಹುಟ್ಟಿದ್ದು **೧೯೨೩ರಂದು ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ.** ೧೯೪೪ರಲ್ಲಿ ಬಿ.ಎ.(ಆನರ್ಸ್) ಪದವಿ ಪಡೆದ ಎಕ್ಕುಂಡಿಯವರು ಉತ್ತರ ಕನ್ನಡ ಜಿಲ್ಲೆಯ ಬಂಕಿಕೊಡ್ಲದಲ್ಲಿ ಪ್ರೌಢಶಾಲೆಯ ಅಧ್ಯಾಪಕರಾದರು. ೩೫ ವರ್ಷಗಳ ಸೇವೆಯ ನಂತರ ಅಲ್ಲಿಯೇ ಮುಖ್ಯೋಪಾಧ್ಯಾಯರಾದರು. ಇವರ ಕೃತಿಗಳು ಕವನ ಸಂಕಲನ: **ಶ್ರೀ ಆನಂದ ತೀರ್ಥರು, ಸಂತಾನ, ಹಾವಾಡಿಗರ ಹುಡುಗ, ಮತ್ಸ್ಯ ಗಂಧಿ, ಬಕುಳದ ಹೂಗಳು.** ಕಥಾಸಂಕಲನ: **ನೆರಳು,** ಕಾದಂಬರಿ: **ಪ್ರತಿಬಿಂಬಗಳು. ಸೋವಿಯತ್ ಲ್ಯಾಂಡ್**ನ **ನೆಹರು ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ** ದೊರೆತಿವೆ. ಶ್ರೀಯುತರು ೧೯೯೫ರಲ್ಲಿ ನಿಧನರಾದರು.

ಪ್ರಸ್ತುತ **'ಪಾರಿವಾಳ'** ಪದ್ಯವನ್ನು **ಸು. ರಂ. ಎಕ್ಕುಂಡಿ** ಅವರ **'ಸಮಗ್ರ ಕಥನ ಕವನಗಳು'** ಎಂಬ ಕೃತಿಯಿಂದ ಆರಿಸಲಾಗಿದೆ.

©KTBS Not to be republished

## ಆಶಯ ಭಾವ

**'ಪಾರಿವಾಳ'** ಎಂಬ ಕವನವು ಒಂದು ಕಥನ ಕವನವಾಗಿದೆ. ದಟ್ಟ ಕಾಡಿನ ಹೆಮ್ಮರದಲ್ಲಿ ಇದ್ದ ಪಾರಿವಾಳಗಳ ಜೋಡಿಯು ಪರಸ್ಪರ ಅಗಲಿ ಇರಲಾರದೆ ತಮ್ಮ ಮರಿಗಳೊಡನೆ ಅವುಗಳ ಧ್ವನಿ ಕೇಳುತ್ತಾ ಆನಂದದಿಂದ ಬಾಳುತ್ತಿದ್ದವು. ಬೇಡನು ಹಾಕಿದ ಬಲೆಗೆ ಸಿಲಿಕಿದ ಪುಟ್ಟ ಮರಿಗಳನ್ನು ಕಂಡ ತಂದೆ–ತಾಯಿ ಪಾರಿವಾಳಗಳು ಕುರುಡು ವಾತ್ಸಲ್ಯದ ಅವಿವೇಕದಿಂದ ತಾವೂ ಬಲೆಗೆ ಸಿಲುಕಿ ಬೇಡನ ಪಾಲಾದವು. 'ಮೋಹ' ಎಂಬುದು ಸರ್ವನಾಶಕ್ಕೆ ಕಾರಣ. ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯಸಾಧನೆ ಮಾಡಬೇಕು ಎಂಬುದೇ ಈ ಕಥನ ಕವನದ ಆಶಯವಾಗಿದೆ.

## ಪದಗಳ ಅರ್ಥ

ಮುಸುಕು – ಆವರಿಸು, ಸುತ್ತುವರಿ.
ವಾತ್ಸಲ್ಯ – ಅಕ್ಕರೆ, ಮಮತೆ.
ವ್ಯಾಮೋಹ – ಅತಿಯಾದ ಪ್ರೀತಿ.
ಸಿದ್ಧಿ – ಫಲಕಾರಿ, ಪ್ರಾಪ್ತವಾಗು.
ಹೊದರು – ಪೊದೆ, ಪೊಟರೆ.

## ಅಭ್ಯಾಸ

**ಅ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು?

೨. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?

೩. ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಏನು ಮಾಡಿದವು?

೪. ಏನನ್ನು ತೊರೆದು ಬಾಳಬೇಕು?

**ಆ) ಈ ಪ್ರಶ್ನೆಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಪಾರಿವಾಳಗಳ ಆನಂದಕ್ಕೆ ಕಾಣವೇನು?

೨. ಬೇಡ ಏನು ಮಾಡಿದನು?

**ಇ) ಈ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?.

೨. 'ಪಾರಿವಾಳ' ಪದ್ಯದ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ"

೨. "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ"

©KTBS Not to be republished

## ಭಾಷೆಯ ಸೊಬಗು

(೧) ಭಾರತವು ಒಂದು ಜಾತ್ಯಾತೀತ ಗಣರಾಜ್ಯ.

(೨) ಬಿಲ್‌ಗೇಟ್ಸ್ ಓರ್ವ ಕೋಟ್ಯಾಧಿಪತಿ ಉದ್ಯಮಿ.

– ಈ ವಾಕ್ಯಗಳಲ್ಲಿ ಬಹುತೇಕರಿಗೆ ಯಾವ ತಪ್ಪೂ ಕಾಣದು. ಆದರೆ ಇಲ್ಲಿ ಪ್ರತಿ ವಾಕ್ಯದಲ್ಲೂ ಒಂದು ತಪ್ಪು ನುಸುಳಿದೆ!

ಜಾತಿ+ಅತೀತ ಎಂದರೆ ಜಾತಿಯನ್ನು ಮೀರಿದ ಎಂದು ಅರ್ಥ. ಇದನ್ನು ಸಂಧಿಯಾಗಿಸಿ ಬರೆದಾಗ ಅದು ಜಾತ್ಯತೀತ ಎಂದಾಗುತ್ತದೆಯೇ ಹೊರತು ಜಾತ್ಯಾತೀತ ಆಗದು.

ಹಾಗೆಯೇ ಕೋಟಿ+ಅಧಿಪತಿ = ಕೋಟ್ಯಧಿಪತಿ ಆಗುತ್ತದೆ, ಕೋಟ್ಯಾಧಿಪತಿ ಅಲ್ಲ.
ಇಂಥ ಇನ್ನೂ ಐದಾರು ಶಬ್ದಗಳನ್ನು ಗುರುತಿಸಿ ಬರೆಯಿರಿ.

## ಸೈದ್ಧಾಂತಿಕ ಭಾಷಾಭ್ಯಾಸ

### ಅಲಂಕಾರ (ಮುಂದುವರಿದುದು)

**ರೂಪಕಾಲಂಕಾರ**

– **ಶಾಲೆಗೆ ಈ ವಿದ್ಯಾರ್ಥಿಯೊಂದು ರತ್ನ.**

– **ಮನೆಯೇ ಧರ್ಮಾಶ್ರಮ.**

ಮೊದಲ ವಾಕ್ಯದಲ್ಲಿ **ವಿದ್ಯಾರ್ಥಿ** ಎಂಬುದು ಉಪಮೇಯ. **ರತ್ನ** ಎಂಬುದು ಉಪಮಾನ. ಎರಡನೆಯ ವಾಕ್ಯದಲ್ಲಿ **ಮನೆ** ಎಂಬುದು ಉಪಮೇಯ. **ಧರ್ಮಾಶ್ರಮ** ಎಂಬುದು ಉಪಮಾನ. ಎರಡೂ ವಾಕ್ಯಗಳಲ್ಲಿ **ಉಪಮೇಯಕ್ಕೂ ಉಪಮಾನಕ್ಕೂ** ಯಾವುದೇ ಭೇದವಿಲ್ಲದಂತೆ ವರ್ಣಿಸಲಾಗಿದೆ.

**ಸೂತ್ರ : ಉಪಮೇಯ, ಉಪಮಾನಗಳು ಎರಡೂ ಒಂದೇ ಎಂದು ಭೇದವಿಲ್ಲದಂತೆ ಹೇಳುವ ಅಲಂಕಾರವೇ ರೂಪಕಾಲಂಕಾರ**

ಉದಾ.: **ಸೀತೆಯ ಮುಖ ಕಮಲ ಅರಳಿತು**

ಉಪಮೇಯ – **ಸೀತೆಯ ಮುಖ**

ಉಪಮಾನ – **ಕಮಲ**

ಅಲಂಕಾರ – **ರೂಪಕಾಲಂಕಾರ**

ಸಮನ್ವಯ – **ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಅಭೇದವಾಗಿ ರೂಪಿಸಿದೆ. ಹಾಗಾಗಿ ಇದು ರೂಪಕಾಲಂಕಾರ.**

**ದೃಷ್ಟಾಂತಾಲಂಕಾರ**

**– ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ.**

ಮಾತಿನ ಮಹತ್ವ ತಿಳಿದವನಿಗೆ ಜಗಳ ಮಾಡಬೇಕಾದ ಪ್ರಮೇಯವಿಲ್ಲ. ಊಟದ ಮರ್ಮ ಅರಿತವನಿಗೆ ರೋಗದ ಭಯವಿಲ್ಲ ಎಂಬ ಅರ್ಥ ಈ ಎರಡೂ ಹೇಳಿಕೆಗಳಿಂದ ತಿಳಿದುಬರುತ್ತದೆ. ಇಲ್ಲಿ ಒಂದು ಹೇಳಿಕೆ ಮತ್ತೊಂದು ಹೇಳಿಕೆಯಲ್ಲಿ ಬಿಂಬ–ಪ್ರತಿಬಿಂಬ ಭಾವಗಳಂತೆ ವ್ಯಕ್ತವಾಗಿದೆ.

**ಸೂತ್ರ : ಎರಡು ಬೇರೆ ಬೇರೆ ವಾಕ್ಯಗಳು ಅರ್ಥಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು ದೃಷ್ಟಾಂತಾಲಂಕಾರ.**

ಉದಾ.: ೧. ದುರ್ಜನರು ನಿಂದಿಸುವರೆಂಬ ಭಯದಿಂದ ಸತ್ಕವಿಯಾದವನು ತನ್ನ ಕೃತಿಯನ್ನು ರಚಿಸದಿರುವನೇ?

೨. ಕತ್ತಲೆಯ ಭಯದಿಂದ ಸೂರ್ಯ ತನ್ನ ಕಿರಣವನ್ನು ಪಸರಿಸದಿರುವನೇ?

©KTBS Not to be republished

**ಸಮನ್ವಯ**

ದುರ್ಜನರು ನಿಂದಿಸುತ್ತಾರೆಂಬ ಹೆದರಿಕೆಯನ್ನು ಗಣನೆಗೆ ತೆಗೆದುಕೊಳ್ಳದೇ ಒಳ್ಳೆಯ ಕವಿಯಾದವನು ಕೃತಿಯನ್ನು ರಚಿಸಿಯೇ ರಚಿಸುತ್ತಾನೆಂಬ ಮಾತಿಗೂ ಕತ್ತಲೆಯ ಹೆದರಿಕೆಯಿಂದ ಸೂರ್ಯನು ಸುಮ್ಮನಿರದೆ ಕಿರಣವನ್ನು ಪಸರಿಸಿಯೇ ಪಸರಿಸುತ್ತಾನೆ ಎಂಬ ಮಾತಿಗೂ ಅರ್ಥ ಸಾದೃಶ್ಯದಿಂದ ಬಿಂಬ–ಪ್ರತಿಬಿಂಬ ಭಾವವು ಉಪಮೇಯ ಉಪಮಾನಗಳೆರಡರಲ್ಲೂ ವ್ಯಕ್ತವಾಗುವುದರಿಂದ ಇದು **ದೃಷ್ಟಾಂತಾಲಂಕಾರ.**

**ಭಾಷಾ ಚಟುವಟಿಕೆ**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

೧. ರೂಪಕಾಲಂಕಾರವನ್ನು ನಿದರ್ಶನದ ಮೂಲಕ ವಿವರಿಸಿ.

೨. **ಸಾವಿತ್ರಿಯ ಮುಖಕಮಲ ಅರಳಿತು** ಇಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಿಸಿರಿ.

೩. 'ಪಾರಿವಾಳ' ಪದ್ಯದಲ್ಲಿರುವ ಅಂತ್ಯಪ್ರಾಸ ಪದಗಳನ್ನು ಪಟ್ಟಿಮಾಡಿ.

**ಆ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ.**

೧. ದಟ್ಟ ಕಾಡಿನಲೊಂದು ____________ ಪಾರಿವಾಳಗಳ ಜೋಡಿ

೨. ಹಗಲಿರುಳು ____________ ಹೊದರಿನಲ್ಲಿ ಬಂದು

©KTBS Not to be republished

**ಪೂರಕ ಓದು**

ಅ. ಸಲೀಂ ಅಲಿ (ಹಕ್ಕಿ ಮನುಷ್ಯ) ಹಾಗೂ ಪೂರ್ಣಚಂದ್ರ ತೇಜಸ್ವಿಯವರ ಪಕ್ಷಿ ಪ್ರಪಂಚಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಿರಿ.

# ೧೧. ಸಿರಿಯನಿನ್ನೇನ ಬಣ್ಣಿಪೆನು

T7E6K7

ರತ್ನಾಕರವರ್ಣಿ–

**ಪ್ರವೇಶ:** ರತ್ನಾಕರವರ್ಣಿ ಕರಾವಳಿ ಕರ್ನಾಟಕದ ಮಹಾಕವಿ. ಅಪ್ಪಟ ದೇಸೀ ಛಂದಸ್ಸಾದ ಸಾಂಗತ್ಯದಲ್ಲಿ ಬೃಹತ್ ಕಾವ್ಯವನ್ನೇ ರಚಿಸಿದ್ದಾನೆ. ಇದೊಂದು ಭೋಗ–ಯೋಗ ಸಮನ್ವಯಕಾವ್ಯ. ಆತನ ವರ್ಣನಾ ಶೈಲಿ, ಪದಸಂಪತ್ತು, ಸ್ವಚ್ಛಂದವಾಗಿ ಹರಿಯುವ ಛಂದೋವಿಲಾಸ – ಇತ್ಯಾದಿಯನ್ನು ವಿದ್ಯಾರ್ಥಿಗಳು ಕಾವ್ಯಾಭ್ಯಾಸದ ದೃಷ್ಟಿಯಿಂದ ತಿಳಿದಿರಬೇಕೆಂಬ ಆಶಯದಿಂದ ಈ ಭಾಗವನ್ನು ಆರಿಸಿಕೊಟ್ಟಿದೆ.



ಬಿನ್ನಹ ಗುರುವೆ ಧ್ಯಾನಕೆ ಬೇಸರಾದಾಗ
ನಿನ್ನನಾದಿಯ ಮಾಡಿಕೊಂಡು
ಕನ್ನಡದೊಳಗೊಂದು ಕಥೆಯ ಪೇಳುವೆನದು
ನಿನ್ನಾಜ್ಞೆ ಕಂಡ ನನ್ನೊಡೆಯಾ ॥ ೧ ॥

ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು
ರಯ್ಯಾ ಮಂಚಿದಿಯೆನೆ ತೆಲುಗ
ಅಯ್ಯಯ್ಯ ಎಂಚಪೊರ್ಲಾಂಡೆಂದು ತುಳುವರು
ಮೈಯ್ಯುಬ್ಬಿ ಕೇಳಬೇಕಣ್ಣ ॥ ೨ ॥

ಭರತಭೂತಳಕೆ ಸಿಂಗಾರವಾದಯೋಧ್ಯಾ
ಪುರದೊಳು ಮೂಲೋಕ ಪೊಗಳೆ
ಭರತಚಕ್ರೇಶ್ವರ ಸುಖಬಾಳುತಿರ್ದನಾ
ಸಿರಿಯನಿನ್ನೇನ ಬಣ್ಣಿಪೆನು ॥ ೩ ॥

ಪುರುಪರಮೇಶನ ಹಿರಿಯ ಕುಮಾರನು
ನರಲೋಕಕೊಬ್ಬನೆ ರಾಯ
ಮುರಿದು ಕಣ್ಣಿಟ್ಟರೆ ಕ್ಷಣಕೆ ಮುಕ್ತಿಯ ಕಾಂಬ
ಭರತ ಚಕ್ರಿಯ ಹೇಳಲಳವೇ ॥ ೪ ॥

ಆ ವಿಭುವೊಂದಿನದುದಯದೊಳೆದ್ದು
ದೇವತಾರ್ಚನೆಯನು ಮಾಡಿ
ಚಾವಡಿಗೈದಿ ತಾನೋಲಗವಾದೊಂದು
ಶ್ರೀವಿಲಾಸವನೇನನೆಂಬೆ ॥ ೫ ॥

ನವರತ್ನ ಹೇಮನಿರ್ಮಿತವೆನಿಪಾಸ್ಥಾನ
ಭವನದೊಳಾ ರಾಜರತ್ನ
ಛವಿವಡೆದೆಸೆದನು ರತ್ನಪುಷ್ಪಕದೊಳು
ದಿವಿಜೇಂದ್ರನೊಪ್ಪುವಂದದೊಳು ॥ ೬ ॥

ತರತರವಿಡಿದು ಢಾಳಿಸುತಿಹ ದೀರ್ಘ ಚಾ
ಮರಗಳ ಸಾಲೊಳೆಸೆದನು
ಹರಿವ ಬೆಳ್ಮುಗಿಲೊಳು ತೋರಿ ಮರಸುವ
ಚಂದಿರನೊ ಭಾಸ್ಕರನೋಯೆಂಬಂತೆ ॥ ೭ ॥

ಅಂಬುಜವೆಲ್ಲವು ರವಿಯ ನೋಳ್ಪಂತೆ ನೀ
ಲಾಂಬುಜ ನೋಳ್ಪಂತೆ ಶಶಿಯಾ
ತುಂಬಿದ ಸಭೆಯೆಲ್ಲ ನೃಪನ ನೋಡುವ ಮಿಕ್ಕ
ಹಂಬಲ ಮರೆದುದಲ್ಲಲ್ಲಿ ॥ ೮ ॥

©KTBS Not to be republished

## ಪದ ವಿಂಗಡಣೆ

**ಪದ್ಯ-೧.** ಬಿನ್ನಪ ಗುರುವೆ ಧ್ಯಾನಕೆ ಬೇಸರ + ಆದಾಗ ನಿನ್ನನು + ಆದಿಯ ಮಾಡಿಕೊಂಡು ಕನ್ನಡದ + ಒಳಗೆ + ಒಂದು ಕಥೆಯ ಪೇಳುವೆನು + ಅದು ನಿನ್ನ + ಆಜ್ಞೆ ಕಂಡ ನನ್ನ + ಒಡೆಯಾ

**ಪದ್ಯ-೨.** ಅಯ್ಯ + ಅಯ್ಯ ಚೆನ್ನ + ಆದುದು + ಎನೆ ಕನ್ನಡಿಗರು ರಯ್ಯಾ ಮಂಚಿದಿ + ಎನೆ ತೆಲುಗ ಅಯ್ಯ + ಅಯ್ಯ ಎಂಚ ಪೊರ್ಲ್ + ಆಂಡ್ + ಎಂದು ತುಳುವರು ಮೈ + ಉಬ್ಬಿ ಕೇಳಬೇಕು + ಅಣ್ಣಾ

**ಪದ್ಯ-೩.** ಭರತಭೂತಳಕೆ ಸಿಂಗಾರ + ಆದ + ಅಯೋಧ್ಯಾ ಪುರದ + ಒಳು ಮೂಲೋಕ ಪೊಗಳೆ ಭರತಚಕ್ರ + ಈಶ್ವರ ಸುಖಬಾಳುತ + ಇರ್ದನು + ಆ ಸಿರಿಯನು + ಇನ್ನು + ಏನ ಬಣ್ಣಿಪೆನು

**ಪದ್ಯ-೪.** ಪುರುಪರಮ + ಈಶನ ಹಿರಿಯ ಕುಮಾರನು ನರಲೋಕಕೆ + ಒಬ್ಬನೆ ರಾಯ ಮುರಿದು ಕಣ್ಣು + ಇಟ್ಟರೆ ಕ್ಷಣಕೆ ಮುಕ್ತಿಯ ಕಾಂಬ ಭರತ ಚಕ್ರಿಯ ಹೇಳಲ್ + ಅಳವೆ?

**ಪದ್ಯ-೫.** ಆ ವಿಭು + ಒಂದು ದಿನದ + ಉದಯದೊಳು + ಎದ್ದು ದೇವತಾ + ಅರ್ಚನೆಯನು ಮಾಡಿ ಚಾವಡಿಗೆ + ಐದಿ ತಾನ್ + ಓಲಗವಾದ + ಒಂದು ಶ್ರೀ ವಿಲಾಸವನು ಏನನ್ + ಎಂಬೆ

**ಪದ್ಯ-೬.** ನವರತ್ನ ಹೇಮ ನಿರ್ಮಿತ + ಎನಿಪ + ಆಸ್ಥಾನ ಭವನದೊಳ್ + ಆ ರಾಜರತ್ನ ಛವಿ + ಪಡೆದು + ಎಸೆದನು ರತ್ನಪುಷ್ಪಕದೊಳು ದಿವಿಜ + ಇಂದ್ರನ್ + ಒಪ್ಪುವ + ಅಂದದೊಳು

**ಪದ್ಯ-೭.** ತರತರ + ಪಿಡಿದು ಢಾಳಿಸುತ + ಇಹ ದೀರ್ಘ ಚಾಮರಗಳ ಸಾಲೊಳ್ + ಎಸೆದನು ಹರಿವ ಬೆಳ್ + ಮುಗಿಲೊಳು ತೋರಿ ಮರಸುವ ಚಂದಿರನೋ ಭಾಸ್ಕರನೋ ಎಂಬಂತೆ

**ಪದ್ಯ-೮.** ಅಂಬುಜ + ಎಲ್ಲವು ರವಿಯ ನೋಳ್ಪ + ಅಂತೆ ನೀಲ + ಅಂಬುಜ ನೋಳ್ಪ + ಅಂತೆ ಶಶಿಯ + ಆ ತುಂಬಿದ ಸಭೆ + ಎಲ್ಲ ನೃಪನ ನೋಡುವ ಮಿಕ್ಕ ಹಂಬಲ ಮರೆದುದು + ಅಲ್ಲಿ + ಅಲ್ಲಿ

©KTBS Not to be republished

## ಕೃತಿಕಾರರ ಪರಿಚಯ

**ರತ್ನಾಕರವರ್ಣಿ (ಸಾ.ಶ. ೧೫೬೦)** ದಕ್ಷಿಣಕನ್ನಡ ಜಿಲ್ಲೆ ಮೂಡುಬಿದರೆಯವನು. ಕನ್ನಡ ಸಾಂಗತ್ಯ ಕವಿಗಳಲ್ಲಿ ಅಗ್ರಗಣ್ಯ, ಅಪ್ಪಟ ದೇಸೀ ಛಂದಸ್ಸಾದ **ಸಾಂಗತ್ಯ**ದಲ್ಲಿ ಬೃಹತ್ ಕಾವ್ಯವನ್ನು ರಚಿಸಿದ್ದಾನೆ. ತಾಳಪ್ರದೇಶದ ಭೈರರಸ ಒಡೆಯರ ಆಸ್ಥಾನದಲ್ಲಿ ಕೆಲವು ಕಾಲ ಇದ್ದು **ಶೃಂಗಾರಕವಿ** ಅಭಿದಾನಕ್ಕೆ ಪಾತ್ರರಾಗಿದ್ದನು. **ಯೋಗಶಾಸ್ತ್ರ ಮತ್ತು ಕಾವ್ಯಶಾಸ್ತ್ರಗಳೆರಡರಲ್ಲೂ** ಪರಿಣತರಾಗಿದ್ದನು. **ಭರತೇಶವೈಭವ** ಸಾಂಗತ್ಯ ಕಾವ್ಯವನ್ನು, **ಅಪರಾಜಿತೇಶ್ವರ ಶತಕ, ತ್ರಿಲೋಕಶತಕ, ರತ್ನಾಕರಾಧೀಶ್ವರಶತಕ** – ಜೈನಧಾರ್ಮಿಕ ಕಾವ್ಯಗಳನ್ನು ರಚಿಸಿರುವನು. ಸುಮಾರು ಎರಡು ಸಾವಿರ ಸಾಂಪ್ರದಾಯಿಕ ಹಾಡುಗಳನ್ನು ರಚಿಸಿದ್ದು, ಅವು ಅಧ್ಯಾತ್ಮ ಗೀತಗಳೆಂದು ಪ್ರಸಿದ್ಧವಾಗಿವೆ.

**ತ.ಸು. ಶಾಮರಾಯರು** ಸಂಪಾದಿಸಿದ ರತ್ನಾಕರವರ್ಣಿ ವಿರಚಿತ **ಭರತೇಶವೈಭವ** ಸಂಗ್ರಹ ಗ್ರಂಥದ ಆಸ್ಥಾನಸಂಧಿಯ (ಪುಟ ೮೯ – ೯೩) **೨, ೪, ೧೧, ೧೨, ೧೬, ೧೭, ೩೧ ಮತ್ತು ೩೪ನೆಯ** ಪದ್ಯಗಳನ್ನು ಆರಿಸಿ ಸಂಯೋಜಿಸಿ ನಿಗದಿಪಡಿಸಿದೆ.

## ಆಶಯ ಭಾವ

**ಭರತೇಶವೈಭವ** ಮಹಾಕಾವ್ಯ. ಇದನ್ನು **ಸಾಂಗತ್ಯ ಛಂದಸ್ಸಿನಲ್ಲಿ** ರಚಿಸಿದ್ದಾನೆ. ಈ ವಿಸ್ತಾರ ಕಾವ್ಯ ಆದಿತೀರ್ಥಂಕರ ವೃಷಭದೇವನ ಮಕ್ಕಳಾದ ಭರತ ಬಾಹುಬಲಿಯರ ಕಥೆಯನ್ನು ಒಳಗೊಂಡಿದೆ. ಭರತ ಅಯೋಧ್ಯೆಯಲ್ಲೂ ಬಾಹುಬಲಿ ಪೌದನಪುರದಲ್ಲೂ ರಾಜ್ಯಭಾರ ಮಾಡುತ್ತಿದ್ದರು. ಭರತನ ಅರಮನೆಯ ಆಯುಧಾಗಾರದಲ್ಲಿ ಚಕ್ರರತ್ನ ಹುಟ್ಟಿತು. ಅದನ್ನು ಮುಂದಿಟ್ಟುಕೊಂಡು ಭರತ ದಿಗ್ವಿಜಯ ನಡೆಸಿ **ಪ್ರಥಮಚಕ್ರಿ** ಎನಿಸಿದ. ತನ್ನ ಕಾವ್ಯದ ಉದ್ದೇಶ ಮತ್ತು ರಚನೆಯ ಕಾರಣಗಳನ್ನು ವರ್ಣಿಸಿರುವುದು ಈ ಕಾವ್ಯಭಾಗದ ವಿಶೇಷ

* * * *

## ಪದಗಳ ಅರ್ಥ

©KTBS
Not to be republished

ಅಳವೇ – ಸಾಧ್ಯವೇ
ಅಂಬುಜ – ತಾವರೆ
ಆದಿ – ಮೊದಲು
ಆಜ್ಞೆ – ಅಪ್ಪಣೆ
ಆಂಡ್ – ಆಯಿತು
ಎಸೆ – ಶೋಭಿಸು
ಐದಿ – ಬಂದು
ಒಪ್ಪು, ಶೋಭಿಸು
ಓಲಗ – ರಾಜಸಭೆ, ದರ್ಬಾರು.
ಕಾಂಬ – ಕಾಣುವ
ಚಕ್ರಿ – ಚಕ್ರವರ್ತಿ
ಚೆನ್ನು – ಒಳ್ಳೆಯದು, ಅಂದವಾದುದು
ಛವಿ – ಕಾಂತಿ
ಢಾಳಿಸು – ಪ್ರಕಾಶಗೊಳಿಸು, ಹೊಳಪು ಮಾಡು.
ದಿವಿಜೇಂದ್ರ – ದೇವೇಂದ್ರ
ನವರತ್ನ – ಒಂಬತ್ತು ರತ್ನ
ನೀಲಾಂಬುಜ – ನೈದಿಲೆ
ನೃಪ – ರಾಜ
ಪೊರ್ಲು – ಚಂದ
ಬಿನ್ನಹ – ಅರಿಕೆ
ಭೂತಳ – ಭೂಮಿ
ಮಂಚಿದಿ – ಒಳ್ಳೆಯದು (ತೆಲುಗು)
ಮಂಚಿದಿ – ಚಂದವಾದದ್ದು
ಮೂಲೋಕ – ಮೂರುಲೋಕ;
ರವಿ – ಸೂರ್ಯ
ಶಶಿ – ಚಂದ್ರ
ಶ್ರೀವಿಲಾಸ – ವೈಭವ, ಬೆಡಗು
ಸಿರಿ – ಸಂಪತ್ತು
ಹಂಬಲ – ಚಿಂತೆ.

## ಟಿಪ್ಪಣಿ

**ಮೂಲೋಕ** : ಮೂರು ಲೋಕ – ಸ್ವರ್ಗ, ಮರ್ತ್ಯ ಮತ್ತು ಪಾತಾಳ.

**ನವರತ್ನ** : ಒಂಬತ್ತು ರತ್ನ – ವಜ್ರ, ಮಾಣಿಕ್ಯ, ಮರಕತ, ಪುಷ್ಯರಾಗ, ನೀಲ, ಗೋಮೇಧಿಕ, ವೈಢೂರ್ಯ, ಮುತ್ತು ಮತ್ತು ಹವಳ

**ದಿವಿಜೇಂದ್ರ** : ದಿವಿ–ಸ್ವರ್ಗ ; ಜ–ಹುಟ್ಟಿದ ; ದಿವಿಜ – ಸ್ವರ್ಗದಲ್ಲಿ ಹುಟ್ಟಿದವ – ದೇವತೆ ; ಇಂದ್ರ – ಒಡೆಯ ; ದಿವಿಜೇಂದ್ರ – ಸ್ವರ್ಗದಲ್ಲಿ ಹುಟ್ಟಿದವರ ಒಡೆಯ ; ದೇವತೆಗಳ ಒಡೆಯ – ದೇವೇಂದ್ರ.

**ಚಾವಡಿ** : ಆಸ್ಥಾನ, ಓಲಗಶಾಲೆ, ಹಳ್ಳಿಯಲ್ಲಿ ಪಂಚಾಯಿತಿ ಸೇರುವ ಸ್ಥಳ, ಗ್ರಾಮ ಕಚೇರಿ, ಮನೆಯ ಮುಂದಿನ ಜಗಲಿ.

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಭರತೇಶವೈಭವ ಕಾವ್ಯದ ಕರ್ತೃ ಯಾರು?

೨. ಭರತನನ್ನು ಹೊಗಳುತ್ತಿದ್ದ ಮೂರು ಲೋಕಗಳು ಯಾವುವು?

೩. ಭರತ ಚಕ್ರವರ್ತಿ ಓಲಗಕ್ಕೆ ಹೇಗೆ ಬರುತ್ತಾನೆ?

೪. ಆಸ್ಥಾನ ಭವನದೊಳಗೆ ರಾಜನು ಹೇಗೆ ಶೋಭಿಸುವನು?

೫. ತುಂಬಿದ ಸಭೆಯು ಮೈಮರೆತು ಕಾತುರರಾಗಿದ್ದುದಕ್ಕೆ ಕಾರಣವೇನು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಧ್ಯಾನ ಬೇಸರಾದಾಗ ಏನು ಮಾಡುತ್ತೇನೆಂದು ಕವಿ ಹೇಳುತ್ತಾನೆ?

೨. ಬೇರೆಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ಬಯಸುವನು?

೩. ಭರತ ಚಕ್ರವರ್ತಿ ಓಲಗಮಂಟಪವನ್ನೇರಿದ ಸಂದರ್ಭವನ್ನು ಬಣ್ಣಿಸಿ.

**ಇ) ಕೊಟ್ಟಿರುವ ಪ್ರಶ್ನೆಗೆ ಏಳು–ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

೧. ಭರತ ಚಕ್ರವರ್ತಿಯ ರಾಜದರ್ಬಾರಿನ ವೈಭವವನ್ನು ವಿವರಿಸಿ.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಕನ್ನಡದೊಳಗೊಂದು ಕಥೆಯ ಪೇಳುವೆನು"

೨. "ಶ್ರೀ ವಿಲಾಸವನೇನನೆಂಬೆ?"

೩. "ಚಂದಿರನೋ ಭಾಸ್ಕರನೋಯೆಂಬಂತೆ"

©KTBS Not to be republished

ಉ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

೧. ಬಿನ್ನಹ : ಅರಿಕೆ :: ವಿಭು : ___________

೨. ಪೊಗಳು : ತೆಗಳು :: ಕಾರ್ಮುಗಿಲ್ : _________

೩. ಭರತ : ಅಯೋಧ್ಯೆ :: ಬಾಹುಬಲಿ : __________

೪. ನೀಲಾಂಬುಜ : ನೀಲ + ಅಂಬುಜ :: ಚಕ್ರೇಶ್ವರ : __________

ಊ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ.

೧. ಅಯ್ಯಯ್ಯ ________________

__________________________________

____________________________

____________________________ ಕೇಳಬೇಕಣ್ಣ

೨. ಅಂಬುಜವೆಲ್ಲವು ________________

__________________________________

____________________________

____________________________ ಮರೆದುದಲ್ಲಲ್ಲಿ

©KTBS Not to be republished

## ಭಾಷೆಯ ಸೊಬಗು

ಒಂದೇ ರೀತಿಯ ಅರ್ಥವನ್ನು ಕೊಡುವವಾದರೂ ಕೆಲವೊಂದು ಶಬ್ದಗಳು ಭಿನ್ನ ಅರ್ಥಗಳನ್ನು ಹೊಂದಿರುತ್ತವೆ. ಕಾಲ ಮತ್ತು ಸಮಯ – ಎರಡನ್ನೂ ನಾವು "ಟೈಮ್" ಎಂಬ ಅರ್ಥದಲ್ಲಿ ಬಳಸಿದರೂ ಸಂದರ್ಭಕ್ಕೆ ಅನುಸಾರವಾಗಿ ಅವು ಬೇರೆ ಬೇರೆ ಅರ್ಥಗಳನ್ನು ಪಡೆಯುತ್ತವೆ.

(೧) ಇದೊಂದು ಕಾಲಾತೀತ ತತ್ವ (ಈ ವಿಚಾರವು ಎಲ್ಲ ಕಾಲಕ್ಕೂ ಪ್ರಸ್ತುತ. ಇದು ಹಳೆಯದು ಎನ್ನಿಸುವುದಿಲ್ಲ)

(೨) ಅವರು ಕಾಲವಾದರು (ಅವರು ತೀರಿಕೊಂಡರು / ಮರಣ ಹೊಂದಿದರು)

(೩) ಅವರ ಮೋಸಕ್ಕೆ ಕಾಲವೇ ಉತ್ತರ ಕೊಡುತ್ತದೆ (ಮುಂದೆ ಎಂದಾದರೂ ಅವರು ತಾವು ಮಾಡಿದ ಮೋಸಕ್ಕೆ ತಕ್ಕ ಪ್ರಾಯಶ್ಚಿತ್ತ ಅನುಭವಿಸುತ್ತಾರೆ)

(೪) ಕಾಲ ಕೆಟ್ಟುಹೋಯಿತು (ಈಗಿನ ಪರಿಸ್ಥಿತಿ ಚೆನ್ನಾಗಿಲ್ಲ)

– ಇಲ್ಲೆಲ್ಲ ನಾವು ಸಮಯ ಎಂಬ ಪದವನ್ನು ಬಳಸಲು ಸಾಧ್ಯವಿಲ್ಲ.

(೫) ಆತ ಸಮಯಸಾಧಕ (ಆತ ತನ್ನ ಲಾಭವನ್ನಷ್ಟೇ ನೋಡುತ್ತಾನೆ)

(೬) ವಿದ್ಯಾರ್ಥಿಜೀವನದಲ್ಲಿ ಸಮಯವು ಬಹಳ ಅಮೂಲ್ಯವಾದುದು

(೭) ದೇವರನ್ನು ಪ್ರಾರ್ಥಿಸಲು ಸಮಾಯಾಸಮಯವೆಂಬುದಿಲ್ಲ (ದೇವರನ್ನು ಯಾವ ಹೊತ್ತಿನಲ್ಲಾದರೂ ಪ್ರಾರ್ಥಿಸಬಹುದು)

– ಈ ಸಂದರ್ಭಗಳಲ್ಲಿ ಕಾಲ ಎಂಬ ಪದಬಳಕೆ ಅಷ್ಟು ಹೊಂದುವುದಿಲ್ಲ.

ಹೀಗೆ ಒಂದೇ ಬಗೆಯವು ಎನ್ನಿಸಿದರೂ ಬೇರೆ ಅರ್ಥಗಳನ್ನೇ ಕೊಡುವ ಶಬ್ದಗಳನ್ನು ಪಟ್ಟಿ ಮಾಡಿ.

## ಪೂರಕ ಓದು

೧. **ತ. ಸು. ಶಾಮರಾಯರು** ಸಂಪಾದಿಸಿದ **ರತ್ನಾಕರವರ್ಣಿ** ವಿರಚಿತ **ಭರತೇಶ ವೈಭವ** ಸಂಗ್ರಹವನ್ನು ಓದಿ.

©KTBS Not to be republished

# ೧೨. ಬಲಿಯನಿತ್ತೊಡೆ ಮುನಿವೆಂ

[ಹಳಗನ್ನಡ ಪದ್ಯ]

ಜನ್ನ–

N4N8E7

**ಪ್ರವೇಶ:** ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಜನ್ನ ಕವಿಯದು ವಿಶಿಷ್ಟ ಹೆಸರು. ಈತನ ಕಾಲ ಪ್ರಸಕ್ತ ಶಕ ೧೨ನೆಯ ಶತಮಾನದ ಉತ್ತರಾರ್ಧ ಮತ್ತು ಕ್ರಿಸ್ತ ಶಕ ೧೩ನೆಯ ಶತಮಾನದ ಪೂರ್ವಾರ್ಧ ಎಂಬುದು ಕವಿಚರಿತೆಕಾರರ ಅಭಿಮತ. ಲೌಕಿಕ, ಧಾರ್ಮಿಕ ಎಲ್ಲೆಯನ್ನು ಹಾಕಿಕೊಳ್ಳದೆ ಎರಡನ್ನೂ ಯಶೋಧರಚರಿತೆ ಕೃತಿಯಲ್ಲಿ ಹೇಳಿದ್ದಾನೆ. ಹಿಂಸೆ ಮಾನವನನ್ನು ದಾನವನನ್ನಾಗಿಸುತ್ತದೆ. ಹಿಂಸೆಯನ್ನು ಮಾಡುವುದಿರಲಿ ಹಿಂಸೆಯನ್ನು ಸಂಕಲ್ಪಿಸುವುದೂ ಘೋರ ಪಾಪ. ಇದು ಜನ್ಮಜನ್ಮಾಂತರಕ್ಕೂ ಕಾಡದೇ ಬಿಡದು. ಅಹಿಂಸಾ ಪರಮೋ ಧರ್ಮಃ ಎಂಬ ನಿತ್ಯಸತ್ಯವನ್ನು ಅತ್ಯಂತ ಸರಳ ಸುಂದರವಾಗಿ ಚಿಕ್ಕಮಕ್ಕಳಾದ ಅಭಯರುಚಿ, ಅಭಯಮತಿಯರ ಮೂಲಕ ಜನ್ನ ಪ್ರತಿಪಾದಿಸಿ ಮಾರಿದತ್ತ ರಾಜನನ್ನು ಹಿಂಸಾಮಾರ್ಗದಿಂದ ವಿಮುಖವಾಗುವಂತೆ (ಮನಃಪರಿವರ್ತನೆಯಾಗುವಂತೆ) ಮಾಡಿದ್ದಾನೆ. ಈ ಪ್ರಸಂಗವನ್ನು ತಿಳಿಯಪಡಿಸುವುದೇ ಪ್ರಕೃತ ಪದ್ಯಭಾಗದ ಪ್ರಧಾನ ಆಶಯ.

©KTBS Not to be republished

ಆನಭಯರುಚಿಕುಮಾರನೆ
ಈ ನೆಗಟ್ದಿರ್ದಭಯಮತಿಯುಮೀ ಅಕ್ಕನೆ ದಲ್
ನಾನಾ ವಿಧ ಕರ್ಮದಿನಿ
ನ್ನೇನಂ ನೀನ್ ಕೇಳ್ವೆ ಮಾರಿದತ್ತನೃಪೇಂದ್ರಾ ॥ ೧ ॥

ಗುರುವಿಂದು ಬೆಸಸೆ ಭಿಕ್ಷೆಗೆ
ಬರುತಿರೆ ಪಿಡಿತಂದರೆಮ್ಮನಾ ದೆಸೆಗೆ ಭಯಂ
ಪುರುಳಿಲ್ಲ ನಿನ್ನ ಕೇಡಂ
ಪರಿವೀಕ್ಷಿಸಿ ಕರುಣದಿಂದೆ ತಲ್ಲಣಿಸಿದಪೆಂ ॥ ೨ ॥

ಸಂಕಲ್ಪಹಿಂಸೆಯೊಂದಱೊ–
ಳಾಂ ಕಂಡೆಂ ಭವದ ದುಃಖಮುಂಡೆಂ ನೀನ್ ನಿಃ
ಶಂಕತೆಯಿನಿನಿತು ದೇಹಿಗ –
ಳಂ ಕೊಂದಪೆ ನರಕದೊಳ್ ನಿವಾರಣೆವಡೆವಯ್ ॥ ೩ ॥

ಎಂದ ನುಡಿ ನೆರೆದ ಜೀವಕ –
ದಂಬಂಗಳ್ಗಭಯಮೆಂಬ ಡಂಗುರದವೊಲೊ–
ಪ್ಪಂಬಡೆಯೆ ಮಾರಿದತ್ತನೃ–
ಪಂ ಬಿಲ್ಲುಂ ಬೆಱಗುಮಾದನುದ್ವೇಗಪರಂ ॥ ೪ ॥

ಆ ಚಂಡಮಾರಿ ಲೋಚನ
ಗೋಚರತನುವಾಗಿ ಕುವರನಂ ಬಂದಿಸಿ ನೀ–
ನಾಚಾರ್ಯನೆಯೆಂದಿಂತಿರೆ
ಸೂಚಿಸಿದಳ್ ನೆರೆದ ಜಾತ್ರೆ ನೆಱೆ ಕೇಳ್ವಿನೆಗಂ ॥ ೫ ॥

ಪ್ರಜೆಯೆಲ್ಲಂ ಜಲಗಂಧ
ಸ್ರಜ ತಂಡುಲ ಧೂಪ ದೀಪ ಚರು ತಾಂಬೂಲ
ವ್ರಜದಿಂ ಪೂಜಿಸುವುದು ಜೀ–
ವಜಾತದಿಂದೆನಗೆ ಬಲಿಯನಿತ್ತೊಡೆ ಮುನಿವೆಂ ॥ ೬ ॥

ಎಂದು ತಿರೋಹಿತೆಯಾದೊಡೆ
ತಂದಿರಿಸಿದ ಜೀವರಾಶಿಯಂ ಬಿಡಿಸಿ ಜನಾ–
ನಂದನರಂ ತನ್ನನುಜೆಯ
ನಂದನರಂ ಮಾರಿದತ್ತವಿಭು ಲಾಲಿಸಿದಂ ॥ ೭ ॥

ಗುಡುಗುಡನೆ ಸುರಿವ ಕಣ್ಬನಿ–
ಯೊಡವಂದಶುಭಕ್ಕೆ ಮಂಗಲಸ್ನಾನಮನಂ
ದೊಡರಿಸೆ ಸೋದರಶಿಶುಗಳ–
ನೊಡಲೊಳ್ ಮಡಗುವಿನಮಪ್ಪಿ ಬೆಚ್ಚನೆ ಸುಯ್ದಂ ॥ ೮ ॥

ತಾನಂದುವರೆಗಮೊದವಿಸಿ–
ದೇನಂಗಳ್ಗಳ್ಕಿ ಕುಸುಮದತ್ತಂಗೆ ಧರಿ–
ತ್ರೀನಾಥಪದವಿಯಂ ಕೊ–
ಟ್ಟಾ ನರಪತಿ ಬಟಿಕ ದೀಕ್ಷೆಯಂ ಕೈಕೊಂಡಂ ॥ ೯ ॥

ಕೆಲಕಾಲಮುಗ್ರತಪಮಂ
ಸಲಿಸಿ ಸಮಾಧಿಯೊಳೆ ಮುಡಿಪಿ ಮೂಱನೆಯ ದಿವಂ
ನೆಲೆಯಾಗೆ ಮಾರಿದತ್ತಂ
ಕಲಿಯಂ ಮೂದಲಿಸಿದಂತೆ ದೇವನೆ ಆದಂ ॥ ೧೦ ॥

©KTBS
Not to be republished

## ಪದ ವಿಂಗಡಣೆ

**ಪದ್ಯ–೧.** ಆನ್ + ಅಭಯ ರುಚಿ ಕುಮಾರನೆ, ನೆಗೞ್ದು (ಳ್ದು) + ಇರ್ದ + ಅಭಯಮತಿಯುಮ್ + ಈ ಅಕ್ಕನೆ ದಲ್, ನಾನಾ ವಿಧ ಕರ್ಮದಿನ್ + ಇನ್ + ಏನಂ ನೀನ್ ಕೇಳ್ದೆ ಮಾರಿದತ್ತ ನೃಪ + ಇಂದ್ರಾ

**ಪದ್ಯ–೨.** ಗುರು + ಇಂದು ಬೆಸಸೆ ಭಿಕ್ಷೆಗೆ ಬರುತ + ಇರೆ ಪಿಡಿತಂದರ್ + ಎಮ್ಮನ್, ಆ + ದೆಸೆಗೆ ಭಯಂ ಪುರುಳ್ + ಇಲ್ಲ ನಿನ್ನ ಕೇಡಂ + ಪರಿವೀಕ್ಷಿಸಿ ಕರುಣದಿಂದೆ ತಲ್ಲಣಿಸಿದಪೆಂ

**ಪದ್ಯ–೩.** ಸಂಕಲ್ಪಹಿಂಸೆ + ಒಂದಱೊ(ರೊ)ಳ್ + ಆಂ ಕಂಡೆಂ ಭವದ ದುಃಖಮಂ + ಉಂಡೆಂ, ನೀನ್ ನಿಃಶಂಕೆಯಿನ್ + ಇನಿತು ದೇಹಿಗಳಂ ಕೊಂದಪೆ ನರಕದೊಳ್ ನಿವಾರಣೆ + ಪಡೆವಯ್

**ಪದ್ಯ–೪.** ಎಂದ ನುಡಿ ನೆರೆದ ಜೀವ ಕದಂಬಂಗಳ್ಗೆ + ಅಭಯಮ್ + ಎಂಬ ಡಂಗುರದವೊಲ್ + ಒಪ್ಪಂ + ಪಡೆಯೆ ಮಾರಿದತ್ತ ನೃಪಂ ಬಿಲ್ಲುಂ + ಬೆಱ(ರ)ಗುಮ್ + ಆದನ್ + ಉದ್ವೇಗಪರಂ

**ಪದ್ಯ–೫.** ಆ ಚಂಡಮಾರಿ ಲೋಚನ ಗೋಚರತನು + ಆಗಿ ಕುವರನಂ ಬಂದಿಸಿ, ನೀನ್ + ಆಚಾರ್ಯನ್ + ಎಂದು + ಇಂತು + ಇರೆ ಸೂಚಿಸಿದಳ್ ನೆರೆದ ಜಾತ್ರೆ ನೆಱೆ (ರೆ) + ಕೇಳ್ವ + ಇನೆಗಂ

**ಪದ್ಯ–೬.** ಪ್ರಜೆ + ಎಲ್ಲಂ ಜಲಗಂಧ, ಸ್ರಜ ತಂಡುಲ, ಧೂಪದೀಪ, ಚರು ತಾಂಬೂಲವ್ರಜದಿಂ ಪೂಜಿಸುವುದು ಜೀವಜಾತದಿಂದ + ಎನಗೆ ಬಲಿಯನ್ + ಇತ್ತೊಡೆ ಮುನಿವೆಂ

**ಪದ್ಯ–೭.** ಎಂದು ತಿರೋಹಿತೆ + ಆದೊಡೆ, ತಂದು + ಇರಿಸಿದ ಜೀವರಾಶಿಯಂ ಬಿಡಿಸಿ, ಜನ + ಆನಂದನರಂ ತನ್ನ + ಅನುಜೆಯ + ನಂದನರಂ ಮಾರಿದತ್ತ ವಿಭು ಲಾಲಿಸಿದಂ

**ಪದ್ಯ–೮.** ಗುಡುಗುಡನೆ ಸುರಿವ ಕಣ್ + ಪನಿಯ + ಒಡ + ಬಂದ + ಅಶುಭಕ್ಕೆ ಮಂಗಳಸ್ನಾನಮನ್ + ಅಂದು + ಒಡರಿಸೆ ಸೋದರಶಿಶುಗಳನ್ + ಒಡಲೊಳ್ ಮಡಗುವಿನಮ್ + ಅಪ್ಪಿ ಬೆಚ್ಚನೆ ಸುಯ್ದಂ

**ಪದ್ಯ–೯.** ತಾನ್ + ಅಂದುವರೆಗಮ್ + ಒದವಿಸಿದ + ಏನಂಗಳ್ಗೆ + ಅಳ್ಕಿ ಕುಸುಮದತ್ತಂಗೆ ಧರಿತ್ರೀನಾಥ ಪದವಿಯಂ ಕೊಟ್ಟು + ಆ ನರಪತಿ ಬೞಿ(ಳಿ)ಕ ದೀಕ್ಷೆಯಂ ಕೈಕೊಂಡಂ

**ಪದ್ಯ–೧೦.** ಕೆಲಕಾಲಮ್ + ಉಗ್ರತಪಮಂ ಸಲಿಸಿ ಸಮಾಧಿಯೊಳೆ ಮುಡಿಪಿ ಮೂಱ(ರ)ನೆಯ ದಿವಂ ನೆಲೆ + ಆಗೆ ಮಾರಿದತ್ತಂ ಕಲಿಯಂ ಮೂದಲಿಸುವಂತೆ ದೇವನೆ + ಆದಂ

©KTBS Not to be republished

## ಪೂರ್ವಕತೆ

ರಾಜಪುರವೆಂಬ ಪಟ್ಟಣ. ಅದರ ದೊರೆ ಮಾರಿದತ್ತ. ಆ ಪುರದಲ್ಲಿ ಚಂಡಮಾರಿಯ ದೇವಾಲಯವಿತ್ತು. ಆಶ್ವಯುಜ ಹಾಗೂ ಚೈತ್ರಋತುಗಳಲ್ಲಿ ದೊರೆ ಮತ್ತು ಪ್ರಜೆಗಳು ಜಾತ್ರೆ ನಡೆಸಿ ದೇವಿಯನ್ನು ಆರಾಧಿಸುತ್ತಿದ್ದರು. ಒಮ್ಮೆ ಚೈತ್ರಮಾಸದಲ್ಲಿ ಜಾತ್ರೆ ನಡೆಯಬೇಕಿತ್ತು. ಮಾರಿಗೆ ಬಲಿ ಕೊಡುವುದಕ್ಕಾಗಿ ಮಾನವರನ್ನು ಹಿಡಿದುತರುವಂತೆ ಮಾರಿದತ್ತ, ತಳಾರ ಚಂಡಕರ್ಮನಿಗೆ ಆಜ್ಞಾಪಿಸಿದ. ಅವನು ಸುದತ್ತಾಚಾರ್ಯ ಮುನಿಗಳೊಡನೆ ಆ ಪುರಕ್ಕೆ ಬಂದು ಭಿಕ್ಷೆಗೆ ಹೊರಟಿದ್ದ ಎಳೆವಯಸ್ಸಿನ ಸಹೋದರ ಸಹೋದರಿಯರಾದ ಅಭಯರುಚಿ ಮತ್ತು ಅಭಯಮತಿಯರನ್ನು ಹಿಡಿದುತಂದ. ಮಾರಿಯ ಮನೆಯ ಭಯಂಕರ ದೃಶ್ಯದಿಂದ ಆ ಮಕ್ಕಳು ಸ್ವಲ್ಪವೂ ವಿಚಲಿತರಾಗಲಿಲ್ಲ. ಅವರ ಧೈರ್ಯ, ಸ್ಥೈರ್ಯಗಳನ್ನು ಕಂಡು ಬೆಕ್ಕಸಬೆರಗಾದ ಮಾರಿದತ್ತ ಅವರನ್ನು ಬಲಿಕೊಡದೆ ಅವರ ವೃತ್ತಾಂತವನ್ನು ತಿಳಿಯಬಯಸಿದ. ಅಭಯರುಚಿ ತಮ್ಮ ಪೂರ್ವ ಕಥೆಯನ್ನು ನಿರೂಪಿಸಿದ.

ಉಜ್ಜಯನಿಯ ರಾಜಕುಮಾರ ಯಶೋಧರ. ತಂದೆ ಯಶೌಘ, ತಾಯಿ ಚಂದ್ರಮತಿ, ಪತ್ನಿ ಅಮೃತಮತಿ. ಯಶೋಧರ ಅಮೃತಮತಿಯರು ಅನ್ಯೋನ್ಯವಾಗಿದ್ದು ಸುಖದಿಂದಿದ್ದರು. ಅತ್ಯಂತ ಚೆಲುವ, ಸುಂದರ, ಸಕಲ ವಿದ್ಯಾಪಾರಂಗತ ಹಾಗೂ ಸುಸಂಸ್ಕೃತನಾದ ಯಶೋಧರನ ಪತ್ನಿ ಅಮೃತಮತಿಯು ಕುರೂಪಿಯಾದ ಅಷ್ಟಾವಂಕ ಮಾವಟಿಗನ ಗಾನಮಾಧುರ್ಯಕ್ಕೆ ಮನಸೋತು ಪತಿಗೆ ದ್ರೋಹ ಬಗೆಯುವಳು. ಪತ್ನಿಯ ಹೇಯಕೃತ್ಯವನ್ನು ಕಣ್ಣಾರೆಕಂಡ ಯಶೋಧರ ಅತ್ಯಂತ ಖಿನ್ನನಾಗುವನು. ತಾಯಿ ಚಂದ್ರಮತಿದೇವಿ ಪರಿಪರಿಯಾಗಿ ಬೇಡಿಕೊಂಡಾಗ ಮನಸ್ಸಿನ ಖಿನ್ನತೆಗೆ ಕಾರಣವನ್ನು ಹೇಳಲಾಗದೆ ಕಳೆದ ರಾತ್ರಿ ದುಸ್ವಪ್ನವೊಂದನ್ನು ಕಂಡದ್ದಾಗಿ ಹೇಳುವನು. ಸ್ವಪ್ನದೋಷ ನಿವಾರಣೆಗಾಗಿ ಪ್ರಾಣಿಬಲಿಯನ್ನು ಕೊಡಲು ಒಪ್ಪದೇ ತಾಯಿಯ ಸಮಾಧಾನಕ್ಕಾಗಿ ಹಿಟ್ಟಿನಿಂದ ಮಾಡಿದ ಕೋಳಿಯೊಂದನ್ನು ಬಲಿಕೊಡಲು ಒಪ್ಪುವನು. ಹಿಟ್ಟಿನಕೋಳಿಯನ್ನು ಬಲಿಕೊಟ್ಟಾಗ ಅದರೊಳಗೆ ಅಡಗಿದ್ದ ಬೆಂತರವೊಂದು ಕೂಗಿ ಅಸುನೀಗಿತು. ಇದರಿಂದ ಮತ್ತೂ ಖಿನ್ನನಾದ ಯಶೋಧರ, ಮಗನಾದ ಯಶೋಮತಿಗೆ ಪಟ್ಟಕಟ್ಟಿ ಕಾಡಿಗೆ ತಪಕ್ಕೆ ಹೊರಡಲು ಅನುವಾಗುವನು. ವಿಷಯ ತಿಳಿದ ಅಮೃತಮತಿಯು, ಗಂಡ ಹಾಗೂ ಅತ್ತೆಯನ್ನು ವಿಷವಿಕ್ಕಿ ಕೊಲ್ಲುವಳು.

ಸತ್ತ ಯಶೋಧರ-ಚಂದ್ರಮತಿಯರು ಮುಂದಿನ ಜನ್ಮಗಳಲ್ಲಿ ನವಿಲು-ನಾಯಿ, ಹಾವು-ಮುಳ್ಳುಹಂದಿ, ಮೀನು-ಮೊಸಳೆ, ಆಡು-ಹೋತ ಮತ್ತು ಕೋಣ-ಹೋತಗಳಾಗಿ ಕಡೆಗೆ ಕೋಳಿ-ಪಿಳ್ಳೆಗಳಾಗಿ ಜನಿಸುವರು. ಒಮ್ಮೆ ಅಕಂಪನಮುನಿಯ ಉಪದೇಶವನ್ನು ಕೇಳಿದ ಕೋಳಿಗಳು ಜ್ಞಾತಿಸ್ಮರಗಳಾಗಿ ವ್ರತವನ್ನು ಆಚರಿಸಿ, ಹರ್ಷದಿಂದ ಕಲೆತಾಗ, ವನವಿಹಾರಕ್ಕೆ ಹೋಗಿದ್ದ ಯಶೋಮತಿಯ ಬಾಣಕ್ಕೆ ತುತ್ತಾಗುವುವು. ಬಳಿಕ ಯಶೋಮತಿಯ ಪತ್ನಿ ಕುಸುಮಾವಳಿಯ ಮಕ್ಕಳಾಗಿ ಹುಟ್ಟುವುವು. ಆ ಅವಳಿ ಮಕ್ಕಳೇ ಅಭಯರುಚಿ ಮತ್ತು ಅಭಯಮತಿ. ಅವರು ಮುಂದೆ ಸುದತ್ತಾಚಾರ್ಯರಲ್ಲಿ ಶಿಷ್ಯವೃತ್ತಿಯನ್ನು ಸ್ವೀಕರಿಸಿದರು.

©KTBS Not to be republished

## ಕೃತಿಕಾರರ ಪರಿಚಯ

**ಜನ್ನ** ಹಳೇಬೀಡು ಪ್ರಾಂತದ ಕವಿ (ಸಾ. ಶ. ೧೨೨೫) ಹೊಯ್ಸಳರ ಬಲ್ಲಾಳನಿಂದ ಕವಿಚಕ್ರವರ್ತಿ ಅಭಿಧಾನವನ್ನು ಪಡೆದ ಈತ **ಯಶೋಧರ ಚರಿತೆ, ಅನಂತನಾಥಪುರಾಣ** ಮತ್ತು **ಅನುಭವ ಮುಕುರ** ಕಾವ್ಯಗಳ ಕರ್ತೃ. ನರಸಿಂಹ ಬಲ್ಲಾಳನ ಆಸ್ಥಾನದಲ್ಲಿ ದಂಡಾಧಿಪತಿಯೂ ಮಂತ್ರಿಯೂ ಆಗಿದ್ದನು. ಜೈನ ಧಾರ್ಮಿಕ ಕಾವ್ಯಗಳನ್ನು ರಚಿಸಿದ ಜನ್ನ ಅಹಿಂಸಾ ತತ್ವವನ್ನು ಕಾವ್ಯಗಳಲ್ಲಿ ಸಂದೇಶ ರೂಪದಲ್ಲಿ ನೀಡಿದ ಕವಿ.

* * *

ಅಹಿಂಸೆ-ಹಿಂಸೆಯ ಮೇಲೆ, ಧರ್ಮ-ಅಧರ್ಮದ ಮೇಲೆ, ನ್ಯಾಯ-ಅನ್ಯಾಯದ ಮೇಲೆ, ನೀತಿ- ಅನೀತಿಯ ಮೇಲೆ ಜಯವನ್ನು ಸಾಧಿಸಬೇಕೆಂಬುದು ಲೋಕದ ಆಶಯ. ಈ ಆಶಯಕ್ಕನುಸಾರ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳ ಬಗೆಗೆ ಸದಾ ಎಚ್ಚರದಿಂದ ಇರಬೇಕು. ಸ್ವಲ್ಪ ಮೈ ಮರೆತರೂ ಅಮೃತಮತಿಯಂತೆ ನಾಯಕ ನರಕವನ್ನು ಅನುಭವಿಸಬೇಕಾದೀತು. ಇಲ್ಲದಿದ್ದರೆ...... **ಮನಸಿಜನ ಮಾಯೆ ವಿಧಿವಿಲಸನದ ನೆರಂಬಡೆಯೆ ಕೊಂದು ಕೂಗದೆ ನರರಂ** ಎಂದು ನಿಟ್ಟುಸುರು ಬಿಡುವಂತಾಗುವುದು.

* * *

ಪ್ರಸ್ತುತ **ಬಲಿಯನಿತ್ತೊಡೆ ಮುನಿವೆಂ** ನಿಗದಿತ ಪದ್ಯ ಭಾಗವನ್ನು ಕನ್ನಡ ಸಾಹಿತ್ಯ ಪರಿಷತ್ತು ಹೊರತಂದಿರುವ **ತೆಕ್ಕುಂಜೆ ಗೋಪಾಲ ಕೃಷ್ಣಭಟ್ಟ ಅವರ** ಸಂಪಾದನಾ ಗ್ರಂಥ **ಜನ್ನ ಕವಿ ವಿರಚಿತ ಯಶೋಧರಚರಿತೆ ಕಾವ್ಯದಿಂದ** ಆಯ್ಕೆ ಮಾಡಿಕೊಂಡು ಸಂಯೋಜಿಸಿ ನಿಗದಿಪಡಿಸಿದೆ.

©KTBS Not to be republished

## ಪದ - ಪದ್ಯಾರ್ಥ

ನೆಗಟ್ದಿ-ಪ್ರಸಿದ್ಧ; ಬೆಸಸೆ-ಆಜ್ಞೆ ಮಾಡಲು (ಬೆಸನ್ + ಆಜ್ಞೆ); ಪಿಡಿ-ಹಿಡಿ; ದೆಸೆ-ಬಗ್ಗೆ; ಪುರುಳ್-ಸ್ವಲ್ಪ; ಪರಿವೀಕ್ಷಿಸಿ-ಆಲೋಚಿಸಿ; ತಲ್ಲಣ-ತಳಮಳ; ಭವ-ಜನ್ಮ; ನಿಶ್ಶಂಕೆ-ಸಂಶಯವಿಲ್ಲದ, ಭಯವಿಲ್ಲದ; ನಿವಾರಣೆ-ಪರಿಹಾರ; ಕದಂಬ-ಸಮೂಹ; ಬೆಱ(ರ)ಗು-ವಿಸ್ಮಯ; ಲೋಚನ-ಕಣ್ಣು; ಗೋಚರ-ಕಾಣು; ಬಂದಿಸಿ-ನಮಸ್ಕರಿಸಿ(ವಂದಿಸಿ); ನೆರೆದ-ಸೇರಿದ; ನೆಱೆ(ರೆ)-ಚೆನ್ನಾಗಿ; ಸ್ರಜ-ಹೂಮಾಲೆ; ತಂಡುಲ-ಅಕ್ಕಿ; ಚರು-ಹವಿಸ್ಸು; ವ್ರಜ-ಸಮೂಹ; ತಿರೋಹಿತ-ಮಾಯವಾಗು; ಅನುಜೆ-ಸಹೋದರಿ; ವಿಭು-ಪ್ರಭು; ಲಾಲಿಸು-ಮುದ್ದಿಸು; ಒಡರಿಸೆ-ಉಂಟಾಗಲು; ಮಡಗು-ಅಡಗಿಸು; ಏನಂಗಳ್-ಪಾಪಕೃತ್ಯಗಳು; ಅಳ್ಕಿ-ನಾಚಿ; ದಿವಂ-ಸ್ವರ್ಗ; ಕಲಿ-ಕಲಿಪುರುಷ; ಮೂದಲಿಸು-ಹಂಗಿಸು

## ಪಠ್ಯಾಧಾರ ಟಿಪ್ಪಣಿ

**ಕುಸುಮಾವಳಿ:** ಯಶೋಮತಿಯ ಪತ್ನಿ, ಅಭಯಮತಿ ಮತ್ತು ಅಭಯರುಚಿಯರ ತಾಯಿ.

**ಅಭಯರುಚಿ:** ಕುಸುಮಾವಳಿಯ ಪುತ್ರ. ಜಿನಸೇನಾಚಾರ್ಯರ ಶಿಷ್ಯ. ಮಾರಿದತ್ತನ ಮನಃಪರಿವರ್ತನೆಯಾಗುವಂತೆ ಮಾಡಿದ ಧೀರಕುಮಾರ.

**ಅಭಯಮತಿ:** ಅಭಯರುಚಿಯ ಸಹೋದರಿ. ಜಿನಸೇನಾಚಾರ್ಯರ ಶಿಷ್ಯೆ. ಸೋದರ ಅಭಯರುಚಿಯ ಜತೆಗೂಡಿ ಮಾರಿದತ್ತನ ಮನಸ್ಸನ್ನು ಪರಿವರ್ತನೆ ಮಾಡಿದವಳು.

**ಸಂಕಲ್ಪಹಿಂಸೆ:** ಕೆಟ್ಟದ್ದನ್ನು ಮಾಡುವುದಕ್ಕಿಂತಲೂ ಕೆಟ್ಟದ್ದನ್ನು ಯೋಚಿಸುವುದು ಮಹಾಪಾಪ ಎಂಬ ಹೇಳಿಕೆಯುಂಟು. ಯಶೋಧರ ಮಹಾರಾಜ ಹಿಂಸೆಯನ್ನು ಮಾಡುವುದಿಲ್ಲ. ತಾಯಿ ಚಂದ್ರಮತಿಯ ಒತ್ತಾಯಕ್ಕೊಳಗಾಗಿ ಹಿಂಸೆಯನ್ನು ಮಾಡಲು ಒಪ್ಪದೆ ಹಿಟ್ಟಿನ ಕೋಳಿಯನ್ನು ಬಲಿಕೊಡಲು ಒಪ್ಪುತ್ತಾನೆ. ಹೀಗೆ ಪರೋಕ್ಷ ಒಪ್ಪಿಗೆಯೂ (**ಮೌನಂ ಸಮ್ಮತಿ ಲಕ್ಷಣಂ**) ಸಂಕಲ್ಪ ಹಿಂಸೆಯೇ.

**ಮಾರಿದತ್ತ:** ರಾಜಪುರ ಪಟ್ಟಣದ ಅರಸು. ಹಿಂಸೆ ಇವನಿಗೆ ಪರಮ ಪ್ರಿಯವಾದುದು. ಬಾಲಕರಾದ ಅಭಯರುಚಿ ಅಭಯಮತಿಯರ ನಿರ್ಭಯದ ಸ್ವಭಾವದಿಂದ ಚಕಿತಗೊಂಡು ಹಿಂಸೆಯನ್ನು ತ್ಯಜಿಸಿ ದೇವತ್ವವನ್ನು ಪಡೆದ.

**ಕಲಿಪುರುಷ:** ಕಲಿಯುಗದ ಅಧಿಪತಿ, ಮಹಾವಿಷ್ಣುವಿನ ಕೊನೆಯ (ಹತ್ತನೆಯ) ಅವತಾರ.

## ಅಭ್ಯಾಸ

©KTBS Not to be republished

- **ಪೋಷಕ ಅಭ್ಯಾಸ**
- **ಕಲಿತ ನಿಗದಿತ ಮೂಲ ಪಠ್ಯದ ವಸ್ತುನಿಷ್ಠ ಪ್ರಶ್ನೆಗಳು**

**ಅ. ಬಿಟ್ಟಿರುವ ಜಾಗವನ್ನು ಸೂಕ್ತ ಪದದಿಂದ ತುಂಬಿ**

೧. ಅಭಯರುಚಿಯ ಸಹೋದರಿಯ ಹೆಸರು ____________

೨. ಅಭಯರುಚಿ ಮತ್ತು ಅಭಯಮತಿಯರನ್ನು ____________ ಬಂದಿದ್ದಾಗ ಸೆರೆಹಿಡಿದರು.

೩. **ಬಲಿಯನಿತ್ತೊಡೆ ಮುನಿವೆಂ** ಪದ್ಯದ ಆಕರ ____________

೪. ಮಾರಿದತ್ತ ____________ ದೇವನಾದನು.

**ಆ. ಕೊಟ್ಟಿರುವ ಪದಗಳಲ್ಲಿ ಆಯಾ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

| | | | | |
|---|---|---|---|---|
| ೧. | ರನ್ನ | ಜನ್ನ | ಹರಿಹರ | ಪೊನ್ನ |
| ೨. | ನೃಪೇಂದ್ರ | ದೊರೆ | ನೃಪ | ನರಪತಿ |
| ೩. | ಗುರುವಿಂದು | ಹಿಂಸೆಯೊಂದರೊಳ್ | ಬರುತಿರೆ | ಪ್ರಜೆಯೆಲ್ಲಂ |
| ೪. | ಅನಂತಪುರಾಣ | ಯಶೋಧರಚರಿತೆ | ವಿಕ್ರಮಾರ್ಜುನವಿಜಯ | ಅನುಭವಮುಕುರ |

- **ಪ್ರೇರಣಾ ಅಭ್ಯಾಸ**
- **ಕಲಿತ ನಿಗದಿತ ಮೂಲ ಪಠ್ಯದ ವಿಷಯ ಗ್ರಹಿಕಾ ಪ್ರಶ್ನೆಗಳು**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

೧. ಅಭಯರುಚಿಯ ಸಹೋದರಿಯ ಹೆಸರೇನು?

೨. ಅಭಯರುಚಿ ಮತ್ತು ಅಭಯಮತಿಯನ್ನು ಸೆರೆಹಿಡಿದುದು ಯಾವಾಗ?

೩. ಕುಸುಮದತ್ತನ ತಂದೆಯ ಹೆಸರೇನು?

೪. ಮಾರಿದತ್ತ ಪಟ್ಟವನ್ನು ಯಾರಿಗೆ ಕಟ್ಟಿದನು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ**

೧. ಅಭಯರುಚಿ ತಲ್ಲಣಗೊಳ್ಳಲು ಕಾರಣವೇನು?

೨. ಮಾರಿದತ್ತ ಏಕೆ ಉದ್ವಿಗ್ನನಾದನು?

೩. ಚಂಡಮಾರಿ ಜನರನ್ನು ಕುರಿತು ಹೇಳಿದ್ದು ಏನು?

೪. ಜೀವಿಗಳನ್ನು ಬಲಿಕೊಡುವುದರಿಂದ ಆಗುವ ಪರಿಣಾಮವೇನು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ**

೧. ಅಭಯರುಚಿ ಮಾರಿದತ್ತನನ್ನು ಭೇಟಿಯಾದ ಸಂದರ್ಭವನ್ನು ವಿವರಿಸಿ.

೨. ಅಭಯರುಚಿಯ ಮಾತುಗಳು ಮಾರಿದತ್ತನ ಮೇಲೆ ಬೀರಿದ ಪರಿಣಾಮವನ್ನು ತಿಳಿಸಿ.

೩. ಮಾರಿದತ್ತ ರಾಜ್ಯವನ್ನು ತ್ಯಜಿಸಲು ಕಾರಣವೇನು?

೪. ಅಭಯರುಚಿ ಮತ್ತು ಮಾರಿದತ್ತರಲ್ಲಿ ಯಾರನ್ನು ಮೆಚ್ಚುವಿರಿ? ಏಕೆ ?

**ಈ. ಕೊಟ್ಟಿರುವ ವಾಕ್ಯಗಳ ಸಂದರ್ಭೋಚಿತ ಸ್ವಾರಸ್ಯ-ವಿವರವನ್ನು ಬರೆಯಿರಿ**

೧. "ಕರುಣದಿಂದೆ ತಲ್ಲಣಿಸಿದಪೆಂ"

೨. "ಬಲಿಯನಿತ್ತೊಡೆ ಮುನಿವೆಂ"

೩. "ನರಕದೊಳ್ ನಿವಾರಣೆವಡೆವಯ್"

೪. "ದೇವನೆ ಆದಂ"

## ಭಾಷೆಯ ಸೊಬಗು

ಮಂದಿ ಮತ್ತು ಜನ ಎಂಬ ಎರಡು ಶಬ್ದಗಳು ಒಂದೇ ಅರ್ಥವನ್ನು ಕೊಟ್ಟರೂ ಅವು ಭಿನ್ನ ಸಂದರ್ಭಗಳಲ್ಲಿ ಭಿನ್ನ ರೀತಿಯಲ್ಲಿ ಬಳಕೆಯಾಗುತ್ತವೆ.

©KTBS Not to be republished

**ಉದಾಹರಣೆಗೆ,**

(೧) ಮನೆಮಂದಿಯೆಲ್ಲ ಕೂಡಿ ಹಬ್ಬವನ್ನಾಚರಿಸಿದರು

(೨) ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ (ಬಸವಣ್ಣನ ವಚನ)

(೩) ಅವರು ಬಹಳ ಒಳ್ಳೆಯ ಜನ

(೪) ಜನಸಾಮಾನ್ಯರ ಬಾಳು ಉತ್ತಮವಾಗುವುದೆಂದು?

– ಈ ವಾಕ್ಯಗಳಲ್ಲಿ ಜನ ಮತ್ತು ಮಂದಿ ಎಂಬ ಪದಗಳನ್ನು ಬದಲಾಯಿಸಿ ನೋಡಿ. ಅವು ಸರಿಯಾದ ಅರ್ಥವನ್ನು ಕೊಡುತ್ತವೆಯೇ ಎಂಬುದನ್ನು ಗಮನಿಸಿ.

ಹೀಗೆ ಒಂದೇ ಬಗೆಯವಾಗಿ ಕಾಣುವ, ಆದರೆ ಅರ್ಥವ್ಯತ್ಯಾಸವಿರುವ ಪದಗಳ ಪಟ್ಟಿ ಮಾಡಿ.

## ಸೈದ್ಧಾಂತಿಕ ಭಾಷಾಭ್ಯಾಸ

©KTBS Not to be republished

**ಮಾತ್ರಾಗಣ :**

**ಮಾತ್ರೆ :** ಛಂದಶ್ಶಾಸ್ತ್ರದಲ್ಲಿ **ಮಾತ್ರೆ** ಎಂಬುದು ಕಾಲವನ್ನು ಅಳೆಯುವ ಮಾನ. ಒಂದು ಹ್ರಸ್ವ ಅಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲವೇ **ಒಂದು ಮಾತ್ರಾಕಾಲ**. ಮಾತ್ರೆಗಳಲ್ಲಿ ಎರಡು ವಿಧ. ಅವೇ **ಲಘು** ಮತ್ತು **ಗುರು. ಲಘುವನ್ನು** '◡' ಎಂತಲೂ **ಗುರುವನ್ನು** _ ಎಂತಲೂ ಗುರುತಿಸಲಾಗುವುದು. ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ **ಲಘು**. ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ **ಗುರು**.

**ಗುರು** ಎನಿಸುವ ಅಕ್ಷರಗಳು :

| | | | |
|---|---|---|---|
| | | –◡ | –◡◡ – ◡ – ◡ |
| **•ದೀರ್ಘಾಕ್ಷರಗಳು** | – | ಕಾಲು | ಆಗಸ ನೀನು ಕೂಡ |
| | | –◡◡ | –◡ |
| **•ಸಂಯುಕ್ತಾಕ್ಷರದ ಹಿಂದಿನ ಅಕ್ಷರ** | – | ಅಕ್ಷರ | ಕರ್ಣ |
| **•ಅನುಸ್ವಾರ, ವಿಸರ್ಗಗಳಿಂದ** | | –◡◡ | –◡ |
| **ಕೂಡಿರುವ ಅಕ್ಷರ** | – | ಬಂದನು | ದುಃಖ |
| **•ವ್ಯಂಜನಾಕ್ಷರದಿಂದ** | | ◡◡– | ◡◡– |
| **ಕೂಡಿರುವ ಅಕ್ಷರ** | – | ಬರುವಳ್ | ಮರಗಳ್ |
| | | –◡ | –◡◡ |
| **•ಐ, ಔ ಸಹಿತವಾದ ಅಕ್ಷರ** | – | ಗೈಮೆ | ಔಷಧ |

| | |
|---|---|
| • **ಷಟ್ಪದಿಯ ಮೂರು ಮತ್ತು – ಆರನೆಯ** ಪಾದಗಳ ಕೊನೆಯ ಅಕ್ಷರ | ಈ ಅಕ್ಷರಗಳು ಒಂದು ಮಾತ್ರಾ ಲಕ್ಷಣದಿಂದ ಕೂಡಿದ್ದರೂ ಹಾಡುವಾಗ ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುತ್ತವೆ. ಹಾಗಾಗಿ ಈ ಅಕ್ಷರಗಳು **ಗುರು** ಎನಿಸಿಕೊಳ್ಳುವ ಯಾವುದೇ ಲಕ್ಷಣಗಳನ್ನು ಪಡೆಯದಿದ್ದರೂ **ಗುರುವಾಗಿಯೇ** ಪರಿಗಣಿಸಲ್ಪಡುತ್ತವೆ. |

**ಮಾತ್ರಾಗಣ :** ಮಾತ್ರೆಗಳ ಆಧಾರದಿಂದ ಗಣವಿಭಾಗ ಮಾಡಲಾಗುವ **ಮಾತ್ರಾಗಣ**ದಲ್ಲಿ ಮೂರು ವಿಧ.

ಅವೇ **ಮೂರು ಮಾತ್ರೆಗಳ ಗಣ, ನಾಲ್ಕು ಮಾತ್ರೆಗಳ ಗಣ ಮತ್ತು ಐದು ಮಾತ್ರೆಗಳ ಗಣ.**

**ಕಂದ, ಷಟ್ಪದಿ, ರಗಳೆ** ಇವು ಮಾತ್ರಾಗಣ ಆಧಾರಿತ ಛಂದಸ್ಸುಗಳು.

**ಕಂದ :** ಮಾತ್ರಾಗಣ ಆಧಾರಿತ ಛಂದಸ್ಸುಗಳಲ್ಲಿ **ಕಂದ** ಕೂಡ ಒಂದು. ಇದು **ಚೌಪದಿ**ಯಾಗಿರುತ್ತದೆ. ಕೊಟ್ಟಿರುವ ಪದ್ಯದ ಆಧಾರದಿಂದ ಇದರ ಲಕ್ಷಣಗಳನ್ನು ತಿಳಿದುಕೊಳ್ಳಬಹುದು.

©KTBS Not to be republished

| | | |
|---|---|---|
| ೪ | ೪ | ೪ |
| _ _ | U _ U | _ _ |
| **ಕಾವೇ** | **ರಿಯಿಂದ** | **ಮಾಗೋ** |

| | | | | |
|---|---|---|---|---|
| ೪ | ೪ | ೪ | ೪ | ೪ |
| _ U U | U U _ | U _ U | _ _ | U _ |
| **ದಾವರಿ** | **ವರಮಿ** | **ರ್ದನಾಡ** | **ದಾಕ** | **ನ್ನಡದೊಳ್** |

| | | |
|---|---|---|
| ೪ | ೪ | ೪ |
| _ U U | U U U U | _ U U |
| **ಭಾವಿಸಿ** | **ದಜನಪ** | **ದಂವಸು** |

| | | | | |
|---|---|---|---|---|
| ೪ | ೪ | ೪ | ೪ | ೪ |
| _ U U | U U _ | U U U U | U U U U | _ _ |
| **ಧಾವಳ** | **ಯವಿಲೀ** | **ನವಿಶದ** | **ವಿಷಯವಿ** | **ಶೇಷಂ** |

ಈ ಪದ್ಯದಲ್ಲಿ ನಾಲ್ಕು ಪಾದಗಳಿವೆ. ಒಂದು ಮತ್ತು ಮೂರನೆಯ ಪಾದಗಳಲ್ಲಿ ತಲಾ ಹನ್ನೆರಡು ಮಾತ್ರೆಗಳಿವೆ. ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ತಲಾ ಇಪ್ಪತ್ತು ಮಾತ್ರೆಗಳಿವೆ. ಒಂದು ಮತ್ತು ಮೂರನೆಯ ಪಾದಗಳು ಮಾತ್ರಾ ಸಂಖ್ಯೆಯಲ್ಲಿ ಪರಸ್ಪರ ಸಮವಾಗಿವೆ. ಹಾಗೆಯೇ ಎರಡು ಮತ್ತು ನಾಲ್ಕನೆಯ ಪಾದಗಳು ಪರಸ್ಪರ ಸಮವಾಗಿವೆ. ಹಾಗಾಗಿ ಮೊದಲೆರಡು ಪಾದಗಳನ್ನು ಪೂರ್ವಾರ್ಧ ಎಂತಲೂ ಮೂರು ಮತ್ತು ನಾಲ್ಕನೆಯ ಪಾದಗಳನ್ನು ಉತ್ತರಾರ್ಧವೆಂತಲೂ ಕರೆಯಬಹುದು. ಪ್ರತಿಪಾದವೂ ತಲಾ ನಾಲ್ಕು ಮಾತ್ರೆಗಳ ಗಣದಂತೆ ವಿಭಾಗಿಸಲ್ಪಟ್ಟಿವೆ.

**ಲಕ್ಷಣ**

- ನಾಲ್ಕು ಪಾದಗಳಿರಬೇಕು.
- ಒಂದು ಮತ್ತು ಮೂರನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಮೂರು ಮೂರು ಗಣಗಳಿರಬೇಕು.
- ಎರಡು ಮತ್ತು ನಾಲ್ಕನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಐದೈದು ಗಣಗಳಿರಬೇಕು.
- ಪ್ರತಿ ಪಾದವೂ ಆದಿಪ್ರಾಸದಿಂದ ಕೂಡಿರಬೇಕು.

©KTBS Not to be republished

**ಹಳಗನ್ನಡದ ವಿಭಕ್ತಿ ಪ್ರತ್ಯಯಗಳು**

| ವಿಭಕ್ತಿ | ಕಾರಕಾರ್ಥಗಳು | ಪ್ರತ್ಯಯ ಹಳಗನ್ನಡ | ಏಕವಚನ | ಬಹುವಚನ |
|---|---|---|---|---|
| ಪ್ರಥಮಾ | ಕರ್ತ್ರರ್ಥ | ~ಮ್ | ಅರಸಂ | ಅರಸರ್ |
| ದ್ವಿತೀಯಾ | ಕರ್ಮಾರ್ಥ | ~ಅಮ್ | ಅರಸನಂ | ಅರಸರಂ |
| ತೃತೀಯಾ | ಕರಣಾರ್ಥ | ~ಇಮ್,<br>~ಇಂದಂ,<br>~ಇಂದೆ | ಅರಸನಿಂ<br>ಅರಸನಿಂದಂ<br>ಅರಸನಿಂದೆ | ಅರಸರಿಂ<br>ಅರಸರಿಂದಂ<br>ಅರಸರಿಂದೆ |
| ಚತುರ್ಥೀ | ಸಂಪ್ರದಾನ | ~ಗೆ, ~ಕೆ, ~ಕ್ಕೆ | ಅರಸಂಗೆ | ಅರಸರ್ಗೆ |
| ಪಂಚಮೀ | ಅಪಾದಾನ | ~ಅತ್ತಣಿಂ<br>~ಅತ್ತಣಿಂದಂ | ಅರಸನತ್ತಣಿಂ<br>ಅರಸನತ್ತಣಿಂದಂ | ಅರಸರತ್ತಣಿಂ<br>ಅರಸರತ್ತಣಿಂದಂ |
| ಷಷ್ಠೀ | ಸಂಬಂಧ | ~ಅ | ಅರಸನ | ಅರಸರ |
| ಸಪ್ತಮೀ | ಅಧಿಕರಣ | ~ಒಳ್ | ಅರಸನೊಳ್ | ಅರಸರೊಳ್ |

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧. ಮಾತ್ರೆಗಳಲ್ಲಿ ಎಷ್ಟು ವಿಧ? ಅವು ಯಾವುವು?

೨. ಲಘು ಮತ್ತು ಗುರು ಎಂದರೇನು?

೩. ಕಂದ ಪದ್ಯದ ಲಕ್ಷಣವನ್ನು ಬರೆಯಿರಿ.

**ಆ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

೧. ಮಾರಿ ______________

________________________________

_____________________

_____________________ ಬನದೊಳ್

೨. ನಿಯತಿಯನಾರ್ __________

________________________________

_____________________

_____________________ ಕೋಡೆರಡೊಳವೇ

**ಇ) ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

೧. ನಿಂದು ನರಪತಿ ತಳಾಱಿಂ<br>
ಗೆಂದಂ ನೀನ್ ಬರಿಸು ಮನುಜಯುಗಮಂ ಮುನ್ನಂ

೨. ತಡವಾದಪ್ಪುದು ಪೌರರ್<br>
ಕುಡುವೇಟ್ಟುದು ಹಲವು ಜೀವರಾಶಿಯ ಬಲಿಯಂ

©KTBS Not to be republished

## ಪೂರಕ ಓದು

೧. **ತೆಕ್ಕುಂಜೆ ಗೋಪಾಲ ಕೃಷ್ಣಭಟ್ಟ ಅವರ** ಸಂಪಾದನಾ ಗ್ರಂಥ **ಜನ್ನ** ಕವಿ ವಿರಚಿತ **ಯಶೋಧರಚರಿತೆ** ಕಾವ್ಯವನ್ನು ಅವಲೋಕಿಸಿ.

೨. **ಕ. ವೆಂ. ರಾಘವಾಚಾರ್ಯ** ಅವರ **ಯಶೋಧರ ಚರಿತ್ರೆ**ಯನ್ನು ಅವಲೋಕಿಸಿ.

©KTBS
Not to be republished

# ೧೩. ಹೇಮಂತ

Y5P3X7

ಡಾ. ಎಸ್. ವಿ. ಪರಮೇಶ್ವರ ಭಟ್ಟ –

**ಪ್ರವೇಶ:** ವಸಂತವನ್ನು ಋತುಗಳ ರಾಜ ಎಂದು ಎಲ್ಲರೂ ಕರೆಯುತ್ತಾರೆ. ವಸಂತ ಬಂದಾಗ ಪ್ರಕೃತಿಯು ಹಸುರುಟ್ಟು ನಿಲ್ಲುತ್ತದೆ. ಹಕ್ಕಿಗಳು ಲವಲವಿಕೆಯಿಂದ ಹಾರಾಡುತ್ತವೆ. ಜೀವರಾಶಿಗೆ ಹೊಸ ಚೈತನ್ಯ ಬರುತ್ತದೆ. ಆದರೆ ಹೇಮಂತ ಋತುವಿನ ಆರಂಭಕಾಲದಲ್ಲಿ ಪ್ರಕೃತಿಯಲ್ಲಿ ಮೈನಡುಗಿಸುವ ಚಳಿ. ಎಲ್ಲೆಲ್ಲೂ ಹಿಮ, ಮಂಜು, ಚಳಿ. ಪ್ರಕೃತಿಯಲ್ಲಿ ಜಡತ್ವ ತುಂಬಿತುಳುಕುತ್ತದೆ. ಒಟ್ಟಾರೆಯಾಗಿ ಎಲ್ಲೆಲ್ಲೂ ನೀರಸ ವಾತಾವರಣ. ಹಾಗಾದರೆ ಹೇಮಂತಕಾಲವನ್ನು ನಾವು ಹೇಗೆ ಸ್ವೀಕರಿಸಬೇಕು? ಕವಿಯು ಇಲ್ಲಿ ವಸಂತದ ಸಂಭ್ರಮದ ಬಗ್ಗೆ ಹೇಳದೆ ಹೇಮಂತದ ಜಡತ್ವ ಮೈವೆತ್ತ ಕಾಲದ ಬಗ್ಗೆ ಕವಿತೆ ಬರೆದಿರುವುದು ವಿಶೇಷವಾಗಿದೆ. "ಇಲ್ಲ ಇಲ್ಲ" ಎನ್ನುತ್ತಲೇ ಪ್ರಕೃತಿಯನ್ನು ವರ್ಣಿಸುವ ಕೌಶಲವನ್ನು ಗಮನಿಸಿ.

ಹೇಮಂತ ಋತುರಾಜನಿಳೆಗೆ ಬಂದಿಳಿವಂದು
ಹೂವಿಲ್ಲ ಹಸುರಿಲ್ಲ ಚಿಗುರೆಲೆಗಳಿಲ್ಲ.
ದುಂಬಿಗಳ ದನಿಯಿಲ್ಲ ಹಕ್ಕಿಗಳ ಹಾಡಿಲ್ಲ
ಕುಸುಮ ಗಂಧವ ತರುವ ಮರುತನಿಲ್ಲ.

©KTBS Not to be republished

ಚೆಂಗುಡಿಯ ಸಿಂಗರದ ವರ ವರೂಥಗಳೆನಿಸಿ
ಮೆರೆವ ಮರಗಿಡ ಬಳ್ಳಿ ಬರಿದೆ ಮೊಗವಿಳುಹಿ
ಮೌನದಲಿ ಮೈದೆಗೆದು ಮನಮುರಿದು ನಿಂದಿಹವು
ಭಾಗ್ಯ ಹೀನರವೋಲು ದೀನರೆಂದೆನಿಸಿ.

ಮಂಜು ಮುಸುಕನು ಹೊದ್ದು ಹೊಲಗದ್ದೆಗಳು ಮಲಗಿ
ಸುಯ್ಯೆಲರ ಸೂಸುತಿವೆ ನಿನ್ನ ಹಳಿದು
ಮೆಲ್ಲಮೆಲ್ಲನೆ ಸರಿದು ಮೊಗದ ಜವನಿಕೆಯೆಳೆದು
ತುಂಗೆ ತೊರೆ ಹರಿಯುತಿದೆ ನಡುಗಿ ಮೈನೆನೆದು.

ಹಣ್ಣೆಲೆಗಳುದುರುತಿಹ ಬರಲು ಮರಗಳನೇರಿ
ಕಣ್ಣೀರು ಸುರಿಸುತಿದೆ ಕಾನನದ ಹಕ್ಕಿ.
ತಣ್ಣನೆಯ ಗಾಳಿಯಲಿ ಹಿಮದೊಂದು ಸೋನೆಯಲಿ
ಮಿಣ್ಣನಿದೆ ಮಾನವನ ಜೀವ ಸೆರೆ ಸಿಕ್ಕಿ.

ಎತ್ತಲುಂ ಬಿಳಿಮಂಜು ಎತ್ತಲುಂ ಹಿಮಗಾಳಿ
ಎತ್ತಲುಂ ನಡುಗುತಿಹ ನೀರವಾಲೋಕ!
ಎತ್ತಲುಂ ಬರಡುಬನವೆತ್ತಲುಂ ಜಡದ ಜನ
ಎತ್ತಲುಂ ಶೂನ್ಯ ಮನಮರುಗುತಿಹ ಮರುಕ.

ಹೇಮಂತನಾಳಿಕೆಯ ಕಠಿಣ ಶಾಸನವಿಂತು
ಅದಕೆ ತಲೆವಾಗುವುದೆ ಸೃಷ್ಟಿಯೊಳಮರ್ಮ.
ಒಂದೊಂದು ಋತುವಿನಲಿ ಒಂದೊಂದು ರೀತಿಯಲಿ
ಸಂಸ್ಕಾರ ಪಡೆಯುವುದೆ ಜೀವಗಳ ಧರ್ಮ.

## ಕೃತಿಕಾರರ ಪರಿಚಯ



**೧೯೧೪ರ ಫೆಬ್ರವರಿ ೮ರಂದು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ ಹುಟ್ಟಿದ ಎಸ್. ವಿ. ಪರಮೇಶ್ವರ ಭಟ್ಟರು** ಮೈಸೂರು ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ಕನ್ನಡದ ಶ್ರೇಷ್ಠ ಕವಿ, ಅನುವಾದಕ, ಸಾಹಿತ್ಯಸೇವಕರೆಂದು ಖ್ಯಾತರಾಗಿದ್ದಾರೆ. ಭಾಸ ಹಾಗೂ ಕಾಳಿದಾಸರ ಸಂಸ್ಕೃತ ಕೃತಿಗಳನ್ನು ಅತ್ಯಂತ ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿದ ಕೀರ್ತಿ ಭಟ್ಟರದು. ಭರ್ತೃಹರಿಯ ಶತಕತ್ರಯಗಳನ್ನೂ ಜಯದೇವನ ಗೀತಗೋವಿಂದವನ್ನೂ ಅವರು ಕನ್ನಡಿಸಿದರು. ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಪುರಸ್ಕಾರ ಪಡೆದವರು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯರಾಗಿದ್ದರು. **"ಇಂದ್ರಚಾಪ", "ಸುರಹೊನ್ನೆ", "ಉಪ್ಪುಕಡಲು", "ರಾಗಿಣಿ"** ಮುಂತಾದವು ಅವರ ಕೆಲವು ಮುಖ್ಯ ಕೃತಿಗಳು. **"ಹೇಮಂತ"** ಕವಿತೆಯನ್ನು ಅವರ **"ಗಗನಚುಕ್ಕಿ"** ಕವನಸಂಕಲನದಿಂದ ಆರಿಸಿಕೊಳ್ಳಲಾಗಿದೆ.

©KTBS Not to be republished

## ಆಶಯ ಭಾವ

ಡಾ. ಎಸ್. ವಿ. ಪರಮೇಶ್ವರ ಭಟ್ಟರು ಕನ್ನಡದ ಬಹುಮುಖ್ಯ ಕವಿ. ಇವರು ಕುವೆಂಪು, ಬೇಂದ್ರೆ, ಪುತಿನ ಮುಂತಾದವರ ಸಮಕಾಲೀನರು. ಅವೆರಲ್ಲರ ಕಾವ್ಯಗಳನ್ನು ಬಹಳ ತೀವ್ರವಾಗಿ ಪ್ರಭಾವಿಸಿದವರು. ಎಸ್. ವಿ. ಪರಮೇಶ್ವರ ಭಟ್ಟರ ಅನೇಕ ಕವಿತೆಗಳು ಜನಮಾನಸದಲ್ಲಿ ನಿಂತಿವೆ. ಅವರ "ದೀಪ ಹಚ್ಚಾ" ಎಂಬ ಕವಿತೆಯಂತೂ ಪ್ರತಿ ದೀಪಾವಳಿಯ ಸಮಯದಲ್ಲಿ ಕನ್ನಡಿಗರ ಮನೆಮನಗಳಲ್ಲಿ ನಲಿದಾಡುತ್ತದೆ. "ಹೇಮಂತ" ಕವಿತೆಯಲ್ಲಿ ಪರಮೇಶ್ವರ ಭಟ್ಟರು ಹೇಮಂತ ಋತುವಿನಲ್ಲಿ ಪ್ರಕೃತಿಯಲ್ಲಿ ಕಂಡುಬರುವ ದೃಶ್ಯಗಳನ್ನು ಮನಮುಟ್ಟುವಂತೆ ಸೆರೆಹಿಡಿದಿದ್ದಾರೆ. ಈ ಸಮಯದಲ್ಲಿ ಉತ್ತರ ಗೋಳಾರ್ಧಕ್ಕೆ ಚಳಿಗಾಲ.

ಉತ್ತರ ಭಾರತದಲ್ಲಂತೂ ಈ ಸಮಯದಲ್ಲಿ ತೀವ್ರವಾದ ಮಂಜುಬೀಳುವ ಕಾಲ. ಪ್ರಕೃತಿ ಈ ಸಮಯದಲ್ಲಿ ಮೈಮುದುರಿ ಕೂರುತ್ತದೆ. ಹಕ್ಕಿಗಳು ಹಾರಾಟವನ್ನು ಕಡಿಮೆ ಮಾಡುತ್ತವೆ. ವೃಕ್ಷಗಳು ಎಲೆಗಳನ್ನುದುರಿಸಿ ಬೋಳಾಗಿ ನಿಲ್ಲುತ್ತವೆ. ಕಾಡುಪ್ರಾಣಿಗಳಿಗೆ ಆಹಾರ ಸಿಗುವುದು ಕಷ್ಟವಾಗುತ್ತದೆ. ಎಷ್ಟೋ ಪ್ರಾಣಿಗಳು ತಟಸ್ಥಾವಸ್ಥೆಗೆ ಜಾರುತ್ತವೆ. ಹಾಗಾದರೆ ಪ್ರಕೃತಿಗೆ ಹೇಮಂತ ಬೇಡವೆ? ಹೇಮಂತ ಋತುವನ್ನು ಎದುರುಗೊಳ್ಳುವ ಬಗೆಯೆಂತು ಎಂಬುದನ್ನು ಕವಿ ಈ ಕವಿತೆಯಲ್ಲಿ ಚರ್ಚಿಸುತ್ತಾರೆ. ಹೇಮಂತನ ಈ ಕಠಿಣ ಶಾಸನಕ್ಕೆ ತಲೆಬಾಗುವುದೆ ಸೃಷ್ಟಿಯು ತನ್ನನ್ನು ಉಳಿಸಿಕೊಳ್ಳುವ ಒಳಮರ್ಮ ಎಂದು ಕೊನೆಯಲ್ಲಿ ಹೇಳುತ್ತಾರೆ. ಋತುಗಳಿಗೆ ತಕ್ಕಂತೆ, ಕಾಲಕ್ಕೆ ತಕ್ಕಂತೆ ತನ್ನಲ್ಲಿ ಬದಲಾವಣೆ ಮಾಡಿಕೊಳ್ಳುವುದೇ ಪ್ರಕೃತಿಯ ಸಹಜಧರ್ಮ ಎಂಬ ಆಶಯ ಕವಿತೆಯದು.

ಈ ಕವಿತೆಯನ್ನು ನಮ್ಮ ಜೀವನಗಳಿಗೂ ನಾವು ಅನ್ವಯಿಸಿಕೊಳ್ಳಬಹುದು. ಮನುಷ್ಯನ ಬದುಕೆಂಬುದು ಸದಾ ಸಂಭ್ರಮದ ವಸಂತ ಋತುವೇ ಆಗಿರುವುದಿಲ್ಲ. ಕೆಲವೊಮ್ಮೆ ಬಾಳಿನಲ್ಲಿ ಕಷ್ಟನಷ್ಟಗಳು ಬರುತ್ತವೆ. ಮನುಷ್ಯನ ಬದುಕು ತೀವ್ರ ಪರೀಕ್ಷೆಗಳಿಗೊಳಗಾಗುತ್ತದೆ. ಆಗ ಆತ ವಿಧಿಯನ್ನು ಹಳಿಯಬಾರದು. ಬಂದಿರುವ ಕಷ್ಟಗಳನ್ನು ಸೈರಿಸಬೇಕು. ಮುಂದೊಂದು ದಿನ ವಸಂತವು ಬಂದೇ ಬರುವುದೆಂಬ ಭರವಸೆಯಿಂದ ಬಾಳನ್ನು ಬಾಳಬೇಕು. ಹೇಮಂತ ಋತುವಿನಲ್ಲಿ ಪ್ರಕೃತಿ ಜಡವಾಗಿದ್ದಂತೆ ಕಂಡರೂ ಮತ್ತೆ ಹೊಸ ಋತು ಬಂದಾಗ ಅದು ಚಿಗುರೊಡೆದು ನಳನಳಿಸುವಂತೆ ಮನುಷ್ಯನು ಕೂಡ ಹೊಸ ಕಾಲಕ್ಕೆ, ಹೊಸ ಬಿಸಿಲಿಗೆ ಕಾಯಬೇಕು. ಬಂದೆಲ್ಲ ಕಷ್ಟಸುಖಗಳನ್ನೂ ನೈಸರ್ಗಿಕ ಎಂದು ಸ್ವೀಕರಿಸಬೇಕು – ಎಂಬ ಭಾವ ಕವಿತೆಯದ್ದಾಗಿದೆ.

©KTBS Not to be republished

## ಪದಗಳ ಅರ್ಥ

| | | |
|---|---|---|
| ಇಳೆ | – | ಭೂಮಿ |
| ಗಂಧ | – | ಪರಿಮಳ, ಸುವಾಸನೆ |
| ಮರುತ | – | ಮಾರುತ, ಗಾಳಿ |
| ಚೆಂಗುಡಿ | – | ಚಿಗುರೆಲೆ, ಕೆಂಪಾದ ಚಿಗುರೆಲೆಯೆಂಬ ಕೆಂಪು ಪತಾಕೆ |
| ವರೂಥ | – | ರಥ, ತೇರು |
| ಮೊಗ | – | ಮುಖ |
| ಜವನಿಕೆ | – | ಮುಖಪರದೆ |
| ಬರಲುಮರ | – | ಎಲೆಗಳನ್ನುದುರಿಸಿ ಬರಿದಾದ, ಕೇವಲ ಗೆಲ್ಲುಗಳಷ್ಟೇ ಇರುವ ಮರ |
| ಕಾನನದ ಹಕ್ಕಿ | – | ಕಾಡುಹಕ್ಕಿ |
| ನೀರವ | – | ಮೌನ |

## ಅಭ್ಯಾಸ

ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

೧. ಹೇಮಂತ ರಾಜನು ಇಳೆಗೆ ಬಂದಾಗ ಮರಗಳು ಹೇಗಿರುತ್ತವೆ?

೨. ಮಂಜು ಮುಸುಕನು ಹೊದ್ದು ಮಲಗಿರುವವರು ಯಾರು?

೩. ಕಾನನದ ಹಕ್ಕಿ ಏನು ಮಾಡುತ್ತಿದೆ?

೪. ಎತ್ತಲೂ ಕಾಣುತ್ತಿರುವ ದೃಶ್ಯ ಯಾವುದು?

೫. ಹೇಮಂತ ಋತುವಿನಲ್ಲಿ ತುಂಗೆಯ ತೊರೆ ಹೇಗೆ ಹರಿಯುತ್ತಿದೆ?

೬. ಯಾವುದಕ್ಕೆ ತಲೆಬಾಗಬೇಕೆಂದು ಕವಿ ಹೇಳುತ್ತಾರೆ?

೭. ಜೀವಗಳ ಧರ್ಮ ಯಾವುದು?

ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಹೇಮಂತನು ಬಂದಿಳಿದಾಗ ಲೋಕದ ಪರಿಸ್ಥಿತಿ ಹೇಗಿತ್ತು?

೨. ಹೊಲಗದ್ದೆಗಳು ಮತ್ತು ನದಿಗಳ ಮೇಲೆ ಹೇಮಂತನ ಪ್ರಭಾವ ಏನು?

೩. ಹೇಮಂತ ಋತುವಿನಲ್ಲಿ ಮರಗಳ ಸ್ಥಿತಿ ಹೇಗಿರುತ್ತದೆ?

೪. ಹೇಮಂತನ ಕಠಿಣ ಶಾಸನವನ್ನು ಹೇಗೆ ಸ್ವೀಕರಿಸಬೇಕು?

**ಇ) ಕೊಟ್ಟಿರುವ ಪ್ರಶ್ನೆಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಹೇಮಂತ ಋತುವಿನಲ್ಲಿ ಪ್ರಕೃತಿಯು ಹೇಗಿರುತ್ತದೆ ಎಂಬುದನ್ನು ವರ್ಣಿಸಿ.

ಈ) ಈ ಕೆಳಗಿನ ವಾಕ್ಯಗಳ ಸ್ವಾರಸ್ಯವನ್ನು ವಿಸ್ತರಿಸಿ ಬರೆಯಿರಿ.

೧. ಚೆಂಗುಡಿಯ ಸಿಂಗರದ ವರವರೂಥಗಳೆನಿಸಿ

೨. ಸುಯ್ಯೆಲರ ಸೂಸುತಿವೆ ನಿನ್ನ ಹಳಿದು

೩. ಕಣ್ಣೀರು ಸುರಿಸುತಿದೆ ಕಾನನದ ಹಕ್ಕಿ

೪. ಎತ್ತಲುಂ ನಡುಗುತಿಹ ನೀರವಾಲೋಕ

೫. ಅದಕೆ ತಲೆವಾಗುವುದೆ ಸೃಷ್ಟಿಯೊಳಮರ್ಮ

©KTBS Not to be republished

ಉ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

೧. ಸಿಂಗರ : ಸಿಂಗಾರ : : ಮರುತ : ____________ .

೨. ಮೌನ : ಮಾತು : : ಜಡ : ____________ .

೩. ಬನ : ವನ : : ಮೊಗ : ____________ .

೪. ಚಿಗುರೆಲೆ : ಲೋಪ ಸಂಧಿ : : ತಲೆವಾಗು : ________ .

೫. ನೀರವ : ಮೌನ : : ಕಠಿಣ : ________ .

## ಚಟುವಟಿಕೆ

**ಅ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ ಮತ್ತು ಕಂಠಪಾಠ ಮಾಡಿರಿ.**

೧. ಹೇಮಂತ ಋತುರಾಜ ________

________________________

________________________

________________ ಮರುತನಿಲ್ಲ.

೨. ಹೇಮಂತನಾಳಿಕೆಯ __________

________________________

________________________

________________ ಜೀವಗಳ ಧರ್ಮ.

**ಆ) "ಹೇಮಂತ" ಕವನವನ್ನು ರಾಗವಾಗಿ ಹಾಡಿರಿ.**

## ಭಾಷೆಯ ಸೊಬಗು

ಅರಿ ಮತ್ತು ತಿಳಿ ಎಂಬವು ಒಂದೇ ಬಗೆಯ ಅರ್ಥವನ್ನು ಕೊಟ್ಟರೂ ಅವುಗಳ ನಡುವೆ ಸೂಕ್ಷ್ಮ ವ್ಯತ್ಯಾಸವಿದೆ. ಅರಿವು ಎಂಬುದು ಹೆಚ್ಚಾಗಿ ಪುಸ್ತಕಗಳ ಅಧ್ಯಯನದಿಂದ ಮತ್ತು ಸ್ವತಃ ಆಳವಾದ ಚಿಂತನ-ಮಂಥನಗಳಿಂದ ಬರುವ ಜ್ಞಾನ. ತಿಳಿವು ಎಂಬುದು ಲೋಕಜ್ಞಾನ. ಲೌಕಿಕ ಅನುಭವಗಳಿಂದ ಬಂದ ಜ್ಞಾನ.

©KTBS Not to be republished

ಇನ್ನೂ ಒಂದು ವ್ಯತ್ಯಾಸವಿದೆ. ಎರಡೂ ಶಬ್ದಗಳಿಗೆ ವಳಿಕೆ ಎಂಬ ಪ್ರತ್ಯಯ ಸೇರಿದಾಗ ಅವುಗಳ ಅರ್ಥಗಳು ಸಂಪೂರ್ಣ ಬೇರೆಯಾಗುತ್ತವೆ.

ಅರಿವಳಿಕೆ ಎಂದರೆ ಪ್ರಜ್ಞೆ ತಪ್ಪಿಸುವ ಔಷಧ, ಅನಸ್ತೇಷಿಯಾ.

ತಿಳಿವಳಿಕೆ ಎಂದರೆ ಜ್ಞಾನ.

ತಿಳುವಳಿಕೆ ತಪ್ಪು ಪ್ರಯೋಗ. ತಿಳಿವಳಿಕೆ ಸರಿ.

ಇಂಥ ಬೇರೆ ಉದಾಹರಣೆಗಳನ್ನು ಸಂಗ್ರಹಿಸಿ.

## ಪೂರಕ ಓದು

೧. ಡಾ. ಎಸ್. ವಿ. ಪರಮೇಶ್ವರ ಭಟ್ಟರ ಕವನ ಸಂಕಲನಗಳನ್ನು ಓದಿರಿ.
೨. ಕಾಳಿದಾಸ ಕವಿಯ "ಋತುಸಂಹಾರ" ಖಂಡಕಾವ್ಯದ ಕನ್ನಡಾನುವಾದಗಳನ್ನು ಓದಿರಿ.

©KTBS Not to be republished

# ೧೪. ತತ್ತ್ವಪದಗಳು

X1C7S6

**ಕಡಕೋಳ ಮಡಿವಾಳಪ್ಪ –**

**ಶಿಶುನಾಳ ಶರೀಫ–**

**ಪ್ರವೇಶ :** ಸಾಗರ ಸದೃಶ ತತ್ತ್ವಜ್ಞಾನವನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಆಡುಭಾಷೆಯಲ್ಲಿ ಹಾಡಿರುವುದು ತತ್ತ್ವಪದಕಾರರ ವೈಶಿಷ್ಟ್ಯ. ಕಡಕೋಳ ಮಡಿವಾಳಪ್ಪ ಮತ್ತು ಶಿಶುನಾಳ ಷರೀಫ್ ಅವರು ಪ್ರಖ್ಯಾತ ತತ್ತ್ವಪದಕಾರರಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಸಿದ್ಧರಾಗಿದ್ದಾರೆ. ಹಿಂದಿ ಭಾಷೆಯಲ್ಲಿ ಕಬೀರರು ತತ್ತ್ವಜ್ಞಾನವನ್ನು ಸರಳ ಪದಬಳಕೆಯ ಮೂಲಕ ಉಣಬಡಿಸಿದರೆ, ಶಿಶುನಾಳ ಶರೀಫರು ಕನ್ನಡದಲ್ಲಿ ಇಂತಹ ಮಹತ್ಕಾರ್ಯವನ್ನು ಸಾಧಿಸಿ ಕನ್ನಡದ ಕಬೀರರೆಂದೆನಿಸಿದರು.

ಗುರುಕರುಣೆ, ಸಾಧು ಸತ್ಪುರುಷರ ಸ್ನೇಹದ ಮಹತ್ತ್ವವನ್ನು ಕುರಿತು **'ಗುರುಕರುಣೆ'** ತತ್ತ್ವಪದ ವರ್ಣಿಸಿದೆ.

ಬಿದಿರು ಮಾನವನ ಜೀವನದಲ್ಲಿ ಹುಟ್ಟಿನಿಂದ ಸಾವಿನವರೆಗೂ ಬಹು ಉಪಯೋಗಿ ಸಸ್ಯ. ಜೀವನದ ವಿವಿಧ ಮಜಲುಗಳಲ್ಲಿ ಬಿದಿರಿನ ಉಪಯುಕ್ತತೆ ಕುರಿತು **'ಬಿದಿರು'** ತತ್ತ್ವಪದ ವರ್ಣಿಸಿದೆ.

©KTBS Not to be republished

### ೧. ಗುರುಕರುಣೆ

ಗುರುಕರುಣವಿಲ್ಲದವನ ಸ್ನೇಹ
ಸಾವುತನಕ ಬೇಡ ।
ಸಾಧು–ಸತ್ಪುರುಷರ ಸೇವಾ
ಮಾಡಿರುವುದು ಬಹುಪಾಡ ॥ ೧ ॥

ಮಾತಿನೊಳಗ ಮಾತಿಲ್ಲದವನ ಸ್ನೇಹ
ಜಾತಿಜನ್ಮಕಬೇಡ ।
ಹೀನ ಮನುಷ್ಯನ ಸ್ನೇಹ ಮಾಡಿ
ನೀನು ಕೆಡಲಿಬೇಡ ॥ ೨ ॥

ಅಕ್ಕ–ತಂಗಿಯರೆಂದು ಬಾಯಲಿ ಕರೆದು
ಹೊಕ್ಕು ಬಳಸಲಿಬೇಡ ।
ನಿತ್ಯಕಾಲದಲ್ಲಿ ಅಶನವ ಉಂಡು
ಹೊತ್ತು ಗಳಿಯಲಿಬೇಡ ॥ ೩ ॥

ಹಿಂದಿಗೆ ಕಿರಿದು ಕಿಂದಿಗೆ ಹಿರಿದು
ಸರಿಯ ಮಾಡಲಿಬೇಡ ।
ಗುರು ಮಹಾಂತೇಶನ ಪಾದವ ಹಿಡಿದು
ಇರುವುದು ಬಹುಪಾಡ ॥ ೪ ॥

– ಕಡಕೋಳ ಮಡಿವಾಳಪ್ಪ

* * * * * *

**೨. ಬಿದಿರು**

ಬಿದಿರು (ನಾ) ಯಾರಿಗಲ್ಲದವಳು ॥ ಪ ॥

ಹುಟ್ಟುತ ಹುಲ್ಲು ನಾನಾದೆ
ಬೆಳೆಬೆಳೆಯುತ್ತ ದಿವಿನಾದೆ
ಮಕ್ಕಳನು ತೂಗುವತೊಟ್ಟಿಲಾದೆ ॥ ೧ ॥

ಪಲ್ಲಕ್ಕಿದಂಡಿಗೆಯಾದೆ
ಪತ್ರೆಗೆ ಬುಟ್ಟಿ ತಾನಾದೆ
ಮಹಾತ್ಮರ ಕೈಗೆ ಬೆತ್ತ ನಾನಾದೆ ॥ ೨ ॥

ಕುಟ್ಟಲು ಒನಕೆಯಾದೆ
ಅಂಬಿಗಗೆ ಕೋಲು ತಾನಾದೆ
ರೈತನಿಗೆ ಬಿತ್ತುವ ಕೂರಿಗ್ಯಾದೆ ॥ ೩ ॥

ಬೀಸುವ ಗೂಟವಾದೆ
ಕೇರುವ ಮರವಾದೆ
ಮುದುಕರಿಗೆ ಊರುವ ಬೆತ್ತವಾದೆ ॥ ೪ ॥

ಆಡುವ ಕೋಲಾದೆ
ಹೂಡಲು ಚಕ್ಕಡಿಯಾದೆ
ಸಿದ್ದರಾಮೇಶಗೆ ನಂದಿ ಕೋಲಾದೆ ॥ ೫ ॥

ನೆರಳಿಗೆ ಚಪ್ಪರವಾದೆ
ಏಕದಂಡಿಗೆ ಕೊಳವೆಯಾದೆ
ಶಿಶುನಾಳಾಧೀಶಗೆ ಓಲಗವಾದೆ ॥ ೬ ॥

– ಶಿಶುನಾಳ ಶರೀಫ

©KTBS Not to be republished

## ಕೃತಿಕಾರರ ಪರಿಚಯ

**ಕಡಕೋಳ ಮಡಿವಾಳಪ್ಪ** ಅವರು **(ಸಾ. ಶ. ೧೭೬೫) ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಬಿದನೂರ ಗ್ರಾಮ**ದಲ್ಲಿ ಜನಿಸಿದರು. ಇವರ ತಾಯಿ ಗಂಗಮ್ಮ, ತಂದೆ ವಿರೂಪಾಕ್ಷಯ್ಯ. ಇವರು ಕಲಬುರ್ಗಿಯ ಶ್ರೀಶರಣ ಬಸವೇಶ್ವರರ ನಿರ್ದೇಶನದಂತೆ ಕಲಕೇರಿ ಮರುಳಾರಾಧ್ಯರಿಂದ ಲಿಂಗದೀಕ್ಷೆಯನ್ನು ಪಡೆಯುತ್ತಾರೆ. ಆಧ್ಯಾತ್ಮಕ್ಷೇತ್ರದಲ್ಲಿ ತನ್ನದೇ ಆಗಿರುವ ಪ್ರತಿಭೆಯನ್ನು ಮೆರೆದ ವಿಶಿಷ್ಟ ಕವಿ ಎನಿಸಿಕೊಂಡಿದ್ದಾರೆ. ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ಯಡ್ರಾಮಿ ಬಳಿಯ ಕಡಕೋಳ ಗ್ರಾಮವು ಇವರ ಕಾರ್ಯಕ್ಷೇತ್ರ. ಇಲ್ಲಿ ಕಡಕೋಳ ಮಡಿವಾಳಪ್ಪ ಅವರ ಮಠವಿದೆ. **'ಮಹಾಂತೇಶ'** ಎಂಬ ಅಂಕಿತವನ್ನು ಇಟ್ಟುಕೊಂಡು ನೂರಾರು ತತ್ತ್ವಪದಗಳನ್ನು ರಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

**ಸಂತ ಶಿಶುನಾಳ ಶರೀಫ** ತತ್ತ್ವಪದ ರಚನಾಕಾರರಾದ ಇವರು **(ಸಾ.ಶ. ೧೮೧೯) ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ, ಶಿಶುನಾಳ**ದವರು. ಬಾಲ್ಯದ ಹೆಸರು ಮಹಮ್ಮದ್ ಶರೀಫ. ಗುರು ಕಳಸದ ಗೋವಿಂದ ಭಟ್ಟರು. ಕರ್ನಾಟಕದ **ಕಬೀರರೆಂದೇ** ಶರೀಫರು ಪ್ರಸಿದ್ಧರು. ಶಿಶುನಾಳಾಧೀಶ, ಶಿಶುನಾಳೇಶ ಅಂಕಿತ. ಇವರು ನೂರಾರು ತತ್ವಪದಗಳನ್ನು ರಚಿಸಿದ್ದಾರೆ

## ಆಶಯ ಭಾವ

ಕಡಕೋಳ ಮಡಿವಾಳಪ್ಪ ಅವರ ತತ್ತ್ವಪದವು ಮಾನವನು ತನ್ನ ಜೀವನದಲ್ಲಿ ಅನುಸರಿಸಬೇಕಾದ ನಡೆನುಡಿಗಳನ್ನು ಬಹುಸುಂದರವಾಗಿ ಚಿತ್ರಿಸುತ್ತದೆ. ನಮ್ಮ ಎಲ್ಲ ಕಾರ್ಯಗಳಿಗೆ ಗುರುಕರುಣೆ ಅತ್ಯಗತ್ಯ. ಅವರು ಸಾಧು ಸತ್ಪುರುಷರ ಸೇವೆಯನ್ನು ಮಾಡುವುದು. ಹೀನ ಮನುಷ್ಯರ ಸ್ನೇಹವನ್ನು ಮಾಡದಿರುವುದು, ಸಮಯವನ್ನು ವ್ಯರ್ಥಮಾಡದಿರುವುದು ಉತ್ತಮ ಗುಣಗಳು ಎಂದು ಅಭಿಪ್ರಾಯಪಡುತ್ತಾರೆ.

**'ಗುರುಕರುಣೆ'** ತತ್ತ್ವಪದವನ್ನು **'ಆಯ್ದ ತತ್ತ್ವಪದಗಳು'** (ಪುಟ ಸಂಖ್ಯೆ ೪) ಸಂಕಲನದಿಂದ ಆಯ್ದು ನಿಗದಿಪಡಿಸಿದೆ.

ಪ್ರಕೃತಿಯಲ್ಲಿ ಬೇಡವಾದ ವಸ್ತು ಯಾವುದೂ ಇಲ್ಲ. ಕೆಲವು ಹೆಚ್ಚು ಮತ್ತೆ ಕೆಲವು ಕಡಿಮೆ ಉಪಯೋಗಿ ವಸ್ತುಗಳಾಗಿವೆ. ಹುಟ್ಟಿನಿಂದ ಸಾವಿನ ತನಕ ದಿನನಿತ್ಯ ಬಳಸುವ ಅತ್ಯಮೂಲ್ಯ ವಸ್ತು ನೀರು. ಇದರಂತೆ ಬಿದಿರೂ ಬಹು ಉಪಯೋಗಿ. ಸಮಾಜದಲ್ಲಿ ಎಲ್ಲರಿಗೂ ಎಲ್ಲಾ ಸಂದರ್ಭಗಳಲ್ಲೂ ಬೇಕಾದ ಈ ಅಮೂಲ್ಯ ಅತ್ಯಗತ್ಯ ಬಿದಿರನ್ನು ಸಂತ ತನ್ನ ದೃಷ್ಟಿಯಲ್ಲಿ ನೋಡಿದ ಪರಿ ಈ ತತ್ತ್ವ ಪದದಲ್ಲಿ ಸರಳ ಸುಂದರವಾಗಿ ಚಿತ್ರಿತವಾಗಿದೆ.

**'ಬಿದಿರು'** ತತ್ತ್ವಪದವನ್ನು **ವಿದ್ವಾನ್ ಸದ್ಯೋಜಾತಮೂರ್ತಿ** ಸಂಪಾದಿಸಿರುವ **'ಶಿಶುನಾಳರ ಗೀತೆಗಳು'** ಸಂಕಲನದಿಂದ (ಪುಟ ೭೯) ಆಯ್ದು ನಿಗದಿಪಡಿಸಿದೆ.

©KTBS Not to be republished

## ಪದಗಳ ಅರ್ಥ

ಅಶನ – ಅನ್ನ, ಆಹಾರ.

ಕೂರಿಗೆ – ಬೀಜ ಬಿತ್ತುವ ಸಾಧನ.

ಏಕದಂಡಿ – ತಂತೀ ವಾದ್ಯ.

ದಂಡಿಗೆ – ಪಲ್ಲಕ್ಕಿ ಹೊರುವ ಕೋಲು;

ಚಕ್ಕಡಿ – ಎತ್ತಿನಗಾಡಿ.

ಬಹುಪಾಡ – ಬಹಳ ಕಷ್ಟ

ದಿವಿನಾಗು – ಮೈತುಂಬಿಕೊಳ್ಳು;

ಮರ (ಮೊರ) – ಕೇರುವ ಸಾಧನ, ಗೆರಸೆ.

ಪತ್ರೆ – ಎಲೆ, ಬಿಲ್ವಪತ್ರೆ (ಪೂಜೆಗೆ ಉಪಯೋಗಿಸುವ ಪತ್ರ–ಪುಷ್ಪಗಳು);

## ಟಿಪ್ಪಣಿ

**ತತ್ತ್ವಪದ :** ಪರಮಾತ್ಮನ ಸ್ವರೂಪವೇ ಆಗಿರುವ ಆತ್ಮನ ಕುರಿತ ತಾತ್ವಿಕ ಪದ್ಯವೇ ತತ್ತ್ವಪದ. ತಾತ್ವಿಕತೆಯನ್ನು ಸಹಜ ನೆಲೆಯಲ್ಲಿ ಭಾವಸಂಬಂಧೀ ರೀತ್ಯ ಅಲಂಕಾರರೂಪದಿಂದ ಕಟ್ಟಿಕೊಡುವ ಸಾಹಿತ್ಯ ಪ್ರಕಾರ. ಭಕ್ತಿಯ ನೆಲೆಯಲ್ಲಿ ಸತ್ಯ ಸಾಕ್ಷಾತ್ಕಾರವನ್ನು ಸಮನ್ವಯಿಸುವುದೇ ಇದರ ಉದ್ದೇಶ.

©KTBS Not to be republished

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಯಾರ ಸ್ನೇಹವು ಸಾಯುವತನಕ ಬೇಡ ಎಂದಿದ್ದಾರೆ?

೨. ಯಾರ ಸ್ನೇಹವನ್ನು ಮಾಡಿ ಕೆಡಬಾರದು?

೩. ತತ್ತ್ವಪದಕಾರರು ಯಾರ ಸೇವೆ ಮಾಡಬೇಕು ಎಂದಿದ್ದಾರೆ?

೪. ಬಿದಿರು ಹೇಗೆ ಬೆಳೆಯಿತು?

೫. ಬಿದಿರಿನ ಚಪ್ಪರವು ಏನನ್ನು ಕೊಡುತ್ತದೆ?

೬. ಬಿದಿರು ಶಿಶುನಾಳಾಧೀಶನಿಗೆ ಏನಾಗುತ್ತದೆ?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಬಿದಿರು ಮಕ್ಕಳಿಗೆ, ರೈತರಿಗೆ, ಮಹಾತ್ಮರಿಗೆ ಯಾವ ರೀತಿಯಲ್ಲಿ ಉಪಯೋಗವಾಗುತ್ತದೆ?

೨. ಧಾನ್ಯಗಳನ್ನು ಕುಟ್ಟಲು, ಬೀಸಲು, ಕೇರಲು ಬಿದಿರು ಹೇಗೆ ಸಹಾಯಕವಾಗಿರುತ್ತದೆ?

೩. ತತ್ತ್ವಪದಕಾರರು ಸ್ನೇಹ ಮಾಡುವ ಬಗೆಗೆ ಏನೆಂದು ತಿಳಿಸಿದ್ದಾರೆ?

೪. 'ಗುರುಕರುಣೆ' ಪದ್ಯದ ಮೂರು ಮತ್ತು ನಾಲ್ಕನೆಯ ಚರಣದಲ್ಲಿ ಏನನ್ನು ಮಾಡಬಾರದೆಂದು ತತ್ತ್ವಸಾರಿದ್ದಾರೆ?

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. 'ಗುರುಕರುಣೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨. 'ಬಿದಿರು' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಹೀನ ಮನುಷ್ಯನ ಸ್ನೇಹ ಮಾಡಿ ನೀನು ಕೆಡಲಿಬೇಡ"

೨. "ನಿತ್ಯಕಾಲದಲ್ಲಿ ಅಶನವ ಉಂಡು ಹೊತ್ತು ಗಳಿಯಲಿಬೇಡ"

೩. "ಮಹಾತ್ಮರ ಕೈಗೆ ಬೆತ್ತ ನಾನಾದೆ"

೪. "ಬೆಳೆ ಬೆಳೆಯುತ್ತ ದಿವಿನಾದೆ"

©KTBS Not to be republished

**ಉ) ಕೊಟ್ಟಿರುವ ಪದಗಳಲ್ಲಿ ಸೂಕ್ತಪದವನ್ನು ಆರಿಸಿ ಬರೆಯಿರಿ.**

೧. 'ಅಶನ' ಪದದ ಅರ್ಥ ___________

(ಅನ್ನ ಆಸೆ ಬಟ್ಟೆ ನೀರು)

೨. 'ಬೆತ್ತ' ಪದದ ತತ್ಸಮರೂಪ ___________

(ವೆತ್ತ ವೇತ್ರ ಬೆತ್ರ ಪೆತ್ತ)

೩. 'ಕರುಣೆ' ಪದದ ವಿರುದ್ಧಾರ್ಥಕ ಪದ ___________

(ಅನುಕರಣೆ ನಿಕರುಣೆ ನಿಷ್ಕರುಣೆ ಅಪಕರುಣೆ)

೪. 'ಅಂಬಿಗ' ಎಂದರೆ ___________

(ರೈತ ಗಾಡಿ ಹೊಡೆಯುವವ ಗುರು ದೋಣಿ ನಡೆಸುವವ)

**ಊ) ಮೊದಲೆರಡು ಪದಗಳಿಗೆ ಸಂಬಂಧ ಇರುವಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

೧. ಹಿಂದು : ಮುಂದು :: ಹಿರಿದು : ___________

೨. ಮಾತಿಲ್ಲದವನ : ಲೋಪ ಸಂಧಿ :: ಕರುಣವಿಲ್ಲದವನ : ___________

೩. ಮನುಷ್ಯನ : ಷಷ್ಠೀ ವಿಭಕ್ತಿ :: ಕಾಲದಲ್ಲಿ : ________________

೪. ಪತ್ರ : ಎಲೆ :: ಚಕ್ಕಡಿ : ________________

## ಚಟುವಟಿಕೆ

**ಅ. ಕೊಟ್ಟಿರುವ ಪದ್ಯಗಳನ್ನು ಕಂಠಪಾಠ ಮಾಡಿರಿ.**

೧. ಮಾತಿನೊಳಗ ________________

________________________

________________________

________________ ಕೆಡಲಿಬೇಡ

೨. ಬೀಸುವ ________________

________________________

________________ ಬೆತ್ತವಾದೆ.

೩. ಆಡುವ ________________

________________________

________________ ಕೋಲಾದೆ

ಮೂಲದಲ್ಲಿ ಒಂದೇ ಅರ್ಥ ಕೊಡುವ, ಆದರೆ ಬಳಕೆಯಲ್ಲಿ ಭಿನ್ನ ಅರ್ಥಗಳನ್ನು ಪಡೆದಿರುವ ಶಬ್ದಗಳಿವೆ. ಉದಾಹರಣೆಗೆ ಕಾರ್ಯ ಮತ್ತು ಕೃತ್ಯ – ಎಂಬ ಎರಡು ಶಬ್ದಗಳಿಗೂ ಕೆಲಸ ಎಂದೇ ಅರ್ಥ. ಆದರೆ ಕನ್ನಡದಲ್ಲಿ ಕೃತ್ಯ ಎಂಬುದು ಕೆಟ್ಟ ಕೆಲಸಗಳಿಗೆ ಬಳಸುವ ಶಬ್ದವಾಗಿ ಮಾರ್ಪಟ್ಟಿದೆ.

(೧) ಅವರ ಸಾಮಾಜಿಕ ಕಾರ್ಯಗಳು ನಿಜಕ್ಕೂ ಪ್ರಶಂಸಾರ್ಹ (ಅವರು ಮಾಡಿರುವ ಸಾಮಾಜಿಕ ಕೆಲಸಗಳನ್ನು ಮೆಚ್ಚಬೇಕು)

(೨) ಈ ಕೃತ್ಯವನ್ನು ಎಸಗಿದವನನ್ನು ಕೂಡಲೇ ಬಂಧಿಸಿ (ಈ ತಪ್ಪುಕೆಲಸ ಮಾಡಿದವನನ್ನು ಬಂಧಿಸಿ)

ಹೀಗೆಯೇ ಮೂಲದಲ್ಲಿ ಒಂದೇ ಅರ್ಥವಿರುವ, ಆದರೆ ನಂತರದ ದಿನಗಳಲ್ಲಿ ಭಿನ್ನ ಅರ್ಥಗಳನ್ನು ಪಡೆದಿರುವ ಶಬ್ದಗಳ ಪಟ್ಟಿ ಮಾಡಿ.

©KTBS Not to be republished

## ಭಾಷೆಯ ಸೊಬಗು

ಮೂಲದಲ್ಲಿ ಒಂದೇ ಅರ್ಥ ಕೊಡುವ, ಆದರೆ ಬಳಕೆಯಲ್ಲಿ ಭಿನ್ನ ಅರ್ಥಗಳನ್ನು ಪಡೆದಿರುವ ಶಬ್ದಗಳಿವೆ. ಉದಾಹರಣೆಗೆ ಕಾರ್ಯ ಮತ್ತು ಕೃತ್ಯ – ಎಂಬ ಎರಡು ಶಬ್ದಗಳಿಗೂ ಕೆಲಸ ಎಂದೇ ಅರ್ಥ. ಆದರೆ ಕನ್ನಡದಲ್ಲಿ ಕೃತ್ಯ ಎಂಬುದು ಕೆಟ್ಟ ಕೆಲಸಗಳಿಗೆ ಬಳಸುವ ಶಬ್ದವಾಗಿ ಮಾರ್ಪಟ್ಟಿದೆ.

(೧) ಅವರ ಸಾಮಾಜಿಕ ಕಾರ್ಯಗಳು ನಿಜಕ್ಕೂ ಪ್ರಶಂಸಾರ್ಹ (ಅವರು ಮಾಡಿರುವ ಸಾಮಾಜಿಕ ಕೆಲಸಗಳನ್ನು ಮೆಚ್ಚಬೇಕು)

(೨) ಈ ಕೃತ್ಯವನ್ನು ಎಸಗಿದವನನ್ನು ಕೂಡಲೇ ಬಂಧಿಸಿ (ಈ ತಪ್ಪುಕೆಲಸ ಮಾಡಿದವನನ್ನು ಬಂಧಿಸಿ)

ಹೀಗೆಯೇ ಮೂಲದಲ್ಲಿ ಒಂದೇ ಅರ್ಥವಿರುವ, ಆದರೆ ನಂತರದ ದಿನಗಳಲ್ಲಿ ಭಿನ್ನ ಅರ್ಥಗಳನ್ನು ಪಡೆದಿರುವ ಶಬ್ದಗಳ ಪಟ್ಟಿ ಮಾಡಿ.

## ಪೂರಕ ಓದು

©KTBS Not to be republished

೧. ಎಸ್. ಜಿ. ನರಸಿಂಹಾಚಾರ್ ಅವರು ರಚಿಸಿದ 'ಗೋವಿನ ಹಾಡು' ಶೀರ್ಷಿಕೆಯ 'ನೀನಾರಿಗಾದೆಯೋ ಎಲೆ ಮಾನವಾ' ಈ ಹಾಡನ್ನು ಸಂಗ್ರಹಿಸಿ, ಬಿದಿರು ಪದ್ಯದೊಂದಿಗೆ ಹೋಲಿಸಿ ನೋಡಿರಿ.

೨. ವಿವಿಧ ತತ್ತ್ವಪದಕಾರರ ತತ್ತ್ವಪದಗಳನ್ನು ಸಂಗ್ರಹಿಸಿ ಓದಿರಿ.

# ೧೫. ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು

E5W6M2

**ರಾಘವಾಂಕ–**

**ಪ್ರವೇಶ:** ಉತ್ತಮ ಕಾವ್ಯಗಳ ಅಧ್ಯಯನದಿಂದ ಜ್ಞಾನ ಹೆಚ್ಚುವುದರೊಂದಿಗೆ ಮಾನಸಿಕ ನೆಮ್ಮದಿ, ಸುಖ, ಶಾಂತಿ ಲಭಿಸುತ್ತದೆ. ಅದರಿಂದ ಮಹೋನ್ನತ ಸಂಸ್ಕೃತಿಯ ಪರಿಚಯವಾಗಿ ಮನಸ್ಸು ಸಂಸ್ಕಾರಗೊಂಡು ಗೌರವಯುತ ಬದುಕನ್ನು ನಡೆಸಲು ಸಾಧ್ಯವಾಗುತ್ತದೆ. ನಾಡಿನ ಪ್ರಾಕೃತಿಕ ಸೊಬಗು, ಸಂಸ್ಕೃತಿಯ ತನ್ಮಯತೆ ಚಾರಿತ್ರಿಕ ಅಭಿಮಾನ ಇತ್ಯಾದಿ ಮೌಲಿಕಾಂಶಗಳ ಅರಿವು ಅಗತ್ಯ ಅಷ್ಟೇ ಅಲ್ಲದೆ ಅನಿವಾರ್ಯ ಕೂಡ. ಅದಕ್ಕೆಂದೇ **"ಕಾವ್ಯಶಾಸ್ತ್ರ ವಿನೋದೇನ ಕಾಲೋ ಗಚ್ಛತಿ ಧೀಮತಾಂ"** ಎಂದು ಹಿರಿಯರು ಹೇಳಿದ್ದು. ಪುರಾಣ ಇತಿಹಾಸಗಳಲ್ಲಿ ತ್ಯಾಗ, ಬಲಿದಾನವನ್ನು ಮಾಡಿದವರ ನೂರಾರು ಕಥೆಗಳಿವೆ. ಕನ್ನಡ ಸಾಹಿತ್ಯದಲ್ಲೂ ಇಂತಹ ಕಥೆಗಳು ಹೇರಳವಾಗಿವೆ. "ಸತ್ಯವೇ ನಮ್ಮ ತಾಯಿ ತಂದೆ, ಸತ್ಯವೇ ನಮ್ಮ ಬಂಧು–ಬಳಗ" ಎಂದು ಹೇಳಿ ಅದರಂತೆ ನಡೆದ 'ಪುಣ್ಯಕೋಟಿ'ಯ ಕಥೆ ಜನಜನಿತವಾಗಿದೆ. ನಡುಗನ್ನಡ ಕಾಲದ ಕವಿ ರಾಘವಾಂಕ ಸತ್ಯಪಾಲನೆಗಾಗಿ ಸಮಸ್ತವನ್ನೂ ತ್ಯಜಿಸಿದ 'ಹರಿಶ್ಚಂದ್ರ'ನ ಭವ್ಯ ಕಥೆಯನ್ನಾಧರಿಸಿ ರೋಚಕ ಕಾವ್ಯ ರಚಿಸಿ ಧನ್ಯನಾಗಿದ್ದಾನೆ.

©KTBS Not to be republished



ಸಂದ ಕಾರಿರುಳು ಕನ್ನೆಯರು ಹಗಲಂ ನೋಡ
ಲೆಂದು ಬಂದರೊ ಸುರಾಸುರರಬುಧಿಯಂ ಮಥಿಸು
ವಂದು ಹೊಸ ವಿಷದ ಹೊಗೆ ಹೊಯ್ದು ಕಗ್ಗನೆ ಕಂದಿ ಜಲದೇವಿಯರು ಮನದಲಿ
ನೊಂದು ಮಾನಿಸರಾದರೋ ಕಮಲಜಂ ನೀಲ
ದಿಂದ ಮಾಡಿದ ಸಾಲಭಂಜಿಕೆಗಳೊದವಿ ಜೀ
ವಂದಳೆದವೋ ಎನಿಪ್ಪಂದದಿಂ ಬಂದರಂಗನೆಯರವನೀಶನೆಡೆಗೆ ॥ ೧ ॥

ಮಾಯದಬಲೆಯರು ಕಾಣುತ್ತ ಮಝು ಭಾಪದಟ
ರಾಯ ಮಝುರೇ ರಾಯ ರಾಯದಳವುಳಕಾಱ
ರಾಯಕಂಟಕ ರಾಯಜಗಜಟ್ಟಿ ರಾಯದಲ್ಲಣ ರಾಯಕೋಳಾಹಳ
ರಾಯಭುಜಬಲಭೀಮ ರಾಯಮರ್ಧನ ರಾಯ
ಜೀಯ ಸ್ಥಿರಂಜೀವಯೆಂದು ಕೀರ್ತಿಸಿ ಗಾಣ
ನಾಯಕಿಯರೊಲಿದು ದಂಡಿಗೆವಿಡಿದು ಪೊಡಮಟ್ಟು ಹಾಡಲುದ್ಯೋಗಿಸಿದರು ॥ ೨ ॥

ಎಕ್ಕಲವ ಬಳಿಬಿಡಿದು ಸುತ್ತಿದಾಸಱನು ಮುನಿ
ರಕ್ಕಸನ ಬನಕೆ ಬಂದಂಜಿಕೆಯನೆರಡನೆಯ
ಮುಕ್ಕಣ್ಣನೆನಿಪ ಗುರುವಾಜ್ಞೆಗೆಟ್ಟಳಲನಲ್ಲದೆ ಕನಸ ಕಂಡ ಭಯವ
ಮಿಕ್ಕು ಮಱೆವಂತಡಸಿ ಕವಿವ ಗತಿಗಳ ಸೊಗಸ
ನಕ್ಕಿಸದೆ ಸಮಯೋಚಿತದ ಪಸಾಯಕ್ಕೆ ಮನ
ವುಕ್ಕಿ ಸರ್ವಾಭರಣಮಂ ಗಾಣರಾಣಿಯರಿಗಿತ್ತನು ಹರಿಶ್ಚಂದ್ರನು ॥ ೩ ॥

ಬಡತನದ ಹೊತ್ತಾನೆ ದೊರಕಿ ಫಲವೇನು ನೀ
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ
ಯಡಸಿ ಕೆಡೆದಿಹ ಹೊತ್ತು ರಂಭೆ ದೊರೆಕೊಂಡಲ್ಲಿ ಫಲವೇನು ಸಾವ ಹೊತ್ತು
ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು
ಹೊಡೆದು ಬೆಂಡಾಗಿ ಬೀಳ್ವೆಮಗೆ ನೀನೊಲಿದು ಮಣಿ
ದೊಡಿಗೆಗಳನಿತ್ತು ಫಲವೇನು ಭೂಪಾಲ ಹೇಳೆನುತ ಮತ್ತಿಂತೆಂದರು ॥ ೪ ॥

ಕಡಲೊಳಾಳ್ವಂಗೆ ತೆಪ್ಪವನು ದಾರಿದ್ರಂಗೆ
ಕಡವರವನತಿರೋಗಿಗಮೃತಮಂ ಕೊಟ್ಟಡವ
ರಡಿಗಡಿಗದಾವ ಹರುಷವನೆಯ್ದು ತಿಪ್ಪರವರಂ ಪೋಲ್ವರೀ ಪೊತ್ತಿನ
ಸುಡುಸುಡುನೆ ಸುಡುವ ಬಿಱುಬಿಸಿಲ ಸೆಕೆಯುಸುರ ಬಿಸಿ
ಹೊಡೆದುದುರಿಹತ್ತಿ ಬಾಯ್ ಬತ್ತಿ ಡಗೆ ಸುತ್ತಿ ಸಾ
ವಡಸುತಿದೆ ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಭೂಭುಜಯೆಂದರು ॥ ೫ ॥

ರವಿಕುಲದ ಪೀಳಿಗೆಯೊಳೊಗೆದ ರಾಯರ್ಗೆ ಪ
ಟ್ಟವ ಕಟ್ಟುವಂದಿದಿಲ್ಲದಡರಸುತನ ಸಲ್ಲ
ದವನಿಯೊಳು ಯುದ್ಧರಂಗದೊಳಿದಂ ಕಂಡ ಹಗೆಗಳು ನಿಲ್ಲರಿದಱ ಕೆಳಗೆ
ಕವಿವ ನೆಳಲೊಳಗಾವನಿರ್ದನಾತಂಗೆ ತಾಂ
ತವಿಲೆಡರು ಬಡತನಂ ರೋಗವಪಕೀರ್ತಿ ಪರಿ
ಭವ ಭಯಂ ಹರೆವುದಿದನಱೆದಱೆದು ಸತ್ತಿಗೆಯ ಕೊಡಬಹುದೆ ಹೇಳೆಂದನು ॥ ೬ ॥

©KTBS
Not to be republished

ಅನುನಯದೊಳೆಲ್ಲವಂ ಕೊಡಬಹುದು ಬಿಡಬಹುದು
ಜನನಿಯಂ ಜನಕನಂ ನಲ್ಲಳಂ ದೈವವಂ
ಮನವಾರೆ ನಂಬಿ ನಚ್ಚಿರ್ದ ಪರಿವಾರಮಂ ಕೊಡುವ ಬಿಡುವತಿಕಲಿಗಳು
ಜನರೊಳಗೆ ಜನಿಸರೆಂದೆನಲು ನೀನೀಗ ಪೇ
ಳ್ದನಿತಱೊಳು ಬೇಡಿದಡೆ ಕೊಡಬೇಡ ಕೊಡೆಯನೀ
ಯೆನೆ ಲೋಭವೇಕರಸ ಎನಲಿದಲ್ಲದೆ ಬೇಱೆ ಮಾತೆಪಿತರಿಲ್ಲೆಂದನು ॥ ೭ ॥

ಲೋಗರಿಗೆ ಕೊಡಬಾರದಾಗಿ ಸತಿ ವಂಶಗತ
ವಾಗಿ ಬಂದುದಱಿಂದ ತಂದೆ ಪಟ್ಟವ ಕಟ್ಟು
ವಾಗಲರ್ಚಿಸಿಕೊಂಬುದಾಗಿ ದೈವಂ ನೆಳಲ ತಂಪನೊಸೆದೀವುದಾಗಿ
ಸಾಗಿಸುವ ತಾಯ್ ಧುರದೊಳರಿಗಳಂ ನಡುಗಿಸುವು
ದಾಗಿ ಚತುರಂಗಬಲವೆನಿಸಿತೀ ಛತ್ರವೆಂ
ಬಾಗಳಿದನಱಿದಱಿದು ಬೇಡುವರನತಿಮರುಳರೆನ್ನರೇ ಮೂಜಗದೊಳು ॥ ೮ ॥

## ಪದ ವಿಂಗಡಣೆ

ಪದ್ಯ –೧. ಸಂದ ಕಾರಿರುಳು ಕನ್ನೆಯರು ಹಗಲಂ ನೋಡಲ್ + ಎಂದು ಬಂದರೊ ಸುರಾಸುರರ್ + ಅಬುಧಿಯಂ ಮಥಿಸುವಂದು ಹೊಸವಿಷದ ಹೊಗೆ ಹೊಯ್ದು ಕಗ್ಗನೆ ಕಂದಿ ಜಲದೇವಿಯರು ಮನದಲಿ ನೊಂದು ಮಾನಿಸರ್ + ಆದರೋ ಕಮಲಜಂ ನೀಲದಿಂದ ಮಾಡಿದ ಸಾಲಭಂಜಿಕೆಗಳ್ + ಒದವಿ ಜೀವಂ + ತಳೆದವೋ ಎನಿಪ್ಪ + ಅಂದದಿಂ ಬಂದರ್ + ಅಂಗನೆಯರ್ + ಅವನೀಶನ್ + ಎಡೆಗೆ

ಪದ್ಯ –೨. ಮಾಯದ + ಅಬಲೆಯರು ಕಾಣುತ್ತ ಮಝು ಭಾಪು + ಅದಟರಾಯ ಮಝುರೇ ರಾಯ ರಾಯದಳವುಳಕಾಱ ರಾಯಕಂಟಕ ರಾಯಜಗಜಟ್ಟಿ ರಾಯದಲ್ಲಣ ರಾಯಕೋಳಾಹಳ ರಾಯಭುಜಬಲಭೀಮ ರಾಯಮರ್ಧನ ರಾಯ ಜೀಯ ಸ್ಥಿರಂಜೀವ + ಎಂದು ಕೀರ್ತಿಸಿ ಗಾಣನಾಯಕಿಯರ್ + ಒಲಿದು ದಂಡಿಗೆವಿಡಿದು ಪೊಡಮಟ್ಟು ಹಾಡಲ್ + ಉದ್ಯೋಗಿಸಿದರು

ಪದ್ಯ –೩. ಎಕ್ಕಲವ ಬಳಿಬಿಡಿದು ಸುತ್ತಿದ + ಆಸಱನು ಮುನಿ ರಕ್ಕಸನ ಬನಕೆ ಬಂದ + ಅಂಜಿಕೆಯನ್ + ಎರಡನೆಯ ಮುಕ್ಕಣ್ಣನ್ + ಎನಿಪ ಗುರುವಾಜ್ಞೆಗೆಟ್ಟ + ಅಳಲನ್ + ಅಲ್ಲದೆ ಕನಸ ಕಂಡ ಭಯವ ಮಿಕ್ಕು ಮಱೆವಂತೆ + ಅಡಸಿ ಕವಿವ ಗತಿಗಳ ಸೊಗಸನಕ್ಕಿಸದೆ ಸಮಯೋಚಿತದ ಪಸಾಯಕ್ಕೆ ಮನವುಕ್ಕಿ ಸರ್ವಾಭರಣಮಂ ಗಾಣರಾಣಿಯರಿಗೆ + ಇತ್ತನು ಹರಿಶ್ಚಂದ್ರನು

©KTBS Not to be republished

ಪದ್ಯ –೪. ಬಡತನದ ಹೊತ್ತು + ಆನೆ ದೊರಕಿ ಫಲವೇನು ನೀರ್ + ಅಡಸಿರ್ದ ಹೊತ್ತು + ಆಜ್ಯ ದೊರಕಿ ಫಲವೇನು ರುಜೆ + ಅಡಸಿ ಕೆಡೆದಿಹ ಹೊತ್ತು ರಂಭೆ ದೊರೆಕೊಂಡಲ್ಲಿ ಫಲವೇನು ಸಾವ ಹೊತ್ತು ಪೊಡವಿಯ + ಒಡೆತನ ದೊರಕಿ ಫಲವೇನು ಕಡುವಿಸಿಲು ಹೊಡೆದು ಬೆಂಡಾಗಿ ಬೀಳ್ವ + ಎಮಗೆ ನೀನ್ + ಒಲಿದು ಮಣಿದೊಡಿಗೆಗಳನ್ + ಇತ್ತು ಫಲವೇನು ಭೂಪಾಲ ಹೇಳ್ + ಎನುತ ಮತ್ತೆ + ಇಂತೆಂದರು

ಪದ್ಯ –೫. ಕಡಲೊಳ್ + ಆಳ್ವಂಗೆ ತೆಪ್ಪವನು ದಾರಿದ್ರಂಗೆ ಕಡವರವನ್ + ಅತಿರೋಗಿಗೆ + ಅಮೃತಮಂ ಕೊಟ್ಟಡೆ + ಅವರ್ + ಅಡಿಗಡಿಗೆ + ಅದಾವ ಹರುಷವನೆಯ್ದು ತಿಪ್ಪರ್ + ಅವರಂ ಪೋಲ್ವರ್ + ಈ ಪೊತ್ತಿನ ಸುಡುಸುಡುನೆ ಸುಡುವ ಬಿಱುಬಿಸಿಲ ಸೆಕೆ + ಉಸುರ ಬಿಸಿ ಹೊಡೆದುದು + ಉರಿಹತ್ತಿ ಬಾಯ್ ಬತ್ತಿ ಡಗೆ ಸುತ್ತಿ ಸಾವ್ + ಅಡಸುತಿದೆ ನಿನ್ನ ಮುತ್ತಿನ ಸತ್ತಿಗೆಯನ್ + ಇತ್ತು ಸಲಹು ಭೂಭುಜ + ಎಂದರು

ಪದ್ಯ –೬. ರವಿಕುಲದ ಪೀಳಿಗೆಯೊಳ್ + ಒಗೆದ ರಾಯರ್ಗೆ ಪಟ್ಟವ ಕಟ್ಟುವಂದು + ಇದಿಲ್ಲದಡೆ + ಅರಸುತನ ಸಲ್ಲದು + ಅವನಿಯೊಳು ಯುದ್ಧರಂಗದೊಳ್ + ಇದಂ ಕಂಡ ಹಗೆಗಳು ನಿಲ್ಲರ್ + ಅದಱ ಕೆಳಗೆ ಕವಿವ ನೆಳಲೊಳಗೆ + ಆವನಿರ್ದನ್ + ಆತಂಗೆ ತಾಂತವಿಲ್ + ಎಡರು ಬಡತನಂ ರೋಗ + ಅಪಕೀರ್ತಿ ಪರಿಭವ ಭಯಂ ಹರೆವುದು + ಇದನ್ + ಅಱೆದಱೆದು ಸತ್ತಿಗೆಯ ಕೊಡಬಹುದೆ ಹೇಳ್ + ಎಂದನು

ಪದ್ಯ –೭. ಅನುನಯದೊಳ್ + ಎಲ್ಲವಂ ಕೊಡಬಹುದು ಬಿಡಬಹುದು ಜನನಿಯಂ ಜನಕನಂ ನಲ್ಲಳಂ ದೈವವಂ ಮನವಾರೆ ನಂಬಿ ನಚ್ಚಿರ್ದ ಪರಿವಾರಮಂ ಕೊಡುವ ಬಿಡುವ + ಅತಿಕಲಿಗಳು ಜನರೊಳಗೆ ಜನಿಸರ್ ಎಂದೆನಲು ನೀನೀಗ ಪೇಳ್ದ + ಅನಿತಱೊಳು ಬೇಡಿದಡೆ ಕೊಡಬೇಡ ಕೊಡೆಯನ್ + ಈಯೆನೆ ಲೋಭವೇಕೆ + ಅರಸ ಎನಲ್ + ಇದಲ್ಲದೆ ಬೇಱೆ ಮಾತೆಪಿತರಿಲ್ಲ + ಎಂದನು

ಪದ್ಯ –೮. ಲೋಗರಿಗೆ ಕೊಡಬಾರದಾಗಿ ಸತಿ ವಂಶಗತವಾಗಿ ಬಂದುದಱೆಂದ ತಂದೆ ಪಟ್ಟವ ಕಟ್ಟುವಾಗಲ್ + ಅರ್ಚಿಸಿಕೊಂಬುದಾಗಿ ದೈವಂ ನೆಳಲ ತಂಪನ್ + ಒಸೆದು + ಈವುದಾಗಿ ಸಾಗಿಸುವ ತಾಯ್ ಧುರದೊಳ್ + ಅರಿಗಳಂ ನಡುಗಿಸುವುದಾಗಿ ಚತುರಂಗಬಲ + ಎನಿಸಿತು + ಈ ಛತ್ರವೆಂಬಾಗಳ್ + ಇದನಱೆದಱೆದು ಬೇಡುವರನ್ + ಅತಿಮರುಳರ್ + ಎನ್ನರೇ ಮೂಜಗದೊಳು

## ಪೂರ್ವ ಕಥೆ

ಒಮ್ಮೆ ದೇವ ಸಭೆ ನಡೆದಿದ್ದಾಗ ಇಂದ್ರನು "ಭೂಲೋಕದಲ್ಲಿ ಸತ್ಯವಂತ ಅರಸ ಯಾರು?" ಎಂದು ವಸಿಷ್ಠರಲ್ಲಿ ವಿಚಾರಿಸಿದನು. ಆಗ ಅವನು "ಅಯೋಧ್ಯೆಯನ್ನಾಳುತ್ತಿರುವ ಹರಿಶ್ಚಂದ್ರನ ಹೆಸರನ್ನು ಹೇಳಿ ಆತನ ಸತ್ಯನಿಷ್ಠೆಯನ್ನು ವಿವರಿಸಿದನು. ವಸಿಷ್ಠ ಹೇಳಿದ್ದನ್ನೆಲ್ಲ ವಿರೋಧಿಸುವ ಸ್ವಭಾವದವನಾದ ವಿಶ್ವಾಮಿತ್ರ ಅದನ್ನು ಅಲ್ಲಗಳೆದನು. ಸಾಲದ್ದಕ್ಕೆ **ಹರಿಶ್ಚಂದ್ರನ ಬಾಯಿಂದ ಸುಳ್ಳು ಹೇಳಿಸಿಯೇ ಸಿದ್ಧ** ಎಂದು

©KTBS Not to be republished

ಪಂಥವೊಡ್ಡಿದನು. ಹರಿಶ್ಚಂದ್ರನು ಲೋಕ ಕಲ್ಯಾಣಾರ್ಥವಾಗಿ ತನ್ನ ಅರಮನೆಯಲ್ಲಿ ನಡೆಸುತ್ತಿದ್ದ ಬಹು ಸುವರ್ಣಯಾಗಶಾಲೆಗೆ ವೇಷಮರೆಸಿಕೊಂಡು ಬಂದು ಬಹುದೊಡ್ಡ ದಾನವನ್ನು ಕೇಳಿ ಕೊಡಲಾಗದ ಸ್ಥಿತಿಗೆ ಆತನನ್ನು ತಂದೊಡ್ಡಿ ಸತ್ಯವ್ರತಕ್ಕೆ ಭಂಗ ತರಬೇಕೆಂದು ವಿಶ್ವಾಮಿತ್ರನು ಯೋಚಿಸಿದನು. ಆದರೆ ಹರಿಶ್ಚಂದ್ರ ಆತ ಕೇಳಿದಷ್ಟೆಲ್ಲವನ್ನೂ ಭಯಭಕ್ತಿಯಿಂದ ನೀಡಿ ಸೈ ಎನಿಸಿಕೊಂಡನು. ಹೀಗೆ ಮೊದಲ ಪ್ರಯತ್ನದಲ್ಲೇ ಎಡವಿದ ವಿಶ್ವಾಮಿತ್ರ ಹೇಗಾದರೂ ಮಾಡಿ ಆತನನ್ನು ಮಣಿಸಲೇ ಬೇಕೆಂದುಕೊಂಡು ಇನ್ನೊಂದು ತಂತ್ರವನ್ನು ಹೂಡಿದನು. ಬೇಟೆಯ ನೆವದಲ್ಲಿ ಹರಿಶ್ಚಂದ್ರನನ್ನು ಕಾಡಿನಲ್ಲಿ ಅಲೆದಾಡಿಸಿ ಕಾಡಬೇಕೆಂದು ಯೋಚಿಸಿದನು. ವಿವಿಧ ಮೃಗಪಕ್ಷಿಗಳನ್ನು ಸೃಷ್ಟಿಸಿ ನಾಡಿನ ಬೆಳೆಗಳನ್ನು ಕೆಡಿಸುವಂತೆ ಮಾಡಿದರೆ ರೈತಾಪಿ ಜನರು ರಾಜನಿಗೆ ಮೊರೆಯಿಡುತ್ತಾರೆ. ಆಗ ಹರಿಶ್ಚಂದ್ರ ಬೇಟೆಗೆಂದು ಕಾಡಿಗೆ ಬಂದೇ ಬರುತ್ತಾನೆ ಎಂದು ನಿಶ್ಚಯಿಸಿದ ವಿಶ್ವಾಮಿತ್ರ ಕೂಡಲೇ ಕಾರ್ಯಪ್ರವೃತ್ತನಾದನು. ಆತನ ತಪಃಪ್ರಭಾವದಿಂದ ಕಣ್ಮುಚ್ಚಿ ತೆರೆಯುವುದರೊಳಗೆ ನಾನಾವಿಧವಾದ ಪ್ರಾಣಿಪಕ್ಷಿಗಳು ಹುಟ್ಟಿಕೊಂಡು ನಾಡಿನ ಕೃಷಿಭೂಮಿಗೆ ಲಗ್ಗೆಯಿಟ್ಟವು. ಇದರಿಂದಾಗಿ ಎಲ್ಲೆಲ್ಲೂ ಹಾಹಾಕಾರವೆದ್ದಿತು. ರೈತರೆಲ್ಲರು ಅರಮನೆಗೆ ಬಂದು ತಮ್ಮ ದೊರೆಯ ಮುಂದೆ ಗೋಳಿಟ್ಟರು. ನಾಡಿನ ಅನ್ನದಾತರ ಮೊರೆಯನ್ನು ತಾಳ್ಮೆಯಿಂದ ಆಲಿಸಿದ ಹರಿಶ್ಚಂದ್ರನು ತನ್ನ ಹೆಂಡತಿ, ಮಗ ಹಾಗೂ ಪರಿವಾರದೊಂದಿಗೆ ಬೇಟೆಗೆ ಹೊರಡಲು ನಿರ್ಧರಿಸಿದನು. ಕಾಡುದಾರಿಯಲ್ಲಿ ಸಿಗುವ ವಸಿಷ್ಠಾಶ್ರಮಕ್ಕೆ ಭೇಟಿ ನೀಡಿ ಗುರುಗಳ ಆಶೀರ್ವಾದ ಪಡೆದನು. ಅವರಿಂದ “ಅಯ್ಯಾ ನಿನ್ನ ಕುಲಾಚಾರಕ್ಕೆ ಧಕ್ಕೆಯಾಗದಂತೆ ನಡೆದುಕೊ. ಸತ್ಯನಿಷ್ಠೆಯನ್ನು ಉಳಿಸಿಕೊ. ಮುಂದೆ ದಾರಿಯಲ್ಲಿ ಸಿಗುವ ವಿಶ್ವಾಮಿತ್ರನ ಆಶ್ರಮ ಪ್ರದೇಶಕ್ಕೆ ತಪ್ಪಿಯೂ ಕಾಲಿರಿಸಬೇಡ” ಎಂಬ ಎಚ್ಚರಿಕೆಯ ಸೂಚನೆಯನ್ನೂ ಪಡೆದು ಪರಿವಾರದೊಂದಿಗೆ ಬೇಟೆಗೆಹೊರಟನು. ಬೇಟೆಯನ್ನು ಆಡುತ್ತ ಅವನು ಅವನಿಗೆ ಅರಿವಿಲ್ಲದಂತೆ ವಿಶ್ವಾಮಿತ್ರನ ತಪೋವನವನ್ನು ಪ್ರವೇಶಿಸಿದನು. ಆಗ ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಪರೀಕ್ಷಿಸಲು ತನ್ನ ಕೋಪದಿಂದ ಗಾನ ರಾಣಿಯರನ್ನು ಸೃಷ್ಟಿಸಿ, “ಸರ್ವಬುದ್ಧಿಗಳನ್ನು ಬಳಸಿ ಅವನನ್ನು ಮರುಳು ಮಾಡುತ್ತಿರಿ” ಎಂದು ಹೇಳಿ, ಹರಿಶ್ಚಂದ್ರನ ಬಳಿಗೆ ಕಳುಹಿಸಿದನು. ಮುಂದೇನಾಯಿತೆಂಬುದನ್ನು ಇಲ್ಲಿ ಆಯ್ಕೆ ಮಾಡಿದ ಪದ್ಯಗಳು ತಿಳಿಸುತ್ತವೆ.

©KTBS Not to be republished

## ಕೃತಿಕಾರರ ಪರಿಚಯ

**ರಾಘವಾಂಕ** ನಡುಗನ್ನಡದ ಅಗ್ರಮಾನ್ಯ ಕವಿಗಳಲ್ಲಿ ಒಬ್ಬ (**ಸಾ. ಶ. ಸುಮಾರು 1225**). **ಹಂಪಿ ಕ್ಷೇತ್ರದವನು** ಪಂಪಾಪತಿ ವಿರೂಪಾಕ್ಷನ ಪರಮಭಕ್ತ. **ರಗಳೆ** ಕವಿಯೆಂದೆನಿಸಿದ ಹರಿಹರನ ಸೋದರಳಿಯ ಮತ್ತು ಶಿಷ್ಯ. ವಿರೂಪಾಕ್ಷನ ಪರಮಭಕ್ತ. **ಹರಿಶ್ಚಂದ್ರಕಾವ್ಯ, ಸಿದ್ಧರಾಮಚಾರಿತ್ರ, ವೀರೇಶ್ವರಚರಿತೆ, ಸೋಮನಾಥಚರಿತೆ, ಶರಭಚಾರಿತ್ರ, ಹರಿಹರ ಮಹತ್ವ** ಮುಂತಾದ ಕಾವ್ಯಗಳನ್ನು ಷಟ್ಪದಿ ಛಂದಸ್ಸುಗಳಲ್ಲಿ ರಚಿಸಿದ್ದಾನೆ. **ಉಭಯಕವಿ ಕಮಲ ರವಿ, ಕವಿ ಶರಭ ಭೇರುಂಡ, ಷಟ್ಪದಿ ಬ್ರಹ್ಮ** ಅಭಿದಾನಗಳನ್ನು ಹೊಂದಿದ್ದು ಷಟ್ಪದಿ ಕಾವ್ಯದ ನಿರ್ಮಾಪಕನೆಂಬ ಅಗ್ಗಳಿಕೆಗೆ ಪಾತ್ರನಾದ ಕವಿ.

ರಾಘವಾಂಕ ಕವಿ ವಿರಚಿತವಾದ ಪ್ರಸ್ತುತ ಪದ್ಯಭಾಗವನ್ನು ಶ್ರೀ ಟಿ. ಎಸ್. ವೆಂಕಣ್ಣಯ್ಯ ಅವರು ಸಂಪಾದಿಸಿರುವ **‘ಹರಿಶ್ಚಂದ್ರ ಕಾವ್ಯ ಸಂಗ್ರಹ’** ಗ್ರಂಥದ **‘ವಿಶ್ವಾಮಿತ್ರಾಶ್ರಮ ಪ್ರವೇಶ’** ಭಾಗದಿಂದ (ಪದ್ಯ 26 ರಿಂದ 34) ಆಯ್ದು ನಿಗದಿಪಡಿಸಲಾಗಿದೆ.

## ಆಶಯ ಭಾವ

ಹರಿಶ್ಚಂದ್ರ ಕಾವ್ಯದಲ್ಲಿ ಸತ್ಯಪರಿಪಾಲನೆಯ ಪರಾಕಾಷ್ಠೆಯನ್ನು ಕಾಣುತ್ತೇವೆ. "ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರನು" ಎಂದು ಸಾಧಿಸಿ ತೋರಿದ ಮಹಾ ಸತ್ಯಸಂಧ ಹರಿಶ್ಚಂದ್ರನಿಗೆ ಅವನ ರಾಣಿ ಚಂದ್ರಮತಿಯೇ ನೈತಿಕ ಸ್ಫೂರ್ತಿಯಾಗಿದ್ದಳು. ಬೇಟೆಗೆಂದು ಪರಿವಾರದೊಂದಿಗೆ ಅರಣ್ಯಕ್ಕೆ ತೆರಳಿದ ಹರಿಶ್ಚಂದ್ರನು ಅರಿಯದೆ ವಿಶ್ವಾಮಿತ್ರನ ಆಶ್ರಮ ಪ್ರದೇಶವನ್ನು ತುಳಿಯುತ್ತಾನೆ. ಆಗ ಅವನಿಗೆ ಗುರುವಿನಾಜ್ಞೆ ಮೀರಿ ಬಂದುದರ ಅರಿವಾಗುತ್ತದೆ. ಅದೇ ಸಮಯಕ್ಕೆ ವಿಶ್ವಾಮಿತ್ರನು ತನ್ನ ತಪೋಬಲದಿಂದ ಗಾನ ರಾಣಿಯರನ್ನು ಸೃಷ್ಟಿಸಿ, ಹರಿಶ್ಚಂದ್ರನನ್ನು ಪರೀಕ್ಷಿಸಲು ಕಳುಹಿಸುತ್ತಾನೆ. ಬೇಟೆಯಾಡಿ ಆಯಾಸಗೊಂಡಿದ್ದ ಹರಿಶ್ಚಂದ್ರನನ್ನು ಅವರು ತಮ್ಮ ಹಾಡು, ನೃತ್ಯಗಳಿಂದ ಸಂತೋಷ ಪಡಿಸುತ್ತಾರೆ. ಅವರ ಹಾಡು ಮತ್ತು ನೃತ್ಯವನ್ನು ಮೆಚ್ಚಿದ ಹರಿಶ್ಚಂದ್ರನು ತನ್ನ ಕೊರಳಿನಲ್ಲಿದ್ದ ಮುತ್ತಿನ ಹಾರವನ್ನು ಬಹುಮಾನವನ್ನಾಗಿ ಕೊಡಲು ಹೋಗುತ್ತಾನೆ. ಆದರೆ ಆ ಕನ್ಯೆಯರು ಅದನ್ನು ತಿರಸ್ಕರಿಸಿ 'ನಿನ್ನ ಮುತ್ತಿನ ಸತ್ತಿಗೆಯನ್ನು ಕೊಟ್ಟು ಸಲಹು' ಎಂದು ಕೇಳುತ್ತಾರೆ. ಆಗ ಹರಿಶ್ಚಂದ್ರ ಮತ್ತು ಕನ್ಯೆಯರ ನಡುವೆ ನಡೆಯುವ ಸಂವಾದವು ಕವಿ ರಾಘವಾಂಕನ ಕೈಯಲ್ಲಿ ಮನೋಜ್ಞವಾಗಿ ಮೂಡಿದೆ. ಜೀವನದಲ್ಲಿ ಸತ್ಯ ಹಾಗೂ ನಿಯಮ ಪರಿಪಾಲನೆ ಮೌಲ್ಯವನ್ನು ಅಳವಡಿಸಿಕೊಳ್ಳಬೇಕೆಂಬುದೇ ಈ ಪದ್ಯಪಾಠದ ಆಶಯವಾಗಿದೆ.

©KTBS Not to be republished

## ಪದಗಳ ಅರ್ಥ

ಅಡಸಿ – ಮುತ್ತಿ, ಆವರಿಸಿ, ಬಯಸಿ

ಅದಟ – ಶೂರ

ಅನಿಮಿತ್ತ – ಕಾರಣವಿಲ್ಲದೆ;

ಅಬುಧಿ – ಸಮುದ್ರ;

ಅವನಿ – ಭೂಮಿ;

ಆಜ್ಯ – ತುಪ್ಪ, ಘೃತ;

ಆಸಱ್ – ಬಳಲಿಕೆ, ದಣಿವು;

ಉದ್ಯೋಗಿಸಿದರು – ಪ್ರಯತ್ನಿಸಿದರು;

ಎಕ್ಕಲ – ಹಂದಿ;

ಒಸೆದು – ಮೆಚ್ಚಿ,

ಕಡವರ – ಚಿನ್ನ, ನಿಧಿ

ಧುರ – ಕಾಳಗ

ಪರಿಭವ – ತಿರಸ್ಕಾರ, ಸೋಲು

ಪಸಾಯ – ಉಡುಗೊರೆ, ಬಹುಮಾನ;

ಮಝು – ಕೊಂಡಾಟದ ಒಂದು ಮಾತು;

ಮೂಜಗ – ಮೂರು ಲೋಕ;

ರುಜೆ – ರೋಗ, ಖಾಯಿಲೆ;

ಸತ್ತಿಗೆ – ಛತ್ರಿ

ಸಾಲಭಂಜಿಕೆಗಳ್ – ಗೊಂಬೆಗಳು, ಪುತ್ಥಳಿಗಳು, ವಿಗ್ರಹಗಳು.

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಗಾನರಾಣಿಯರು ಅವನೀಶನನ್ನು ನೋಡಲು ಬಂದದ್ದನ್ನು ಕವಿಯು ಯಾವುದಕ್ಕೆ ಹೋಲಿಸಿದ್ದಾನೆ?

೨. ಗಾನರಾಣಿಯರಿಗೆ ಹರಿಶ್ಚಂದ್ರನು ಯಾವ ಬಹುಮಾನವನ್ನು ಕೊಟ್ಟನು?

೩. ಗಾನರಾಣಿಯರು ಹರಿಶ್ಚಂದ್ರನನನ್ನು ಏನನ್ನು ಕೊಡು ಎಂದು ಕೇಳಿದರು?

೪. ಸತ್ತಿಗೆಯು ಯಾವಾಗ ದೈವ ಸ್ವರೂಪ ಎಂದು ಹರಿಶ್ಚಂದ್ರನು ಹೇಳುತ್ತಾನೆ?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ವಿಶ್ವಾಮಿತ್ರನ ತಪೋಬಲದಿಂದ ಜನಿಸಿದ ಕನ್ಯೆಯರ ರೂಪಲಾವಣ್ಯ ಹೇಗಿತ್ತು? ವಿವರಿಸಿ.

೨. ಗಾನರಾಣಿಯರು ಏನೆಂದು ಹರಿಶ್ಚಂದ್ರನನ್ನು ಕೀರ್ತಿಸಿ ಹಾಡಿದರು? ವಿವರಿಸಿ.

೩. ಹರಿಶ್ಚಂದ್ರನು ಮುತ್ತಿನ ಸತ್ತಿಗೆಯನ್ನು ಏಕೆ ಕೊಡಲು ಸಾಧ್ಯವಿಲ್ಲ ಎಂದು ಹೇಳಿದನು?

೪. ಮುತ್ತಿನ ಸತ್ತಿಗೆಯ ವಿಶೇಷತೆ ಕುರಿತು ಹರಿಶ್ಚಂದ್ರನು ಏನು ಹೇಳುತ್ತಾನೆ?

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಸುಮಾರು ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ ಗಾನರಾಣಿಯರು ಹೇಳಿದ ಮಾತುಗಳನ್ನು ತಿಳಿಸಿ.

೨. ಹರಿಶ್ಚಂದ್ರ ಮತ್ತು ಗಾನರಾಣಿಯರ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿ ಬರೆಯಿರಿ.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಸಂದ ಕಾರಿರುಳು ಕನ್ನೆಯರು ಹಗಲಂ ನೋಡಲೆಂದು ಬಂದರೊ"

೨. "ಬಡತನದ ಹೊತ್ತಾನೆ ದೊರಕಿ ಫಲವೇನು"

೩. "ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಭೂಭುಜಯೆಂದರು"

೪. "ಅನುನಯದೊಳೆಲ್ಲವಂ ಕೊಡಬಹುದು ಬಿಡಬಹುದು"

©KTBS Not to be republished

## ಭಾಷೆಯ ಸೊಬಗು

ಕನ್ನಡದಲ್ಲಿರುವ ಶ, ಷ, ಸ ವರ್ಣಗಳಿಗೆ ಉಚ್ಚಾರದಲ್ಲಿ ವ್ಯತ್ಯಾಸಗಳಿವೆ ಎಂಬುದನ್ನು ಗಮನಿಸಿ. ಈ ಮೂರು ವರ್ಣ (ಅಥವಾ ಅಕ್ಷರ)ಗಳನ್ನು ಬಳಸುವಾಗ ನಾವು ಅರ್ಥವ್ಯತ್ಯಾಸವಾಗದಂತೆ ಎಚ್ಚರ ವಹಿಸಬೇಕು.

ಉದಾಹರಣೆಗೆ, ಶಕಲ ಎಂದರೆ ಒಂದು ಸಣ್ಣ ತುಂಡು ಅಥವಾ ಸಣ್ಣ ಭಾಗ ಎಂದು ಅರ್ಥ. ಆದರೆ ಸಕಲ ಎಂದಾಗ ಇಡಿಯಾದ, ಪೂರ್ಣವಾದ, ಎಲ್ಲ – ಎಂಬ ಅರ್ಥಗಳು ಬರುತ್ತವೆ. ಎರಡೂ ಪರಸ್ಪರ ವಿರುದ್ಧಾರ್ಥಗಳನ್ನು ಕೊಡುವ ಪದಗಳು!

ಹಾಗೆಯೇ, ಶಂಕರ ಎಂದರೆ ಮಂಗಳವನ್ನುಂಟುಮಾಡುವವನು, ಶಿವ ಎಂದು ಅರ್ಥ. ಮೂವರು ಪ್ರಮುಖ ಮತಾಚಾರ್ಯರಲ್ಲಿ ಮೊದಲನೆಯವರ ಹೆಸರು ಶಂಕರ. ಆದರೆ ಸಂಕರ ಎಂದರೆ ಬೆರಕೆ, ಕಲಬೆರಕೆ, ಒಪ್ಪತಕ್ಕದ್ದಲ್ಲದ ಮಿಶ್ರಣ ಎಂಬ ಅರ್ಥವು ಹೊಮ್ಮುತ್ತದೆ.

ಶರ್ವ ಎಂಬುದು ಶಿವ ಮತ್ತು ವಿಷ್ಣು ದೇವರುಗಳಿಗೆ ಇರುವ ಒಂದು ಹೆಸರು. ಸರ್ವ ಎಂದರೆ ಎಲ್ಲ ಅಥವಾ ಸಮಗ್ರ ಎಂದು ಅರ್ಥವಾಗುತ್ತದೆ. ದೋಷ ಎಂದರೆ ತಪ್ಪು ಎಂಬರ್ಥವು ಹೊಮ್ಮಿದರೆ ದೋಸ ಎಂಬುದು ದೋಸೆಯ ಅಪಭ್ರಂಶವಾಗಿ ಇಂದು ಬಳಕೆಯಲ್ಲಿರುವ ಪದವಾಗಿದೆ. ಹಾಗೆಯೇ ಶರ ಎಂದರೆ ಬಾಣ ಎಂಬ ಅರ್ಥವಾದರೆ ಸರ ಎಂಬುದು ಕೊರಳಮಾಲೆ ಎಂಬ ಅರ್ಥವನ್ನು ಕೊಡುತ್ತದೆ. ಹೀಗೆ ಅಕ್ಷರಗಳ ವ್ಯತ್ಯಾಸವಾದಾಗ ಅರ್ಥವ್ಯತ್ಯಾಸವಾಗುವ ಶಬ್ದಗಳನ್ನು ಪಟ್ಟಿಮಾಡಿ.

## ಸೈದ್ಧಾಂತಿಕ ಭಾಷಾಭ್ಯಾಸ

### ಷಟ್ಪದಿ

ಷಟ್ಪದಿ ಮಾತ್ರಾಗಣಕ್ಕೆ ಸೇರಿದ ಪದ್ಯ ಪ್ರಕಾರ.

ಷಟ್ಪದಿಯಲ್ಲಿ **ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ** ಎಂಬ **ಆರು** ವಿಧಗಳಿವೆ.

ಷಟ್–ಆರು, ಪದಿ–ಸಾಲು, ಆರುಸಾಲುಗಳ ಪದ್ಯ –ಷಟ್ಪದಿ.

- ೧. ೨. ೪ ಮತ್ತು ೫ನೆಯ ಸಾಲುಗಳು ಸಮನಾಗಿರುತ್ತವೆ.
- ೩ ಮತ್ತು ೬ನೆಯ ಸಾಲುಗಳು ಸಮನಾಗಿದ್ದು, ಉಳಿದ ಸಾಲುಗಳ ಒಂದೂವರೆಯಷ್ಟು ಮತ್ತು ಒಂದು ಗುರುವಿನಿಂದ ಕೂಡಿರುತ್ತದೆ.
- ೩ ಮತ್ತು ೬ನೆಯ ಸಾಲುಗಳ ಕೊನೆಯ ಅಕ್ಷರ ಲಘುವಾಗಿದ್ದರೂ ಗುರು ಎಂದೇ ಪರಿಗಣಿಸಬೇಕು.
- ಒಟ್ಟು ಪದ್ಯದ ಮೊದಲ ಮೂರು ಸಾಲುಗಳನ್ನು ಪೂರ್ವಾರ್ಧವೆಂದೂ ಕೊನೆಯ ಮೂರು ಸಾಲುಗಳನ್ನು ಉತ್ತರಾರ್ಧವೆಂದೂ ತಿಳಿಯಲಾಗುವುದು.
- ಆದಿಪ್ರಾಸ ನಿಯತವಾಗಿರುತ್ತದೆ.

### ಭಾಮಿನಿ ಷಟ್ಪದಿ

೧, ೨, ೪ ಮತ್ತು ೫ನೆಯ ಸಾಲುಗಳಲ್ಲಿ ಮೂರು ಮಾತ್ರೆಗಳ ಗಣದ ಅನಂತರ ನಾಲ್ಕು ಮಾತ್ರೆಗಳ ಗಣಗಳು ಅನುಕ್ರಮವಾಗಿ ಎರಡೆರಡು ಬರುತ್ತವೆ. ೩ ಮತ್ತು ೬ ನೆಯ ಸಾಲುಗಳಲ್ಲಿ ಮೂರು ಮಾತ್ರೆಗಳ ಗಣದ ಅನಂತರ ನಾಲ್ಕು ಮಾತ್ರೆಗಳ ಗಣಗಳು ಅನುಕ್ರಮವಾಗಿ ಮೂರು ಮೂರು ಇದ್ದು, ಕೊನೆಯಲ್ಲಿ ಒಂದು ಗುರುವಿನಿಂದ ಕೂಡಿರುತ್ತದೆ.

©KTBS Not to be republished

ಉದಾ:

| | | | |
|---|---|---|---|
| ೩ | ೪ | ೩ | ೪ |
| U U U | U U _ | _ U | U U _ |
| ವರದ | ವರಕಾ | ವೇರಿ | ನದಿಯಿಂ |

| | | | |
|---|---|---|---|
| ೩ | ೪ | ೩ | ೪ |
| U U U | _ _ | U U U | _ U U |
| ಪರಮೆ | ಗೋದಾ | ವರಿಯ | ಮಧ್ಯದ |

| | | | | | | |
|---|---|---|---|---|---|---|
| ೩ | ೪ | ೩ | ೪ | ೩ | ೪ | ಗುರು |
| U U U | _ U U | _ U | _ U U | _ U | U U _ | _ |
| ಹರವು | ಕನ್ನಡ | ದೇಶ | ವೆಂದನು | ಚಕ್ರಿ | ನೃಪತುಂ | ಗ |

ಇದರ ಉತ್ತರಾರ್ಧವೂ ಹೀಗೆಯೇ ಇರುತ್ತದೆ.

**ವಾರ್ಧಕ ಷಟ್ಪದಿ**

೧. ೨. ೪ ಮತ್ತು ೫ನೆಯ ಸಾಲುಗಳಲ್ಲಿ ೫ ಮಾತ್ರೆಗಳ ೪ ಗಣಗಳಿರುತ್ತವೆ. ೩. ಮತ್ತು ೬ ನೆಯ ಸಾಲುಗಳಲ್ಲಿ ೫ ಮಾತ್ರೆಗಳ ೬ ಗಣಗಳು ಮತ್ತು ಒಂದು ಗುರು ನಿಯತವಾಗಿರುತ್ತದೆ.

©KTBS Not to be republished

**ಉದಾ :**

| | | | |
|---|---|---|---|
| ೫ | ೫ | ೫ | ೫ |
| UUUUU | _ _ U | UUUUU | _ U _ |
| ಬಡತನದ | ಹೊತ್ತಾನೆ | ದೊರಕಿಫಲ | ವೇನುನೀ |

| | | | |
|---|---|---|---|
| ೫ | ೫ | ೫ | ೫ |
| U U _ U | _ _ U | UUUUU | _ U U U |
| ರಡಸಿರ್ದ | ಹೊತ್ತಾಜ್ಯ | ದೊರಕಿಫಲ | ವೇನುರುಜೆ |

| | | | | | | |
|---|---|---|---|---|---|---|
| ೫ | ೫ | ೫ | ೫ | ೫ | ೫ | ಗುರು |
| UUUUU | U U _ U | _ U U U | _ _ U | U U _ U | _ U _ | _ |
| ಯಡಸಿಕೆಡೆ | ದಿಹಹೊತ್ತು | ರಂಬೆದೊರೆ | ಕೊಂಡಲ್ಲಿ | ಫಲವೇನು | ಸಾವಹೊ | ತ್ತು |

ಇದರ ಉತ್ತರಾರ್ಧವೂ ಹೀಗೆಯೇ ಇರುತ್ತದೆ.

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧. ಷಟ್ಪದಿ ಎಂದರೇನು? ವಿಧಗಳಾವುವು?

೨. ಭಾಮಿನಿ ಷಟ್ಪದಿಯ ಲಕ್ಷಣವೇನು?

೩. ವಾರ್ಧಕ ಷಟ್ಪದಿಯ ಲಕ್ಷಣವನ್ನು ವಿವರಿಸಿ.

**ಆ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

೧. ಸಂದ ಕಾರಿರುಳು______________________

______________________

______________________________

______________________

______________________

______________________ ಬಂದರಂಗನೆಯರವನೀಶನೆಡೆಗೆ

೨. ಬಡತನದ ______________________

______________________

______________________________

______________________

______________________

______________________ ಮತ್ತಿಂತೆಂದರು

**ಇ) ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

ಅನುನಯದೊಳೆಲ್ಲವಂ ಕೊಡಬಹುದು ಬಿಡಬಹುದು
ಜನನಿಯಂ ಜನಕನಂ ನಲ್ಲಳಂ ದೈವವಂ
ಮನವಾರೆ ನಂಬಿ ನಚ್ಚಿರ್ದ ಪರಿವಾರಮಂ ಕೊಡುವ ಬಿಡುವತಿಕಲಿಗಳು

## ಪೂರಕ ಓದು

**ಅ) ಎಚ್. ಸಿದ್ಧಲಿಂಗಯ್ಯ** ಅವರು ಗದ್ಯರೂಪಕ್ಕೆ ಅನುವಾದಿಸಿರುವ **'ರಾಘವಾಂಕನ ಹರಿಶ್ಚಂದ್ರ ಚಾರಿತ್ರ'** ಗ್ರಂಥವನ್ನು ಅವಲೋಕಿಸಿ.

©KTBS Not to be republished

A7I4L3

# ೧೬. ಕನ್ನಡ ನಾಡು–ನುಡಿ

**ಶ್ರೀವಿಜಯ, ನಯಸೇನ, ನೇಮಿಚಂದ್ರ,**
**ಮಹಲಿಂಗರಂಗ ಮತ್ತು ಆಂಡಯ್ಯ –**

**ಪ್ರವೇಶ :** ಕನ್ನಡ ನಾಡು ನುಡಿಯ ವೈಶಿಷ್ಟ್ಯ ಕುರಿತು ಪ್ರಾಚೀನ ಕಾಲದಿಂದಲೂ ಕವಿ ಪರಂಪರೆ ಮನಸಾರೆ ಬಣ್ಣಿಸುತ್ತಾ ಬಂದಿದೆ. ಕನ್ನಡ ಸಂಸ್ಕೃತಿ, ಸೊಬಗು, ವೈಭವ, ಸೌಂದರ್ಯ ಅಪೂರ್ವ ಹಾಗೂ ಅವಿಸ್ಮರಣೀಯ. ಕನ್ನಡಿಗರ ಜಾಣ್ಮೆ, ಭೌಗೋಳಿಕ ಹರವು, ಕವಿ–ಕಾವ್ಯ ಸೌಂದರ್ಯದಿಂದ ಅದರ ಮಹತ್ತ್ವ ಇನ್ನೂ ಹೆಚ್ಚಾಗಿದೆ.

ಕಂ॥ ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್।
ಚದುರರ್ ನಿಜದಿಂ ಕುಱಿತೋ
ದದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್॥

**– ಶ್ರೀವಿಜಯ**

©KTBS Not to be republished

ಕಂ॥ ಸಕ್ಕದಮಂ ಪೇೞ್ವೊಡೆ ನೆಱೆ
ಸಕ್ಕದಮಂ ಪೇೞ್ಗೆ ಶುದ್ಧ ಕನ್ನಡದೊಳ್ ತಂ।
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ॥

**– ನಯಸೇನ**

ಉ॥ ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ।
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನೊತ್ತಿ ಗಂಟಲಂ।
ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್।
ಮುಟ್ಟಿದರೊತ್ತಿ ಮೆಟ್ಟಿದರದೇನಳವಗ್ಗಳಮೋಕವೀಂದ್ರರಾ॥

**– ನೇಮಿಚಂದ್ರ**

ಭಾ.ಷ.॥ ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡೊರೆ ಸಾಲದೇ ಸಂಸ್ಕೃತದಲಿನ್ನೇನು

**– ಮಹಲಿಂಗರಂಗ**

ಕಂ॥ ಮಲ್ಲಿಗೆಯಲ್ಲದೆ ಸಂಪಗೆ।
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದೆಂ॥
ಗಲ್ಲದೆ ಮಾವಲ್ಲದೆ ಕೌಂ।
ಗಲ್ಲದೆ ಗಿಡುಮರಗಳೆಂಬುವಿಲ್ಲಾ ನಾಡೊಳ್॥

–ಆಂಡಯ್ಯ

## ಕೃತಿಕಾರರ ಪರಿಚಯ

**ಶ್ರೀವಿಜಯ : ಶ್ರೀವಿಜಯನು** ಸಾ.ಶ. ಸುಮಾರು ೯ನೆಯ ಶತಮಾನದಲ್ಲಿ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿ ಇದ್ದನು. ಈತನು **'ಕವಿರಾಜಮಾರ್ಗ'** ಎಂಬ ಲಾಕ್ಷಣಿಕ ಗ್ರಂಥವನ್ನು ರಚಿಸಿದ್ದಾನೆ. ಇದು ಕನ್ನಡ ಭಾಷೆಯಲ್ಲಿ ಉಪಲಬ್ಧವಾಗಿರುವ ಮೊಟ್ಟ ಮೊದಲ ಕೃತಿಯಾಗಿದೆ. ಇದರಲ್ಲಿ ಕರ್ನಾಟಕದ ನಾಡು, ನುಡಿ, ಜನ ಮತ್ತು ಸಂಸ್ಕೃತಿಗಳನ್ನು ಸಮೃದ್ಧ ಮಾಹಿತಿಗಳು ದೊರೆಯುತ್ತವೆ.

* * * * *

**ನಯಸೇನ :** ನಯಸೇನನು ಸಾ.ಶ. ಸುಮಾರು ೧೨ನೆಯ ಶತಮಾನದಲ್ಲಿ **ಧಾರವಾಡ ಜಿಲ್ಲೆಯ ಮುಳುಗುಂದ**ದಲ್ಲಿ ಜೀವಿಸಿದ್ದನು. ಈತನು **'ಧರ್ಮಾಮೃತ'** ಎಂಬ ಚಂಪೂ ಕಾವ್ಯ ಕೃತಿಯನ್ನು ರಚಿಸಿದ್ದಾನೆ. ಕನ್ನಡದಲ್ಲಿ ಕಾವ್ಯ ರಚನೆಯ ಸಮಯದಲ್ಲಿ ಸಂಸ್ಕೃತ ಶಬ್ದಗಳನ್ನು ಸೇರಿಸುವ ಬಗ್ಗೆ ನಯಸೇನನು ಆಕ್ಷೇಪವನ್ನು ವ್ಯಕ್ತಪಡಿಸುತ್ತಾನೆ. ಕಾವ್ಯ ರಚಿಸುವುದಾದರೆ ಕನ್ನಡದಲ್ಲಿ ರಚಿಸಬೇಕು ಇಲ್ಲವೇ ಸಂಸ್ಕೃತದಲ್ಲಿ ರಚಿಸಬೇಕು. ಇವೆರಡನ್ನು ಬೆರೆಸಿ ಕಾವ್ಯ ರಚನೆ ಮಾಡಿದರೆ ಅದು ಎಣ್ಣೆ–ತುಪ್ಪಗಳ ಮಿಶ್ರಣದಂತೆ ಅಸ್ವಾದ ಆಗುತ್ತದೆ ಎಂಬುದು ಆತನ ಅಭಿಪ್ರಾಯ.

* * * * *

**ನೇಮಿಚಂದ್ರ : ನೇಮಿಚಂದ್ರನು** ಸಾ.ಶ. ಸುಮಾರು ೧೨ನೆಯ ಶತಮಾನದಲ್ಲಿ ಜೀವಿಸಿದ್ದನು ಈತನು **ಲೀಲಾವತೀ ಪ್ರಬಂಧ** ಹಾಗೂ **ಅರ್ಧನೇಮಿ ಪುರಾಣ** ಎಂಬ ಪ್ರಸಿದ್ಧ ಕಾವ್ಯಗಳನ್ನು ರಚಿಸಿದ್ದಾನೆ. ಈತನು ಕವಿಗಳ ಕಾವ್ಯಶಕ್ತಿಯ ಹೆಗ್ಗಳಿಕೆಯನ್ನು ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾನೆ.

* * * * *

**ಮಹಲಿಂಗರಂಗ :** ಮಹಲಿಂಗರಂಗನು ಸಾ.ಶ. ಸುಮಾರು ೧೭ ನೆಯ ಶತಮಾನದಲ್ಲಿ ಜೀವಿಸಿದ್ದನು. ಈತನು **'ಅನುಭವಾಮೃತ'** ಎಂಬ ಕೃತಿಯನ್ನು ರಚಿಸಿದ್ದಾನೆ. ಇವನ ನಿಜನಾಮ ಶ್ರೀರಂಗ. ತನ್ನ ಹೆಸರಿನೊಂದಿಗೆ ತಂದೆಯ ಹೆಸರನ್ನು ಸೇರಿಸಿ ಮಹಲಿಂಗರಂಗ ಎಂದು ಕರೆದುಕೊಂಡಿದ್ದಾನೆ. **ಈತನ ಆರಾಧ್ಯ ದೈವ ಶ್ರೀಶೈಲ ಮಲ್ಲಿಕಾರ್ಜುನ.** ಅನುಭವಾಮೃತವು ಕನ್ನಡದಿಂದ ಸಂಸ್ಕೃತಕ್ಕೆ ಅನುವಾದಗೊಂಡ ಕೃತಿಯೆಂಬುದು ಇನ್ನೊಂದು ವಿಶೇಷ.

* * * * *

©KTBS Not to be republished

**ಆಂಡಯ್ಯ :** ಆಂಡಯ್ಯನು ಸಾ.ಶ. ಸುಮಾರು ೧೩ನೇ ಶತಮಾನದಲ್ಲಿ ಕದಂಬರ ದೊರೆ ಕಾಮದೇವನ ಆಶ್ರಯದಲ್ಲಿದ್ದನು. ಇವನು **'ಕಬ್ಬಿಗರ ಕಾವ'** ಅಥವಾ **'ಕಬ್ಬಿಗರ ಕಾವಂ'** ಎಂಬ ಚಂಪೂ ಕಾವ್ಯ ಕೃತಿಯನ್ನು ರಚಿಸಿದ್ದಾನೆ. ಕನ್ನಡ ಸಾಹಿತ್ಯದಲ್ಲಿ ಕಬ್ಬಿಗರ ಕಾವಂ ಒಂದು ವಿಶಿಷ್ಟ ಕೃತಿ. ಸಂಸ್ಕೃತದ ಸಹಾಯವನ್ನು ಪಡೆಯದೆ ಕೇವಲ ತದ್ಭವ ಪದಗಳನ್ನೂ ದೇಸೀ ನುಡಿಗಳನ್ನು ಬಳಸಿಕೊಂಡು ಈ ಕೃತಿಯನ್ನು ಕಟ್ಟಲಾಗಿದೆ.

**'ಕನ್ನಡ ನಾಡು-ನುಡಿ'** ಪದ್ಯದಲ್ಲಿ ಇರುವ ಎಲ್ಲಾ ಪದ್ಯಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಬಿ.ಎಂ.ಶ್ರೀ. ಅವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ **'ಕನ್ನಡ ಬಾವುಟ'** ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಆಶಯ ಭಾವ

ನಮ್ಮ ಕನ್ನಡನಾಡು-ನುಡಿಯ ವಿಶಿಷ್ಟತೆಯನ್ನು ನಮ್ಮ ನಾಡಿನ ಕವಿಗಳು ಮನಸಾರೆ ಹೊಗಳಿರುವುದನ್ನು, ಅವರ ಭಾಷಾ ಕಾಳಜಿಯನ್ನು ಅವರ ಕಾವ್ಯಗಳಲ್ಲಿ ಕಾಣಬಹುದು. ಶ್ರೀ ವಿಜಯನು ನಮ್ಮ ಕನ್ನಡದ ಜನಪದರು ಅಕ್ಷರಸ್ತರಲ್ಲದಿದ್ದರೂ ಕಾವ್ಯ ಪ್ರಯೋಗ ಪರಿಣತರಾಗಿದ್ದರು ಎನ್ನುತ್ತಾನೆ. ನಯಸೇನನು ನಮ್ಮ ಕನ್ನಡವು ಕೆಲವು ಪಂಡಿತರಿಂದ ಸಂಸ್ಕೃತಮಯವಾಗುವುದನ್ನು ಸಹಿಸದೇ ಶುದ್ಧ ಕನ್ನಡವೇ ಇರಬೇಕೆಂದು ಬಯಸುತ್ತಾನೆ. ನೇಮಿಚಂದ್ರನು ಕನ್ನಡ ಕವಿಗಳ ಶ್ರೇಷ್ಠಕಾವ್ಯ ರಚನೆ ಬಗ್ಗೆ ಹೊಗಳಿದರೆ, ಮಹಲಿಂಗರಂಗನು ನಮ್ಮ ಕನ್ನಡವು ಹೇಗೆ ಸರಳ ಸುಂದರ ಎಂಬುದನ್ನು ಹಲವು ಉಪಮೆಗಳೊಂದಿಗೆ ಹೊಗಳಿ ಸಂಸ್ಕೃತಕ್ಕಿಂತ ಯಾವುದರಲ್ಲೂ ಕಡಿಮೆಯಿಲ್ಲ ಎನ್ನುತ್ತಾನೆ. ಆಂಡಯ್ಯನು ಕನ್ನಡನಾಡಿನ ಪ್ರಕೃತಿಯ ರಮ್ಯತೆಯನ್ನು ಮೆಚ್ಚಿ ವರ್ಣಿಸುತ್ತಾನೆ. ಹೀಗೆ ಕನ್ನಡನಾಡಿನ ಪ್ರಕೃತಿ, ಸಂಸ್ಕೃತಿ ಹಾಗೂ ಭಾಷಾ ಹಿರಿಮೆಗಳನ್ನು ವಿವಿಧ ಕವಿಗಳು ವರ್ಣಿಸಿರುವುದನ್ನು ಪರಿಚಯಿಸುವುದೇ ಪ್ರಸ್ತುತ ಪದ್ಯಪಾಠದ ಆಶಯವಾಗಿದೆ.

©KTBS Not to be republished

## ಪದ ವಿಂಗಡಣೆ

೧. ಪದನಱಿದು ನುಡಿಯಲುಂ + ನುಡಿದುದನ್ + ಅಱಿದು + ಆರಯಲುಮ್ + ಆರ್ಪರ್ + ಆ ನಾಡವರ್ಗಳ್ + ಚದುರರ್ ನಿಜದಿಂ ಕುಱಿತು + ಓದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್॥

೨. ಸಕ್ಕದಮಂ ಪೇೞ್ವೊಡೆ ನೆರೆ + ಸಕ್ಕದಮಂ ಪೇೞ್ಗೆ ಶುದ್ಧ ಕನ್ನಡದೊಳ್ ತಂದು + ಇಕ್ಕುವುದೇ ಸಕ್ಕದಮಂ + ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ॥

೩. ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ + ಮುಟ್ಟುಗೆ ಮುಟ್ಟದಿರ್ಕೆ+ ಮುಗಿಲಂ ಹರನಂ ನರನ್ + ಒತ್ತಿ ಗಂಟಲಂ + ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳ್ + ಅಲ್ತೆ ಕಟ್ಟಿದರ್ + ಮುಟ್ಟಿದರ್ + ಒತ್ತಿ ಮೆಟ್ಟಿದರ್ + ಅದೇನ್ + ಅಳವು ಅಗ್ಗಳಮೋ ಕವೀಂದ್ರರಾ॥

೪. ಸುಲಿದ ಬಾಳೆಯ ಹಣ್ಣಿನ + ಅಂದದಿ + ಕಳಿದ ಸಿಗುರಿನ ಕಬ್ಬಿನ + ಅಂದದಿ + ಅಳಿದ ಉಷ್ಣದ ಹಾಲಿನ + ಅಂದದಿ ಸುಲಭವಾಗಿ + ಇರ್ಪ + ಲಲಿತವಹ ಕನ್ನಡದ ನುಡಿಯಲಿ ತಿಳಿದು ತನ್ನೊಳು ತನ್ನ ಮೋಕ್ಷವ + ಗಳಿಸಿಕೊಂಡೊಡೆ ಸಾಲದೇ ಸಂಸ್ಕೃತದೊಳ್ + ಇನ್ನೇನು?

೫. ಮಲ್ಲಿಗೆ + ಅಲ್ಲದೆ ಸಂಪಗೆ + ಅಲ್ಲದೆ ದಾಳಿಂಬಮ್ + ಅಲ್ಲದೆ + ಒಪ್ಪುವ ಚೆಂದೆಂಗು + ಅಲ್ಲದೆ ಮಾವು + ಅಲ್ಲದೆ ಕೌಂಗು + ಅಲ್ಲದೆ ಗಿಡುಮರಗಳ್ + ಎಂಬುವು + ಇಲ್ಲ + ಆ ನಾಡೊಳ್॥

## ಪದಗಳ ಅರ್ಥ

ಅರಿದು – ತಿಳಿದು; ಆರಯ – ಪಾಲನೆ;

ಚದುರ(ದ್ಭ)–ಚತುರ(ತ್ಸ) ಜಾಣ; ಪದ– ಕ್ರಮ, ರೀತಿ;

ಪರಿಣಿತ – ತಜ್ಞ; ಮತಿಗಳು – ಪ್ರತಿಭಾವಂತರು;

ಘೃತ– ತುಪ್ಪ; ತೈಲ – ಎಣ್ಣೆ;

ಬೆರೆಸು – ಕೂಡಿಸು; ಸಕ್ಕದ(ದ್ಭ) – ಸಂಸ್ಕೃತ(ತ್ಸ);

ಅಗ್ಗಳ– ಶ್ರೇಷ್ಠ; ಕಟ್ಟುಗೆ – ಸೇತುವೆ;

ಕಡಲು – ಸಮುದ್ರ; ನರ – ಅರ್ಜುನ;

ಮುಗಿಲು – ಆಕಾಶ; ವಾಮನ(ಕುಬ್ಜ) – ವಿಷ್ಣುವಿನ ಅವತಾರಗಳೊಂದು;

ಹರ – ಶಿವ; ಮೋಕ್ಷ – ಮುಕ್ತಿ;

ಉಷ್ಣ – ಶಾಖ;

ಲಲಿತ– ಸುಂದರ, ಸರಳ;

©KTBS Not to be republished

## ಅಭ್ಯಾಸ

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಪದನರಿದು ನುಡಿಯುವವರು ಯಾರು ಎಂದು ಕವಿ ಹೇಳಿದ್ದಾನೆ?

೨. ತುಪ್ಪದೊಡನೆ ಯಾವುದನ್ನು ಬೆರೆಸಬಾರದು?

೩. ಮಹಲಿಂಗರಂಗನ ಪ್ರಕಾರ ಸುಲಿದ ಬಾಳೆಯ ಹಣ್ಣಿನಂತೆ ಇರುವ ಭಾಷೆ ಯಾವುದು?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ.**

೧. ಕನ್ನಡಿಗರ ವಿಶೇಷತೆಯನ್ನು ಶ್ರೀ ವಿಜಯ ಹೇಗೆ ಸಾರಿದ್ದಾನೆ?

೨. ಕನ್ನಡ ಮತ್ತು ಸಂಸ್ಕೃತ ಭಾಷಾ ಬಳಕೆಯ ಬಗ್ಗೆ ನಯಸೇನ ಏನು ಹೇಳುತ್ತಾನೆ?

೩. ಕವೀಂದ್ರರ ಶ್ರೇಷ್ಠತೆಯನ್ನು ನೇಮಿಚಂದ್ರನು ಹೇಗೆ ವರ್ಣಿಸಿದ್ದಾನೆ?

೪. ಕನ್ನಡ ನುಡಿಯಲ್ಲೇ ಮೋಕ್ಷ ಸಾಧನೆ ಎಂದು ಕವಿ ಮಹಲಿಂಗರಂಗ ಹೇಗೆ ಸಾಧಿಸುತ್ತಾರೆ?

೫. ಕನ್ನಡ ನಾಡಿನ ಪ್ರಾಕೃತಿಕ ವರ್ಣನೆಯನ್ನು ಆಂಡಯ್ಯ ಕವಿ ಹೇಗೆ ಸಾರಿದ್ದಾರೆ?

**ಇ) ಕೆಳಗಿನ ಪ್ರಶ್ನೆಗೆ ಎಂಟು-ಹತ್ತು ವಾಕ್ಯದಲ್ಲಿ ಉತ್ತರಿಸಿ.**

೧. ಕನ್ನಡ ನಾಡಿನ ವಿಸ್ತಾರ,ಪ್ರಾಕೃತಿಕ ಸಂಪತ್ತಿನ ಬಗ್ಗೆ ಕವಿಗಳು ಹೇಗೆ ವರ್ಣಿಸಿದ್ದಾರೆ?

೨. ಕನ್ನಡ ಭಾಷೆ ಹಾಗೂ ಸಾಹಿತ್ಯದ ಬಗ್ಗೆ ಕವಿಗಳಿಗಿರುವ ಅಭಿಮಾನ ಹೇಗೆ ವ್ಯಕ್ತ ವಾಗಿದೆ.?

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣಿತಮತಿಗಳ್.

೨. ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ.

೩. ಕಟ್ಟುಗೆ ಕಟ್ಟುದಿರ್ಕೆ ಕಡಲಂ ಕಪಿಸಂತತಿ.

೪. ಕಳಿದ ಸಿಗುರಿನ ಕಬ್ಬಿನಂದದಿ.

೫. ದಾಳಿಂಬಯಲ್ಲದೊಪ್ಪುವ ಚೆಂದೆಂಗಳಲ್ಲದೆ.

©KTBS Not to be republished

## ಭಾಷೆಯ ಸೊಬಗು

ಅರ್ಕ ಒತ್ತು ಎಂಬುದು ಕನ್ನಡಭಾಷೆಗೆ ಸಂಬಂಧಿಸಿದ ಒಂದು ವಿಶಿಷ್ಟವಾದ ಸಂಕೇತವಾಗಿದೆ. "ರ್" – ಇದನ್ನು ಅರ್ಕ ಒತ್ತು ಎಂದು ಕರೆಯಲಾಗುತ್ತದೆ. ಇದು ಒಂದು ಅಕ್ಷರದ ನಂತರ ಬಳಕೆಯಾದರೂ ಅದರ ಉಚ್ಚಾರವು ಅಕ್ಷರದ ಪ್ರಾರಂಭದಲ್ಲೇ ಬರುವುದನ್ನು ಗಮನಿಸಬಹುದು. ಉದಾಹರಣೆಗೆ "ಅರ್ಕ" ಎಂಬ ಶಬ್ದವನ್ನು "ಅರ್‌ಕ" ಎಂದು ಓದಬೇಕು. ಕ ಅಕ್ಷರದ ನಂತರ ಬರೆಯಲ್ಪಟ್ಟ ರ್ ಸಂಕೇತವು ಕ ಅಕ್ಷರದ ಹಿಂದೆ ಬರುವ ಅಕ್ಷರದ ಜೊತೆ ಅರ್ ಕಾರವಾಗಿ ಸೇರಿಕೊಳ್ಳುತ್ತದೆ. ಸೂರ್ಯ ಎಂಬ ಶಬ್ದವನ್ನು ಸೂರ್‌ಯ ಎಂದು ಓದಬೇಕು. ಕಾರ್ಯ ಎಂಬ ಶಬ್ದವನ್ನು ಕಾರ್‌ಯ ಎಂದು ಓದಬೇಕು.

ಆದರೆ ಭಾಷೆಯ ಬರವಣಿಗೆಯನ್ನು ಸರಳಗೊಳಿಸುವ ಉದ್ದೇಶದಿಂದ ಅರ್ಕ ಒತ್ತನ್ನು ಕೈಬಿಡಬೇಕು ಎಂಬ ಅಭಿಪ್ರಾಯವನ್ನು ಕೆಲವರು ಮುಂದಿಡುವುದನ್ನು ಗಮನಿಸಬಹುದು. ಸಂಕೇತಗಳ ಸಂಖ್ಯೆಯನ್ನು ಕಡಿಮೆಗೊಳಿಸಿದರೆ ಭಾಷೆಯನ್ನು ಸರಳಗೊಳಿಸಿದಂತೆ ಎಂಬ ವಾದವು ಹುರುಳಿಲ್ಲದ್ದು. ಸಂಖ್ಯೆಗಳನ್ನು ಹತ್ತು ಸಂಕೇತಗಳನ್ನು ಬಳಸಿ ಬರೆದ ಭಾರತೀಯರು ಗಣಿತದಲ್ಲಿ ಸಾಧಿಸಿದ ಪ್ರಗತಿಯನ್ನು ಕಡಿಮೆ ಸಂಕೇತಗಳನ್ನು ಬಳಸಿದ್ದ ಯುರೋಪಿಯನ್ನರು ಸಾಧಿಸಲಿಲ್ಲ ಎಂಬ ಸತ್ಯವು ನಮ್ಮ ಕಣ್ಣೆದುರೇ ಇದೆ.

ಧೈರ್ಯ ಎಂಬ ಪದವನ್ನು ಧಯ್ರ್ಯ ಎಂದು ಬರೆಯುವುದು ಸರಿಯಲ್ಲ. ಇದು ಸರಿಯಾದ ಉಚ್ಚಾರವನ್ನೂ ಪ್ರತಿನಿಧಿಸುವುದಿಲ್ಲ. ಹಾಗೆಯೇ ಓದುವುದೂ ಕಷ್ಟ. ಅರ್ಕ ಒತ್ತನ್ನು ನಿವಾರಿಸುವ ಯತ್ನದಲ್ಲಿ ಒತ್ತಕ್ಷರಗಳ ಸಂಖ್ಯೆಯು ಹೆಚ್ಚಿತು ಎಂಬುದನ್ನು ನಾವು ಮರೆಯಬಾರದು.

ಹಾಗೆಯೇ ಪೌರ್ಣಮಿ ಎಂಬುದನ್ನು ಪವ್ರ್ಣಮಿ ಎಂದು ಬರೆದಾಗ ಆಗುವ ಅಭಾಸವನ್ನು ಗಮನಿಸಿ.

ಅರ್ಕ ಒತ್ತಿಲ್ಲದೆ ಶಬ್ದಗಳನ್ನು ಬರೆಯಹೋದಾಗ ಆಗುವ ಇಂಥ ಸಮಸ್ಯೆಗಳನ್ನು ಪಟ್ಟಿಮಾಡಿ.

## ಸೈದ್ಧಾಂತಿಕ ಭಾಷಾಭ್ಯಾಸ

### ಛಂದಸ್ಸು (ಮುಂದುವರಿದುದು)

**ಅಕ್ಷರಗಣ:**

ಮೂರು ಮೂರು ಅಕ್ಷರಗಳ ಗುಂಪನ್ನು ಅಕ್ಷರಗಣವೆನ್ನುತ್ತೇವೆ. ಇಲ್ಲಿ ಮಾತ್ರೆಗಳು ಇಂತಿಷ್ಟೇ ಇರಬೇಕೆಂಬ ನಿಯಮವಿಲ್ಲ. ಹೀಗೆ ಮೂರು ಮೂರು ಅಕ್ಷರಗಳ ಲೆಕ್ಕಾಚಾರದಿಂದ ಗಣಗಳನ್ನು ವಿಂಗಡಿಸುವುದು ವೃತ್ತ ಜಾತಿಯ ಛಂದಸ್ಸುಗಳಲ್ಲಿ ಮಾತ್ರ. ಕನ್ನಡದಲ್ಲಿ ಮುಖ್ಯವಾಗಿ **ಉತ್ಪಲಮಾಲ, ಚಂಪಕಮಾಲ, ಶಾರ್ದೂಲ ವಿಕ್ರೀಡಿತ, ಮತ್ತೇಭವಿಕ್ರೀಡಿತ, ಸ್ರಗ್ಧರಾ, ಮಹಾಸ್ರಗ್ಧರಾ** ಎಂಬ ಆರು ವೃತ್ತಗಳು ಹೆಸರುವಾಸಿಯಾಗಿವೆ. ಇವುಗಳನು ಖ್ಯಾತ ಕರ್ಣಾಟಕಗಳು ಎನ್ನುತ್ತಾರೆ.

ಅಕ್ಷರಗಣದಲ್ಲಿ ಎಂಟು ವಿಧದ ಗಣಗಳು ಇವೆ. ಅವುಗಳನ್ನು ಒಂದು ಸೂತ್ರದಲ್ಲಿ ಹೇಳಬಹುದು. ಅವು ಹೀಗಿವೆ.

**ಯಮಾತಾರಾಜಭಾನಸಲಗಂ**

| | | |
|---|---|---|
| ಯಮಾತಾ | = U – – | ಯಗಣ |
| ಮಾತಾರಾ | = – – – | ಮಗಣ |
| ತಾರಾಜ | = – – U | ತಗಣ |
| ರಾಜಭಾ | = – U – | ರಗಣ |
| ಜಭಾನ | = U – U | ಜಗಣ |
| ಭಾನಸ | = – U U | ಭಗಣ |
| ನಸಲ | = U U U | ನಗಣ |
| ಸಲಗಂ | = U U – | ಸಗಣ |

**ಆರುವೃತ್ತಗಳನ್ನು ಸುಲಭವಾಗಿ ಗುರುತಿಸಲು ಇರುವ ಸ್ಥೂಲ ಸಾಧನ ಪದ್ಯ**

©KTBS Not to be republished

"ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂರಾಗೆ ಶಾರ್ದೂಲವಾ । ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘುದ್ವಂದ್ವಂ ಗುರುದ್ವಂದ್ವಮಾ । ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ । ಹರಿಣಾಕ್ಷೀ ಲಘುನಾಲ್ಕು ಚಂಪಕಮಿವಾರು **ಖ್ಯಾತಕರ್ಣಾಟಕಂ"**

ಉತ್ಪಲಮಾಲಾವೃತ್ತ

## ಉತ್ಪಲಮಾಲಾ ವೃತ್ತ

**ಲಕ್ಷಣ :–** ನಾಲ್ಕು ಸಾಲುಗಳಿರುವ ಪದ್ಯ. ಪ್ರತಿ ಸಾಲಿನಲ್ಲೂ ೨೦ ಅಕ್ಷರಗಳು ಇರುತ್ತವೆ. ಪ್ರತಿ ಸಾಲಿನಲ್ಲೂ ಭಗಣ, ರಗಣ, ನಗಣ, ಭಗಣ, ಭಗಣ, ರಗಣಗಳೂ ಕೊನೆಯಲ್ಲಿ ಲಘು, ಗುರುಗಳೂ ಬರುತ್ತವೆ.

**ಸೂತ್ರ :– ಉತ್ಪಲಮಾಲೆಯಪ್ಪುದುಭರಂನಭಭಂರಲಗಂನೆಗಳ್ದಿರಲ್**

**ಉದಾ :**

| ಭ | ರ | ನ | ಭ | ಭ | ರ | ಲ ಗು |
|---|---|---|---|---|---|---|
| – U U | – U – | U U U | – U U | – U U | U – U | U – |
| ಉತ್ಪಲ | ಮಾಲೆಯ | ಪ್ಪುದುಭ | ರಂನಭ | ಭಂರಲ | ಗಂನೆಗ | ಳ್ದಿರಲ್ |

©KTBS Not to be republished

## ಚಂಪಕಮಾಲಾ ವೃತ್ತ

**ಲಕ್ಷಣ :–** ಪ್ರತಿಪಾದಲ್ಲೂ ಇಪ್ಪತ್ತೊಂದು ಅಕ್ಷರಗಳಿವೆ. ಪ್ರತಿಪಾದವೂ **ನ, ಜ, ಭ, ಜ, ಜ, ಜ, ರ** ಎಂಬ ಗಣಗಳಿಂದ ಕೂಡಿದೆ. ಆದಿ ಪ್ರಾಸದಿಂದ ಕೂಡಿರುತ್ತದೆ.

**ಸೂತ್ರ :– ನಜಭಜಜಂಜರಂ ಬಗೆಗೊಳುತ್ತಿರೆ ಚಂಪಕ ಮಾಲೆಯೆಂದಪರ್**

**ಉದಾ :**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U – U | – U U | U – U | U – U | U – U | – U – |
| ನಜಭ | ಜಜಂ | ರಂಬಗೆ | ಗೊಳುತ್ತಿ | ರೆಚಂಪ | ಕಮಾಲೆ | ಯೆಂದಪರ್ |

### ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಖ್ಯಾತಕರ್ಣಾಟಕ ವೃತ್ತಗಳು ಯಾವುವು?

೨. ಅಕ್ಷರಗಣಗಳಲ್ಲಿ ಎಷ್ಟು ವಿಧ? ಅವುಗಳು ಯಾವುವು?

ಆ) **ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

ಅ) ಸಕ್ಕದಮಂ ಪೇಟಿಲ್ವೊಡೆ ನೆರೆ
ಸಕ್ಕದಮಂ ಪೇಟ್ಗೆ ಶುದ್ಧ ಕನ್ನಡದೊಳ್ ತಂ।

ಆ) ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿವಾಮನಕ್ರಮಂ।

ಇ) ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ

ಇ) **ಕೊಟ್ಟಿರುವ ಪದ್ಯಭಾಗಗಳನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ.**

೧. ಪದನರಿದು ________________
________________________________
________________________
________________________ ಮತಿಗಳ್

೨. ಮಲ್ಲಿಗೆ ________________
________________________________
________________________
________________________ ನಾಡೊಳ್

©KTBS
Not to be republished

## ಪಠ್ಯ ಪೂರಕ ಅಧ್ಯಯನ

# ೧. ಗುಣಸಾಗರಿ ಪಂಢರಿಬಾಯಿ

**ಡಾ. ಜಯಮಾಲಾ –**



ಭಾರತೀಯ ಚಿತ್ರರಂಗವು ಎಂದೂ ಮರೆಯದ ನಟಿಯರಲ್ಲಿ ಪಂಢರಿಬಾಯಿ ಒಬ್ಬರು. ಈಕೆ ನಟಿ ಮಾತ್ರವಲ್ಲ, ಮಹಾನ್ ವ್ಯಕ್ತಿತ್ವವುಳ್ಳವರಾಗಿದ್ದರು. ಅವರ ಬದುಕು ಮೇಣದ ಬತ್ತಿಯ ರೂಪವನ್ನು ಹೋಲುತ್ತದೆ. ತಾನು ಉರಿದು ತನ್ನ ಸುತ್ತಲ ಲೋಕವನ್ನು ಬೆಳಕುಮಾಡುವಂತೆ ಪಂಢರಿಬಾಯಿ ಅವರು ಬದುಕಿನ ಉದ್ದಕ್ಕೂ ದೊಡ್ಡ ಗುಣವನ್ನು ಮೆರೆದವರು. ಚಿತ್ರರಂಗದ ಉತ್ತುಂಗದಲ್ಲಿ ಇದ್ದಾಗಲೂ ಪಂಢರಿಬಾಯಿ ಸಾಮಾನ್ಯಳಂತೆ ಬದುಕಿದ್ದವರು. ಸಿರಿ ಬಂದ ಕಾಲದಲ್ಲಿ ತಾನು ನಡೆದು ಬಂದ ಕಷ್ಟದ ದಾರಿಯನ್ನು ಮರೆಯದವರು. ದೇವರಲ್ಲಿ ಗಾಢವಾದ ನಂಬಿಕೆಹೊಂದಿದ್ದ ಪಂಢರಿಬಾಯಿ ದುಡಿಮೆಯಲ್ಲಿ ದೇವರನ್ನು ಕಂಡವರು. ಸಿನಿಮಾ ಎಂಬ ಕನಸಿನ ಲೋಕದಲ್ಲಿ ನಟಿಸುತ್ತಿದ್ದರು. ಮಾನವೀಯತೆಯನ್ನು ನಂಬಿದ್ದರೇ ಹೊರತು ಅದನ್ನು ಮಾತ್ರ ಅವರು ನಟಿಸಿದವರಲ್ಲ. ಆದ್ದರಿಂದಲೇ ಪಂಢರಿಬಾಯಿ ಎಂದರೆ ತಟ್ಟನೆ ನೆನಪಾಗುವುದು ಅಂತಃಕರಣ ತುಂಬಿದ ತಾಯಿ ಮುಖ.

ಪಂಢರಿಬಾಯಿ ೧೯೨೮ ಸೆಪ್ಟೆಂಬರ್ ೧೮ರಂದು ಭಟ್ಕಳದಲ್ಲಿ ಜನಿಸಿದರು. ತಂದೆ ರಂಗರಾವ್ ಮತ್ತು ತಾಯಿ ಕಾವೇರಿಬಾಯಿ. ಈ ದಂಪತಿಗಳಿಗೆ ೧೮ ಜನ ಮಕ್ಕಳು. ಅವರಲ್ಲಿ ಪಂಢರಿಬಾಯಿ ಆರನೆಯವರು, ಪಂಢರಿಬಾಯಿಯವರ ಮೂಲ ಹೆಸರು ಗೀತಾ. ಪಂಢರಾಪುರದ ಪಂಢರಿನಾಥನಲ್ಲಿ ಅತೀವ ಶ್ರದ್ಧೆ ಮತ್ತು ಭಕ್ತಿಗಳನ್ನು ಹೊಂದಿದ್ದ ರಂಗರಾವ್, ಗೀತಾ ಎನ್ನುವ ಮಗಳ ಹೆಸರನ್ನು ಪಂಢರಿಬಾಯಿ ಎಂದು ಬದಲಿಸಿದರು. ಪಂಢರಿಬಾಯಿಯವರ ಬಾಲ್ಯದಲ್ಲಿ ಕಿತ್ತು ತಿನ್ನುವ ಬಡತನವಿತ್ತು. ತೊಡಲು ಕೇವಲ ಎರಡೇ ಎರಡು ಬಟ್ಟೆ ಇದ್ದವಂತೆ. ತಂದೆ ಹರಿದಾಸರಾಗಿ ಮತ್ತು ತಾಯಿ ಶಾಲಾ ಶಿಕ್ಷಕಿಯಾಗಿ ದುಡಿದು ಈ ದೊಡ್ಡ ಕುಟುಂಬವನ್ನು ಸಾಕಬೇಕಿತ್ತು. ಆದರೆ ಶ್ರದ್ಧಾಭಕ್ತಿಗಳನ್ನು ಮಾತ್ರ ಈ ಕುಟುಂಬ ಅತ್ಯಂತ ಶಿಸ್ತಿನಿಂದ ಪರಿಪಾಲಿಸುತ್ತಿತ್ತು. ಚಿಕ್ಕಂದಿನಿಂದಲೇ ಪಂಢರಿಬಾಯಿ ಅವರಿಗೆ ಸಂಗೀತದ ಅಭ್ಯಾಸವಾಗಿತ್ತು. ಹರಿಕಥೆ ಮಾಡುವುದನ್ನು ಹಾಗೂ ಕೀರ್ತನೆ ಹಾಡುವುದನ್ನು ಇವರು ಕಲಿತಿದ್ದರು. ಮನೆಯಲ್ಲಿ ಇದ್ದ ಸೃಜನಶೀಲ ವಾತಾವರಣ ಪಂಢರಿಬಾಯಿಯವರ 'ಕಲಾವಿದೆ' ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿತು.

ಮಹಾರಾಜರ ಆಳ್ವಿಕೆಯ ಕಾಲದಲ್ಲಿ ಮೈಸೂರು ಕಲಾವಿದರಿಗೆ ಪ್ರೋತ್ಸಾಹ ನೀಡುವ ಕೇಂದ್ರವಾಗಿತ್ತು. ತುತ್ತಿನ ಚೀಲ ತುಂಬಿಸುವ ಸಲುವಾಗಿ ರಂಗರಾವ್ ಕುಟುಂಬ ೧೯೪೦ರ ಸುಮಾರಿಗೆ ಮೈಸೂರಿಗೆ ಸ್ಥಳಾಂತರಗೊಂಡಿತು. ಆ ದಿನಗಳಲ್ಲಿ ಪಂಢರಿಬಾಯಿ ಬಾಲ್ಯ ಕಳೆದು

©KTBS Not to be republished

ಯೌವನಕ್ಕೆ ಕಾಲಿಡುತ್ತಿದ್ದರು. ಪಂಢರಿಬಾಯಿಯವರ ಅಣ್ಣ ವಿಮಲಾನಂದ 'ಆದರ್ಶ ನಾಟಕ ಸಂಘ' ಎಂಬ ನಾಟಕ ಕಂಪನಿ ಸ್ಥಾಪಿಸಿ ನಾಟಕಗಳನ್ನು ಪ್ರದರ್ಶನ ಮಾಡುವ ಮೂಲಕ ಕುಟುಂಬ ಪೋಷಣೆಯ ಹೊಣೆಯನ್ನು ನಿರ್ವಹಿಸುತ್ತಿದ್ದರು. ಈ ದಿನಗಳಲ್ಲೆ ಪಂಢರಿಬಾಯಿ ಮಹಾರಾಜರ ಸಮ್ಮುಖದಲ್ಲಿ ಕೀರ್ತನೆಯನ್ನು ಹಾಡಿ ಸೈ ಎನಿಸಿಕೊಂಡಿದ್ದರು. ಇಂತಹ ದಿನಗಳಲ್ಲಿ ಪಂಢರಿಬಾಯಿಯವರಿಗೆ ಆಕಸ್ಮಿಕವಾಗಿ 'ಮುದುಕನ ಮದುವೆ' ನಾಟಕದಲ್ಲಿ ಬಣ್ಣ ಹಚ್ಚುವ ಸನ್ನಿವೇಶ ಎದುರಾಯಿತು. 'ಆದರ್ಶ ನಾಟಕ ಸಂಘ' ಪ್ರದರ್ಶಿಸುತ್ತಿದ್ದ ನಾಟಕದಲ್ಲಿ ಅಭಿನಯಿಸುತ್ತಿದ್ದ ನಟಿ ಇನ್ನೇನು ನಾಟಕ ಆರಂಭಕ್ಕೆ ಅರ್ಧಗಂಟೆ ಬಾಕಿ ಇರುವಾಗ 'ಬರುವುದಿಲ್ಲ' ಎಂಬ ವಾರ್ತೆ ಕಳಿಸಿದಳು. ನಾಟಕದ ಟಿಕೇಟುಗಳು ಪೂರ್ತಿ ಮಾರಾಟವಾಗಿದ್ದವು. ನಾಟಕ ನಿಂತರೆ ಬಹುದೊಡ್ಡ ಕಷ್ಟಕ್ಕೆ ಕುಟುಂಬ ಸಿಕ್ಕಿಕೊಳ್ಳುತ್ತಿತ್ತು. ಆ ಪಾತ್ರವನ್ನು ತಂಗಿ ಪಂಢರಿಬಾಯಿ ಕೈಲಿ ಏಕೆ ಮಾಡಿಸಬಾರದು? ಎಂಬ ಆಲೋಚನೆ ಅಣ್ಣ ವಿಮಲಾನಂದನಿಗೆ ಬಂತು. ಇದು ದೈವ ಇಚ್ಛೆ ಎಂಬುದು ಪಂಢರಿಬಾಯಿಯವರ ನಂಬಿಕೆ. ಇಲ್ಲದೆ ಹೋಗಿದ್ದರೆ ಕಟು ಸಂಪ್ರದಾಯವಾದಿಯಾಗಿದ್ದ ರಂಗರಾವ್ ಅಂದು ಮಗಳಿಗೆ ಬಣ್ಣ ಹಚ್ಚಿಕೊಳ್ಳಲು ಒಪ್ಪಿಗೆ ಕೊಡುತ್ತಿದ್ದರೆ?

ಆ ನಾಟಕ ಪ್ರದರ್ಶನ ನೋಡಲು ಪಿಟೀಲು ಚೌಡಯ್ಯನವರು ಹಾಗೂ ಸಿನಿಮಾ ಪ್ರವರ್ತಕರಾಗಿದ್ದ ಕೆ.ಹಿರಣ್ಣಯ್ಯ ಅವರು ಬಂದಿದ್ದರು. ಅವರಿಬ್ಬರು ಅದೇ ಕಾಲಕ್ಕೆ 'ವಾಣಿ' ಎಂಬ ಚಲನಚಿತ್ರವನ್ನು ಸಿದ್ಧಗೊಳಿಸುತ್ತಿದ್ದರು. ಅಂದು ರಂಗದ ಮೇಲೆ ಪಂಢರಿಬಾಯಿಯವರು ಅಭಿನಯವನ್ನು ಕಂಡು ಮೆಚ್ಚಿ ತಮ್ಮ ಚಿತ್ರದಲ್ಲಿ ಸಣ್ಣ ಪಾತ್ರವೊಂದನ್ನು ನೀಡಿದರು. ಹೀಗೆ ಮಹಾನಟಿಯೊಬ್ಬಳ ಸಿನಿಮಾಯಾನ ಶುರುವಾಯಿತು.

© KTBS Not to be republished

'ವಾಣಿ' ಚಿತ್ರದಲ್ಲಿ ಪಂಢರಿಬಾಯಿ ಅವರ ನಟನಾ ಪ್ರತಿಭೆ ಲೋಕದೆದುರು ಅನಾವರಣಗೊಂಡಿತು. ಆಮೇಲೆಯೂ ಅವರಿಗೆ ಅವಕಾಶಗಳು ಹುಡುಕಿಕೊಂಡು ಬರಲಿಲ್ಲ. ಅಂತಹ ಸಮಯದಲ್ಲಿ ರಂಗಭೂಮಿ ಆಕೆಯ ಕೈ ಬಿಡಲಿಲ್ಲ. ಆ ದಿನಗಳಲ್ಲಿ ಕರ್ನಾಟಕ ಮಾತ್ರವಲ್ಲದೆ ದೂರದ ಮುಂಬಯಿಯವರೆಗೆ ಪ್ರವಾಸ ಮಾಡಿ ನಾಟಕಗಳಲ್ಲಿ ಅಭಿನಯಿಸಿ ಕುಟುಂಬಕ್ಕೆ ಆಸರೆಯಾಗಿ ನಿಂತರು. ಇದೇ ಸಮಯದಲ್ಲಿ ವಿಮಲಾನಂದರ ಗೆಳೆಯರಾಗಿದ್ದ ಸುದರ್ಶನ್ ಎ.ವಿ.ಎಂ. ಸ್ಟುಡಿಯೋ ಮಾಲೀಕರಾಗಿದ್ದ ಚೆಟ್ಟಿಯಾರ್ ಅವರಿಗೆ ಪಂಢರಿಬಾಯಿಯವರ ಫೋಟೋ ಕೊಟ್ಟಿದ್ದರು. ತಿಂಗಳಿಗೆ ೩೦೦ ರೂಪಾಯಿಯ ಮಾಸಿಕ ಸಂಬಳ. ಮೂರು ವರ್ಷಗಳಿಗೆ ಎ.ವಿ.ಎಂ ಜೊತೆ ಒಪ್ಪಂದ ಮಾಡಿಕೊಂಡು ಪಂಢರಿಬಾಯಿ ಮದರಾಸಿಗೆ ಬಂದ ನೆಲೆಸಿದರು. ಕಷ್ಟಪಟ್ಟು ತಮಿಳುಭಾಷೆಯನ್ನು ಕಲಿತರು. 'ಗುಣಸಾಗರಿ' ಸಿನಿಮಾದಲ್ಲಿ ಹೊನ್ನಪ್ಪ ಭಾಗವತರ್ ಅವರಿಗೆ ನಾಯಕಿಯಾಗಿ ನಟಿಸಿದರು. ಅಲ್ಲಿಂದ ಪಂಢರಿಬಾಯಿಯವರ ಯಶೋಗಾಥೆ ಶುರುವಾಯಿತು. ಈ ನಡುವೆ ಮದುವೆಯ ಪ್ರಸ್ತಾಪ ಆದರೂ ಕುಟುಂಬಕ್ಕೆ ನೆರವಾಗುವ ದೃಷ್ಟಿಯಿಂದ ತಾವೇ ಅದನ್ನು ನಿರಾಕರಿಸಿದರು. ಚಲನಚಿತ್ರ ಎಂದರೆ ಮೂಗು ಮುರಿಯುತ್ತಿದ್ದ ಕಾಲದಲ್ಲಿ ಚಿತ್ರರಂಗಕ್ಕೆ ಬಂದ ಪಂಢರಿಬಾಯಿ 'ಆಡುಮುಟ್ಟದ ಸೊಪ್ಪಿಲ್ಲ' ಎಂಬಂತೆ ಎಲ್ಲ ಬಗೆಯ ಸ್ತ್ರೀ ಪಾತ್ರಗಳಲ್ಲಿ

ನಟಿಸಿದರು. ಸುಮಾರು ನಾನೂರಕ್ಕೂ ಮಿಕ್ಕು ಚಿತ್ರಗಳಲ್ಲಿ ನಟಿಸಿದ ಪಂಢರಿಬಾಯಿ ಕನ್ನಡ ಮಾತ್ರವಲ್ಲದೆ ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲಿ ಹಾಗೂ ಹಿಂದಿಯ ಚಿತ್ರಗಳಲ್ಲೂ ನಟಿಸಿ ರಾಷ್ಟ್ರೀಯ ನಟಿ ಎನಿಸಿಕೊಂಡರು. ಪಂಢರಿಬಾಯಿ ಅಭಿನಯದಲ್ಲಿ ಭಾರತೀಯ ಹೆಣ್ತನದ ಲಕ್ಷಣಗಳು ಅನಾವರಣಗೊಂಡಿವೆ ಎನ್ನುವುದರಲ್ಲಿ ಯಾವುದೇ ಸಂದೇಹ ಇಲ್ಲ. ಭಕ್ತಿ ಪರವಶವಾಗುವ ಪಾತ್ರಗಳನ್ನು ಲೀಲಾಜಾಲವಾಗಿ ಅಭಿನಯಿಸುತ್ತಿದ್ದ ಪಂಢರಿಬಾಯಿಯವರು ಇನ್ನೂ ಜನಮಾನಸದಲ್ಲಿ ಚಂದ್ರಮತಿ, ಸತಿ ಸಕ್ಕೂಬಾಯಿ ಆಗಿಯೇ ಉಳಿದುಕೊಂಡಿದ್ದಾರೆ.

ಪಂಢರಿಬಾಯಿಯವರ ಪರಕಾಯ ಪ್ರವೇಶದ ನಟನೆಗೆ ತನ್ಮಯತೆಗೆ ಅವರೇ ಸಾಟಿ. ಯಶಸ್ಸಿನ ಶಿಖರದಲ್ಲಿ ಇದ್ದಾಗಲೆ ಸಂತಸತಿ ಸಕ್ಕೂಬಾಯಿ, ರಾಯರ ಸೊಸೆ, ಅನ್ನಪೂರ್ಣ, ಕೆರಳಿದ ಸಿಂಹ ಮುಂತಾದ ಚಿತ್ರಗಳನ್ನು ನಿರ್ಮಾಣ ಮಾಡಿ ತನ್ನ ಸುತ್ತಲಿನವರಿಗೆ ನೆರವಾಗುವ ಮೂಲಕ ಚಿತ್ರರಂಗದ ಋಣ ತೀರಿಸಿದ್ದಾರೆ. ಕೆರೆಯ ನೀರನ್ನು ಕೆರೆಗೆ ಚೆಲ್ಲುವ ಈ ಮಾದರಿ ಎಲ್ಲರಿಗೂ ಆದರ್ಶಪ್ರಾಯವಾದುದು. ಸಿನಿಮಾದಲ್ಲಿ ಎತ್ತರಕ್ಕೆ ಏರಿದಾಗಲೂ ಪಂಢರಿಬಾಯಿ ನಾಟಕರಂಗವನ್ನು ಮರೆಯಲಿಲ್ಲ. 'ಶ್ರೀ ಕೃಷ್ಣ ಚೈತನ್ಯ ನಾಟಕ ಸಭಾ' ಎಂಬ ತಂಡ ಕಟ್ಟಿ ನಾಡಿನಾದ್ಯಂತ ನಾಟಕಗಳನ್ನು ಪ್ರದರ್ಶಿಸಿ ಸಹಕಲಾವಿದರಿಗೆ ನೆರವು ನೀಡಿದ ಉದಾರಿ. ಅವರು ತನ್ನ ಜೀವಿತ ಕಾಲದಲ್ಲಿ ಎಂದೂ ಯಾವುದೇ ವಿವಾದಕ್ಕೆ ಸಿಲುಕಲಿಲ್ಲ. ತನ್ನನ್ನು ಅವಲಂಬಿಸಿದವರೆಲ್ಲರೂ ನೆಲೆನಿಂತ ಮೇಲೆ ಜನ ಅಚ್ಚರಿಪಡುವಂತೆ ತಡವಾಗಿ ೧೯೭೧ರಲ್ಲಿ ಮಂಡ್ಯದ ರಾಮರಾಯರನ್ನು ವಿವಾಹವಾದರು.

ಕನ್ನಡ ಚಿತ್ರರಂಗದ ಮೇರುನಟರಾದ ಡಾ.ರಾಜಕುಮಾರ್ ಹಾಗೂ ತಮಿಳಿನ ಅದ್ಭುತ ಪ್ರತಿಭೆ ಶಿವಾಜಿ ಗಣೇಶನ್ ನಟಿಸಿದ ಮೊದಲ ಚಿತ್ರಗಳ ನಾಯಕಿ ಪಂಢರಿಬಾಯಿ ಎನ್ನುವುದು ಬಹು ದೊಡ್ಡ ಗೌರವ. ಇವರಿಗೆ ಸಂದ ಪ್ರಶಸ್ತಿಗಳು ಪಂಢರಿಬಾಯಿಯವರ ಸಾಧನೆಯನ್ನು ಸಾರಿ ಹೇಳುತ್ತವೆ. ೧೯೬೫ರಲ್ಲಿ ಸತ್ಯ ಹರಿಶ್ಚಂದ್ರ ಚಿತ್ರದ ಚಂದ್ರಮತಿ ಪಾತ್ರದ ನಟನೆಗಾಗಿ ರಾಷ್ಟ್ರೀಯ ಶ್ರೇಷ್ಠ ನಟಿ ಪ್ರಶಸ್ತಿಯನ್ನು ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಂದ ಪಡೆದರು. ಅದೇ ವರ್ಷ ತಮಿಳುನಾಡು ಸರ್ಕಾರ ಪಂಢರಿಬಾಯಿಯವರಿಗೆ 'ಕಲೈಮಾಮಣಿ' ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು. ಕರ್ನಾಟಕ ಸರ್ಕಾರ ೧೯೯೪ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು , ೧೯೯೫ರ ಡಾ. ರಾಜಕುಮಾರ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರಿಗೆ ೨೦೦೦ ದಲ್ಲಿ ಜೀವಮಾನ ಸಾಧನೆಗಾಗಿ ಫಿಲ್ಮ್‌ಫೇರ್ ಪ್ರಶಸ್ತಿಯನ್ನು ನೀಡಲಾಗಿದೆ.

'ಬಂದಿದ್ದು ಬರಲಿ ಭಗವಂತನ ದಯೆ ಇರಲಿ' ಎಂಬ ತತ್ವದಲ್ಲಿ ನಂಬಿಕೆ ಇರಿಸಿದ್ದ ಪಂಢರಿಬಾಯಿಯವರು ೧೯೯೪ರಲ್ಲಿ ರಸ್ತೆ ಅಪಘಾತದಲ್ಲಿ ಒಂದು ಕೈ ಕಳೆದುಕೊಂಡರು. ಈ ಘಟನೆಯಿಂದ ಎದೆಗುಂದದೆ ತಮ್ಮ ನಟನೆಯ ಕಾಯಕವನ್ನು ಮುಂದವರಿಸಿದ್ದು ಅವರ ಜೀವನ ಪ್ರೀತಿಗೆ ಸಾಕ್ಷಿಯಾಗಿದೆ. ಪ್ರತಿಭೆ, ಅಂತಃಕರಣ ಮತ್ತು ಹೃದಯ ಶ್ರೀಮಂತಿಕೆ ಒಬ್ಬರಲ್ಲಿಯೇ ನೆಲೆಗೊಳ್ಳುವುದು ಅಪರೂಪ. ಅಂತಹ ಅಪರೂಪದ ಕಲಾವಿದೆ ಪಂಢರಿಬಾಯಿಯವರು ೨೯.೦೧.೨೦೦೨ರಲ್ಲಿ ನಿಧನರಾದರು. ಕಲಾರಸಿಕರ ಮನಸ್ಸಿನಲ್ಲಿ ಎಂದೆಂದಿಗೂ ಅಮರರಾದರು.

© KTBS Not to be republished

## ಕೃತಿಕಾರರ ಪರಿಚಯ



ಹೆಸರಾಂತ ಚಲನಚಿತ್ರ ನಟಿ **ಡಾ. ಜಯಮಾಲಾ** ಅವರು **ದಕ್ಷಿಣ ಕನ್ನಡ ಜಿಲ್ಲೆಯ ಪಣಂಬೂರಿನಲ್ಲಿ ೨೮.೦೨.೧೯೫೯ರಲ್ಲಿ** ಜನಿಸಿದರು. **"ಕರ್ನಾಟಕ ರಾಜ್ಯ ನಿರಾಶ್ರಿತ ಮಹಿಳೆಯರ ಪುನರ್ವಸತಿ– ಆಡಳಿತ ವ್ಯವಸ್ಥೆಯ ಒಂದು ಅಧ್ಯಯನ"** ಈ ವಿಷಯದಡಿಯಲ್ಲಿ ಪಿಹೆಚ್.ಡಿ. ಪದವಿಯನ್ನು ಪಡೆದಿದ್ದಾರೆ. ನಾಯಕಿಯಾಗಿ ಹಲವಾರು ಚಿತ್ರಗಳಲ್ಲಿ ನಟಿಸಿದ್ದಾರೆ. ಕರ್ನಾಟಕ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ, ರಾಜ್ಯ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ, ಕೇಂದ್ರ ಸರ್ಕಾರ ಚಲನಚಿತ್ರ ಆಯ್ಕೆ ಸಮಿತಿಯ ಸದಸ್ಯರಾಗಿ ಹೀಗೆ ವಿವಿಧ ವಲಯಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಅವರೇ ನಿರ್ಮಿಸಿ, ನಟಿಸಿದ **'ತಾಯಿ ಸಾಹೇಬ'** ಚಿತ್ರಕ್ಕೆ **'ಸ್ವರ್ಣಕಮಲ'** ಪ್ರಶಸ್ತಿ, ಅಭಿನಯಕ್ಕೆ **ವಿಶೇಷ ರಾಷ್ಟ್ರ ಪ್ರಶಸ್ತಿ, ಅತ್ಯುತ್ತಮ ನಟಿ, ಅತ್ಯುತ್ತಮ ಚಿತ್ರ ಫಿಲಂಫೇರ್ ಪ್ರಶಸ್ತಿ** ಹೀಗೆ ಹಲವಾರು ಪ್ರಶಸ್ತಿಗಳು ಲಭಿಸಿವೆ. ಇದಲ್ಲದೆ **ರಾಜೀವ್ ಗಾಂಧಿ ರಾಷ್ಟ್ರೀಯ ಸೌಹಾರ್ದ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ವಿ. ಶಾಂತಾರಾಂ ಬಂಗಾರದ ಪದಕ ಗ್ಲೋಬಲ್ ಮ್ಯಾನ್ ಪ್ರಶಸ್ತಿ**– ಹೀಗೆ ಹತ್ತು ಹಲವು ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಪ್ರಸ್ತುತ ಪಾಠವು **ಡಾ. ಜಯಮಾಲಾ** ಅವರು ಬರೆದಿರುವ **'ಪಂಢರಿಬಾಯಿ'** ಕೃತಿಯ ಸಂಕ್ಷಿಪ್ತ ರೂಪವಾಗಿದೆ.

©KTBS Not to be republished

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಪಂಢರಿಬಾಯಿ ಅವರ ತಂದೆ ತಾಯಿಯವರ ಹೆಸರೇನು?

೨. ಪಂಢರಿಬಾಯಿಯವರು ನಟಿಸಿದ ಮೊದಲ ಚಿತ್ರದ ಹೆಸರೇನು?

೩. ಪಂಢರಿಬಾಯಿ ನಾಟಕ ರಂಗಕ್ಕೆ ಪ್ರವೇಶಿಸಬೇಕಾಗಿ ಬಂದದ್ದು ಯಾಕೆ?

೪. ಪಂಢರಿಬಾಯಿ ಅವರಿಗೆ ಜೀವಮಾನ ಸಾಧನೆಗಾಗಿ ಯಾವ ಪ್ರಶಸ್ತಿಯನ್ನು ನೀಡಲಾಗಿದೆ?

೫. ಪಂಢರಿಬಾಯಿಯವರು ಯಾರ ಮನಸ್ಸಿನಲ್ಲಿ ಅಮರರಾದರು?

೬. ಪಂಢರಿಬಾಯಿಯವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?

೭. ರಂಗರಾವ್ ಅವರು ಮಗಳ ಹೆಸರನ್ನು ಪಂಢರಿಬಾಯಿ ಎಂದು ಬದಲಾಯಿಸಲು ಕಾರಣವೇನು?

೮. ಪಂಢರಿಬಾಯಿಯವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು?

# ೨. ಹೊಳೆಬಾಗಿಲು

**ಸುಶ್ರುತ ದೊಡ್ಡೇರಿ –**

ಬಾಗಿಲೆಂದರೆ ಬಾಗಿಲೇ ಆಗಿರಬೇಕೆಂದಿಲ್ಲ. ಅದು ಮರ ಅಥವಾ ಕಬ್ಬಿಣ ಅಥವಾ ತಗಡು ಅಥವಾ ಫೈಬರ್ ಅಥವಾ ಗಾಜಿನಿಂದಲೇ ತಯಾರಾಗಿರಬೇಕೆಂದಿಲ್ಲ. ಅದಕ್ಕೆ ಅಗುಳಿ, ಚಿಲಕ, ಹಿಡಿಕೆ, ಬೀಗ ಇತ್ಯಾದಿಗಳು ಇರಲೇಬೇಕೆಂದಿಲ್ಲ. ಅದನ್ನು ತೆರೆಯಲು – ಮುಚ್ಚಲು ಬರಲೇ ಬೇಕೆಂದಿಲ್ಲ. ಬಾಗಿಲೆಂದರೆ ದ್ವಾರ. ಬಾಗಿಲೆಂದರೆ ಪ್ರವೇಶಸ್ಥಾನ; ಅಷ್ಟೆ. ಉದಾಹರಣೆಗೆ: ಹೊಳೆಬಾಗಿಲು.

ಹೊಳೆಬಾಗಿಲು! ಬಾಗಿಲೆಂದರೆ ಇಲ್ಲೇನು ಹೊಳೆಯ ಸುತ್ತ ಗೋಡೆ ಕಟ್ಟಿ ಕದವನ್ನಿಟ್ಟಿಲ್ಲ. ಹಾಗಂತ ಗೋಡೆಗಳಿದ್ದರೆ ಮಾತ್ರ ಬಾಗಿಲು ಇರಬೇಕು ಎಂದೇನಿಲ್ಲವಲ್ಲ? ಹೊಳೆಗೆಂಥಾ ಬಾಗಿಲು? ಇಲ್ಲಿ ಹೊಳೆಗೆ ಹೊಳೆಯೇ ಬಾಗಿಲು. ಅತ್ತೆಯ ಮನೆಗೆ ಹೋಗಬೇಕು ಎಂದರೆ ಹೊಳೆಯನ್ನು ದಾಟಿಯೇ ಹೋಗಬೇಕು. ಎಷ್ಟೇ ವೇಗವಾಗಿ ಬನ್ನಿ ನೀವು, ಇಲ್ಲಿಗೆ ಬಂದಾಕ್ಷಣ ಹೊಳೆ ನಿಮ್ಮನ್ನು ತಡೆದು ನಿಲ್ಲಿಸುತ್ತದೆ. ಅವಸರ ಸಲ್ಲ. ತಾಳ್ಮೆಯೇ ಎಲ್ಲ. ಲಾಂಚು ಇನ್ನೂ ಆಚೆಯ ದಡವನ್ನೇ ಬಿಟ್ಟಿಲ್ಲ. ಅಗೋ, ಹಾಂ, ಅಲ್ಲಿ, ಒಂದು ಬೆಂಕಿಪೊಟ್ಟಣದಂತೆ ಕಾಣಿಸುತ್ತಿದೆಯಲ್ಲ, ಅದೇ ಲಾಂಚು. ಅದು ಅಲ್ಲಿಂದ ಜನ, ವಾಹನಗಳನ್ನೆಲ್ಲಾ ಹತ್ತಿಸಿಕೊಂಡು ನಿಧನಿಧಾನವಾಗಿ ಈಚೆ ದಡಕ್ಕೆ ಬರಬೇಕು. ಅಲ್ಲಿಯವರೆಗೆ ನೀವು ಏನು ಹಾರಾಡಿದರೂ ನಡೆಯುವುದಿಲ್ಲ.

©KTBS Not to be republished



ಬೇಕಿದ್ದರೆ ಈ ದಂಡೆಗುಂಟ ಅಡ್ಡಾಡುತ್ತಾ ಕಪ್ಪೆ ಚಿಪ್ಪು, ನುಣ್ಣನೆ ಉರುಟು ಕಲ್ಲುಗಳನ್ನು ಹೆಕ್ಕಬಹುದು. ಹೆಕ್ಕಿದ ಕಲ್ಲನ್ನು ಹೊಳೆಗೆ ಎಸೆಯಬಹುದು. ಕಲ್ಲು ಬಿದ್ದ ಜಾಗದಲ್ಲಿ ಎದ್ದ ಅಲೆ, ಅಲೆ

ಅಲೆಯಾಗಿ ನಿಮ್ಮತ್ತಲೇ ತೇಲಿ ಬರುವುದನ್ನು ನೋಡುತ್ತಾ ಮೈಮರೆಯಬಹುದು. ಹೊಳೆಯಲ್ಲಿ ಸಾಕಷ್ಟು ಮೀನುಗಳಿವೆ. 'ಗೊಜಮಂಡೆ' ಎಂದು ಕರೆಯಲಾಗುವ ಕಪ್ಪೆಯ ಪೂರ್ವಜ ಜೀವಿಗಳಿವೆ. ಅವು ಆಗೀಗ ಗುಂಪಾಗಿ ಬಂದು ನೀರಿನ ಮೇಲ್ಗಡೆ ಒಮ್ಮೆ ಕತ್ತು ತೂರಿಸಿ ಮಾಯವಾಗುತ್ತವೆ. ಅತ್ತಿತ್ತ ಒಂದೇ ಸಮನೆ ಈಜಾಡುತ್ತಿರುವ ಮೀನುಗಳಂತೂ ಒಮ್ಮೊಮ್ಮೆ ಪೆದ್ದಣ್ಣಗಳಂತೆ, ಒಮ್ಮೊಮ್ಮೆ ಅತ್ಯಂತ ಕ್ರಿಯಾಶೀಲ ಜೀವಿಗಳಂತೆ, ಒಮ್ಮೊಮ್ಮೆ ಭಯಗ್ರಸ್ತ ಗಂಧರ್ವರಂತೆ ಭಾಸವಾಗುತ್ತವೆ. ನಿಮ್ಮ ಬಳಿ ಏನಾದರೂ ತಿಂಡಿಯಿದ್ದರೆ ಈ ಮೀನುಗಳಿಗೆ ಎಸೆಯಬಹುದು. ನೀವು ಎಸೆದ ತಿಂಡಿ ನೀರಿನೊಳಗೆ ಮುಳುಗುವುದರೊಳಗೆ ಅವು ಗುಂಪಾಗಿ ಬಂದು ಅಷ್ಟನ್ನೂ ಕಬಳಿಸಿಬಿಡುತ್ತವೆ. ಮೀನುಗಳ ಜೊತೆ ಆಟವಾಡುತ್ತಾ ನೀವು ಮತ್ಸ್ಯಲೋಕದಲ್ಲಿ ಒಂದಾಗುತ್ತೀರಿ.

ಲಾಂಚು ಈಗ ದಡಕ್ಕೆ ಸನಿಹವಾಗುತ್ತಿದೆ. ಮೊದಲ ಸಲ ಲಾಂಚು ಹತ್ತುವವರ ಸಂಭ್ರಮ, ಕುತೂಹಲಗಳಂತೂ ಹೇಳತೀರದ್ದು. ಅವರು ನೀರಿನ ಸಮೀಪಕ್ಕೆ ಹೋಗಿ ನಿಂತಿದ್ದಾರೆ. ಬಸ್ಸನ್ನೂ ಅದರೊಳಗೆ ಹಾಕುತ್ತಾರಾ? ಅದು ಹೇಗೆ? ಲಾಂಚು ಮಧ್ಯದಲ್ಲಿ ಕೆಟ್ಟುಹೋದರೆ ಗತಿಯೇನು? ಮುಳುಗಿ ಹೋಗುತ್ತಾ? ಅಯ್ಯಯ್ಯೋ! ನಂಗೆ ಈಜು ಬೇರೆ ಬರಲ್ವಲ್ಲಪ್ಪ... ಲಾಂಚಿನ ಡ್ರೈವರ್ ಎಲ್ಲಿ ಕುಳಿತಿರುತ್ತಾನೆ? ಇದೇ ಲಾಂಚನ್ನು ಇದೇ ಇದೇ ರೂಟಿನಲ್ಲಿ ಪ್ರತಿದಿನವೂ ಓಡಿಸಿಕೊಂಡಿರಲಿಕ್ಕೆ ಅವನಿಗೆ ಬೇಸರವಾಗುವುದಿಲ್ಲವಾ? ಪ್ರಶ್ನೆಗಳು ಜೇನ್ನೊಣದಂತೆ ಕಾಡುತ್ತಿರಲು.. ಅಗೋ ಲಾಂಚು ಹತ್ತಿರಾಗುತ್ತಿದೆ.. ದಾರಿ ಬಿಡಿ, ಇಲ್ಲಿಗೇ ಬರುತ್ತದೆ ಲಾಂಚು..

ಲಾಂಚು ಬಂದು ನಿಂತದ್ದೇ ಮೊದಲು ಜನರೆಲ್ಲ ಓಡಿ ಹೋಗಿ ಹತ್ತಿದ್ದಾರೆ. ಆಮೇಲೆ ವಾಹನಗಳೆಲ್ಲ ಒಂದೊಂದಾಗಿ ಬರುತ್ತಿವೆ. ಎಲ್ಲಾ ವಾಹನಗಳೂ ಹಿಡಿಸುವುದಿಲ್ಲ. ಒಂದು ಕಾರಿಗೆ ಮಾತ್ರ ಜಾಗ ಸಿಕ್ಕಿಲ್ಲ. ಸಿನಿಮಾಕ್ಕೆ ಟಿಕೇಟು ಸಿಗದಿರುವವನ ಪರಿಸ್ಥಿತಿ ಈ ಕಾರಿನದ್ದು. ಪಾಪ, ಮುಂದಿನ ಟ್ರಿಪ್ಪಿನವರೆಗೂ ಕಾಯಬೇಕು. ಲಾಂಚು ಇನ್ನೇನು ಹೊರಟಿತು ಅನ್ನುವಷ್ಟರಲ್ಲಿ ಒಂದು ಬೈಕು ಹಾರನ್ನು ಮಾಡಿಕೊಂಡು ಬಂದಿದೆ. ಅದನ್ನು ಸಹ ಹತ್ತಿಸಿಕೊಳ್ಳಲಾಗಿದೆ. ಬಂದವನು ಬೈಕಿನಲ್ಲೇ ಬಂದಿದ್ದರೂ ಓಡಿ ಬಂದು ಬಸ್ಸು ಹತ್ತಿದವನಂತೆ ಏದುಸಿರು ಬಿಡುತ್ತಿದ್ದಾನೆ.

ಲಾಂಚು ಹೊರಟಿದೆ ಈಗ. ಲಾಂಚಿನ ಸಿಬ್ಬಂದಿಯೊಬ್ಬ ಟಿಕೇಟು ಕೇಳುತ್ತಾ ಬರುತ್ತಿದ್ದಾನೆ. ಲಾಂಚಿನ ಪರಿಚಯವಿದ್ದವರೆಲ್ಲ ಧೀರರಂತೆ ಅಂಚಿಗೆ ಹೋಗಿ ಸರಳಿಗೆ ಒರಗಿ ನಿಂತಿದ್ದಾರೆ. ಮೊದಲ ಬಾರಿ ಲಾಂಚ್ ಪಯಣಕ್ಕೆ ಬಂದವರು ಒಳಗೆ ಹೋಗಿ ಕುಳಿತಿದ್ದಾರೆ. ಅವರಿಗೆ ಲಾಂಚು ಚಲಿಸುತ್ತಿದ್ದರೂ ನಿಂತಿದ್ದಂತೆ ಭಾಸವಾಗುತ್ತಿದೆ. ಅಜ್ಜಿಯೊಂದು ಕೈಮುಗಿದು ಕಣ್ಮುಚ್ಚಿ ಕುಳಿತಿದೆ: 'ದೇವರೇ, ಸುಖವಾಗಿ ಆಚೆ ದಡ ತಲುಪಿಸಪ್ಪಾ..' ಲಾಂಚು ಸ್ವಲ್ಪ ದೂರ ಹೋಗುತ್ತಿದ್ದಂತೆ ಒಳಗೆ ಕುಳಿತಿದ್ದ ಗಂಡಸರಿಗೆ ಸ್ವಲ್ಪ ಧೈರ್ಯ ಬಂದು, ಅಲ್ಲೇ ಕುಳಿತಿರಲು ಬೇಸರವಾಗಿ ಅವರು ಹೊರಬಂದಿದ್ದಾರೆ. ಕಂಬಿಗಳನ್ನು ಹಿಡಿದುಕೊಳ್ಳುತ್ತಾ ಓಡಾಡುತ್ತಿದ್ದಾರೆ. ಅರೆ! ಲಾಂಚಿನಲ್ಲಿ 'ಜಂಪ್ಸ್' ಆಗುವುದೇ ಇಲ್ಲ! ಈಗ ಅವರು ಕೈ ಬಿಟ್ಟು ನಡೆದಿದ್ದಾರೆ. ಅಪ್ಪನೊಂದಿಗೆ ಹೊರಬಂದ ಹುಡುಗನೊಬ್ಬ ಕೇಳುತ್ತಿದ್ದಾನೆ: "ಅಪ್ಪಾ ಇಷ್ಟು ದೊಡ್ಡ ಲಾಂಚನ್ನು ಇಲ್ಲಿಗೆ ಹೇಗೆ ತಂದರು?

©KTBS Not to be republished

ಲಾರಿಯಲ್ಲೂ ಹಿಡಿಯುವುದಿಲ್ಲ...” ಅಪ್ಪನಿಗೂ ಈಗ ಯೋಚನೆಯಾಗಿದೆ: ‘ಅರೆ! ಹೌದಲ್ಲಾ ಇಷ್ಟು ದೊಡ್ಡ ಲಾಂಚನ್ನು....’ ಆದರೂ ಆತ ಎಲ್ಲಾ ತಿಳಿದವನಂತೆ “ಇದನ್ನು ದೂರದ ಸಮುದ್ರದಿಂದ ಡ್ರೈವ್ ಮಾಡಿಕೊಂಡು ಬಂದದ್ದು. ಈ ಹೊಳೆ ಹೋಗಿ ಸಮುದ್ರಕ್ಕೆ ಸೇರುತ್ತಲ್ಲ, ಅಲ್ಲಿಂದ ಬಂದದ್ದು ಇದು..” ಎಂದು ಏನೋ ಒಂದು ಸಮಜಾಯಿಷಿ ಕೊಟ್ಟಿದ್ದಾನೆ. ಆದರೂ ಅವನನ್ನು ಆ ಪ್ರಶ್ನೆ ಕಾಡುತ್ತಲೇ ಇದೆ: ಹ್ಯಾಗೆ ತಂದರು ಇದನ್ನು...? ಯಾರನ್ನಾದರೂ ಕೇಳೋಣವೆಂದರೆ, ಮುಜುಗರವಾಗಿ ಸುಮ್ಮನಾಗಿದ್ದಾನೆ.

ಪ್ರಶಾಂತ ಸಾಗರದಂತಹ ಹೊಳೆಯಲ್ಲಿ ನಿಧಾನವಾಗಿ ಸಾಗುತ್ತಿದೆ ಲಾಂಚು. ಸುತ್ತಲಿನ ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ ಅಲೆಗಳ ಮೇಲೆ ತೇಲುತ್ತಾ ಸಾಗುತ್ತಿರಲು ಅಯಾಚಿತವಾಗಿ ನಿಮ್ಮ ನೆನಪಿನ ಕೋಶದಿಂದ ಹೊರಬರುತ್ತದೆ ಆ ಹಾಡು:

ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ
ಬೀಸು ಗಾಳಿಗೆ ಬೀಳುತೇಳುವ ತೆರೆಯ ಮೇಗಡೆ ಹಾರಲಿ ॥

ಹೊಳೆಬಾಗಿಲಿನಲ್ಲಿ ನಿಮ್ಮ ಮನದ ಬಾಗಿಲು ತೆರೆದುಕೊಳ್ಳುತ್ತದೆ. ದಡ ಈಗ ಸಮೀಪಿಸುತ್ತಿದೆ. ಹೊಳೆಯ ಅಂಚು ದಡದ ಅಂಚಿಗೆ ಸೇರಿದ ಜಾಗ ಅಗೋ ಕಾಣುತ್ತಿದೆ. ಪಯಣ ಮುಗಿದಿದೆ. ಲಾಂಚು ತನ್ನ ಬಾಹುಗಳನ್ನು ದಡದತ್ತ ಹೊರಳಿಸುತ್ತಿದೆ. ದಡದಲ್ಲಿ ಲಾಂಚಿಗಾಗಿ ಕಾಯುತ್ತಾ ನಿಂತಿರುವ ಜೀವಿಗಳ ಮೊಗದಲ್ಲಿ ಹೊಮ್ಮಿದ ಮುಗುಳ್ನಗೆ ಇಲ್ಲಿಂದಲೇ ಕಾಣುತ್ತಿದೆ. ಬೈಕು, ಕಾರುಗಳು ಸ್ಟಾರ್ಟ್ ಆಗುತ್ತಿವೆ. ಲಾಂಚು ನಿಂತಿದ್ದೇ ಎಲ್ಲಾ ಆಚೆ ದಡಕ್ಕೆ ಜಿಗಿದಿದ್ದಾರೆ. ಬಸ್ಸು, ಕಾರು, ಬೈಕುಗಳು ಬುರಬುರನೆ ದಡ ಸೇರಿವೆ.

ಎಲ್ಲರೂ ಹೋಟೆಲ್ಲಿಗೆ ನುಗ್ಗಿದ್ದಾರೆ. ‘ಮಾಣಿ, ಇವತ್ತು ಏನು ವಿಶೇಷ ಮಾಡಿದ್ರಾ?’ ಕೇಳುತ್ತಿದ್ದಾರೆ ಭಟ್ಟರ ಮಗನ ಬಳಿ. ತಿಂಡಿ ತಿಂದು ಕಾಫಿ ಕುಡಿದು ಎಲ್ಲರೂ ಮತ್ತೆ ಬಸ್ಸು ಹತ್ತಿದ್ದಾರೆ. ಅಲ್ಲಿಲ್ಲಿಗೆ ಚದುರಿಹೋಗಿದ್ದವರನ್ನೆಲ್ಲ ಕರೆಕರೆದು ಹೊಟ್ಟೆಗೆ ಸೇರಿಸಿಕೊಂಡು ಬಸ್ಸು ಹೊರಟಿದೆ.. ಹೊಳೆ ದಾಟಿದ ಖುಷಿಯಲ್ಲಿ ಓಡತೊಡಗಿದೆ ನಾಗಾಲೋಟದಲ್ಲಿ.

©KTBS Not to be republished

## ಕೃತಿಕಾರರ ಪರಿಚಯ



ಕವಿ, ಪ್ರಬಂಧಕಾರ **ಸುಶ್ರುತ ದೊಡ್ಡೇರಿ,** ಮೂಲತಃ **ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ**ವರು. ಈಗ ಬೆಂಗಳೂರು ವಾಸಿ. **‘ಪ್ರಣತಿ’** ಸಂಸ್ಥೆಯ ಜತೆ ಸಾಹಿತ್ಯ–ಸಂಸ್ಕೃತಿ–ಪ್ರಕೃತಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. **‘ಚಿತ್ರಚಾಪ’ (ಗೆಳೆಯರ ಜತೆ), ‘ಹೊಳೆಬಾಗಿಲು’** (ಲಲಿತ ಪ್ರಬಂಧಗಳು), **‘ಬ್ಲಾಗಿಸು ಕನ್ನಡ ಡಿಂಡಿಮವ’ (ಸಹ–ಸಂಪಾದಿತ)** ಇವರ ಪ್ರಕಟಿತ ಕೃತಿಗಳು. **‘ಮೌನಗಾಳ’** ಎಂಬ ಬ್ಲಾಗಿನಲ್ಲಿ ಹಲವು ವರ್ಷಗಳಿಂದ ಬರೆಯುತ್ತಿದ್ದಾರೆ.

ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಲಾಂಚು ಬರುವವರೆಗೆ ಹೊತ್ತುಕಳೆಯಲು ಏನೆಲ್ಲ ಚಟುವಟಿಕೆಗಳನ್ನು ಮಾಡಬಹುದು?

೨. ಲಾಂಚು ಹೊಳೆಯ ದಡಕ್ಕೆ ಬಂದುನಿಂತಾಗ ಜನರ ಗಡಿಬಿಡಿ ಹೇಗಿರುತ್ತದೆ?

೩. ನದಿಯಲ್ಲಿ ಲಾಂಚು ಚಲಿಸುತ್ತಿರುವಾಗ ಅದರಲ್ಲಿ ಕೂತವರ ಮಧ್ಯೆ ಏನೇನು ಮಾತುಕತೆಗಳು ನಡೆದಿರುತ್ತವೆ?

೪. ಲಾಂಚು ತನ್ನ ಪಯಣ ಮುಗಿಸಿದಾಗ ಜನರು ಹೇಗೆ ಹೊರಡುತ್ತಾರೆ?

೫. ಹೊಳೆ ಮತ್ತು ಲಾಂಚಿನ ಒಟ್ಟಾರೆ ದಿನಚರಿಯ ಬಗ್ಗೆ ಲೇಖಕರ ಅನಿಸಿಕೆಯೇನು?

©KTBS
Not to be republished

# ೩. ನನ್ನಾಸೆ

**ಇಂದುಮತಿ ಲಮಾಣಿ –**

ಗೆಲ್ಲಬೇಕು; ಬೀಸಲು ಬರುವ
ಬಲೆಯಿಂದ ಪಾರಾಗಬೇಕು
ತನ್ನನ್ನೇ ಸುಟ್ಟು –
ಬೆಳಕು ನೀಡುವ ಬತ್ತಿ ನಾನಾಗಬೇಕು.



ಮಣ್ಣಲ್ಲಿ ಮಣ್ಣಾಗಿ –
ಮಣ್ಣ ಮೇಲೊಂದು ಮರವಾಗಿ –
ಪುಣ್ಯವಂತರಿಗೆ ನೆರಳಾಗಬೇಕು.



ಬತ್ತದ ವರತೆ –
ಸದಾ ಚಿಮ್ಮುತ್ತಲಿರುವ ಚಿಲುಮೆ ನಾನಾಗಿ;
ದಾಹಗೊಂಡವರ ತನುವ ತಣಿಸುವಂತಾಗಬೇಕು.



ಅಳುವ ಕಂದನ ನಗಿಸಲು
ಅಮ್ಮನ ಕಂಠದ ಜೋಗುಳ ನಾನಾಗಬೇಕು.
ಮಾನವನ ಅಜ್ಞಾನತೆ ತೊಲಗಿಸಲು –
ವಾಗ್ದೇವಿಯ ಕೈಯಲ್ಲಿಯ ಗ್ರಂಥ ನಾನಾಗಿ
ಧನ್ಯಳಾಗಬೇಕು...



ಮುಸ್ಸಂಜೆ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ –
ದೀನರ ಊರುಗೋಲು ನಾನಾಗಬೇಕು....
ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ
ಅಂತ್ಯ ನನ್ನದಾಗಬೇಕು.



©KTBS
Not to be republished

## ಕೃತಿಕಾರರ ಪರಿಚಯ



**ಇಂದುಮತಿ ಲಮಾಣಿ** ಅವರು (ಜನನ ೧೯೫೯) **ವಿಜಯಾಪುರ ಜಿಲ್ಲೆ ಬರಟಗಿಯ ಮೂರನೇ ತಾಂಡಾದವರು,** ದಲಿತ ಸಾಹಿತ್ಯ ಪ್ರಕಾರದ ಪ್ರಮುಖ ಕವಯಿತ್ರಿ. ಬಂಜಾರ ಸೇವಾ ಸಂಘದ ಅಧ್ಯಕ್ಷರು, ಮಹಿಳಾ ಸ್ನೇಹಸಾಹಿತ್ಯ ಸಂಗಮ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ **'ಕಿತ್ತೂರು ರಾಣಿಚೆನ್ನಮ್ಮ ಪ್ರಶಸ್ತಿ'** (ಕರ್ನಾಟಕ ಸರ್ಕಾರ), **'ಡಾಟರ್ ಆಫ್ ನೈಲ್' ಪ್ರಶಸ್ತಿ** (ಟರ್ಕಿ), **ಮೈತ್ರೇಯಿ ಪ್ರಶಸ್ತಿ** (ಕುರ್ಜಾ), ಮುಂತಾದ ಅನೇಕ ಪ್ರಶಸ್ತಿಗಳು ಸಂದಿವೆ. **'ತಾಯಿಲೋಕ'** (ಕವನಸಂಕಲನ), **'ಭಾವಲೋಕ'** (ಜನಪದ ಕವನಸಂಕಲನ) **'ಏಕಾದಶ'** (ಕಥಾಸಂಕಲನ) **'ಕೊರಡು ಕೊನರುವುದು ಬರಡುಹಯನಹುದು'** (ಕಾದಂಬರಿ) ಮುಂತಾದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿ ಪ್ರಸಿದ್ಧರಾಗಿದ್ದಾರೆ.

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ?

೨. ಸದಾ ಚಿಮ್ಮುವ ಚಿಲುಮೆಯಾಗಬೇಕು, ಏಕೆ?

೩. ನನ್ನಾಸೆ ಕವನದಲ್ಲಿ ಕವಯಿತ್ರಿಯವರ ಆಸೆಗಳೇನು?

©KTBS Not to be republished

# ೪. ಉರಿದ ಬದುಕು

**ಶಾಂತರಸ –**

ಬಾಗಿಲು ಮುಚ್ಚಿತು.

ಸಿಟ್ಟಿನಂದ ತಿಪ್ಪಣ್ಣ ಕುದ್ದುಹೋದ. ಕಾಶೀಮಲಿಯನ್ನು ಬಿಟ್ಟು ಇವಳನ್ನೇ ಯಾಕೆ ಕೊಲ್ಲಬಾರದೆನಿಸಿತು ಅವನಿಗೆ. ಈಗ ಅಪರಾತ್ರಿ, ಎಲ್ಲಿಗೆ ಹೋಗಬೇಕು? ಬರುವಾಗ ಯಾರೋ ಹಿಂದೆ ಬಂದಿದ್ದಾರೆ ಅನ್ನಿಸ್ತು. ಚೀಟಿ ಪಾಟಿ ಚಿಲ್ಲವಾರ ದಾಟಿ ಅಂಕುಡೊಂಕು ಅನ್ನುವಂತೆ ಯಾವುಯಾವುದೋ ಓಣಿ ಹಾದು ಸುತ್ತು ಹಾಕಿಕೊಂಡು ತಿಪ್ಪಣ್ಣ ಬಂದಿದ್ದ. ಇಲ್ಲಿ ನೋಡಿದರೆ ಈ ಸ್ಥಿತಿ.

ಮತ್ತೆ ಮೆಲ್ಲನೆ ಬಾಗಿಲು ಬಡಿದ. ಬಡಿದ. ಬಡಿದ. ಹಗುರಾಗಿ ಬಾಗಿಲು ತೆರೆಯಿತು. ಪೂರ್ಣ ಅಲ್ಲ ಅರ್ಧ. ತಿಪ್ಪಣ್ಣ ಹೊಸ್ತಿಲಲ್ಲಿ ಕಾಲುಹಾಕಿದ. "ಬ್ಯಾಡ ಅಣ್ಣಾ ಕಾಲು ಬುಳ್ತೀನಿ, ಒಳಗ ಬರಬ್ಯಾಡ. ನಮ್ಮನ್ನೆಲ್ಲ ಸಾವಿನ ಬಾಯಾಗ ತುರಕಬ್ಯಾಡ."

"ತಂಗೀ ಅನ್ನವ್ವ, ಮೂರು ನಾಕು ತಾಸೇ ಇರ್ತೀನಿ, ಜಾಸ್ತಿಯಿಲ್ಲ. ಹಸುವು ಬಾಳಾಗ್ಯಾದ, ಏನಾದರ ತಿಂಬಾಕ ಕೊಡು. ಮೊದ್ಲು ಒಳಗ ಬುಡು ಯಾರೋ ನನ್ನ ಹಿಂದೆ ಬಿದ್ದಂಗ ಕಾಣ್ತದ."

ಒಳಗ ಬರುವ ಅಣ್ಣನನ್ನು ತಡೆದು "ಯಣ್ಣಾ, ನೀ ಬಂದಿದ್ದು ಸುಳುವತ್ತಿದ್ರೆ ರಜಾಕಾರ್‍ರು ನಮ್ಮನ್ನ ಬೀದ್ಯಾಗ ನಿಲ್ಸಿ ಗುಂಡಾಕ್ತಾರ. ಒಳಗ ಬರ್‌ಬ್ಯಾಡ, ಎಲ್ಯಾನ ಹೋಗು. ನಡಿ ನಿಂದ್ರಬ್ಯಾಡ. ಸಂಜೀಕಡೆ ಊರಾಗ ಪೊಲೀಸ್ರು ಬಂದು ಗಸ್ತು ತಿರಿಗಿದ್ರು. ಅಮೀನ್‌ಸಾಬ್ರೂ ಬಂದಿದ್ನಂತ; ಇನ್ನೂ ಅಗಸ್ಯಾಗ ಆನಂತ. ಕಾಲಿಡೀತಿನಿ ಅಣ್ಣಾ, ಒಳಗ ಬರಬ್ಯಾಡ."

"ಅಪ್ಪನ್ನ ಕೊಲ್ಲಿದವ್ರ ಮ್ಯಾಲೆ ನಿನಗ ಸಿಟ್ಟಿದ್ದಂಗಿಲ್ಲ; ನಾನು ಅವ್ರನ್ನ ಕೊಲ್ಲಾಕ ಹೊಂಟೀನಿ. ತಟುಕು ಹೊತ್ತು ಇಲ್ಲಿ ಇರ್ತೀನಿ, ಹಸ್ದೀನಿ ಅನ್ನವ್ವಾ ಏನಾದರೂ ಕೊಡು ತಿಂಬಾಕ."

ಸಿಟ್ಯಾಕಿಲ್ಲ ಅಣ್ಣಾ, ಈಗ ಅವ್ರು ನಮ್ಮನೂ ಕೊಲ್ಲಾಕ ತಯ್ಯಾರಾರ" ಪಿಸುದನಿಯಲ್ಲಿ ಹೇಳಿದಳು. "ಬ್ಯಾಡ ಅಣ್ಣಾ ಜಲ್ದಿ ನಡಿ ಅಣ್ಣಾ, ಆತ ಈಗ ಬದಲಾಗ್ಯಾನ. ಜೀವದ ಅಂಜಿಕೆ ಹೆಚ್ಚಾಗಿ ರಜಾಕಾರರ ಸೋಬ್ತಿಮಾಡ್ಯಾನ. ಈ ಮಾತು ನಿನಗ ಏಳಬಾರದಂತ ಮಾಡಿದ್ದೆ. ನನ್ನ ಹಣೇ ಬರಾ. ಅಪ್ಪನ್ನ ಕಳಕಂಡೆ. ಈಗ ಅಣ್ಣನ್ನ ಕಳಕಳ್ಳಿಕ್ಕೆ ಒಲ್ಲೆ. ಆತ ಕುಡ್ದು ಒಳಗ ಬಿದ್ದಾನ. ನೀ ಬಂದದ್ದು ಗೊತ್ತಾದ್ರೆ ರಜಾಕಾರ್‍ರಿಗೆ ಹಿಡುಕೊಡಾಕ ಅವನೇನು ಹೇಸೋದಿಲ್ಲ. ಈ ಮಾತು ಹ್ಯಂಗ ಏಳ್ಳೆಂತ ಏನೇನೋ ಮಾತಾಡಿದೆ. ನಾ ಸಾಯಕ ತಯಾರ ಈನಿ ಅಣ್ಣಾ, ಆದರೆ ನೀ ಬದುಕಬೇಕು – ಆ ಕಾಶೀಮಲಿನ್ನ ತಾರಾಕಡಿಬೇಕು. ಆ ಸುದ್ದಿ ನಾ ಕೇಳಬೇಕು. ನಡೀ ಅಣ್ಣಾ . . . . "ಅನ್ನವ್ವನ ಕುತ್ತಿಗೆಯ ಸರ ಬಿಗಿದವು. ಆಕೆ ಸರಕ್ಕನೆ ಒಳಗೆ ಹೋಗಿ ಒಂದು ಚೀಲ ತಂದಳು. "ತಗಾ ಅಣ್ಣಾ, ಇದರಾಗ ರೊಟ್ಟಿ ಗಟ್ಟಿಬ್ಯಾಳೆ ಆದ, ಎಲ್ಯಾದ್ರೂ ಹೋಗಿ ತಿನ್ನು."

ಚೀಲ ತೆಗೆದುಕೊಂಡು ತಿಪ್ಪಣ್ಣ ಹಿಂದೆ ಸರಿದ. ಬಾಗಿಲು ಮುಚ್ಚಿಕೊಂಡಿತು.

ಗವ್ ಎನ್ನುವ ಕತ್ತಲೆ. ಏನೂ ಕಾಣದು. ಈ ಕತ್ತಲೆಯನ್ನು ಸೀಳಿಕೊಂಡು ಎಲ್ಲಿಗೆ ಹೋಗಬೇಕು?

©KTBS Not to be republished

ಊರಿಗೆ ಪೋಲೀಸರು ಬೇರೆ ಬಂದಿದ್ದಾರಂತೆ. ಅಲ್ಲದೆ ರಜಾಕಾರರ ದಂಡೂ ಈ ಊರಲ್ಲಿ ದೊಡ್ಡದೇ ಆದಂತೆ. ಅಗಸೆಯ ಕಡೆ ಹೋದರೆ ಪ್ರಾಣ ಉಳಿಯದು. ಆ ಓಣಿಯಲ್ಲಿ ಮಸೀದೆ, ಅಲ್ಲಿ ರಜಾಕಾರರ ಕ್ಯಾಂಪ್. ಈ ಕಡೆ ಸಣ್ಣ ಸಂದಿಯಲ್ಲಿಯೇ ತಪ್ಪಿಸಿಕೊಂಡು ಹೋಗಬೇಕು.

ಒಂದೆರಡು ಮನೆ ದಾಟಲಿಲ್ಲ, ಯಾರೋ ಹಿಂದೆ ಬಂದ ಶಬ್ದ. ತಿಪ್ಪಣ್ಣ ಹಿಂದಿರುಗಿ ನಿಂತು ಕೈ ಬಾಂಬಿಗಾಗಿ ಜೇಬಿನಲ್ಲಿ ಕೈಯಿಳಿಬಿಟ್ಟ. ಯಾರೂ ಇಲ್ಲ. ತಿಪ್ಪಣ್ಣ ಹಿಂದಿರುಗಿ ನಡೆದ. ನಾಲ್ಕೆಂಟು ಮಾರು ಹೋಗಿರಲಿಲ್ಲ; ಹಿಂದಿನಿಂದ ಗಪ್ಪನೆ ಅವನ ಎರಡೂ ಕೈಗಳನ್ನು ಹಿಡಿದರು. ಹಿಡಿತ ಬಲವಾಗಿತ್ತು; ಕೊಸರಿಕೊಳ್ಳಲು ಆಗಲಿಲ್ಲ. "ನಾನು, ಶಂಕ್ರಣ್ಣ, ಸುಮ್ಮನೆ ನನ್ ಜತಿಗೆ ಬಾ" ಎಂದು ಆತ ತಿಪ್ಪಣ್ಣನ ಕೈ ಬಿಟ್ಟು, ಹೆಗಲಮೇಲೆ ಕೈ ಹಾಕಿ ದರದರ ನಡೆಸಿಕೊಂಡು ಹೋಗಿ ಯಾವುದೋ ಇಕ್ಕಟ್ಟಾದ ಓಣಿಯಲ್ಲಿ ಹಾದು ಮನೆಯೊಂದರ ಹಿತ್ತಲ ಬಾಗಿಲಿಗೆ ಮೆಲ್ಲನೆ ಮೂರು ಸಲ ಬಡಿದ, ಬಾಗಿಲು ತೆರೆಯಿತು. ಇಬ್ಬರು ಒಳಹೊಕ್ಕರು. ಬಾಗಿಲು ಮುಚ್ಚಿತು.

ಮಂದಗೆ ಚಿಮಣಿ ಉರಿಯುತ್ತಿತ್ತು. ತಿಪ್ಪಣ್ಣನಿಗೆ ಜೀವದಲ್ಲಿ ಜೀವ ಇರಲಿಲ್ಲ. ಶಂಕ್ರಣ್ಣ ಯಾರೆಂಬುದು ಗೊತ್ತಾಗಿತ್ತು. ಆದರೆ ಆತ ಪೋಲೀಸರಿಗೆ ಹಿಡಿದುಕೊಟ್ಟರೆ? ಯಾಕಂದರೆ ತಿಪ್ಪಣ್ಣನ ಮನೆತನದ ಮೇಲೆ ಶಂಕ್ರಣ್ಣನದು ಸಿಟ್ಟಿತ್ತು; ಸಿಟ್ಟು ಎನ್ನುವುದಕ್ಕಿಂತ ಕುನಿಸೇ ಇತ್ತು. ಆತ ತನ್ನ ಕೈಗಳನ್ನು ಬಿಟ್ಟು, ಹೆಗಲಮೇಲೆ ಕೈ ಹಾಕಿ ಬರುವಾಗ ತಾನೇಕೆ ಅವನ ಮೇಲೆ ಆಕ್ರಮಣ ಮಾಡಲಿಲ್ಲ? ಯಾಕೋ ಬ್ಯಾಡೆನಿಸಿತು. ಸಮಯ ಬಂದರೆ ಬಾಂಬ್ ಒಗೆದರಾಯಿತು ಅಂದುಕೊಂಡ.

ಚಿಮಣಿಯ ಬೆಳಕಿನಲ್ಲಿ ತಿಪ್ಪಣ್ಣ ಇನ್ನೊಬ್ಬ ಬಾಗಿಲು ತೆರೆದ ವ್ಯಕ್ತಿಯನ್ನು ನೋಡಿದ. ದಪ್ಪ ಮೀಸೆಯ ಕುಳ್ಳನ ಮನುಷ್ಯ. ಒಂದು ಹಲ್ಲು ಮುಂದೆ ಬಂದಿತ್ತು. ವಿಶ್ವಾಸ ಸೂಸುವ ಕಣ್ಣುಗಳು ಫಳಫಳ ಹೊಳೆಯುತ್ತಿದ್ದವು.

"ಇಬ್ರೂ ಹೊಸಬರಾಗಿದ್ರಿ. ನಿಮ್ ನಿಮ್ ಪರಿಚಯ ನಿಮಗಿಲ್ಲ ಅಂತ ಕಾಣ್ತದ. ಈತ ಭೀಮ್ ರೆಡ್ಡಿ. ಈತ ತಿಪ್ಪಣ್ಣ" ಶಂಕ್ರಣ್ಣ ಇಬ್ಬರ ಕಡೆಗೂ ನೋಡಿದ.

ಇಬ್ಬರ ಮುಖದ ಮೇಲೆ ನಗೆ ಮೂಡಿತ್ತು. ಇಬ್ಬರೂ ತುಂಗಭದ್ರಾ ದಂಡೆಯ ಮೇಲೆ ಬೇರೆ ಬೇರೆ ಶಿಬಿರಗಳಲ್ಲಿದ್ದರು. ಅವರಿಬ್ಬರೂ ನದೀ ದಾಟಿ ಬಂದು ಆಕ್ರಮಣ ಮಾಡುತ್ತಿದ್ದರು. ಸಾಕಷ್ಟು ಹೆಸರು ಮಾಡಿದ್ದರು. ಪೋಲೀಸರೂ ರಜಾಕಾರರೂ ಇವರ ಹೆಸರು ಕೇಳಿದರೆ ಹೆದರುವಷ್ಟು ಅವರ ಸಾಹಸ. ಅವರು ಒಬ್ಬರನ್ನೊಬ್ಬರು ಭೇಟಿಯಾದುದು ಇಂದು; ಈ ಸ್ಥಿತಿಯಲ್ಲಿ.

ತಿಪ್ಪಣ್ಣ ಆ ಕೋಣೆಯ ತುಂಬ ಕಣ್ಣಾಡಿಸಿ ಶಂಕ್ರಣ್ಣನನ್ನು ನೋಡಿದ. ಆ ನೋಟದಲ್ಲಿ ಏನೇನೋ ಪ್ರಶ್ನೆಗಳಿದ್ದವು.

"ಇದು ನನ್ ಮನೇ ಅಲ್ಲ; ನನ್ ಮನೇನ್ನ ನಾಕು ತಿಂಗ್ಳ ಹಿಂದೆ ರಜಾಕಾರ್ರು ಸುಟ್‌ಬುಟ್ರು. ಇದ್ದ ಒಬ್ಬಾಕಿ ಅಮ್ಮ ಹ್ವಾದ ವರ್ಷ ಸತೋದ್ಲು. ನಾನ್ನೊಬ್ನೇ ಊರಾಗ ಕಷ್ವ (ಕ್ಷೌರ) ಮಾಡಿಕೆಂತ, ಕೈಬಾಯಿ ಸುಟಗಂಡು ಅಡಿಗಿ ಮಾಡಿಕೆಂಡ್ ಹಂಗು ಹಿಂಗೂ ಬದುಕು ನಡಿಸ್ದೆ. ರಜಾಕಾರ್ರ ಹಾವ್ಳಿ ಸುರುವಾಯ್ತಲ್ಲ, ನನಗ ಸುಮ್ನೆ ಕುಂದ್ರದು ಆಗ್ಲಿಲ್ಲ. ಬೆಟ್ಟೂರು ಗೌಡ್ರ ಜತಿಗೆ ತಿರುಗಾಕ ಸುರುವು ಮಾಡ್ದೆ.

©KTBS Not to be republished

ಹೇಳಿಕೇಳಿ ಅವ್ರು ಗೌಡ್ರು. ದೊಡ್ಡ ಗುಂಪು ಕಟ್ಟಿ ನಿಜಾಮನ ವಿರುದ್ಧ ಸಡ್ಡು ಹೊಡ್ದು ನಿಂತ್ರಲ್ಲ, ಅವರ ಉಪಟಳ, ಆಕ್ರಮಣ ರಜಾಕಾರ್ರಿಗೆ ತಡ್ಯಾಕ ಆಗ್ಲಿಲ್ಲಲ್ಲ. ನಿಮಗೆಲ್ಲ ಗೊತ್ತಿರ್ಬೇಕಲ್ಲ ಅವ್ರ ಸುದ್ದಿ. ಅಲ್ಯಾರಂದ್ರ ಇಲ್ಯಾರ, ಇಲ್ಯಾರಂದ್ರ ಅಲ್ಯಾರ. ಶಹಬ್ಬಾಸ್ ಅನಬೇಕು ಅವ್ರಿಗೇ. ಇವತ್ತಿಗೂ ಯಾರ ಕೈಯಾಗ ಸಿಗ್ಲಿಲ್ಲ. ರಾತ್ರೋ ರಾತ್ರಿ ಒಬ್ರೇ ಹಿರೇ ಕುದ್ರೆಮ್ಯಾಲೆ ಹೋಗಿ ಸೈನ್ಯದ ಶಿಬಿರದ ಮ್ಯಾಲೆ ಬಾಂಬ್ ಒಗ್ದು ಬರ್ತಿದ್ರು. ಅವ್ರ ಮ್ಯಾಲೆ ವಾರಂಟ್ ಜಾರಿ ಆಯ್ತು. ಕಂಡಲ್ಲಿ ಗುಂಡಿಟ್ಟು ಕೊಲ್ಲೋ ಆಜ್ಞೆ ಮಾಡಿ ಅವ್ರ ಫೋಟೋ ಊರಿಗೆ ಹಂಚಿ, ಗ್ವಾಡೆಮ್ಯಾಲೆ ಹಚ್ಚಿದ್ರು. ಅವ್ರು ತಪ್ಪಿಸಿಗೆಂಡು ಹೊಳೀ ದಾಟಿ ಹೋಗಿಬುಟ್ರು, ನಾನು ಊರಿಗೆ ಬಂದೆ. ಅಟತ್ತಿಗೆ ಬೆಟ್ಟೂರು ಗೌಡ್ರ ಜತಿಗೆ ಇವ್ನಿದ್ದಂತ ಸುದ್ಯಾಗಿತ್ತು. ರಜಾಕಾರ್ರು ಬೂಟ್‌ಗಾಲ್ಲೆ ನನಗೆ ಒದ್ರು. ನನ್ ಮನಿಗೆ ಬೆಂಕಿ ಹಚ್ಚಿದ್ರು. "ಆ ಬೆಂಕ್ಯಾಗ ಇವುನ್ನ ಒಗೀರೋ" ಅಂದ್ರು ಯಾರೋ. "ಕೂಳಿಲ್ದ ತಾನೇ ಸತ್ತೋತನ, ನಾವ್ಯಾಕ ಕೊಲ್ಲಮ್ಮು" ಅಂದ್ರು ಕೆಲವ್ರು. ಮನೆ ಸುಟ್ಟೋಯ್ತು. ಮನೆ ಮುಂದಿನ ಬೇವಿನ ಗಿಡದ ಕೆಳಗೆ ಬಿದ್ದಿದ್ದೆ. ಒದಿಸ್ಕೆಂಡು ಮೈಯಲ್ಲ ಬ್ಯಾನ್ಯಾಗಿತ್ತು. ಸವಾರಾತ್ರ್ಯಾದ್ರೂ ಯಾರೂ ಬಂದು ಮಾತಾಡಸ್ಲಿಲ್ಲ. ಹಸುವು; ನೀರಡಿಕಿ. ನೀರು ನೀರು ಅಂತ ಒದರ್ತಿದ್ದೆ. ರಜಾಕಾರ್ರಿಗೆ ಅಂಜಿ ಯಾರೂ ಸಮೀಪ ಬರ್ಲಿಲ್ಲ ಅಂತ ಆಮ್ಯಾಲೆ ಗೊತ್ತಾಯ್ತು. ಒದ್ರಿ ಒದ್ರೀ ಎಚ್ಚರ ತಪ್ಪಿತು. ಎಚ್ರಾದಾಗ ಇಲ್ಲೇ ಆಮ್ಯಾಲೆ ಇಲ್ಲೇ ಇದೇ ಕೋಲ್ಯಾಗಿದ್ದೆ. ಇದು ಮಾದ್ರ ದುರ್ಗಪ್ಪನ ಮನೆ. ಆತ ಹೊತಗಂಬಂದು ಇಲ್ಲಿ ಮಲಗಿಸಿದ್ದ. ಎಚ್ರಾದಾಗ ತಂಬಿಗಿ ಬಾಯಿಗಿಟ್ಟು 'ಕುಡಿ' ಅಂದ. ನಾನು ಆತನನ್ನೆ ದಿಟ್ಟಿಸಿ ನೋಡ್ದೆ. "ಕುಡಿ ತಮ್ಮಾ, ಜೀವ ಬದುಕ್ಲಿ ಮೊದ್ಲು, ಜೀವಕ್ಕ ಯಾವ್ ಕುಲಾನೂ ಇಲ್ಲ. ಗಾಳಿಗೆ ಕುಲಾ ಆದೇನು ತಮ್ಮಾ, ನೀರಿಗೆ ಕುಲಾ ಆದೇನು ತಮ್ಮಾ, ನೆಲಕ್ಕ ಕುಲಾ ಆದೇನು? ಅದು ನಾವು ಮಾಡಿಕೆಂಡದ್ದು ಕುಡಿ" ಅಂದ. ಗಟಾಗಟಾ ತಂಬಿಗೆ ನೀರು ಕುಡ್ದೆ. ದುರ್ಗಪ್ಪ ಒಳಗೆ ಹೋಗಿ ಕಟಿರೊಟ್ಟಿ, ಕಾರಪುಡಿ, ಒಂದೀಟು ಎಣ್ಣೆ, ಉಳ್ಳಾಗಡ್ಡೆ ತಂದು ಮುಂದಿಟ್ಟು. 'ತಿನ್ನು' ಅಂದ. ಆತನ ಮಾರೆ ನೋಡ್ದೆ. "ಕುಲಾ ಮರ್ತುಬುಡು, ತಿನ್ನು" ಅಂದ. ಒಂದೆರಡು ಬಸವಣ್ಣನವರ ವಚನಾ ಹೇಳ್ದ. ಕಕ್ಕಯ್ಯನ ಮನ್ಯಾಗ ಬಸವಣ್ಣ ಉಂಡದ್ದು ಹೇಳಿದ. ಆತ ಊರಾಗ ಯಾಕ, ನಾಕ್ ಹಳ್ಯಾಗ ವೇದಾಂತಿ ಅಂತ ಹೆಸರು ಮಾಡಿದ್ದ. ಅವ್ನೊಬ್ಬ ಗಾಂಜಿಬುಕ್ಕ ಅಂತಾ ನಾ ತಿಳಿಕಂಡಿದ್ದೆ. ಈಗದು ತಪ್ಪನಿಸಿತು. ಆತ ಬಾಳ ದೊಡ್ಡ ಮನಿಸ್ಯಾ ಅನಸಿತು. ಆತ್ನೇ ರೊಟ್ಟಿ ಮುರ್ದು ಎಣ್ಯಾಗ ಕಾರಪುಡಿ ಕಲ್ಸಿ ಬಾಯಾಗಿಟ್ಟ. ಏನ್ ರುಚಿಯಿತ್ತದು. ಗಪಾಗಪಾ ಎಲ್ಡು ರೊಟ್ಟಿ ತಿಂದೆ. ಹಂಗೇ ಕಾಲ್ ಚಾಚಿ ಮಲಗಿದೆ.

ಆವತ್ನಿಂದ ಈ ಕೋಣೆ ನಮ್‌ದಾಯ್ತು. ನಾನು ರಾತ್ರಿ ಕಣ್‌ತಪ್ಸಿ ಹೊಳೆ ದಾಟಿ ಹೋಗ್ತೀನಿ; ಕೆಲವ್ ದಿನ ಅಲ್ಲಿರ್ತೀನಿ; ಮತ್ತೆ ಇಲ್ಲಿಗೆ ಬರ್ತೀನಿ.

ನನ್ ಜತಿಗೆ ಶಿಬಿರದವ್ರು ಬರ್ತಾರ. ದುರ್ಗಪ್ಪನ ಕೋಣೀನೆ ಎಲ್ಲರಿಗೆ ಆಶ್ರಯ. ಇದರ ಬದ್ಯಾಗ ಇನ್ನೊಂದು ಕೋಣ್ಯಾದ; ಅದರ ಮುಂದ ಒಂದು ಜೋಪಡಿ; ಅಲ್ಲಿ ದುರ್ಗಪ್ಪ ಇರ್ತಾನ ಹೆಂಡ್ರುಮಕ್ಳು ಜತಿಗೆ. ಮಕ್ಳು ದುಡೀತಾರ. ಆತ ಭಜನಿ ಮಾಡ್ತನ, ತತ್ವಪದ ಹಾಡ್ತನ, ರಾತ್ರಿ ತುಂಬ ಏಕ್‌ದಾರಿ ಹಿಡ್ದು ಹಾಡ್ತ ಕುಂತಿರ್ತಾನ. ನಾವು ಇಲ್ಲಿ ಇರದು ಯಾರಿಗೂ ಸುಳವು ಹತ್ತಂಗಿಲ್ಲ. ಬಾಳ ಸಾರೆ ದುರ್ಗಪ್ಪ ತಂದ್‌ಕೊಟ್ಟದ್ದೇ ನಮ್ಮ ಊಟ. "ನಾವ್‌ಸಿಕ್ ಬಿಟ್ರೆ ನಿಮ್ಗೂ ದುರ್ಗತಿ ದುರ್ಗಪ್ಪಾ"

©KTBS Not to be republished

ಅಂದ್ರೆ, “ಆಗ್ಲಿ, ನಿಮ್ಮಂಗ ಪ್ರಾಣದ ಹಂಗುತೊರ್ದು ದೇಶಕ್ಕಾಗಿ ನಾನಾಗ್ಲೀ, ನಮ್ ಮಕ್ಳಾಗ್ಲೀ ಏನೂ ಮಾಡಿಲ್ಲ. ಈಗ ಇಷ್ಟಾದ್ರೂ ನಮ್ಮಿಂದ ಆಗ್ತದಲ್ಲ. ಈ ಸುಡುಗಾಡ್ ರಾಜ್ಯದಾಗ ಇರದಕಿಂತ ಸಾಯದು ಬೇಸಲ್ಲೇನು? ಆದ್ರ ಈ ಹೋರಾಟದಾಗ ನಿಜಾಮ ಮಾತ್ರ ಹೇಳಹೆಸರಿಲ್ಲದಂಗಾಗದು ಖರೆ. ಗೆಲುವು ನಮ್ದೇ. ಬದುಕಿದ್ರೆ ಸ್ವತಂತ್ರ ನೋಡೋಣ, ಹ್ಯಂಗಿರ್ತದ; ಸತ್ರ, ದೇಶಕ್ಕಾಗಿ ಸತ್ತ ಅಂತಾರ. ಅಂತಾ ಸಾವು ಯಾರಿಗುಂಟು ಯಾರಿಗಿಲ್ಲ, ಅದು ಪುಣ್ಯದ ಕೆಲಸ. ನಮ್ಮ ಮುಂದಿನವ್‌ರಾದ್ರೂ ಸ್ವತಂತ್ರ ನೋಡ್ತರಲ್ಲ” ಅಂದ. ಆಗಾಗ ಆತ ಇಂತಾ ಮಾತು ನಮಗೆ ಹೇಳ್ತಿರ್ತಾನ. ಅವುನ್ನ ಕೇಳಿ ನಮ್ ಕೈಕಾಲು ಉಕ್ಕಿನಂಗ ಆಗ್ತಾವ.” ಒಂದೇ ಉಸಿರಿಗೆ ಶಂಕ್ರಣ್ಣ ನುಡಿದ.

## ಕೃತಿಕಾರರ ಪರಿಚಯ



**ಶಾಂತರಸ :** ಶಾಂತರಸ ಅವರು **ಸಾ. ಶ. ೧೯೨೪** ರಲ್ಲಿ **ರಾಯಚೂರು ಹತ್ತಿರದ ಹೆಂಬೇರಾಳಿನಲ್ಲಿ** ಜನಿಸಿದರು. ಇವರು ಶಿಕ್ಷಕರಾಗಿ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆಯನ್ನು ಸಲ್ಲಿಸಿರುವರು. **ಕತೆಗಾರ, ಕವಿ, ಸಂಶೋಧಕ, ನಾಟಕಕಾರ, ಅನುವಾದಕ, ಸಂಪಾದಕರಾಗಿ ಉರಿದ ಬದುಕು, ಸತ್ಯ ಸ್ನೇಹ, ನಂಜು ನೊರೆವಾಲು, ಬಹುರೂಪ, ಬೆನ್ನ ಹಿಂದಿನ ಬೆಳಕು, ಕಲ್ಯಾಣ ದೀಪ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ. ೨೦೦೫ ರಲ್ಲಿ ಬೀದರನಲ್ಲಿ ಜರುಗಿದ ೭೨ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಸಾಹಿತ್ಯದ ಮೂಲಕ ಸಮಾಜದ ಚರಿತ್ರೆಯನ್ನು ಕಟ್ಟಿಕೊಳ್ಳಬಹುದಾದ ಕತೆಗಳನ್ನು ಬರೆದ ಕೆಲವೇ ಜನ ಲೇಖಕರಲ್ಲಿ ಇವರೂ ಒಬ್ಬರಾಗಿದ್ದಾರೆ.

©KTBS Not to be republished

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

೧. ಅರ್ಧ ಬಾಗಿಲು ತೆಗೆದು ಅನ್ನವ್ವ ತಿಪ್ಪಣ್ಣನಿಗೆ ಏನೆಂದು ಹೇಳಿದಳು?
೨. ತಿಪ್ಪಣ್ಣನನ್ನು ಗಪ್ಪನೆ ಬಲವಾಗಿ ಹಿಡಿದುಕೊಂಡವರು ಯಾರು?
೩. ದುರ್ಗಪ್ಪ ಯಾರು?
೪. ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳಾವುವು?
೫. ದುರ್ಗಪ್ಪನ ಯಾವ ಮಾತುಗಳು ಹೋರಾಟಗಾರರ ಕೈಕಾಲು ಉಕ್ಕಿನಂಗೆ ಆಗುವಂತೆ ಮಾಡುತ್ತಿದ್ದವು?

# ೫. ಪುಟ್ಟಹಕ್ಕಿ

**ಜಂಬಣ್ಣ ಅಮರಚಿಂತ –**

ಕಡ್ಡಿ ಕಡ್ಡಿ ಕೂಡಿಸಿ ಗೂಡು ಕಟ್ಟುವುದು ಪುಟ್ಟಹಕ್ಕಿ
ಬಿರುಗಾಳಿಯ ವಿರುದ್ಧ ಯುದ್ಧ ಸಾರುವುದು ಪುಟ್ಟಹಕ್ಕಿ
ಸುರಿವ ಸೋನೆ ಮಳೆಗೆ ಅಂಜಿ ಮನೆಯೊಳಗಡಗಿದವು
ಗೂಡಿನಿಂದ ಹೊರಬಂದು ಕುಣಿಯುತ ಜಳಕ ಮಾಡುವುದು ಪುಟ್ಟಹಕ್ಕಿ



Not to

ಕತ್ತಲೆ ಕಳೆದು ಬೆಳಕು ಹರಿದರೂ ನಿದ್ದೆಯಲಿ ಮುಳುಗಿರುವವು
ಸೂರ್ಯನನು ಸ್ವಾಗತಿಸುತ, ಗೀತೆಹಾಡುವುದು ಪುಟ್ಟಹಕ್ಕಿ
ಮೂಡಿದ ರೆಕ್ಕೆಗಳ ಮುರಿಯುವ ಜನರಿರುವರು ಜಗದಲಿ
ಅವರ ನಯನಾಂಬರದಲಿ ಹಾರೆಂದರೆ ಹೇಗೆ ಹಾರುವುದು ಪುಟ್ಟಹಕ್ಕಿ

ನೀವೆಷ್ಟು ತಡೆಗೋಡೆ ಕಟ್ಟಿದರೂ ಜಗದಂಗಳದಲಿ
ಆ ಮೂಲೆಯಿಂದ ಈ ಮೂಲೆಗೆ ಸದಾ ಹಾರುವುದು ಪುಟ್ಟಹಕ್ಕಿ
ಭೂಮಿಯಲಿ ಭುಜಂಗನ ಭಯ, ಆಕಾಶದಲಿ ಗಿಡುಗನ ಭಯ
ಆವರಿಸಿದ್ದರೂ ಅಳುಕದೆ ರೆಕ್ಕೆ ಬಿಚ್ಚಿ ಹಾರುವುದು ಪುಟ್ಟಹಕ್ಕಿ

## ಕೃತಿಕಾರರ ಪರಿಚಯ



**ಜಂಬಣ್ಣ ಅಮರಚಿಂತ :** ಇವರು **ರಾಯಚೂರಿನಲ್ಲಿ** ಜನಿಸಿದರು. ಆರೋಗ್ಯ ಇಲಾಖೆ ಅಧಿಕಾರಿಗಳಾಗಿ ಸಾಹಿತ್ಯಿಕ ಆಸಕ್ತಿ ಬೆಳೆಸಿಕೊಂಡು ಸಾಂಸ್ಕೃತಿಕ ಲೋಕದಲ್ಲಿ ಕೆಲಸ ಮಾಡುತ್ತಿರುವರು. ಇವರು **ಮುಂಜಾವಿನ ಕೊರಳು, ಅಧೋಜಗತ್ತಿನ ಆ ಕಾವ್ಯ, ಮಣ್ಣಲ್ಲಿ ಬಿರಿದ ಅಕ್ಷರ, ಪೆಟ್ರೋಮ್ಯಾಕ್ಸ್ ಹೊತ್ತವರು, ಅಂಕುಶ ದೊಡ್ಡಿ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರು ಬಂಡಾಯದ ಸತ್ವಯುತವಾದ ಕವಿಗಳಲ್ಲಿ ಒಬ್ಬರಾಗಿದ್ದು, ತಮ್ಮ ಕೃತಿಗಳಲ್ಲಿ ಮಾನಸಿಕ ನೋವು, ಮನೋವ್ಯಥೆಯ ವಿಚಾರಧಾರೆಗಳನ್ನು ತೋರಿಸಿಕೊಟ್ಟವರು.

## ಅಭ್ಯಾಸ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

೧. ಪುಟ್ಟಹಕ್ಕಿ ಗೂಡನ್ನು ಹೇಗೆ ಕಟ್ಟುತ್ತದೆ?

೨. ಗೀತೆಯನ್ನು ಹಾಡುತ್ತಾ ಪುಟ್ಟಹಕ್ಕಿ ಯಾರನ್ನು ಸ್ವಾಗತಿಸುತ್ತದೆ?

೩. ಜಗದಲ್ಲಿ ಎಂತಹ ಜನರಿರುವರು?

೪. ಪುಟ್ಟಹಕ್ಕಿ ಜಗದಂಗಳದಲ್ಲಿ ಹೇಗೆ ಹಾರುತ್ತದೆ?

೫. ಭೂಮಿ–ಆಕಾಶದಲ್ಲಿ ಪುಟ್ಟಹಕ್ಕಿಗೆ ಯಾರ ಭಯವಿದೆ?

©KTBS
Not to be republished